ಶುಕ್ರವಾರ, ಜನವರಿ 5, 2024 | ₹ 7.00
www.prajavani.net
f prajavani.net prajavani prajavani prajavani

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಿನಿಮಾ ಪ್ರಚಾರ
ಮುಂಬೈನಲ್ಲಿ ಗುರುವಾರ ನಡೆದ 'ಮೆರ್ರಿ ಕ್ರಿಸ್‌ಮಸ್' ಚಿತ್ರದ ಪ್ರಚಾರ ಕಾರ್ಯಕ್ರಮದಲ್ಲಿ ನಟಿ ಕತ್ರಿನಾ ಕೈಫ್ ಪಾಲ್ಗೊಂಡಿದ್ದರು

ಎಷ್ಟೇ ಭಯ ಹುಟ್ಟಿಸಿದರೂ ರಾಮಭಕ್ತರ ಅಯೋಧ್ಯೆ ಭೇಟಿ ಸಂಖ್ಯೆ ಕ್ಷೀಣಿಸದು: ರಾಜ್ಯ ಬಿಜೆಪಿ ಅಧ್ಯಕ್ಷ

‘ದತ್ತ ಭಕ್ತ’ರ ವಿರುದ್ಧ ಪ್ರಕರಣ: ವಾಗ್ವಾದ

ಹುಬ್ಬಳ್ಳಿಯಲ್ಲಿ ಶ್ರೀಕಾಂತ ಪೂಜಾರಿ ಬಂಧನ ವಿವಾದದ ಸ್ವರೂಪ ಪಡೆದುಕೊಂಡಿರುವ ಬೆನ್ನಲ್ಲೇ, ‘ದತ್ತಪೀಠದ ಹೋರಾಟಗಾರರ ವಿರುದ್ಧದ ಹಳೆಯ ಪ್ರಕರಣಗಳಿಗೆ ಮರು ಜೀವ ನೀಡಲಾಗುತ್ತಿದೆ’ ಎಂದು ಬಿಜೆಪಿ ಆರೋಪಿಸಿದೆ. ‘ಅದು ಸಂಪೂರ್ಣ ಸುಳ್ಳು’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರತಿಕ್ರಿಯಿಸಿದ್ದಾರೆ.

ವಿಜಯೇಂದ್ರ ಆರೋಪ

ಬೆಂಗಳೂರು: ‘ಏಳು ವರ್ಷಗಳ ಹಳೆಯ ದತ್ತಪೀಠ ಪ್ರಕರಣವನ್ನು ಮರು ತನಿಖೆ ಮಾಡಿಸಿ ದತ್ತಾತ್ರೇಯ ಭಕ್ತರ ವಿರುದ್ಧವೂ ಕಾಂಗ್ರೆಸ್ ಷಡ್ಯಂತ್ರ ರೂಪಿಸಿದೆ’ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ದೂರಿದ್ದಾರೆ.

‘ಎಕ್ಸ್’ ಮೂಲಕ ಟ್ವೀಟ್ ಮಾಡಿರುವ ಅವರು, ‘ದತ್ತಪೀಠದ ಹೋರಾಟಗಾರರನ್ನು ಬೆನ್ನು ಹತ್ತಲು ಪೊಲೀಸರಿಗೆ ಸೂಚಿಸಿದ್ದೀರಿ. ನೀವೆಷ್ಟೇ ಭಯ ಹುಟ್ಟಿಸಿದರೂ ರಾಮಭಕ್ತರ ಅಯೋಧ್ಯೆ ಭೇಟಿಯ ಸಂಖ್ಯೆ ಕ್ಷೀಣಿಸಲು ಸಾಧ್ಯವಾಗದು. ಬದಲಿಗೆ ಅದು ವಿಸ್ತಾರಗೊಳ್ಳುತ್ತಲೇ ಇರುತ್ತದೆ’ ಎಂದು ಹೇಳಿದ್ದಾರೆ.



‘ನಿಮ್ಮ ಹಿಂದೂ ದ್ವೇಷದ ಬೆಟ್ಟ ನಿಮಗೆಷ್ಟು ಬೇಕೋ ಅಗೆಯಿರಿ. ಇನ್ನಷ್ಟು ಆಳಕ್ಕೂ ಇಳಿದು ಬಗೆಯಿರಿ, ನಿಮಗೇನೂ ದಕ್ಕದು. ಹಿಂದೂ ಕಾರ್ಯಕರ್ತರ ಒಂದೇ ಒಂದು ರೋಮವನ್ನೂ ಕೊಂಕಿಸಲು ಸಾಧ್ಯವಾಗದು. ಹನುಮನ ಸುಡಲು ಹೋಗಿ ಲಂಕೆಗೆ ಬೆಂಕಿ ಹಚ್ಚಿಸಿಕೊಂಡ ರಾವಣನ ಸ್ಥಿತಿಗೆ ನಿಮ್ಮ ಸರ್ಕಾರ ತಲುಪುತ್ತಿದೆ’ ಎಂದಿದ್ದಾರೆ.

ಸಂಪೂರ್ಣ ಸುಳ್ಳು ಸುದ್ದಿ: ಸಿದ್ದರಾಮಯ್ಯ

‘ಕೆಲವು ದೃಶ್ಯ ಮಾಧ್ಯಮಗಳಲ್ಲಿ ಬಾಬಾಬುಡನ್‌ಗಿರಿಯಲ್ಲಿ ಗೋರಿ ಧ್ವಂಸ ಪ್ರಕರಣವನ್ನು ರೀಓಪನ್ ಮಾಡಲಾಗಿದೆ ಎನ್ನುವ ಸುದ್ದಿ ಪ್ರಸಾರವಾಗಿದ್ದು, ಇದು ತಪ್ಪು ಮಾಹಿತಿ ಮತ್ತು ಸಂಪೂರ್ಣ ಸುಳ್ಳು ಸುದ್ದಿ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ‘ಎಕ್ಸ್’ನಲ್ಲಿ ಹೇಳಿದ್ದಾರೆ.

‘2017 ರಲ್ಲಿ ಪ್ರಕರಣ ದಾಖಲಾಗಿತ್ತಲ್ಲದೇ, ತನಿಖಾಧಿಕಾರಿ ವರದಿ ಸಲ್ಲಿಸಿದ್ದರು. ಇದಕ್ಕೆ ಸಂಬಂಧಿಸಿದಂತೆ 2020 ರ ಮಾರ್ಚ್ 19 ರಂದು ವಿಚಾರಣೆಗೆ ಅನುಮತಿ ಕೋರಿ ಸರ್ಕಾರಕ್ಕೆ ಮನವಿ ಮಾಡಲಾಗಿತ್ತು. ಅದರ ಆಧಾರದಲ್ಲಿ 2023 ರ ಸೆಪ್ಟೆಂಬರ್ 7 ರಂದು ಸರ್ಕಾರ ಅನುಮತಿ ನೀಡಿತ್ತು. 2023 ರ ಅಕ್ಟೋಬರ್ 24 ರಂದು ಆರೋಪಿಗಳ ವಿರುದ್ಧ ಆರೋಪ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಲಾಗಿತ್ತು. ಜ.8 ಕ್ಕೆ ನ್ಯಾಯಾಲಯಕ್ಕೆ ಹಾಜರಾಗುವಂತೆ ನ್ಯಾಯಾಲಯದಿಂದ ಸಮನ್ಸ್ ಜಾರಿ ಆಗಿದೆ. ಇದು ಸಹಜ ಕಾನೂನು ಪ್ರಕ್ರಿಯೆ, ಇದರಲ್ಲಿ ಸರ್ಕಾರದ ಹಸ್ತಕ್ಷೇಪವಿಲ್ಲ’ ಎಂದಿದ್ದಾರೆ.

‘ರಾಜ್ಯ ಸರ್ಕಾರ ಪ್ರಕರಣದ ಮರು ತನಿಖೆಗೆ ಮುಂದಾಗಿದೆ ಎಂದು ಮಾಧ್ಯಮಗಳು ಸುಳ್ಳು ಸುದ್ದಿ ಬಿತ್ತರಿಸಿ, ಪ್ರಚೋದನೆ ನೀಡುವ ಕೆಲಸ ಮಾಡಬಾರದು. ಇಂತಹ ಸುಳ್ಳು ಸುದ್ದಿ ಪ್ರಸಾರದಿಂದ ಮಾಧ್ಯಮಗಳು ವಿಶ್ವಾಸಾರ್ಹತೆ ಕಳೆದುಕೊಳ್ಳುತ್ತವೆ. ಜೊತೆಗೆ ಕಾನೂನು ಸುವ್ಯವಸ್ಥೆ ಕೂಡ ಹದಗೆಡುವ ಸಾಧ್ಯತೆಯನ್ನು ಅಲ್ಲಗಳೆಯಲಾಗದು’ ಎಂದು ಹೇಳಿದ್ದಾರೆ.



ಕಾಂಗ್ರೆಸ್ ಸರ್ಕಾರ ರಾಜಕೀಯ ಕಾರಣಗಳಿಗಾಗಿ ಹಿಂದೂ ಕಾರ್ಯಕರ್ತರ ವಿರುದ್ಧದ ಹಳೆಯ ಪ್ರಕರಣಗಳನ್ನು ಮತ್ತೆ ತೆರೆಯುತ್ತಿದೆ. ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಹಿಂದೂ ವಿರೋಧಿ ಅಜೆಂಡಾ ಅನುಸರಿಸುತ್ತಿದೆ

ಸಿ.ಟಿ.ರವಿ, ಬಿಜೆಪಿ ಮುಖಂಡ

ಸುದ್ದಿ 2 ನಿಮಿಷ

ವಿಕಸಿತ ಭಾರತ– ಅಸಹಕಾರಕ್ಕೆ ಸೂಚನೆ: ಕೋಟ ಆರೋಪ

ಕಾರವಾರ: ‘ವಿಕಸಿತ ಭಾರತ ಕಾರ್ಯಕ್ರಮದಡಿ ಪ್ರತಿ ಗ್ರಾಮ ಮಟ್ಟದಲ್ಲಿ ಕೇಂದ್ರ ಸರ್ಕಾರದ ಯೋಜನೆಗಳ ಕುರಿತು ಪ್ರಚಾರ ನಡೆಸುವ ಕಾರ್ಯಕ್ಕೆ ಸಹಕರಿಸದಂತೆ ಮುಖ್ಯಮಂತ್ರಿ ಕಚೇರಿಯಿಂದ ಜಿಲ್ಲಾಧಿಕಾರಿ, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿಗಳಿಗೆ ಮೌಖಿಕ ಸೂಚನೆ ನೀಡಲಾಗಿದೆ’ ಎಂದು ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಕೋಟ ಶ್ರೀನಿವಾಸ ಪೂಜಾರಿ ಆರೋಪಿಸಿದರು.

‘ಜನವರಿ 22ರಂದು ಗೋಧ್ರಾ ಮಾದರಿಯ ಗಲಭೆ ನಡೆಯಬಹುದು ಎಂಬ ಬಿ.ಕೆ. ಹರಿಪ್ರಸಾದ್ ಹೇಳಿಕೆಯನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿ, ಅಗತ್ಯ ಕ್ರಮ ಕೈಗೊಳ್ಳಬೇಕು. ಅವಘಡಗಳು ನಡೆದರೆ ಅದಕ್ಕೆ ಸಿದ್ದರಾಮಯ್ಯ ಸರ್ಕಾರವೇ ಹೊಣೆ’ ಎಂದು ಅವರು ಗುರುವಾರ ಸುದ್ದಿಗಾರರಿಗೆ ತಿಳಿಸಿದರು.

‘ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸೇರಿ ರಾಜ್ಯ ಸಚಿವ ಸಂಪುಟದ ಕೆಲ ಸದಸ್ಯರ ಒಡೆತನದ ಖಾಸಗಿ ಶಾಲೆಗಳಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿ ಜಾರಿಗೊಳಿಸಲಾಗಿದೆ. ಆದರೆ, ಇದೇ ಕಾಂಗ್ರೆಸ್ ನಾಯಕರು ಬಡವರ ಮಕ್ಕಳು ಕಲಿಯುವ ಶಾಲೆಗೆ ಹಳೆಯ ಶಿಕ್ಷಣ ನೀತಿ ಜಾರಿಮಾಡಲು ಮುಂದಾಗಿರುವುದು ಅವರ ಇಬ್ಬಂದಿತನದ ನೀತಿ ತೋರಿಸುತ್ತದೆ’ ಎಂದರು.

ರಾಜ್ಯದಾದ್ಯಂತ ಶುದ್ಧಜಲ ಅಭಿಯಾನ

ಉಜಿರೆ (ದಕ್ಷಿಣ ಕನ್ನಡ): ‘ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ವತಿಯಿಂದ ಜನವರಿ ತಿಂಗಳಿಡೀ ರಾಜ್ಯದಾದ್ಯಂತ ‘ಶುದ್ಧಜಲ ಅಭಿಯಾನ’ ಆಯೋಜಿಸಲಾಗಿದ್ದು, 1 ಲಕ್ಷ ಜನರಿಗೆ ಶುದ್ಧಜಲ ಬಳಕೆಯ ಕುರಿತು ಜಾಗೃತಿ ಮೂಡಿಸಲಾಗುವುದು’ ಎಂದು ಯೋಜನೆಯ ಕಾರ್ಯನಿರ್ವಾಹಕ ನಿರ್ದೇಶಕ ಎಲ್.ಎಚ್. ಮಂಜುನಾಥ್ ತಿಳಿಸಿದ್ದಾರೆ.

‘ಶುದ್ಧಗಂಗಾ’ ಹೆಸರಲ್ಲಿ ಇದುವರೆಗೆ ರಾಜ್ಯದಲ್ಲಿ 437 ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಸ್ಥಾಪಿಸಲಾಗಿದೆ. ನಿತ್ಯ 5 ಲಕ್ಷ ಜನರು ಈ ಘಟಕಗಳಿಂದ 20 ಲಕ್ಷ ಲೀಟರ್‌ನಷ್ಟು ಶುದ್ಧ ನೀರು ಬಳಸುತ್ತಿದ್ದಾರೆ. ಶುದ್ಧಗಂಗಾ ಘಟಕಗಳಿರುವ ಪ್ರದೇಶಗಳ ಜನರಿಗೆ ನೀರಿನ ಬಳಕೆ ಕುರಿತು ಜಾಗೃತಿ ಮೂಡಿಸಲಾಗುವುದು. ಶಾಲಾ ಮಕ್ಕಳಿಗೆ ಮಾಹಿತಿ, ಜಾಥಾ, ಕರಪತ್ರ ಹಂಚಿಕೆ, ಬೀದಿನಾಟಕ, ಸಾರ್ವಜನಿಕ ಮಾಹಿತಿ ಕಾರ್ಯಕ್ರಮ, ಒಕ್ಕೂಟ ಸಭೆ, ಮನೆಗಳಿಗೆ ಭೇಟಿ ಸೇರಿದಂತೆ 500ಕ್ಕೂ ಹೆಚ್ಚು ಕಾರ್ಯಕ್ರಮಗಳನ್ನು ನಡೆಸಲು ಉದ್ದೇಶಿಸಲಾಗಿದೆ’ ಎಂದಿದ್ದಾರೆ.

‘ರಾಜ್ಯದ ಶೇ 60ರಷ್ಟು ಪ್ರದೇಶಗಳಲ್ಲಿ ಕುಡಿಯುವ ನೀರಿನಲ್ಲಿ ಅಗತ್ಯ ಪ್ರಮಾಣಕ್ಕಿಂತ ಹೆಚ್ಚು ಫ್ಲೋರೈಡ್, ಶೇ 20ಕ್ಕಿಂತ ಹೆಚ್ಚು ನೈಟ್ರೇಟ್ ಹಾಗೂ ಶೇ 30ರಷ್ಟು ಸೂಕ್ಷ್ಮಾಣುಗಳಿಂದ ಕಲುಷಿತವಾಗಿ ಜನರು ಕಾಯಿಲೆಗಳಿಗೆ ತುತ್ತಾಗುತ್ತಿದ್ದಾರೆ. ಬೆಳಗಾವಿ, ಬೀದರ್, ವಿಜಯಪುರ, ಚಿತ್ರದುರ್ಗ, ದಾವಣಗೆರೆ, ಧಾರವಾಡ, ಕಲಬುರಗಿ, ಹಾಸನ, ಹಾವೇರಿ, ಗದಗ, ಕೋಲಾರ, ತುಮಕೂರು, ಕೊಪ್ಪಳ, ಚಿಕ್ಕಮಗಳೂರು, ಚಿಕ್ಕಬಳ್ಳಾಪುರ ಜಿಲ್ಲೆಯ ಕೆಲವು ತಾಲ್ಲೂಕುಗಳಲ್ಲಿ ಫ್ಲೋರೈಡ್ ಸಮಸ್ಯೆ ಹೆಚ್ಚಾಗಿ ಕಂಡುಬಂದಿದೆ’ ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹಿಂದುತ್ವವನ್ನು ತ್ಯಜಿಸುವ ಪರಿಸ್ಥಿತಿ ನಿರ್ಮಾಣ: ರಾಜಣ್ಣ

ಪ್ರಜಾವಾಣಿ ವಾರ್ತೆ

ತುಮಕೂರು: ‘ಹಿಂದೆ ಡಾ. ಬಾಬಾಸಾಹೇಬ ಅಂಬೇಡ್ಕರ್ ಅವರು ಹಿಂದುತ್ವ ತ್ಯಜಿಸುವ ಪರಿಸ್ಥಿತಿ ಸೃಷ್ಟಿ ಮಾಡಲಾಗಿತ್ತು. ಈಗ ಮತ್ತೆ ದೇಶದಲ್ಲಿ ಅದೇ ರೀತಿಯ ವಾತಾವರಣ ಸೃಷ್ಟಿ ಮಾಡಲಾಗುತ್ತಿದೆ’ ಎಂದು ಸಹಕಾರ ಸಚಿವ ಕೆ.ಎನ್. ರಾಜಣ್ಣ ಅಸಮಾಧಾನ ವ್ಯಕ್ತಪಡಿಸಿದರು.

ನಗರದಲ್ಲಿ ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಬಿಜೆಪಿಯವರಿಗೆ ಯಾರೂ ಹಿಂದುತ್ವದ ಪವರ್ ಆಫ್ ಆಟಾರ್ನಿ ಕೊಟ್ಟಿಲ್ಲ. ನಾವೂ ಹಿಂದೂಗಳೇ, ಹಿಂದುತ್ವವಾದಿಗಳೇ. ಆದರೆ, ಅನಗತ್ಯವಾಗಿ ಈ ವಿಚಾರದಲ್ಲಿ ಗೊಂದಲ ಸೃಷ್ಟಿಸಲಾಗುತ್ತಿದೆ’ ಎಂದು ಆರೋಪ ಮಾಡಿದರು.

ಶ್ರೀರಾಮನನ್ನು ಭೂಮಂಡಲಕ್ಕೆ ಪರಿಚಯಿಸಿದ್ದೇ ಮಹರ್ಷಿ ವಾಲ್ಮೀಕಿ. ಹಾಗಾಗಿ ಮೊದಲು ವಾಲ್ಮೀಕಿ ದೇವಸ್ಥಾನ ನಿರ್ಮಿಸಬೇಕು. ವಾಲ್ಮೀಕಿ ರಾಮಾಯಣ ಗ್ರಂಥ ಬರೆಯದಿದ್ದರೆ ಜಗತ್ತಿಗೆ ರಾಮನ ಪರಿಚಯವೇ ಆಗುತ್ತಿರಲಿಲ್ಲ. ವಿಪರ್ಯಾಸ ಎಂದರೆ ಅಂತಹ ಮಹರ್ಷಿ ವಾಲ್ಮೀಕಿ ದೇಗುಲವನ್ನು ಎಲ್ಲೂ ನಿರ್ಮಿಸಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ರಾಮಮಂದಿರದಂತೆ ವಾಲ್ಮೀಕಿ ದೇವಸ್ಥಾನವನ್ನೂ ನಿರ್ಮಿಸುವಂತೆ ಪ್ರಧಾನಿ ನರೇಂದ್ರ ಮೋದಿ ಅವರನ್ನು ಒತ್ತಾಯಿಸಲಾಗುವುದು ಎಂದು ರಾಜಣ್ಣ ಹೇಳಿದರು.

‘ನಾನೊಬ್ಬ ಕರಸೇವಕ ನನ್ನನ್ನೂ ಬಂಧಿಸಿ’ ಬಿಜೆಪಿ ಅಭಿಯಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಾನೊಬ್ಬ ಕರಸೇವಕ ನನ್ನನ್ನೂ ಬಂಧಿಸಿ’ ಎಂಬ ಅಭಿಯಾನಕ್ಕೆ ಬಿಜೆಪಿ ಚಾಲನೆ ನೀಡಿದ್ದು, ರಾಜ್ಯ ಪ್ರಧಾನ ಕಾರ್ಯದರ್ಶಿ ಸುನಿಲ್‌ಕುಮಾರ್ ಬೆಂಗಳೂರಿನಲ್ಲಿ, ಮಾಜಿ ಸಚಿವ ಸಿ.ಟಿ. ರವಿ ಅವರು ಚಿಕ್ಕಮಗಳೂರಿನಲ್ಲಿ ಧರಣಿ ನಡೆಸಿದರು.

ಬೆಂಗಳೂರಿನ ಸದಾಶಿವನಗರ ಪೊಲೀಸ್ ಠಾಣೆ ಮುಂದೆ ಗುರುವಾರ ಧರಣಿ ನಡೆಸಿದ ಸುನಿಲ್‌ಕುಮಾರ್ ಮಾತನಾಡಿ, ‘1990 ಮತ್ತು 1992 ರ ಕರಸೇವೆಗಳಲ್ಲಿ ಕರ್ನಾಟಕದಿಂದಲೂ ಸಾವಿರಾರು ಜನ ಅಂದಿನ ಸರ್ಕಾರದ ಬೆದರಿಕೆಗೂ ಬಗ್ಗದೇ ಭಾಗವಹಿಸಿದ್ದರು. ಆಗಲೂ ಕಾಂಗ್ರೆಸ್ಸಿಗರು ಕರಸೇವೆಗೆ ಬೆದರಿಕೆ ಒಡ್ಡಿದ್ದರು. ಈಗಲೂ ಶ್ರೀರಾಮ ಮಂದಿರ ಉದ್ಘಾಟನೆ ವೇಳೆ ಕರ ಸೇವಕರು, ರಾಮಭಕ್ತರ ಬೆದರಿಸುವ ತಂತ್ರಕ್ಕೆ ಕಾಂಗ್ರೆಸ್ ಮುಂದಾಗಿದೆ’ ಎಂದರು.



ಸದಾಶಿವನಗರ ಪೊಲೀಸ್ ಠಾಣೆ ಮುಂದೆ ಧರಣಿ ನಡೆಸಿದ ಬಿಜೆಪಿ ಪ್ರಧಾನ ಕಾರ್ಯದರ್ಶಿ ವಿ.ಸುನಿಲ್‌ಕುಮಾರ್

‘ಹೋರಾಟಗಳಲ್ಲಿ ಭಾಗವಹಿಸಿದವರ ಮೇಲೆ ಕೇಸುಗಳಿರುತ್ತವೆ. ರಾಮಭಕ್ತರನ್ನು ಕ್ರಿಮಿನಲ್‌ಗಳಿಗೆ ಹೋಲಿಸುವ ಕೆಲಸವನ್ನು ಸಿದ್ದರಾಮಯ್ಯ ಮಾಡುತ್ತಿದ್ದಾರೆ. ಹುಬ್ಬಳ್ಳಿಯ ಕಾರ್ಯಕರ್ತನನ್ನು ಕ್ರಿಮಿನಲ್ ಎಂದು ಹೇಳಿ ತನ್ನ ಕ್ರಮ ಸಮರ್ಥಿಸಿಕೊಳ್ಳಲು ಸರ್ಕಾರ ಹೊರಟಿದೆ’ ಎಂದು ಸುನಿಲ್ ತಿಳಿಸಿದರು.

ರಾಮೋತ್ಸವಕ್ಕೆ ಚಿಂತನೆ ಶಾಸಕ ಇಕ್ಬಾಲ್ ಹುಸೇನ್

ಚನ್ನಪಟ್ಟಣ (ರಾಮನಗರ): ‘ನಾನು ರಾಮಭಕ್ತ. ರಾಮನನ್ನು ಭಕ್ತಿಯಿಂದ ಪೂಜಿಸುತ್ತೇನೆ. ಇದೇ ಕಾರಣಕ್ಕಾಗಿ ರಾಮನಗರದಲ್ಲಿ ರಾಮೋತ್ಸವ ನಡೆಸಬೇಕು ಎಂಬ ಚಿಂತನೆ ಮಾಡಿದ್ದೇನೆ’ ಎಂದು ಶಾಸಕ ಎಚ್.ಎ. ಇಕ್ಬಾಲ್ ಹುಸೇನ್ ಹೇಳಿದ್ದಾರೆ.

‘ಜಾತ್ಯತೀತವಾಗಿ ಮತ್ತು ಪಕ್ಷಾತೀತವಾಗಿ ಎಲ್ಲರನ್ನೂ ಒಳಗೊಂಡು ರಾಮೋತ್ಸವ ಆಚರಣೆಗೆ ನಾನು ಈಗಲೂ ಬದ್ಧ’ ಎಂದು ಗುರುವಾರ ಮಾಧ್ಯಮಗಳಿಗೆ ಅವರು ಪ್ರತಿಕ್ರಿಯಿಸಿದರು.

ರಾಮಮಂದಿರ ಕುರಿತು ಕಾಂಗ್ರೆಸ್ ಮತ್ತು ಬಿಜೆಪಿ ನಡುವೆ ನಡೆದಿರುವ ರಾಜಕೀಯ ಕೆಸರೆರಚಾಟ ಕುರಿತು ಮಾತನಾಡಿದ ಅವರು, ‘ವಿದ್ಯಾರ್ಥಿ ಜೀವನದಲ್ಲಿ ಲಕ್ಷ್ಮಿ, ಸರಸ್ವತಿ, ಗಣೇಶನನ್ನು ಪೂಜಿಸುತ್ತಿದ್ದ ನಾನು ಈಗಲೂ ಎಲ್ಲಾ ದೇವರನ್ನೂ ಪೂಜಿಸುತ್ತೇನೆ’ ಎಂದು ಹೇಳಿದರು.

‘ನಾವು ರಾಮನನ್ನು ಮನೆ ದೇವರು ಅಂತ ಪೂಜೆ ಮಾಡುತ್ತೇವೆ. ಅವರಿಗೆ (ಬಿಜೆಪಿಯವರಿಗೆ) ರಾಮನ ಪೂಜೆ ಹೊಸದಿರಬಹುದು. ನಮಗೆ (ಕಾಂಗ್ರೆಸ್ಸಿಗರಿಗೆ) ಹೊಸದೇನಲ್ಲ. ಅದಕ್ಕಾಗಿಯೇ, ಅವರು ರಾಮನನ್ನು ರಾಜಕಾರಣಕ್ಕೆ ಬಳಸಿಕೊಳ್ಳುತ್ತಿದ್ದಾರೆ. ಕಾಂಗ್ರೆಸ್‌ಗೆ ತನ್ನದೇ ಆದ ಬದ್ಧತೆ ಮತ್ತು ಸಿದ್ಧಾಂತವಿದೆ’ ಎಂದರು.

ಭಯದ ವಾತಾವರಣ ಸೃಷ್ಟಿಗೆ ಸಿದ್ದರಾಮಯ್ಯ ಯತ್ನ: ಅಶೋಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕರಸೇವಕ ಶ್ರೀಕಾಂತ ಪೂಜಾರಿ ವಿರುದ್ಧ ಬೇರೆ ಪ್ರಕರಣಗಳಿವೆ ಎನ್ನುವ ಮೂಲಕ ಮುಖ್ಯಮಂತ್ರಿ ಸಿದ್ದರಾಮಯ್ಯ ಅಮಾಯಕರ ಮೇಲೆ ಬ್ರಹ್ಮಾಸ್ತ್ರ ಪ್ರಯೋಗಿಸಿ ಭಯದ ವಾತಾವರಣ ಸೃಷ್ಟಿಸುತ್ತಿದ್ದಾರೆ’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ ಆರೋಪಿಸಿದರು.

ಸುದ್ದಿಗಾರರ ಜೊತೆ ಗುರುವಾರ ಮಾತನಾಡಿದ ಅವರು, ‘65 ವರ್ಷದ ಶ್ರೀಕಾಂತ ಅವರು ಗಾಯಗೊಂಡಿದ್ದು, ಬದುಕು ಸಾವಿನ ನಡುವೆ ಹೋರಾಡುತ್ತಿದ್ದಾರೆ. ಅವರನ್ನು ಬಂಧಿಸುವ ಅಗತ್ಯ ಏನಿತ್ತು’ ಎಂದು ಪ್ರಶ್ನಿಸಿದರು.

‘ಶ್ರೀಕಾಂತ ಪೂಜಾರಿ ತಲೆಮರೆಸಿಕೊಂಡಿದ್ದಾರೆ ಎಂದಾಗಿದ್ದರೆ ಅವರಿಗೆ ನೋಟಿಸ್ ಏಕೆ ನೀಡಿಲ್ಲ. ಮನೆಗೆ ನೋಟಿಸ್ ಅಂಟಿಸಿದ್ದರೆ ಆ ಮಾಹಿತಿ ಬಹಿರಂಗಪಡಿಸಲಿ. ಎಫ್‌ಐಆರ್ ಪ್ರತಿ ತೋರಿಸಲಿ. ಕೋರ್ಟ್‌ಗೆ ರಜೆ ಇರುವಾಗ ಬಂಧನ ಮಾಡಿದ್ದೇಕೆ’ ಎಂದೂ ಕೇಳಿದರು.

‘ರಾಜ್ಯದಲ್ಲಿ ದೀರ್ಘಾವಧಿಯಿಂದ ಸಾವಿರಾರು ಪ್ರಕರಣಗಳಿವೆ. ಬೆಂಗಳೂರಿನಲ್ಲಿ 10 ಸಾವಿರ ಪ್ರಕರಣಗಳಿವೆ. ಎಲ್ಲರನ್ನೂ ಬಂಧಿಸಿದರೆ ಅವರನ್ನೆಲ್ಲ ಜೈಲಿನಲ್ಲಿರಿಸಲು ಜಾಗವೇ ಇರುವುದಿಲ್ಲ. ಕಾಂಗ್ರೆಸ್‌ನವರು ಬೇಕಾದವರಿಗೆ ಕಾಫಿ ಕುಡಿಸಿ ಮನೆಗೆ ಕಳುಹಿಸುತ್ತಾರೆ. ಶ್ರೀಕಾಂತ ಪೂಜಾರಿ ಕ್ರಿಮಿನಲ್ ಎನ್ನುವ ಕಾಂಗ್ರೆಸ್ ಸರ್ಕಾರಕ್ಕೆ ನಾಚಿಕೆ ಇಲ್ಲ. ಅವರು ಕ್ರಿಮಿನಲ್ ಎನ್ನುವುದಾದರೆ ಸೋನಿಯಾ ಗಾಂಧಿ, ರಾಹುಲ್ ಗಾಂಧಿ, ಡಿ.ಕೆ. ಶಿವಕುಮಾರ್, ಶಶಿ ತರೂರ್ ಯಾವ ಪ್ರಕರಣದಲ್ಲಿ ಭಾಗಿಯಾಗಿದ್ದಾರೆ. ಸಚಿವ ಬಿ. ನಾಗೇಂದ್ರ ವಿರುದ್ಧ ಅಕ್ರಮ ಗಣಿಗಾರಿಕೆ ಆರೋಪ ಸೇರಿ 23 ಪ್ರಕರಣಗಳಿವೆ’ ಎಂದರು.

'20 ಸಾವಿರ ರೌಡಿಶೀಟರ್‌ಗಳಿಗೆ ಬಿಜೆಪಿ ಕೇಸರಿ ಶಾಲಿನ ಸ್ವಾಗತ'

ಚನ್ನಪಟ್ಟಣ (ರಾಮನಗರ): ‘ಬಿಜೆಪಿ ಆಡಳಿತ ಅವಧಿಯಲ್ಲಿ ಸುಮಾರು 20 ಸಾವಿರ ರೌಡಿಗಳ ಹೆಸರನ್ನು ರೌಡಿಶೀಟರ್ ಪಟ್ಟಿಯಿಂದ ತೆಗೆದು, ಕೇಸರಿ ಶಾಲು ಹಾಕಿ ಅವರನ್ನು ಪಕ್ಷಕ್ಕೆ ಸೇರಿಸಿಕೊಂಡಿದ್ದರು. ಇದು ಬಿಜೆಪಿ ಕೊಟ್ಟ ಆಡಳಿತ ಮಾದರಿ’ ಎಂದು ಸಾರಿಗೆ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ರಾಮಲಿಂಗಾ ರೆಡ್ಡಿ ಟೀಕಿಸಿದ್ದಾರೆ.

ಕರಸೇವಕನ ಬಂಧನ ಖಂಡಿಸಿ ಬಿಜೆಪಿ ಹೋರಾಟ ಕುರಿತು ಗುರುವಾರ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಅವರು, ‘ಬಿಜೆಪಿಯವರಿಗೆ ಮಾಡಲು ಕೆಲಸವಿಲ್ಲ. ಬಂಧಿತ ಶ್ರೀಕಾಂತ ಪೂಜಾರಿ ಮೇಲೆ 16 ಪ್ರಕರಣಗಳಿದ್ದು, ಕೋರ್ಟ್ ಆದೇಶದ ಮೇರೆಗೆ ಆತನನ್ನು ಬಂಧಿಸಲಾಗಿದೆ. ಪೊಲೀಸರು ಕಾನೂನು ಪ್ರಕಾರವೇ ಕೆಲಸ ಮಾಡಿದ್ದಾರೆ’ ಎಂದು ಸಮರ್ಥಿಸಿಕೊಂಡರು.

‘ಲೋಕಸಭೆ: ಕುಟುಂಬದವರ ಸ್ಪರ್ಧೆ ಇಲ್ಲ’

ಬೆಂಗಳೂರು: ‘ಲೋಕಸಭಾ ಚುನಾವಣೆಗೆ ಸ್ಪರ್ಧಿಸಲು ನನಗೆ ಆಸಕ್ತಿ ಇಲ್ಲ. ನಮ್ಮ ಕುಟುಂಬದವರೂ ಸ್ಪರ್ಧಿಸುವುದಿಲ್ಲ’ ಎಂದು ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಹೇಳಿದರು.

ಸುದ್ದಿಗಾರರ ಜೊತೆ ಗುರುವಾರ ಮಾತನಾಡಿದ ಅವರು, ‘ಬೆಳಗಾವಿ ಮತ್ತು ಚಿಕ್ಕೋಡಿ ಕ್ಷೇತ್ರದಲ್ಲಿ ಪಕ್ಷದ ಕಾರ್ಯಕರ್ತರಿಗೆ ಅವಕಾಶ ಸಿಗಲಿದೆ. ಹೈಕಮಾಂಡ್ ಏನು ಹೇಳುತ್ತದೊ ನೋಡೋಣ’ ಎಂದರು.

ಏಕವ್ಯಕ್ತಿ ಪ್ರದರ್ಶನ: ‘ರಾಮ ಮಂದಿರ ಉದ್ಘಾಟನೆ ಏಕವ್ಯಕ್ತಿಯ ಪ್ರದರ್ಶನ ಆಗುತ್ತಿದೆ. ಲೋಕಸಭಾ ಚುನಾವಣೆ ಬೇರೆ ಬರುತ್ತಿದೆ. ಎಲ್ಲ ರಾಜಕೀಯ ಪಕ್ಷಗಳಿಗೆ ಆಹ್ವಾನ ಕೊಡಬೇಕು. ಉತ್ತರ ಪ್ರದೇಶದ ಮುಖ್ಯಮಂತ್ರಿಯನ್ನು ಹೊರತುಪಡಿಸಿದರೆ ಬೇರೆ ಯಾವ ಮುಖ್ಯಮಂತ್ರಿಯನ್ನೂ ಆಹ್ವಾನಿಸಿಲ್ಲ’ ಎಂದರು.

ಬಿ.ಕೆ. ಹರಿಪ್ರಸಾದ್ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, ‘ಮುನ್ನೆಚ್ಚರಿಕೆ ಕ್ರಮವಾಗಿ ಹರಿಪ್ರಸಾದ್ ಹೇಳಿದ್ದಾರೆ. ಕೋಮು ಗಲಭೆ ಆಗಬಾರದು ಎಂದು ಎಚ್ಚರಿಕೆ ನೀಡಿದ್ದಾರೆ. ಆಯಾ ರಾಜ್ಯಗಳು ನಿಗಾ ವಹಿಸಬೇಕು’ ಎಂದೂ ಹೇಳಿದರು.

‘ರಾಜ್ಯದ ಗುತ್ತಿಗೆದಾರರ ಮಾಹಿತಿಯನ್ನು ಆದಾಯ ತೆರಿಗೆ ಇಲಾಖೆ ಕೇಳಿದರೆ ಅದನ್ನು ಒದಗಿಸಲು ಯಾವುದೇ ಅಡ್ಡಿ ಇಲ್ಲ’ ಎಂದೂ ತಿಳಿಸಿದರು.

ಕಾಡಾನೆ ದಾಳಿ: ಕಾರ್ಮಿಕ ಸಾವು

ಪ್ರಜಾವಾಣಿ ವಾರ್ತೆ

ಬೇಲೂರು (ಹಾಸನ): ತಾಲ್ಲೂಕಿನ ಮತ್ತಾವರ ಗ್ರಾಮದಲ್ಲಿ ಗುರುವಾರ ಸಂಜೆ ತೋಟದ ಮನೆಯಲ್ಲಿದ್ದ ಗ್ರಾಮದ ಕಾರ್ಮಿಕ ವಸಂತ (43) ಅವರು ಕಾಡಾನೆ ದಾಳಿಗೆ ಸಿಲುಕಿ ಸ್ಥಳದಲ್ಲೇ ಮೃತಪಟ್ಟರು.

‘ಬಿಕ್ಕೋಡು ಭಾಗದಲ್ಲಿ ಸಂಚರಿಸುತ್ತಿರುವ ಆನೆ ಹಿಂಡಿನಿಂದ ಪ್ರತ್ಯೇಕವಾದ ಆನೆ ದಾಳಿ ಮಾಡಿದೆ’ ಎಂದು ಪ್ರತ್ಯಕ್ಷದರ್ಶಿಗಳು ಹೇಳಿದ್ದಾರೆ.

‘ಆನೆ ದಾಳಿಗೆ ನಿರಂತರವಾಗಿ ಸಾವುಗಳು ಸಂಭವಿಸುತ್ತಿದ್ದರೂ, ಸರ್ಕಾರ ಕ್ರಮ ಕೈಗೊಳ್ಳುತ್ತಿಲ್ಲ. ಆನೆಗಳನ್ನು ಸ್ಥಳಾಂತರಿಸದಿದ್ದರೆ ನಾವೇ ಇಲ್ಲಿಂದ ಜಾಗ ಖಾಲಿ ಮಾಡುತ್ತೇವೆ’ ಎಂದು ಗ್ರಾಮಸ್ಥರು ಆಕ್ರೋಶ ವ್ಯಕ್ತಪಡಿಸಿದರು.

ಉಡುಪಿ ಪೇಜಾವರ ಮಠದ ವಿಶ್ವ ಪ್ರಸನ್ನ ತೀರ್ಥ ಸ್ವಾಮೀಜಿ

ಹಿಂದೂರಾಷ್ಟ್ರವಾಗಲು ಬಾಕಿ ಇನ್ನೇನಿದೆ?

ಪ್ರಜಾವಾಣಿ ವಾರ್ತೆ

ವಿಜಯಪುರ: ‘ಭಾರತ ಹಿಂದೂ ರಾಷ್ಟ್ರವಾಗಲು ಇನ್ನೇನೂ ಬಾಕಿಯಿದೆ’ ಎಂದು ಶ್ರೀರಾಮ ಜನ್ಮಭೂಮಿ ತೀರ್ಥಕ್ಷೇತ್ರ ಟ್ರಸ್ಟ್ ಸದಸ್ಯರೂ ಆದ ಉಡುಪಿ ಪೇಜಾವರ ಮಠದ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ ಪ್ರಶ್ನಿಸಿದರು.

‘ಭಾರತದಲ್ಲಿ ಬಹುಸಂಖ್ಯಾತರಾದ ಹಿಂದುಗಳು ಅಭಿಮಾನದಿಂದ ನಮ್ಮದು ಹಿಂದು ರಾಷ್ಟ್ರ ಎಂದು ಹೇಳಿಕೊಳ್ಳುವುದರಲ್ಲಿ ತಪ್ಪೇನಿದೆ? ಹಾಗೆ ಕರೆಯಲು ಹೆಮ್ಮೆಯಾಗುತ್ತದೆ. ಹಿಂದುಗಳಾದ ನಾವು ನಮ್ಮ ದೇಶವನ್ನು ಹಿಂದೂಸ್ತಾನ, ಹಿಂದೂರಾಷ್ಟ್ರ ಎಂದು ಹೇಳಿಕೊಳ್ಳಬಾರದು ಎಂದು ಯಾವ ಸಂವಿಧಾನದಲ್ಲೂ ಹೇಳಿಲ್ಲ’ ಎಂದು ಅವರು ಗುರುವಾರ ಸುದ್ದಿಗಾರರಿಗೆ ತಿಳಿಸಿದರು.

ಈ ಹಿಂದೂಸ್ತಾನದಲ್ಲಿ ಮುಸ್ಲಿಂ, ಕ್ರೈಸ್ತ, ಬೌದ್ಧ, ಜೈನ ಸೇರಿದಂತೆ ಎಲ್ಲ ಧರ್ಮೀಯರಿಗೆ ಅವಕಾಶ ಇದೆ. ಸ್ವಾತಂತ್ರ್ಯ ಪೂರ್ವದಿಂದಲೂ ಎಲ್ಲ ಧರ್ಮೀಯರಿಗೂ ಹಿಂದೂಸ್ತಾನ ಆಶ್ರಯ ಕೊಟ್ಟಿದೆ.

‘ಪಾಕಿಸ್ತಾನ, ಅಪಘಾನಿಸ್ತಾನದ ರೀತಿ ಭಾರತ ನಾಶವಾಗಲು ಮತೀಯ ನೆಲೆಯಲ್ಲಿ ಕಟ್ಟಿದ ದೇಶ ಭಾರತವಲ್ಲ. ಮತೀಯ ಆಧಾರದ ಮೇಲೆ ಉದಯವಾದ ರಾಷ್ಟ್ರಗಳು ನಾಶವಾಗಿವೆಯೇ ಹೊರತು ಧರ್ಮದ ಆಧಾರದ ಮೇಲೆ ನೆಲೆ ನಿಂತಿರುವ ರಾಷ್ಟ್ರಗಳು ನಾಶವಾಗಲಾರವು ಎಂದು ಹೇಳಿದರು.

ಶ್ರೀಕಾಂತ ಪೂಜಾರಿ ತಪ್ಪಿತಸ್ಥನಾಗಿದ್ದರೆ ಶಿಕ್ಷಿಸುವುದು ತಪ್ಪಲ್ಲ. ಆದರೆ, ರಾಮಮಂದಿರ ಉದ್ಘಾಟನೆ ವೇಳೆ ಬಂಧಿಸಿರುವುದು ತಪ್ಪು ಸಂದೇಶ ಕೊಡುತ್ತದೆ.

ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ, ಪೇಜಾವರಮಠ, ಉಡುಪಿ

ಹಸ್ತಲಾಘವ

ನವದೆಹಲಿಯ ವಿಮಾನ ನಿಲ್ದಾಣದಲ್ಲಿ ಗುರುವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕ್ರಿಕೆಟ್ ದಿಗ್ಗಜ ಸಚಿನ್ ತೆಂಡೂಲ್ಕರ್ ಅವರನ್ನು ಆಕಸ್ಮಿಕವಾಗಿ ಭೇಟಿಯಾಗಿ ಕುಶಲೋಪರಿ ವಿಚಾರಿಸಿದರು. ಮುಖ್ಯಮಂತ್ರಿಯ ರಾಜಕೀಯ ಕಾರ್ಯದರ್ಶಿ ಕೆ. ಗೋವಿಂದರಾಜು ಜತೆಗಿದ್ದರು. ಚಿತ್ರವನ್ನು ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿರುವ ಸಿದ್ದರಾಮಯ್ಯ ‘ಸಚಿನ್ ನನ್ನ ಅಚ್ಚುಮೆಚ್ಚಿನ ಆಟಗಾರ, ದಶಕಗಳ ಕಾಲ ಅವರ ಆಟವನ್ನು ಆಸ್ವಾದಿಸಿದ್ದೇನೆ’ ಎಂದು ಬರೆದುಕೊಂಡಿದ್ದಾರೆ.

ಅಶ್ವತ್ಥ ನಾರಾಯಣಗೌಡ ಬಿಜೆಪಿ ಮುಖ್ಯ ವಕ್ತಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಪರಿಷತ್‌ನ ಮಾಜಿ ಸದಸ್ಯ ಅಶ್ವತ್ಥ ನಾರಾಯಣಗೌಡ ಅವರನ್ನು ಬಿಜೆಪಿ ರಾಜ್ಯ ಘಟಕದ ಮುಖ್ಯ ವಕ್ತಾರರನ್ನಾಗಿ ನೇಮಕ ಮಾಡಲಾಗಿದೆ.

ಅಶ್ವತ್ಥ ನಾರಾಯಣಗೌಡ

ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಈ ನೇಮಕ ಮಾಡಿದ್ದಾರೆ.

ಮಾಧ್ಯಮವಿಭಾಗದ ಸಂಚಾಲಕರನ್ನಾಗಿ ಕರುಣಾಕರ ಖಾಸಲೆ, ಸಹಸಂಚಾಲಕ– ಪ್ರಶಾಂತ್ ಕೆಡಂಜಿ. ಸಾಮಾಜಿಕ ಜಾಲತಾಣ ಸಂಚಾಲಕ– ಪ್ರಶಾಂತ್ ಮಾಕನೂರು, ಸಹಸಂಚಾಲಕ– ನರೇಂದ್ರಮೂರ್ತಿ. ಮಾಹಿತಿ ತಂತ್ರಜ್ಞಾನ ವಿಭಾಗದ ಸಂಚಾಲಕ– ನಿತಿನ್‌ರಾಜ್ ನಾಯಕ್, ಸಹಸಂಚಾಲಕಿ– ಶ್ಯಾಮಲಾ ರಘುನಂದನ್. ಪಕ್ಷದ ವಕ್ತಾರರು– ಹರಿಪ್ರಕಾಶ್ ಕೋಣೆಮನೆ, ಛಲವಾದಿ ನಾರಾಯಣಸ್ವಾಮಿ, ತೇಜಸ್ವಿನಿಗೌಡ, ಕೆ.ಎಸ್.ನವೀನ್, ಎಂ.ಜಿ.ಮಹೇಶ್, ಎಚ್.ಎನ್. ಚಂದ್ರಶೇಖರ್, ನರೇಂದ್ರ ರಂಗಪ್ಪ, ಸುರಭಿ ಹೊದಿಗೆರೆ, ಅಶೋಕ ಕೆ.ಎಂ.ಗೌಡ ಮತ್ತು ಎಚ್.ವೆಂಕಟೇಶ್ ದೊಡ್ಡೇರಿ.

ವಿವಿಧೆಡೆ ಮಳೆ; ಕಾಫಿಗೆ ಹಾನಿ

ಪ್ರಜಾವಾಣಿ ವಾರ್ತೆ

ಮಂಗಳೂರು/ ಮೈಸೂರು: ದಕ್ಷಿಣ ಒಳನಾಡು ಮತ್ತು ಕರಾವಳಿ ಭಾಗದ ವಿವಿಧೆಡೆ ಗುರುವಾರ ಮಳೆಯಾಗಿದೆ. ಕೆಲವೆಡೆ ಜಿಟಿಜಿಟಿ ಮಳೆಯಾಗಿದ್ದು, ಇಡೀ ದಿನ ಶೀತ ಗಾಳಿ ಬೀಸಿದೆ.

ಉಡುಪಿ ಜಿಲ್ಲೆಯ ಕೋಡಿಯಲ್ಲಿ 8.5 ಸೆಂ.ಮೀ, ಪಾಂಡೇಶ್ವರದಲ್ಲಿ 5.7, ವಡ್ಡರ್ಸೆಯಲ್ಲಿ 5, ದಕ್ಷಿಣ ಕನ್ನಡ ಜಿಲ್ಲೆಯ ಸರಪಾಡಿಯಲ್ಲಿ 5 ಸೆಂ.ಮೀ. ಮಳೆಯಾಗಿದೆ. ಮೈಸೂರು ಭಾಗದ ಮೈಸೂರು, ಹಾಸನ, ಮಂಡ್ಯ, ಚಾಮರಾಜನಗರ ಹಾಗೂ ಕೊಡಗಿನಲ್ಲಿ ಮಳೆ ಸುರಿದಿದೆ.

ಮಡಿಕೇರಿ, ಹಾಸನ, ಚಿಕ್ಕಮಗಳೂರು ಜಿಲ್ಲೆಯ ಹಲವೆಡೆ ಕಾಫಿ ಕೊಯ್ಲು ನಡೆದಿದ್ದು, ಕಣದಲ್ಲಿ ಹರಡಿದ್ದ ಕಾಫಿಹಣ್ಣುಗಳು ಹಾಳಾಗಿವೆ. ಗಿಡದಲ್ಲೇ ಇರುವ ಹಣ್ಣುಗಳು ಉದುರುತ್ತಿವೆ. ಬೆಳೆಗಾರರು ಅಪಾರ ನಷ್ಟಕ್ಕೆ ತುತ್ತಾಗಿದ್ದಾರೆ.

50 ಕೆ.ಜಿ ಕಾಫಿಯ ಚೀಲವೊಂದಕ್ಕೆ ₹ 7,000ಕ್ಕೂ ಅಧಿಕ ದರವಿದೆ. ಈ ವರ್ಷದ ಅತಿ ಹೆಚ್ಚಿನ ದರವಿದು. ಆದರೆ, ಈಗ ಬೀಳುತ್ತಿರುವ ಮಳೆ ಬೆಳೆಗಾರರ ನಿರೀಕ್ಷೆ ಕಮರುವಂತೆ ಮಾಡಿದೆ.

ಕೊಡಗು ಜಿಲ್ಲೆಯ ನಾಪೋಕ್ಲುವಿನ ಚೋನಕೆರೆಯಲ್ಲಿ ಕಣದಲ್ಲಿ ಹರಡಿದ್ದ ಕಾಫಿ ಮಳೆಗೆ ಸಿಲುಕಿರುವುದು

ಎರಡು ದಿನ ಮಳೆ ಸಾಧ್ಯತೆ

ಬೆಂಗಳೂರು: ರಾಜ್ಯದ ಮಲೆನಾಡು, ಕರಾವಳಿ ಹಾಗೂ ದಕ್ಷಿಣ ಒಳನಾಡು ವ್ಯಾಪ್ತಿಯ ಜಿಲ್ಲೆಗಳಲ್ಲಿ ಶುಕ್ರವಾರ ಹಾಗೂ ಶನಿವಾರ ಗುಡುಗು ಸಹಿತ ಮಳೆಯಾಗುವ ಸಾಧ್ಯತೆಯಿದೆ ಎಂದು ಭಾರತೀಯ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ದಕ್ಷಿಣ ಕನ್ನಡ ಜಿಲ್ಲೆಗೆ ಶುಕ್ರವಾರ ‘ಯೆಲ್ಲೊ ಅಲರ್ಟ್’ ಸೂಚನೆ ನೀಡಲಾಗಿದೆ. ಚಿಕ್ಕಮಗಳೂರು, ಹಾಸನ, ಮಂಡ್ಯ, ಮೈಸೂರು ಜಿಲ್ಲೆಯಲ್ಲಿ ಭಾರಿ ಮಳೆ ಆಗಲಿದೆ. ಉತ್ತರ ಒಳನಾಡಿನ ಕೆಲವು ಭಾಗದಲ್ಲಿ ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ. ಬೆಂಗಳೂರಿನಲ್ಲಿ ಎರಡು ದಿನವೂ ಮೋಡ ಕವಿದ ವಾತಾವರಣ ಇರಲಿದೆ. ಕೆಲವು ಕಡೆ ಸಾಧಾರಣ ಮಳೆಯಾಗಲಿದೆ. ಬೆಳಿಗ್ಗೆ ದಟ್ಟ ಮಂಜು ಕವಿದ ವಾತಾವರಣ ಇರಲಿದೆ ಎಂದು ತಿಳಿಸಿದೆ.

‘ಅಡಿಕೆ ಕೊಯಿಲು ನಡೆಯುತ್ತಿದ್ದು, ಸುಲಿದ ಅಡಿಕೆಯನ್ನು ಬೇಯಿಸಲು ಮತ್ತು ಒಣಗಿಸಲು ಸಾಧ್ಯವಾಗುತ್ತಿಲ್ಲ. ಇದರಿಂದ ನಿರೀಕ್ಷಿಸಿದ ಬೆಲೆ ಸಿಗುವುದು ಕಷ್ಟ’ ಎಂದು ರೈತರು ಅಸಹಾಯಕತೆ ತೋಡಿಕೊಂಡಿದ್ದಾರೆ.

ಮೈಸೂರು ವಿ.ವಿಯಿಂದ ಅಧಿಕೃತ ಘೋಷಣೆ, 5ರಿಂದ 8 ವರ್ಷ ಬೇಕು

‘ಜಯಲಕ್ಷ್ಮಿ ವಿಲಾಸ’ ಸಂರಕ್ಷಣೆಗೆ ಅಮೆರಿಕ ನೆರವು

ಪ್ರಜಾವಾಣಿ ವಾರ್ತೆ

ಮೈಸೂರು: ಇಲ್ಲಿನ ಮಾನಸ ಗಂಗೋತ್ರಿಯಲ್ಲಿರುವ ಪಾರಂಪರಿಕ ಕಟ್ಟಡವಾದ ‘ಜಯಲಕ್ಷ್ಮಿವಿಲಾಸ ಅರಮನೆ’ಯ ಸಂರಕ್ಷಣೆಗೆ ಅಮೆರಿಕ ಸರ್ಕಾರ ಮತ್ತು ಮುಂಬೈನ ಹರೀಶ್– ಬೀನಾ ಶಾ ಫೌಂಡೇಷನ್ ಆರ್ಥಿಕ ಬೆಂಬಲ ಘೋಷಿಸಿವೆ.

‘ಅಮೆರಿಕ ಸರ್ಕಾರದ ಎಎಫ್‌ಸಿಪಿ (ಅಂಬಾಸಿಡರ್ಸ್‌ಫಂಡ್‌ಫಾರ್‌ಕಲ್ಚರಲ್ ಪ್ರಿಸರ್ವೇಷನ್) ಮೂಲಕ ₹ 2.49 ಕೋಟಿ ಧನಸಹಾಯ ನೀಡಲಾಗಿದೆ. ಅರಮನೆಯ ಜಾನಪದ ವಸ್ತುಸಂಗ್ರಹಾಲಯ ಕಟ್ಟಡದ ಪಶ್ಚಿಮ ಭಾಗ ಮತ್ತು ಅಲ್ಲಿರುವ 6,500ಕ್ಕೂ ಹೆಚ್ಚು ಕಲಾಕೃತಿಗಳ ಸಂರಕ್ಷಣೆಗೆ ಅನುದಾನ ಬಳಸಲಾಗುವುದು’ ಎಂದು ಕುಲಪತಿ ಪ್ರೊ.ಎನ್.ಕೆ. ಲೋಕನಾಥ್ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

‘ವಿಶ್ವವಿದ್ಯಾಲಯವು ‘ಡೆಕ್ಕನ್ ಹೆರಿಟೇಜ್ ಫೌಂಡೇಷನ್’ (ಡಿಎಚ್‌ಎಫ್) ಸಹಭಾಗಿತ್ವದಲ್ಲಿ ಪುನಶ್ಚೇತನ ಹಾಗೂ ಸಂರಕ್ಷಣಾ ಪ್ರಯತ್ನಗಳನ್ನು ಮಾಡುತ್ತಿದೆ. ವರ್ಷದಿಂದ ಕಾಮಗಾರಿ ನಡೆದಿದ್ದು, 2025ರ ವೇಳೆಗೆ ಪೂರ್ಣಗೊಳ್ಳುವ ನಿರೀಕ್ಷೆ ಇದೆ. ಕಲಾಕೃತಿಗಳ ಡಿಜಿಟಲೀಕರಣವೂ ನಡೆಯಲಿದೆ. ತೀವ್ರ ಶಿಥಿಲಗೊಂಡಿರುವ ಕಟ್ಟಡವನ್ನು ತುರ್ತಾಗಿ ಉಳಿಸಿಕೊಳ್ಳಬೇಕಾಗಿರುವುದರಿಂದ ಸಹಭಾಗಿತ್ವಕ್ಕಾಗಿ ಅಮೆರಿಕ ರಾಯಭಾರಿ ಕಚೇರಿಗೆ ಪ್ರಸ್ತಾವ ಸಲ್ಲಿಸಲಾಗಿತ್ತು’ ಎಂದರು. ‘14ಸಾವಿರಕ್ಕೂ ಹೆಚ್ಚು ಕಲಾಕೃತಿಗಳ ಸಂರಕ್ಷಣೆಗೆಂದು ವಿ.ವಿಯ ಅಧಿಕಾರಿಗಳೊಂದಿಗೆ, ಪರಿಣತರಾದ ಜೆ.ರಂಗನಾಥ್, ಅರುಣ್ ಮೆನನ್, ಶ್ರೀಕುಮಾರ್ ಮೆನನ್, ಸ್ಕಾಟ್ ಇ. ಹ್ಯಾಟ್‌ಮನ್, ಪ್ರೊ.ನರೇಂದ್ರ, ಶರತ್ ಚಂದ್ರ ಅವರುಳ್ಳ ಸಮಿತಿ ರಚಿಸಲಾಗಿದೆ’ ಎಂದರು.

ಜಯಲಕ್ಷ್ಮಿವಿಲಾಸ ಅರಮನೆಯ ಸಂರಕ್ಷಣೆ ಕಾರ್ಯಕ್ಕೆ ಸಂಬಂಧಿಸಿದ ದಾಖಲೆಗಳನ್ನು ಮೈಸೂರು ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಎನ್‌.ಕೆ. ಲೋಕನಾಥ್ ಹಾಗೂ ಚೆನ್ನೈನ ಯುಎಸ್ ಕಾನ್ಸಲ್ ಜನರಲ್‌ನ ಕ್ರಿಸ್ಟೋಫರ್ ಡಬ್ಲ್ಯು. ಹಾಡ್ಜಸ್ ಪ್ರದರ್ಶಿಸಿದರು. ಹಣಕಾಸು ಅಧಿಕಾರಿ ರೇಖಾ ಕೆ.ಎಸ್, ಡಿಎಚ್‌ಎಫ್ ಇಂಡಿಯಾ ಅಧ್ಯಕ್ಷೆ ಲತಾ ರೆಡ್ಡಿ, ಕುಲಸಚಿವೆ ವಿ.ಆರ್. ಶೈಲಜಾ ಪಾಲ್ಗೊಂಡಿದ್ದರು –ಪ್ರಜಾವಾಣಿ ಚಿತ್ರ

ಸ್ನೇಹ–ಗೌರವಕ್ಕೆ ಸಾಕ್ಷಿ: ಅನುದಾನ ಘೋಷಿಸಿದ ಚೆನ್ನೈನ ಯುಎಸ್ ಕಾನ್ಸಲ್ ಜನರಲ್‌ನ ಕ್ರಿಸ್ಟೋಫರ್ ಡಬ್ಲ್ಯು. ಹಾಡ್ಜಸ್ ಮಾತನಾಡಿ, ‘ಭಾರತದ ಜನ ಹಾಗೂ ಶ್ರೀಮಂತ ಸಾಂಸ್ಕೃತಿಕ ಪರಂಪರೆ ಕುರಿತು ಅಮೆರಿಕವು ಹೊಂದಿರುವ ಸ್ನೇಹ ಮತ್ತು ಗೌರವಕ್ಕೆ ಸಾಕ್ಷಿಯಾಗಿ ಬೆಂಬಲ ನೀಡಲಾಗಿದೆ. ಅರಮನೆಯು ಮುಂದಿನ ಪೀಳಿಗೆಯ ಭಾರತೀಯರು ಹಾಗೂ ಅಂತರರಾಷ್ಟ್ರೀಯ ಪ್ರವಾಸಿಗರನ್ನು ಆಕರ್ಷಿಸಲಿದೆ’ ಎಂದರು.

‘ಎರಡು ದಶಕದಲ್ಲಿ ಭಾರತದಲ್ಲಿ 2ನೇ ಅತಿ ಹೆಚ್ಚು ಪ್ರಮಾಣದ ಅನುದಾನವನ್ನು ಮೈಸೂರಿಗೆ ನೀಡಿರುವುದು ವಿಶೇಷ. ಅಮೆರಿಕ ಸರ್ಕಾರವು ಜಾಗತಿಕವಾಗಿ ಇಂತಹ 30ರಿಂದ 40 ಯೋಜನೆಗಳನ್ನು ಕೈಗೆತ್ತಿಕೊಂಡಿದೆ’ ಎಂದರು.

ಡಿಎಚ್‌ಎಫ್ ಇಂಡಿಯಾದ ಅಧ್ಯಕ್ಷೆ ಲತಾ ರೆಡ್ಡಿ, ಕುಲಸಚಿವೆ ವಿ.ಎಸ್. ಶೈಲಜಾ, ಹಣಕಾಸು ಅಧಿಕಾರಿ ರೇಖಾ ಕೆ.ಎಸ್. ಪಾಲ್ಗೊಂಡಿದ್ದರು.

ಹಳೆ ವಿದ್ಯಾರ್ಥಿ ಸಹಾಯ

‘ಅರಮನೆಯ ಕಟ್ಟಡದ ಇತರ ಭಾಗವನ್ನು ಸಂರಕ್ಷಿಸಲು ವಿಶ್ವವಿದ್ಯಾಲಯದ ಹಳೆಯ ವಿದ್ಯಾರ್ಥಿ, ಉದ್ಯಮಿ ಹರೀಶ್ ಶಾ ನೇತೃತ್ವದ ಹರೀಶ್–ಬೀನಾ ಶಾ ಫೌಂಡೇಷನ್ ಜೊತೆ ಒಪ್ಪಂದ ಮಾಡಿಕೊಳ್ಳಲಾಗಿದೆ’ ಎಂದು ಕುಲಪತಿ ಲೋಕನಾಥ್ ವಿವರ ನೀಡಿದರು.

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಿನಿಮಾ ಪುರವಣಿ
ನೋ ಆಡಿಷನ್, ನೇರ ಆ್ಯಕ್ಷನ್ ಕಿರುತೆರೆಯಿಂದ ಬೆಳ್ಳಿತೆರೆಗೆ ಬಂದ ನಟಿ ಅಂಕಿತಾ ಅಮರ್ ಸಂದರ್ಶನ

ಆಳ-ಅಗಲ ಎರಡೇ ವರ್ಷದಲ್ಲಿ ಸರ್ಕಾರಕ್ಕೆ ₹2.28 ಲಕ್ಷ ಕೋಟಿ ನಷ್ಟ

ಗಡಿ ವಿವಾದದ ಅಡೆತಡೆಗೆ ತಿದ್ದುಪಡಿ: ಮಾನೆ 4
ಧರಣಿ ಆರಂಭಿಸಿದ 'ಅತಿಥಿ'ಗಳು 4

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
71,847 ▲	21,658 ▲	₹65,260 (ಬೆಂಗಳೂರು) ▲	₹75,800 (ಬೆಂಗಳೂರು) ▲	83.24 ▲

ಮೋದಿ ಸರ್ಕಾರದ ಗ್ಯಾರಂಟಿ
ಉದ್ಯಮಶೀಲತೆಗೆ ಅತ್ಯಧಿಕ ಉತ್ತೇಜನ
ಮುದ್ರಾ ಯೋಜನೆಯ ಅಡಿಯಲ್ಲಿ ರೂ. 26 ಲಕ್ಷ ಕೋಟಿ ಮೌಲ್ಯದ 44 ಕೋಟಿಗೂ ಅಧಿಕ ಆಧಾರ ರಹಿತ ಸಾಲಗಳನ್ನು ನೀಡಲಾಗಿದೆ

ಮಕ್ಕಳ ಸುರಕ್ಷತೆಗೆ ಮಹಿಳಾ ಸಹಾಯಕರ ನೇಮಕ: ಶಾಲಾ ಶಿಕ್ಷಣ ಇಲಾಖೆ ಸುತ್ತೋಲೆ

ಶಾಲಾ ವಾಹನಗಳಿಗೆ 'ಸ್ತ್ರೀರಕ್ಷೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಕ್ಕಳ ಸುರಕ್ಷತೆ ದೃಷ್ಟಿಯಿಂದ ಬಸ್, ಕ್ಯಾಬ್, ವ್ಯಾನ್‌ನಂತಹ ಶಾಲಾ ವಾಹನಗಳಲ್ಲಿ ಮಹಿಳಾ ಸಹಾಯಕರನ್ನೇ ನೇಮಿಸಿಕೊಳ್ಳುವಂತೆ ಶಿಕ್ಷಣ ಇಲಾಖೆ ಸೂಚಿಸಿದೆ.

ಈ ಕುರಿತು ಸುತ್ತೋಲೆ ಹೊರಡಿಸಿರುವ ಇಲಾಖೆ ಆಯುಕ್ತೆ ಬಿ.ಬಿ.ಕಾವೇರಿ, ಮಕ್ಕಳ ರಕ್ಷಣೆಗಾಗಿ ಆದ್ಯತೆ ಮೇರೆಗೆ ಕ್ರಮವಹಿಸುವಂತೆ ಶಾಲಾ ಮುಖ್ಯಸ್ಥರು ಮತ್ತು ಆಡಳಿತ ಮಂಡಳಿಗಳಿಗೆ ಸೂಚಿಸಿದ್ದಾರೆ.

ಮಕ್ಕಳನ್ನು ಮನೆಯಿಂದ ಶಾಲೆಗೆ, ಶಾಲೆ ಬಿಟ್ಟ ನಂತರ ಮನೆಗೆ ಸುರಕ್ಷಿತವಾಗಿ ಕರೆತರುವ ಕೆಲಸವನ್ನು ನಿರ್ವಹಿಸಲು ಸಹಾಯಕಿಯರ ಅಗತ್ಯವಿದೆ. ಹಾಗಾಗಿ, ಎಲ್ಲ ಶಾಲೆಗಳೂ ಇದನ್ನು ಪಾಲಿಸಬೇಕು ಎಂದು ಹೇಳಿದ್ದಾರೆ.

ಶಾಲಾ ವಾಹನಗಳನ್ನು ನಿರ್ವಹಿಸುವ ಚಾಲಕರು ಮತ್ತು ಸಹಾಯಕರು ಪ್ರತಿದಿನದ ಕೆಲಸ ಆರಂಭದ ಮೊದಲು ಮತ್ತು ಎಲ್ಲ ಮಕ್ಕಳನ್ನು ಮನೆಗಳಿಗೆ ಬಿಟ್ಟ ನಂತರ ಶಾಲೆಗೆ ವಾಪಸ್ ಬಂದು, ಶಾಲಾ ಮುಖ್ಯಸ್ಥರ ಸಮ್ಮುಖದಲ್ಲಿ ಹಾಜರಾತಿ ಪುಸ್ತಕಕ್ಕೆ ಕಡ್ಡಾಯವಾಗಿ ಸಹಿ ಮಾಡಬೇಕು ಎಂದು ತಾಕೀತು ಮಾಡಿದ್ದಾರೆ.

ಆಯಾ ವ್ಯಾಪ್ತಿಯ ಕ್ಷೇತ್ರ ಶಿಕ್ಷಣಾಧಿಕಾರಿಗಳು (ಬಿಇಒ) ಶಾಲೆಗಳಿಗೆ ಭೇಟಿ ನೀಡಿ, ಸುರಕ್ಷತೆಯ ಖಾತ್ರಿಪಡಿಸಬೇಕು ಮತ್ತು ಮಕ್ಕಳ ಮೇಲೆ ದೌರ್ಜನ್ಯ ಪ್ರಕರಣಗಳು ನಡೆದಿಲ್ಲ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು. ಆಡಳಿತ ಮಂಡಳಿಗಳು ವಿವರಗಳನ್ನು ಪ್ರತಿ ವರ್ಷ ಬಿಇಒಗಳಿಗೆ ನೀಡಬೇಕು ಎಂದು ಹೇಳಿದ್ದಾರೆ.

ಕರ್ನಾಟಕ ಮೋಟಾರು ವಾಹನ ಕಾಯಿದೆ–2012ರ ಪ್ರಕಾರ ಖಾಸಗಿ ಒಪ್ಪಂದದ ವಾಹನಗಳಲ್ಲಿ ಶಾಲಾ ಮಕ್ಕಳಿಗೆ ಸಾರಿಗೆ ಸೌಲಭ್ಯ ಒದಗಿಸುವ ಕುರಿತು ಹೊರಡಿಸಲಾದ ಅಧಿಸೂಚನೆಯಂತೆ ಮಕ್ಕಳ ಸಂಖ್ಯೆಯನ್ನು ನಿರ್ಬಂಧಿಸಬೇಕು. ನಿಗದಿತ ಸಂಖ್ಯೆಗಿಂತ ಹೆಚ್ಚಿನ ಮಕ್ಕಳನ್ನು ಕರೆದುಕೊಂಡು ಹೋಗದಂತೆ ಮುಂಜಾಗ್ರತೆ ಕೈಗೊಳ್ಳಬೇಕು ಎಂದು ಷರತ್ತುಗಳನ್ನು ವಿಧಿಸಲಾಗಿದೆ.

ಸೂಚನೆಗಳೇನು?

- ವಾಹನಗಳಲ್ಲಿ ಮಕ್ಕಳ ಮೇಲೆ ನಡೆಯುವ ದೌರ್ಜನ್ಯ ತಡೆಯಲು 'ಶಾಲಾ ವಾಹನ ಸುರಕ್ಷತಾ ಸಮಿತಿ' ರಚಿಸಬೇಕು
- ಸನ್ನಡತೆಯ ಚಾಲಕರನ್ನಷ್ಟೇ ನೇಮಕ ಮಾಡಿಕೊಳ್ಳಬೇಕು
- ಖಾಸಗಿ ಶಾಲೆಗಳ ಪ್ರತಿ ವಾಹನದಲ್ಲೂ ಸಿ.ಸಿ.ಟಿ.ವಿ. ಕ್ಯಾಮೆರಾ ಅಳವಡಿಸಬೇಕು
- ಮಕ್ಕಳ ಸುರಕ್ಷತೆಯ ನಿಯಮಗಳನ್ನು ಉಲ್ಲಂಘಿಸಿದರೆ ಶಿಸ್ತುಕ್ರಮ ಜರುಗಿಸಬೇಕು

ಶಿಕ್ಷಣ ಇಲಾಖೆಯ ಸುತ್ತೋಲೆ ಸ್ವಾಗತಾರ್ಹ. ಖಾಸಗಿ ಶಾಲೆಗಳಲ್ಲಿ ಚಾಲಕರು ದೀರ್ಘ ಕಾಲ ನಿಲ್ಲುವುದಿಲ್ಲ. ಹಾಗಾಗಿ, ಯಾವುದೇ ವೆಚ್ಚವಿಲ್ಲದೆ ಸನ್ನಡತೆ ಪ್ರಮಾಣಪತ್ರ ನೀಡಬೇಕು

ಡಿ.ಶಶಿಕುಮಾರ್, ಪ್ರಧಾನ ಕಾರ್ಯದರ್ಶಿ, ಕರ್ನಾಟಕದ ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ಆಡಳಿತ ಮಂಡಳಿ

ಚಾಲಕರಿಗೆ ಪೊಲೀಸ್ ಪರಿಶೀಲನೆ ಕಡ್ಡಾಯ

ಆಟೊರಿಕ್ಷಾ ಸೇರಿದಂತೆ ಶಾಲಾ ಮಕ್ಕಳನ್ನು ಕರೆತರುವ ಎಲ್ಲ ಬಗೆಯ ವಾಹನಗಳ ಚಾಲಕರು ಎರಡು ವರ್ಷಗಳಿಗೊಮ್ಮೆ ಪೊಲೀಸರಿಂದ ಪಡೆದ ಸನ್ನಡತೆಯ ಪ್ರಮಾಣಪತ್ರ ಸಲ್ಲಿಸುವುದನ್ನು ಕಡ್ಡಾಯಗೊಳಿಸಲಾಗಿದೆ.

ಶಾಲಾ ವಾಹನಗಳಲ್ಲಿ ಚಾಲಕರು ಹಾಗೂ ವಾಹನಗಳ ಸಹಾಯಕರಿಂದ ಮಕ್ಕಳ ಮೇಲೆ ದೌರ್ಜನ್ಯ ನಡೆದ ಪ್ರಕರಣಗಳು ವರದಿಯಾಗಿವೆ. ಈ ಕಾರಣಕ್ಕೆ ಶಾಲಾ ವಾಹನಗಳ ಚಾಲಕರ ಮತ್ತು ಸಹಾಯಕರ ಮಾನಸಿಕ ಸ್ಥಿತಿ ಗಮನದಲ್ಲಿಟ್ಟುಕೊಂಡು ಸಂಬಂಧಿಸಿದ ಪೊಲೀಸ್ ಠಾಣೆಯಿಂದ ನಡತೆ ಪ್ರಮಾಣ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಪಡೆಯಬೇಕು ಎಂದೂ ನಿರ್ದೇಶಿಸಲಾಗಿದೆ.

ಚಾಲಕರು ತಮ್ಮ ಮೇಲೆ ಯಾವುದೇ ಅಪರಾಧ ಪ್ರಕರಣಗಳು ದಾಖಲಾಗಿಲ್ಲ ಎನ್ನುವ ವಿವರ ಒಳಗೊಂಡ ಸನ್ನಡತೆಯ ಪ್ರಮಾಣಪತ್ರ ಪಡೆಯಬೇಕು. ಚಾಲಕರ ಸನ್ನಡತೆಯ ಪ್ರಮಾಣಪತ್ರಗಳನ್ನು ಆಡಳಿತ ಮಂಡಳಿಗಳು ಎರಡು ವರ್ಷಗಳಿಗೊಮ್ಮೆ ಪಡೆದುಕೊಳ್ಳಬೇಕು.

ಚಾಲಕರಿಗೆ ಸನ್ನಡತೆ ಪ್ರಮಾಣಪತ್ರ ಕಡ್ಡಾಯ, ವಾಹನಗಳಲ್ಲಿ ಸಹಾಯಕಿಯರ ನೇಮಕ ಎರಡೂ ವಿಷಯಗಳು ಮಕ್ಕಳ ಸುರಕ್ಷತೆಯ ದೃಷ್ಟಿಯಿಂದ ಮುಖ್ಯ ನಿರ್ಧಾರಗಳು

ಅನುಪಮ ರಾಜೇಶ್, ಪೋಷಕಿ

ಚಿನ್ನದ ದರ ₹420, ಬೆಳ್ಳಿ ₹1,900 ಇಳಿಕೆ 8

ನ್ಯೂಲ್ಯಾಂಡ್ಸ್‌ನಲ್ಲಿ ಭಾರತದ ಹೊಸ ಇತಿಹಾಸ

ಕೇಪ್‌ಟೌನ್: ಒಂದೂವರೆ ದಿನದಲ್ಲಿ ಮುಗಿದ ಟೆಸ್ಟ್ ಕ್ರಿಕೆಟ್ ಪಂದ್ಯದಲ್ಲಿ ಭಾರತ ತಂಡವು ದಕ್ಷಿಣ ಆಫ್ರಿಕಾ ಎದುರು ಗುರುವಾರ ಐತಿಹಾಸಿಕ ಜಯ ದಾಖಲಿಸಿತು. ಎರಡು ಪಂದ್ಯಗಳ ಸರಣಿಯಲ್ಲಿ ಸಮಬಲ ಸಾಧಿಸಿತು. ಟೆಸ್ಟ್ ಇತಿಹಾಸದಲ್ಲಿಯೇ 'ಚುಟುಕು ಪಂದ್ಯ'ವಾಗಿಯೂ ಈ ಹಣಾಹಣಿ ದಾಖಲಾಯಿತು. ಎರಡನೇ ಇನಿಂಗ್ಸ್‌ನಲ್ಲಿ ಬಿರುಗಾಳಿ ವೇಗದ ಬೌಲಿಂಗ್ ಮಾಡಿದ ಜಸ್‌ಪ್ರೀತ್ ಬೂಮ್ರಾ ಭಾರತದ ಗೆಲುವಿಗೆ ಮಹತ್ವದ ಕಾಣಿಕೆ ನೀಡಿದರು.

ಭಾರತಕ್ಕೆ 7 ವಿಕೆಟ್ ಜಯ

ಸರಣಿ 1-1 ಸಮಬಲ

642 ಈ ಪಂದ್ಯದಲ್ಲಿ ಬೌಲರ್‌ಗಳು ಹಾಕಿದ ಒಟ್ಟು ಎಸೆತಗಳು. ಅತ್ಯಂತ ಕಡಿಮೆ ಎಸೆತಗಳನ್ನು ಕಂಡ ಟೆಸ್ಟ್ ಇದಾಗಿದೆ. 1932ರಲ್ಲಿ ಮೆಲ್ಬರ್ನ್‌ನಲ್ಲಿ ನಡೆದಿದ್ದ ಆಸ್ಟ್ರೇಲಿಯಾ ಹಾಗೂ ದಕ್ಷಿಣ ಆಫ್ರಿಕಾ ಟೆಸ್ಟ್‌ನಲ್ಲಿ 656 ಎಸೆತಗಳ ಆಟ ನಡೆದಿದ್ದು ಇದುವರೆಗಿನ ದಾಖಲೆಯಾಗಿತ್ತು

33 ಈ ಪಂದ್ಯದಲ್ಲಿ ಪತನವಾದ ಒಟ್ಟು ವಿಕೆಟ್‌ಗಳು

1 ನ್ಯೂಲ್ಯಾಂಡ್ಸ್ ಕ್ರೀಡಾಂಗಣದಲ್ಲಿ ಟೆಸ್ಟ್ ಗೆದ್ದ ಏಷ್ಯಾದ ಮೊದಲ ತಂಡ ಭಾರತ

ಟೆಸ್ಟ್ ಕ್ರಿಕೆಟ್‌ನ ಶ್ರೇಷ್ಠ ಗೆಲುವುಗಳಲ್ಲಿ ಇದೂ ಒಂದು. ಇಲ್ಲಿ ನಾವು ಈ ಹಿಂದೆ ಯಾವಾಗಲೂ ಜಯಿಸಿರಲಿಲ್ಲ.

ರೋಹಿತ್ ಶರ್ಮಾ, ಭಾರತ ತಂಡದ ನಾಯಕ

ಜಸ್‌ಪ್ರೀತ್ ಬೂಮ್ರಾ

ಓವರ್	ರನ್	ವಿಕೆಟ್
13.5	61	6

ಡಬ್ಲ್ಯುಟಿಸಿಯಲ್ಲಿ ಅಗ್ರಸ್ಥಾನ

ಈ ಗೆಲುವಿನೊಡನೆ ಭಾರತಕ್ಕೆ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್‌ನ ಅಂಕಪಟ್ಟಿಯಲ್ಲಿ ಮತ್ತೆ ಅಗ್ರಸ್ಥಾನ

ನನ್ನ ಹೃದಯದಲ್ಲಿ ನ್ಯೂಲ್ಯಾಂಡ್ಸ್ ಕ್ರೀಡಾಂಗಣಕ್ಕೆ ವಿಶೇಷ ಸ್ಥಾನವಿದೆ. ನನ್ನ ಟೆಸ್ಟ್ ಕ್ರಿಕೆಟ್ ಪ್ರಯಾಣ 2018ರಲ್ಲಿ ಇಲ್ಲಿಂದಲೇ ಆರಂಭವಾಯಿತು. ಇಲ್ಲಿ ಪರಿಣಾಮಕಾರಿ ಆಗಬೇಕೆಂಬ ಆಸೆಯಿತ್ತು.

ಜಸ್‌ಪ್ರೀತ್ ಬೂಮ್ರಾ

ಮೊದಲ ಇನಿಂಗ್ಸ್
- ದಕ್ಷಿಣ ಆಫ್ರಿಕಾ **55** (23.2 ಓವರ್)
- ಭಾರತ **153** (34.5 ಓವರ್)

ಎರಡನೇ ಇನಿಂಗ್ಸ್
- ದ.ಆಫ್ರಿಕಾ **176** (36.5 ಓವರ್)
- ಭಾರತ **3ಕ್ಕೆ80** (12 ಓವರ್)

ಮಾಹಿತಿ: ಪಿಟಿಐ, ಕ್ರಿಕೆಟ್ ವೆಬ್‌ಸೈಟ್

ವಿವರ ಪುಟ: 10

ರಕ್ತ ಸಂಸ್ಕರಣಾ ಶುಲ್ಕಕ್ಕೆ ಮಾತ್ರ ಅವಕಾಶ

ನವದೆಹಲಿ (ಪಿಟಿಐ): ಆಸ್ಪತ್ರೆಗಳು ಮತ್ತು ರಕ್ತನಿಧಿಗಳು ಇನ್ನು ಮುಂದೆ ರಕ್ತಕ್ಕೆ ಸಂಸ್ಕರಣಾ ಶುಲ್ಕವನ್ನು ಮಾತ್ರ ವಿಧಿಸಲು ಅವಕಾಶವಿರಲಿದೆ. ರಕ್ತಕ್ಕೆ ದುಬಾರಿ ಶುಲ್ಕ ನಿಗದಿ ಮಾಡುವ ಪ್ರವೃತ್ತಿಗೆ ಅಂತ್ಯ ಹೇಳುವ ಉದ್ದೇಶದಿಂದ ಭಾರತೀಯ ಔಷಧ ಮಹಾ ನಿಯಂತ್ರಕರು (ಡಿಸಿಜಿಐ), ಸಂಸ್ಕರಣಾ ಶುಲ್ಕ ಹೊರತುಪಡಿಸಿ ಇತರ ಎಲ್ಲ ಬಗೆಯ ಶುಲ್ಕಗಳನ್ನು ರದ್ದುಪಡಿಸಿದ್ದಾರೆ.

ಎಲ್ಲ ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳಿಗೆ ಪತ್ರ ರವಾನಿಸಿರುವ ಡಿಸಿಜಿಐ, 'ರಕ್ತವು ಮಾರಾಟಕ್ಕಿಲ್ಲ' ಎಂಬ ಅಭಿಪ್ರಾಯದ ಆಧಾರದಲ್ಲಿ ಈ ತೀರ್ಮಾನ ಕೈಗೊಳ್ಳಲಾಗಿದೆ ಎಂದು ಹೇಳಿದೆ.

ಔಷಧಗಳ ಸಮಾಲೋಚನಾ ಸಮಿತಿಯ ಸಭೆಯ ಬಗ್ಗೆ ಪತ್ರದಲ್ಲಿ ಉಲ್ಲೇಖಿಸಿರುವ ಡಿಸಿಜಿಐ, 'ರಕ್ತವು ಮಾರಾಟಕ್ಕೆ ಅಲ್ಲ, ಅದಕ್ಕೆ ರಕ್ತನಿಧಿಗಳು ಸಂಸ್ಕರಣಾ ಶುಲ್ಕವನ್ನು ಮಾತ್ರ ವಿಧಿಸಬಹುದು ಎಂಬ ಅಭಿಪ್ರಾಯ ಸಭೆಯಲ್ಲಿ ವ್ಯಕ್ತವಾಗಿದೆ' ಎಂದು ಹೇಳಿದೆ. ಸಂಸ್ಕರಣಾ ಶುಲ್ಕವು ₹250ರಿಂದ ₹1,550ರವರೆಗೆ ಇರುತ್ತದೆ.

ಪರಿಷ್ಕೃತ ನಿಯಮಗಳಿಗೆ ಬದ್ಧರಾಗಿ ಇರುವಂತೆ ಎಲ್ಲ ರಕ್ತನಿಧಿಗಳಿಗೆ ಸೂಚನೆ ನೀಡಬೇಕು ಎಂದು ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳಿಗೆ ತಿಳಿಸಲಾಗಿದೆ.

ಖಾಸಗಿ ಆಸ್ಪತ್ರೆಗಳು ಪ್ರತಿ ಯೂನಿಟ್ ರಕ್ತಕ್ಕೆ (ದಾನಿಗಳು ಇಲ್ಲದಿದ್ದ ಸಂದರ್ಭದಲ್ಲಿ) ₹3 ಸಾವಿರದಿಂದ ₹8 ಸಾವಿರದವರೆಗೂ ಶುಲ್ಕ ವಿಧಿಸುತ್ತಿವೆ ಎಂದು ಸರ್ಕಾರಿ ಮೂಲಗಳು ಖಚಿತಪಡಿಸಿವೆ. ರಕ್ತದ ಕೊರತೆ ಇದ್ದಾಗ ಅಥವಾ ಅಪರೂಪದ ಗುಂಪಿನ ರಕ್ತ ಬೇಕಿದ್ದಾಗ ಶುಲ್ಕ ಇನ್ನಷ್ಟು ಹೆಚ್ಚಿರುತ್ತದೆ ಎನ್ನಲಾಗಿದೆ.

ರಾಮ ಮಾಂಸಾಹಾರಿ: ಹೇಳಿಕೆಗೆ ಕಿಡಿ 9

ಚಿನಕುರಳಿ
ಪ್ರಕಾಶ್ ಶೆಟ್ಟಿ

ಗೊಲ್ಲರಹಟ್ಟಿಗೆ ದಲಿತ ಯುವಕ ಪ್ರವೇಶ: ದೇಗುಲಕ್ಕೆ ಬೀಗ

• ವಿಜಯಕುಮಾರ್ ಎಸ್.ಕೆ.

ಚಿಕ್ಕಮಗಳೂರು: ತರೀಕೆರೆ ತಾಲ್ಲೂಕಿನ ಗೇರುಮರಡಿ ಗೊಲ್ಲರಹಟ್ಟಿಗೆ ಮಾದಿಗ ಸಮುದಾಯದ ಯುವಕ ಮಾರುತಿ ಪ್ರವೇಶ ಮಾಡಿದ ಕಾರಣಕ್ಕೆ ಹಟ್ಟಿಯಲ್ಲಿರುವ ಎರಡು ದೇಗುಲಗಳಿಗೆ ಬೀಗ ಬಿದ್ದಿದ್ದು, ಮೂರು ದಿನಗಳಿಂದ ಪೂಜೆ ಸ್ಥಗಿತಗೊಂಡಿದೆ.

ಪರಿಶಿಷ್ಟ ಜಾತಿಯವರು ಹಟ್ಟಿ ಪ್ರವೇಶ ಮಾಡಿದರೆ ದೇವರಿಗೆ ಮೈಲಿಗೆಯಾಗುತ್ತದೆ ಎಂಬ ನಂಬಿಕೆ ಹಟ್ಟಿಯ ಜನರಲ್ಲಿದೆ. ಜೆಸಿಬಿ ಆಪರೇಟರ್ ಆಗಿರುವ ಎಂ.ಸಿ.ಹಳ್ಳಿಯ ಮಾರುತಿ ಎಂಬ ಯುವಕ ಗೇರುಮರಡಿ ಗ್ರಾಮದ ರವಿ ಎಂಬವರ ಹಳೇ ಮನೆಯ ಮಣ್ಣು ತುಂಬಿಸುವ ಕೆಲಸಕ್ಕೆ ಜ.1ರಂದು ಹೋಗಿದ್ದರು. ಜೆಸಿಬಿ ಹೋಗುವಾಗ ಡಿಷ್ ಕೇಬಲ್ ತುಂಡಾಗಿದ್ದರಿಂದ ಗೊಲ್ಲರಹಟ್ಟಿಯ ಶಂಕರಪ್ಪ ನಡುವೆ ಜಗಳ ಆರಂಭವಾಯಿತು.

4ನೇ ಪುಟ ನೋಡಿ

ಗೇರುಮರಡಿ ಗೊಲ್ಲರಹಟ್ಟಿಯಲ್ಲಿರುವ ಕಂಬದ ರಂಗನಾಥಸ್ವಾಮಿ ದೇಗುಲಕ್ಕೆ ಬೀಗ ಹಾಕಲಾಗಿದೆ

ಪರಿಶಿಷ್ಟ ಜಾತಿಯವರನ್ನು ಕೀಳಾಗಿ ಕಾಣುವುದು ತಪ್ಪು, ಇದು ಪುನರಾವರ್ತನೆ ಆಗಬಾರದು ಎಂದು ಎಚ್ಚರಿಕೆಯನ್ನು ಗೊಲ್ಲರಹಟ್ಟಿ ಜನರಿಗೆ ನೀಡಲಾಗಿದೆ. ಜಾಗೃತಿ ಮೂಡಿಸುವ ಕೆಲಸ ಮಾಡಲಾಗುವುದು

ಯೋಗೇಶ್, ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕ

ಆನೆಕಾಲು ರೋಗ: ಸಂಶೋಧನಾ ಮಾಹಿತಿ ಬ್ರಿಟಿಷ್ ಜರ್ನಲ್‌ನಲ್ಲಿ ಪ್ರಕಟ

ಬಿಜೆಡಿ ಮುಖಪುಟದಲ್ಲಿ ಐಎಡಿ ಯಶೋಗಾಥೆ

• ವಿಕ್ರಂ ಕಾಂತಿಕೆರೆ

ಮಂಗಳೂರು: ಆನೆಕಾಲು (ಲಿಂಫೋಡಿಮಾ/ಫೈಲೇರಿಯಾಸಿಸ್) ರೋಗ ಗುಣಪಡಿಸಲು ಸಂಯೋಜಿತ ಚಿಕಿತ್ಸಾ ವಿಧಾನ ಕಂಡುಹಿಡಿದ ಕಾಸರಗೋಡಿನ ಇನ್‌ಸ್ಟಿಟ್ಯೂಟ್ ಆಫ್ ಅಪ್ಲೈಯ್ಡ್ ಡರ್ಮಟಾಲಜಿ (ಐಎಡಿ) ಕುರಿತ ಲೇಖನ ಬ್ರಿಟಿಷ್ ಜರ್ನಲ್ ಆಫ್ ಡರ್ಮಟಾಲಜಿಯ (ಬಿಜೆಡಿ) ಈ ತಿಂಗಳ ಸಂಚಿಕೆಯ ಮುಖಪುಟ ಲೇಖನವಾಗಿ ಪ್ರಕಟಗೊಂಡಿದೆ.

ಪರಂಪರಾಗತ ಆಯುರ್ವೇದ ಮತ್ತು ಯೋಗ ಪದ್ಧತಿಗಳಲ್ಲಿ ಲಭ್ಯವಿರುವ ರೋಗ ಉಪಶಮನದ ಕ್ರಮಗಳನ್ನು, ಗಿಡಮೂಲಿಕೆಗಳಿಂದ ಸಿದ್ಧಪಡಿಸಿದ ಔಷಧಿಗಳನ್ನು ಅಲೋಪತಿ ವಿಧಾನದೊಂದಿಗೆ ಬೆರೆಸಿ, ಆನೆಕಾಲು ರೋಗಕ್ಕೆ ಸಂಯೋಜಿತ ಚಿಕಿತ್ಸಾ ಪದ್ಧತಿಯನ್ನು ಐಎಡಿ ನಿರ್ದೇಶಕ ಡಾ.ಎಸ್.ಆರ್. ನರಹರಿ ಮತ್ತು ತಂಡ ಸಿದ್ಧಪಡಿಸಿತ್ತು. ಕಾಸರಗೋಡು–ಮಧೂರು ರಸ್ತೆಯ ಉಳಿಯತ್ತಡ್ಕದಲ್ಲಿರುವ ಈ ಸಂಸ್ಥೆಯಲ್ಲಿ ಚಿಕಿತ್ಸೆ ಪಡೆಯಲು ಜಗತ್ತಿನ ಹಲವು ದೇಶಗಳ ರೋಗಿಗಳು ಬರುತ್ತಿದ್ದಾರೆ.

ಸಂಯೋಜಿತ ಚಿಕಿತ್ಸಾ ಪದ್ಧತಿಯ ಒಂದು ಹಂತ

'ಚರ್ಮರೋಗಕ್ಕೆ ಸಂಬಂಧಪಟ್ಟ ಚಿಕಿತ್ಸೆ ಮತ್ತು ಸಾರ್ವಜನಿಕ ಆರೋಗ್ಯದ ಕುರಿತು ಲೇಖನಗಳನ್ನು ಪ್ರಕಟಿಸುತ್ತಿರುವ ಬ್ರಿಟಿಷ್ ಜರ್ನಲ್ ಆಫ್ ಡರ್ಮಟಾಲಜಿಗೆ 180 ವರ್ಷಗಳ ಇತಿಹಾಸವಿದೆ. ಅಂಥ ಪತ್ರಿಕೆಯಲ್ಲಿ ಲೇಖನ ಪ್ರಕಟಗೊಳ್ಳುವುದು ದೊಡ್ಡ ಗೌರವ. ಐಎಡಿ ಕುರಿತ ಮುಖಪುಟದ ಲೇಖನ ಪ್ರಕಟವಾಗಿರುವುದು ನಮ್ಮ ಸಂತಸವನ್ನು ನೂರ್ಮಡಿಗೊಳಿಸಿದೆ' ಎಂದು 'ಪ್ರಜಾವಾಣಿ' ಜೊತೆ ಮಾತನಾಡಿದ ಡಾ.ನರಹರಿ ಹೇಳಿದರು.

ಸಂಯೋಜಿತ ಔಷಧದ ಮೂಲಕ ಚಿಕಿತ್ಸೆ ಪಡೆಯಲು ದೇಶ–ವಿದೇಶಗಳಿಂದ ಜನರು ಬರುತ್ತಿದ್ದರೂ ಕೆಲವರಿಗೆ ಸಂದೇಹವಿತ್ತು. ಈಗ ಈ ಔಷಧಿಗೆ ಅಂತರರಾಷ್ಟ್ರೀಯ ಮಾನ್ಯತೆ ಸಿಕ್ಕಿದಂತಾಗಿದೆ

ಡಾ.ಎಸ್.ಆರ್.ನರಹರಿ, ಐಎಡಿ ನಿರ್ದೇಶಕ

'ಬಿಜೆಡಿಯಲ್ಲಿ ಲೇಖನ ಪ್ರಕಟ ಮಾಡುವ ಮೊದಲು ಔಷಧಿ ಅಥವಾ ಚಿಕಿತ್ಸಾ ಪದ್ಧತಿಯನ್ನು ಸಮರ್ಥಿಸಿಕೊಳ್ಳುವ ವೈಜ್ಞಾನಿಕ ಪುರಾವೆಗಳನ್ನು ಸಲ್ಲಿಸಬೇಕಾಗುತ್ತದೆ. ಆನೆಕಾಲು ರೋಗಕ್ಕೆ ಸಿದ್ಧಪಡಿಸಿದ ಸಂಯೋಜಿತ ಔಷಧಿಯ ಕುರಿತು ಸಂಸ್ಥೆಯಿಂದ ಲೇಖನವೊಂದನ್ನು ಕಳುಹಿಸಲಾಗಿತ್ತು. ನಮ್ಮ ಅರಿವಿಗೇ ಬಾರದೆ ಅದರ ಕುರಿತು ಸಮಿತಿಯೊಂದು ಪರಿಶೀಲನೆ ನಡೆಸಿತ್ತು. ನಂತರ ಕೆಲವು ಪ್ರಶ್ನೆಗಳನ್ನು ಕಳುಹಿಸಲಾಗಿತ್ತು. ಅದಕ್ಕೆ ಉತ್ತರಗಳನ್ನು ಕಳುಹಿಸುವಾಗ ಪೂರಕ ಮಾಹಿತಿಯನ್ನೂ ಸಲ್ಲಿಸಲಾಗಿತ್ತು' ಎಂದು ಅವರು ವಿವರಿಸಿದರು.

4ನೇ ಪುಟ ನೋಡಿ

ನಿಮ್ಮ ವೈದ್ಯರು ಬರೆದು ಕೊಟ್ಟಿರುವ ಔಷಧಿಗಳು
ತಯಾರಿಸಲ್ಪಡುವ ಕಾರ್ಖಾನೆಗಳಲ್ಲಿಯೇ
ತಯಾರಿಸಲಾಗಿರುವ, ಅದೇ ಅಂಶಗಳನ್ನು
ಒಳಗೊಂಡಿರುವ, ಅದೇ ಗುಣಮಟ್ಟದ
ಮೆಡ್‌ಪ್ಲಸ್ ಬ್ರಾಂಡ್ ಔಷಧಿಗಳನ್ನು
ಖರೀದಿಸುವ ಮೂಲಕ
ಕೇವಲ 3 ತಿಂಗಳಲ್ಲಿ 95.5 ಲಕ್ಷ
ಭಾರತೀಯರು 74.5 ಕೋಟಿಗೂ ಅಧಿಕ
ಉಳಿತಾಯ ಮಾಡಿದ್ದಾರೆ
ಮಾರುಕಟ್ಟೆ ವೆಚ್ಚಗಳಿಲ್ಲದ ಕಾರಣ
50–80%*
ರಿಯಾಯತಿ ದರದಲ್ಲಿ ಮೆಡ್‌ಪ್ಲಸ್ ಔಷಧಿಗಳು ದೊರೆಯುತ್ತವೆ

MedPlus
ಇಂದೇ ನಿಮ್ಮ ಸಮೀಪದ ಸ್ಟೋರ್‌ಗೆ ಭೇಟಿ ಕೊಡಿ ಮತ್ತು ಉಳಿತಾಯವನ್ನು ಪ್ರಾರಂಭಿಸಿ!
ವಾರ್ಷಿಕ ರೂ. 50/– ಚಂದಾದಾರಿಕೆ ಕೊಡುಗೆ ಸೀಮಿತ ಅವಧಿಗೆ ಮಾತ್ರ (ಸಾಮಾನ್ಯ ದರ ವಾರ್ಷಿಕ ರೂ.499/–)
*ಷ & ನಿ ಅನ್ವಯ ಡಿಪಿಸಿಒ ಉತ್ಪನ್ನಗಳ ಮೇಲಿನ ರಿಯಾಯತಿ ಭಿನ್ನವಾಗಿರುತ್ತದೆ.

ಶುಕ್ರವಾರದ ಉಷ್ಣಾಂಶ 26° ಗರಿಷ್ಠ 18° ಕನಿಷ್ಠ

ಹವಾಮಾನ ಮುನ್ಸೂಚನೆ
ಬೆಳಿಗ್ಗೆ ಮಂಜು ಕವಿದ ವಾತಾವರಣ ಇರಲಿದೆ.

ಹವಾಮಾನ: ಶನಿವಾರ 27° 17° | ಭಾನುವಾರ 27° 18° | ಸೋಮವಾರ 27° 18°

ಸೂರ್ಯೋದಯ: 6:43 ಸೂರ್ಯಾಸ್ತ: 6:06 ಚಂದ್ರೋದಯ: ರಾ. 12:51 ಚಂದ್ರಾಸ್ತ: ಮ. 12:52

ಗುರುವಾರದ ಹವಾಮಾನ : ಗರಿಷ್ಠ 26° ಕನಿಷ್ಠ 17°

ಪ್ರಜಾವಾಣಿ

ವಿಶ್ವಬ್ಯಾಂಕ್ ನೆರವಿನೊಂದಿಗೆ ಜಲಮಂಡಳಿಯಿಂದ ಯೋಜನೆ

38 ಹಳ್ಳಿ ಕೆರೆಗಳಿಗೆ ಸಂಸ್ಕರಿತ ನೀರು

• ಆರ್. ಮಂಜುನಾಥ್

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯ 19 ಕೆರೆಗಳಿಗೆ ಒಳಚರಂಡಿ ನೀರು ಹರಿಯುವುದನ್ನು ತಡೆಯಲು ಬೆಂಗಳೂರು ಜಲಮಂಡಳಿ, ವಿಶ್ವಬ್ಯಾಂಕ್ ನೆರವಿನ ಯೋಜನೆ ರೂಪಿಸಿದೆ.

ಒಳಚರಂಡಿ ನೀರು ಸಂಸ್ಕರಣೆ ಘಟಕಗಳನ್ನು (ಎಸ್‌ಟಿಪಿ) ಸ್ಥಾಪಿಸುವ ಯೋಜನೆಯನ್ನು ವಿಶ್ವಬ್ಯಾಂಕ್‌ಗೆ ಸಲ್ಲಿಸಲಾಗಿದ್ದು, ಅದರ ಅನುಮೋದನೆ ಅಂತಿಮ ಹಂತ ತಲುಪಿದೆ. ಒಪ್ಪಿಗೆ ದೊರೆತ ನಂತರ ಒಂದು ವರ್ಷದಲ್ಲಿ ಎಸ್‌ಟಿಪಿ ಅಳವಡಿಸುವ ಕಾರ್ಯವನ್ನು ಪೂರ್ಣಗೊಳಿಸಲು ಜಲಮಂಡಳಿ ಯೋಚಿಸಿದೆ.

ರಾಷ್ಟ್ರೀಯ ಹಸಿರು ನ್ಯಾಯಮಂಡಳಿಯ ಸೂಚನೆಯಂತೆ, 110 ಹಳ್ಳಿಗಳಲ್ಲಿ ಜಲಮಂಡಳಿ, ಒಳಚರಂಡಿ ಮಾರ್ಗಗಳನ್ನು 'ಟ್ರಂಕ್ಡ್ ಪೈಪ್‌ಲೈನ್' ಮಾದರಿಯಲ್ಲಿ ಅಳವಡಿಸಲಾಗುತ್ತದೆ. ಇದರಿಂದ ಒಳಚರಂಡಿ ನೀರು ಹೊರಭಾಗದಲ್ಲಿ ಹರಿಯುವುದಿಲ್ಲ. 38 ಹಳ್ಳಿಗಳು ಹಾಗೂ ಅವುಗಳ ವ್ಯಾಪ್ತಿಯಲ್ಲಿರುವ ಸುಮಾರು 30 ಹೊಸ ಬಡಾವಣೆಗಳಿಂದ ನಿತ್ಯ ಲಕ್ಷಾಂತರ ಲೀಟರ್ ಒಳಚರಂಡಿ ನೀರು ನೇರವಾಗಿ ಕೆರೆಗಳಿಗೆ ಸೇರುತ್ತಿದೆ. ಇದನ್ನು ತಡೆದು, ಸಂಸ್ಕರಿಸಿದ ನೀರನ್ನು ಕೆರೆಗೆ ಹರಿಸಲು 9 ಎಸ್‌ಟಿಪಿಗಳನ್ನು ಅಳವಡಿಸಲಾಗುತ್ತದೆ. ಇದರಿಂದ ಈ ಭಾಗದ ಕೆರೆಗಳು ಹಾಗೂ ಅದರ ನಂತರದ ಕೆರೆಗಳ ಸರಣಿಯ ಕಾಲುವೆಗಳಲ್ಲಿ ಸಂಸ್ಕರಿಸಿದ ನೀರು ಮಾತ್ರ ಹರಿಸಲು ಯೋಜನೆ ರೂಪಿಸಲಾಗಿದೆ.

ಈ ಎಸ್‌ಟಿಪಿಗಳ ಜೊತೆಗೆ 10 ಮಧ್ಯಂತರ ಒಳಚರಂಡಿ ಪಂಪಿಂಗ್ ಸ್ಟೇಷನ್‌ಗಳನ್ನೂ (ಐಎಸ್‌ಪಿಎಸ್) ಸ್ಥಾಪಿಸಲಾಗುತ್ತಿದೆ. ಕೆರೆಗಳ ಬಳಿ ಎಸ್‌ಟಿಪಿ ಸ್ಥಾಪನೆ ಸಾಧ್ಯವಾಗದ ಪ್ರದೇಶಗಳಲ್ಲಿ ಐಎಸ್‌ಪಿಎಸ್ ಘಟಕ ಸ್ಥಾಪಿಸಿ, ಅಲ್ಲಿಂದ ಒಳಚರಂಡಿ ನೀರನ್ನು ಎಸ್‌ಟಿಪಿಗಳಿಗೆ ಪಂಪ್ ಸೇರಿದಂತೆ ಒಟ್ಟಾರೆ ಯೋಜನೆಗೆ ಸುಮಾರು ₹1 ಸಾವಿರ ಕೋಟಿ ವೆಚ್ಚದ ಅಂದಾಜು ಮಾಡಲಾಗಿದೆ.

'19 ಕೆರೆಗಳಿಗೆ ಒಳಚರಂಡಿ ನೀರು ಹರಿಯದಂತೆ ಎಸ್‌ಟಿಪಿ ಹಾಗೂ ಐಎಸ್‌ಪಿಎಸ್ ಅಳವಡಿಸುವ ಯೋಜನೆ ರೂಪಿಸಲಾಗಿದೆ. ಇದಕ್ಕಾಗಿ ವಿಶ್ವಬ್ಯಾಂಕ್ ನೆರವು ಕೋರಲಾಗಿದ್ದು, ಆಡಳಿತಾತ್ಮಕ ಸಮ್ಮತಿ ದೊರೆತಿದೆ. ಆರ್ಥಿಕ ಅನುಮೋದನೆ ದೊರೆತ ಕೂಡಲೇ ಟೆಂಡರ್ ಪ್ರಕ್ರಿಯೆ ಪೂರ್ಣಗೊಳಿಸಿ ಘಟಕಗಳನ್ನು ಸ್ಥಾಪಿಸಲಾಗುತ್ತದೆ' ಎಂದು ಜಲಮಂಡಳಿ ಅಧ್ಯಕ್ಷ ರಾಮ್ ಪ್ರಸಾತ್ ಮನೋಹರ್ ತಿಳಿಸಿದರು.

'ಇದೀಗ 38 ಹಳ್ಳಿಗಳ ವ್ಯಾಪ್ತಿಯ ಒಳಚರಂಡಿ ನೀರನ್ನು ಸಂಸ್ಕರಿಸಲು ಯೋಜನೆ ರೂಪಿಸಲಾಗಿದೆ. ಮುಂದಿನ ದಿನಗಳಲ್ಲಿ 110 ಹಳ್ಳಿಗಳ ವ್ಯಾಪ್ತಿಯಲ್ಲೂ ಇಂತಹದ್ದೇ ಘಟಕಗಳನ್ನು ಸ್ಥಾಪಿಸಲಾಗುತ್ತದೆ. ಇದಕ್ಕೆ ಆರ್ಥಿಕ ನೆರವು, ಅನುದಾನದ ಬಗ್ಗೆ ಪರಿಶೀಲಿಸಲಾಗುತ್ತಿದೆ' ಎಂದರು.

ಎಲ್ಲ ಕೆರೆಗಳಿಗೆ ಕಲ್ಮಶ ತಡೆ: ರಾಮ್ ಪ್ರಸಾತ್

'ನಗರದಲ್ಲಿರುವ ಕೆರೆಗಳಿಗೆ ಒಳಚರಂಡಿ ನೀರು ಹರಿಯುತ್ತಿರುವುದು ಬಹುವರ್ಷಗಳ ಸಮಸ್ಯೆ. ಇದನ್ನು ಹಂತಹಂತವಾಗಿ ಕಡಿಮೆ ಮಾಡಲಾಗುತ್ತಿದ್ದು, ಮುಂದಿನ ಕೆಲವು ವರ್ಷಗಳಲ್ಲಿ ಯಾವುದೇ ಕೆರೆಗೆ ಒಳಚರಂಡಿ ನೀರು ನೇರವಾಗಿ ಹರಿಯದಂತೆ ಕ್ರಮ ಕೈಗೊಳ್ಳಲಾಗುತ್ತದೆ. ಸಂಸ್ಕರಿಸಿದ ನೀರು ಮಾತ್ರ ಕೆರೆಗೆ ಹರಿಯುವಂತೆ ಯೋಚಿಸಲಾಗಿದೆ. ಇದಕ್ಕಾಗಿ ಹಲವು ಯೋಜನೆಗಳನ್ನು ರೂಪಿಸಲಾಗಿದ್ದು, ಕೆರೆಗಳ ಪರಿಸರ ಉಳಿಸುವಲ್ಲಿ ಜಲಮಂಡಳಿ ಪ್ರಯತ್ನಿಸಲಿದೆ' ಎಂದು ಬೆಂಗಳೂರು ಜಲಮಂಡಳಿ ಅಧ್ಯಕ್ಷ ರಾಮ್ ಪ್ರಸಾತ್ ಮನೋಹರ್ ಹೇಳಿದರು.

ಅಂಕಿ-ಅಂಶಗಳು

- **9** ಒಳಚರಂಡಿ ನೀರು ಸಂಸ್ಕರಣೆ ಘಟಕ
- **148** ಎಂಎಲ್‌ಡಿ ಒಂಬತ್ತು ಎಸ್‌ಟಿಪಿಗಳ ಒಟ್ಟು ಸಾಮರ್ಥ್ಯ
- **10** ಐಎಸ್‌ಪಿಎಸ್ ಪಂಪಿಂಗ್ ಸ್ಟೇಷನ್
- **21** ಎಂಎಲ್‌ಡಿ ಹತ್ತು ಐಎಸ್‌ಪಿಎಸ್‌ಗಳ ಒಟ್ಟು ಪಂಪಿಂಗ್ ಸಾಮರ್ಥ್ಯ

ಸಾರಕ್ಕಿ ಕೆರೆ ಬಳಿ ಜಲಮಂಡಳಿ ಸ್ಥಾಪಿಸಿರುವ ಐಎಸ್‌ಪಿಎಸ್

ಯಾವ ಹಳ್ಳಿಗಳ ಒಳಚರಂಡಿ ನೀರಿಗೆ ಎಸ್‌ಟಿಪಿ?

ಕಮ್ಮನಹಳ್ಳಿ, ಕಾಳೇನ ಅಗ್ರಹಾರ, ಬಸಾಪುರ; ಚಿಕ್ಕತೋಗೂರು, ದೊಡ್ಡತೋಗೂರು, ಭಾರತೇನ ಅಗ್ರಹಾರ, ನಾಗನಾಥಪುರ, ಪರಪ್ಪನ ಅಗ್ರಹಾರ; ಕೂಡ್ಲು, ಹರಳೂರು, ಕಸವನಹಳ್ಳಿ, ಕೈಕೊಂಡನಹಳ್ಳಿ, ಜುನ್ನಸಂದ್ರ, ದೊಡ್ಡಕಲ್ಲಹಳ್ಳಿ; ದೊಡ್ಡಕಲ್ಲಸಂದ್ರ; ಮಲ್ಲಸಂದ್ರ, ಜ್ಯುಡಿಷಿಯಲ್ ಲೇಔಟ್; ಹಗದೂರು, ವಿಜಯನಗರ, ಗಾಂಧಿಪುರ, ಚನ್ನಸಂದ್ರ, ನಾಗೊಂಡನಹಳ್ಳಿ; ಕಟ್ಟಿಗೇನಹಳ್ಳಿ, ಶ್ರೀನಿವಾಸಪುರ; ಯಲ್ಲಹಳ್ಳಿ, ಚಂದ್ರಶೇಖರಪುರ, ಗೊಟ್ಟಿಗೆರೆ, ಪಿಳ್ಳಾಗನಹಳ್ಳಿ; ವರ್ತೂರು, ಗುಂಜೂರು, ಸೊರಹುಣಸೆ, ಬಳಗೆರೆ.

ಒಳಚರಂಡಿ ನೀರು ಸೇರದ ಕೆರೆಗಳು

ಬೇಗೂರು, ರಾಯಸಂದ್ರ, ಸೌಳ್ ಕೆರೆ, ದೊಡ್ಡಕಲ್ಲಸಂದ್ರ, ಜೋಗಿಕೆರೆ, ಚನ್ನಸಂದ್ರ, ಕಟ್ಟಿಗೇನಹಳ್ಳಿ, ಕೋಗಿಲು, ಪಾಲನಹಳ್ಳಿ, ಜಕ್ಕೂರು, ಹುಳಿಮಾವು, ವರ್ತೂರು, ಗೊಟ್ಟಿಗೆರೆ, ಅಂಬಲಿಪುರ, ಚಿಕ್ಕಬೆಳ್ಳಂದೂರು, ತಲಘಟ್ಟಪುರ, ಕಮ್ಮನಹಳ್ಳಿ, ಹಾರೋಹಳ್ಳಿ, ಯಲಹಂಕ ಕೆರೆ.

ಕನ್ನಡ ನಾಮಫಲಕ: ತಿಳಿವಳಿಕೆ ಪತ್ರ ನೀಡಲು ಬಿಬಿಎಂಪಿ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಾಣಿಜ್ಯ ಮಳಿಗೆಗಳ ನಾಮಫಲಕಗಳಲ್ಲಿ ಶೇ 60ರಷ್ಟು ಕನ್ನಡ ಬಳಸದಿದ್ದರೆ ಅಂತಹವರಿಗೆ ತಿಳಿವಳಿಕೆ ಪತ್ರ ನೀಡಬೇಕು ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಸೂಚಿಸಿದರು.

ನಗರದ ವಾಣಿಜ್ಯ ಮಳಿಗೆಗಳ ನಾಮಫಲಕಗಳಲ್ಲಿ ಕನ್ನಡ ಅಳವಡಿಸುವ ಸಂಬಂಧ ನಡೆದ ಸಭೆಯಲ್ಲಿ ಮಾತನಾಡಿದ ಅವರು, 'ಬಿಬಿಎಂಪಿ ವ್ಯಾಪ್ತಿಯ ಎಲ್ಲಾ ವಾಣಿಜ್ಯ ಮಳಿಗೆಗಳ ನಾಮಫಲಕಗಳಲ್ಲಿ ಶೇ 60ರಷ್ಟು ಕನ್ನಡವನ್ನು ಕಡ್ಡಾಯವಾಗಿ ಬಳಸಬೇಕು. ಈ ಬಗ್ಗೆ ತಿಳಿವಳಿಕೆ ಪತ್ರ ನೀಡಿ ಕೂಡಲೆ ಅನುಷ್ಠಾನಗೊಳಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು' ಎಂದು ವಲಯ ಆಯುಕ್ತರಿಗೆ ಅವರು ಆದೇಶ ನೀಡಿದರು.

ಮುಖ್ಯ ರಸ್ತೆ ಹಾಗೂ ಉಪ ಮುಖ್ಯರಸ್ತೆಗಳಲ್ಲಿ ವಾಣಿಜ್ಯ ಮಳಿಗೆಗಳು, ಅಂಗಡಿಗಳು ಹಾಗೂ ಎಲ್ಲಾ ವಲಯದ ಉದ್ದಿಮೆಗಳನ್ನು ಜ.15ರೊಳಗೆ ಸರ್ವೆ ಕಾರ್ಯ ಪೂರ್ಣಗೊಳಿಸಬೇಕು.

ನಾಮಫಲಕದಲ್ಲಿ ಕನ್ನಡ ಬಳಕೆ ಮಾಡದಿದ್ದಲ್ಲಿ, 'ಉದ್ದಿಮೆ ಪರವಾನಗಿ ಏಕೆ ರದ್ದು ಮಾಡಬಾರದು' ಅಥವಾ 'ನಾವು ನಿಮ್ಮ ಉದ್ದಿಮೆಯನ್ನು ಏಕೆ ಮುಚ್ಚಬಾರದು' ಎಂದು ನಮೂದಿಸಿ ತಿಳಿವಳಿಕೆ ಪತ್ರ ಜಾರಿಮಾಡಬೇಕು ಎಂದು ಹೇಳಿದರು.

ಯಾವುದೇ ಒತ್ತಡಕ್ಕೆ ಮಣಿಯದೆ, ಕನ್ನಡ ಬಳಸದ ಉದ್ದಿಮೆಗಳ ಮೇಲೆ ಆಯಾ ವಲಯ ವ್ಯಾಪ್ತಿಯಲ್ಲಿ ಕಠಿಣ ಕ್ರಮ ಕೈಗೊಳ್ಳಲು ಅಧಿಕಾರಿಗಳಿಗೆ ತುಷಾರ್ ಗಿರಿನಾಥ್ ಸೂಚಿಸಿದರು.

'ಮಕ್ಕಳ ಕೈಗೆ ಮೊಬೈಲ್ ಕೊಡಬೇಡಿ'

ಪ್ರಜಾವಾಣಿ ವಾರ್ತೆ



ದೊಡ್ಡಣ್ಣ

ನವದೆಹಲಿ: 'ಮಕ್ಕಳಿಗೆ ಕನ್ನಡ ಭಾಷೆಯನ್ನು ಹೇಳಿಕೊಡುವ ಮೂಲಕ ನಮ್ಮ ನಾಡಿನ ನೆಲಮೂಲದ ಸಂಸ್ಕಾರ ಕಲಿಸಬೇಕು' ಎಂದು ನಟ ದೊಡ್ಡಣ್ಣ ಸಲಹೆ ನೀಡಿದರು.

ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ದೆಹಲಿ ಘಟಕದ ಆಶ್ರಯದಲ್ಲಿ ನಡೆದ ಮೂರನೇ ವಾರ್ಷಿಕೋತ್ಸವ ಹಾಗೂ ವಿಶ್ವಮಾನವ ದಿನಾಚರಣೆ ಉದ್ಘಾಟಿಸಿ ಅವರು ಮಾತನಾಡಿದರು.

'ಮಕ್ಕಳ ಕೈಗೆ ಮೊಬೈಲ್ ಕೊಡಬೇಡಿ. ಇದರಿಂದ ಅವರ ಬುದ್ಧಿಶಕ್ತಿ ಬೆಳವಣಿಗೆ ಕುಂಠಿತಗೊಳ್ಳಲಿದೆ' ಎಂದರು.

ಅಧ್ಯಕ್ಷತೆ ವಹಿಸಿದ್ದ ನಿರ್ದೇಶಕ ಟಿ. ಎಸ್.ನಾಗಾಭರಣ, 'ವಿಶ್ವಮಾನವ ತತ್ತ್ವಗಳು ಕನ್ನಡ ಸಂಸ್ಕೃತಿ ಬೇರುಗಳಲ್ಲಿಯೇ ಇದೆ. ಎಲ್ಲ ಕಾಲದಲ್ಲೂ ಈ ಪರಂಪರೆಯನ್ನು ಕನ್ನಡದಲ್ಲಿ ಪೋಷಿಸಿಕೊಂಡು ಬರಲಾಗುತ್ತಿದೆ' ಎಂದರು.

ಪರಿಷತ್ತಿನ ಅಧ್ಯಕ್ಷ ಚಂದ್ರಶೇಖರ್ ಎನ್.ಪಿ., ವಿದ್ವಾಂಸ ಪ್ರೊ.ಶ್ರೀನಿವಾಸ ವರಖೇಡಿ, ಅನಂತರಾಮ ಅರಳಿ ಮತ್ತಿತರರು ಇದ್ದರು.

ಉಗ್ರನ ಬಂಧನ

ನವದೆಹಲಿ(ಪಿಟಿಐ): ಜಮ್ಮು–ಕಾಶ್ಮೀರದಲ್ಲಿ ನಡೆದಿದ್ದ ಭಯೋತ್ಪಾದಕ ದಾಳಿಗಳಲ್ಲಿ ಭಾಗಿಯಾಗಿದ್ದ ಹಿಜ್ಬುಲ್ ಮುಜಾಹಿದೀನ್ ಉಗ್ರ ಜಾವೇದ್ ಅಹ್ಮದ್ ಮಟ್ಟೂ ಎಂಬಾತನನ್ನು ದೆಹಲಿ ಪೊಲೀಸರು ಗುರುವಾರ ಬಂಧಿಸಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

11 ಭಯೋತ್ಪಾದಕ ದಾಳಿಗಳಲ್ಲಿ ಪೊಲೀಸರಿಗೆ ಬೇಕಾಗಿದ್ದ ಈತನ ತಲೆ ಮೇಲೆ ₹ 10 ಲಕ್ಷ ಬಹುಮಾನ ಘೋಷಿಸಲಾಗಿತ್ತು.

ನಿಧನ ವಾರ್ತೆ

ಅಶ್ವಥರಾಜ್

ದಾಬಸ್ ಪೇಟೆ: ನೆಲಮಂಗಲ ತಾಲ್ಲೂಕಿನ ಮರಳಕುಂಟೆ ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ದಾಸೇನಹಳ್ಳಿ ಗ್ರಾಮದ ಅಶ್ವಥರಾಜ್ (47) ಗುರುವಾರ ಸ್ವಗೃಹದಲ್ಲಿ ನಿಧನರಾದರು. ಅವರಿಗೆ ತಾಯಿ, ಪತ್ನಿ, ಪುತ್ರ ಇದ್ದಾರೆ. ಅಂತ್ಯಕ್ರಿಯೆ ಸ್ವಗ್ರಾಮ ದಾಸೇನಹಳ್ಳಿಯಲ್ಲಿ ನಡೆಯಿತು.

ಮಯೂರ, ಸುಧಾ ಓದಿರಿ

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ ವಿಜಯಪುರ.
ಐ.ಎಫ್.ಟಿ.ಸಂ:ಕಾ.ನಿ.ಇಂ./ಲೋ.ಇ/ವಿ.ಜೆ.ಪಿ/ಪಿ.ಬಿ/ಆರ್‌ಐಡಿಎಫ್–28/2023–24/4023 ದಿನಾಂಕ:02.01.2024

ಅಲ್ಪಾವಧಿ ಟೆಂಡರ್ ಅವಧಿ ವಿಸ್ತರಣೆ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್)

ಉಲ್ಲೇಖ:– ಈ ಕಚೇರಿ ಐ.ಎಫ್.ಟಿ. (ಟೆಂಡರ್) ಸಂ. ಕಾ.ನಿ.ಇಂ./ಲೋ.ಇ/ವಿ.ಜೆ.ಪಿ/ಪಿ.ಬಿ/ಆರ್‌ಐಡಿಎಫ್–28/2023–24/3866 ದಿ–18–12–2023

ಉಲ್ಲೇಖಿತ ಪ್ರಕಟಣೆಯಲ್ಲಿ ಅಹ್ವಾನಿಸಲಾದ ಟೆಂಡರ ಕಾಮಗಾರಿಗಳು (ಅ.ನಂ. 1 ಮತ್ತು 2) ದಿನಾಂಕಗಳನ್ನು, ಕಾರಣಾಂತರಗಳಿಂದ ಮುಂದೂಡಿ, ಈ ಕೆಳಗಿನಂತೆ ನಿಗದಿಪಡಿಸಲಾಗಿದೆ.
1. ಗುತ್ತಿಗೆದಾರರ ಪೂರ್ವ ಭಾವಿ ಸಭೆ ದಿನಾಂಕ– 03–01–2024 ರ ಮುಂಜಾನೆ 11.00 ಗಂಟೆಗೆ
2. ತುಂಬಿದ ಮೊಹರ ಬಂದ ಟೆಂಡರಗಳನ್ನು ಸ್ವೀಕರಿಸುವ ದಿನಾಂಕ 10–01–2024 ಸಂಜೆ 4:30 ಗಂಟೆಗೆ
3. ಗುತ್ತಿಗೆಗಳನ್ನು ತೆರೆಯುವ ದಿನಾಂಕ (ತಾಂತ್ರಿಕ್ ಬೀಡ್) 11–01–2024 ಸಂಜೆ 4.31 ಗಂಟೆಗೆ
4. ಗುತ್ತಿಗೆಗಳನ್ನು ತೆರೆಯುವ ದಿನಾಂಕ (ಆರ್ಥಿಕ ಬೀಡ್) 12–01–2024 ಮುಂಜಾನೆ 11.00 ಗಂಟೆಗೆ

ಇನ್ನುಳಿದ ನಿಬಂಧನೆಗಳು / ಷರತ್ತುಗಳಲ್ಲಿ ಯಾವುದೇ ಬದಲಾವಣೆ ಇರುವದಿಲ್ಲ.

ವಾಸಾಸಂಇ/ವಿಜಯಪುರ/363/ಕೆಎಸ್‌ಎಂಸಿಎ/2023–24
ಸಹಿ/– ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ವಿಭಾಗ, ವಿಜಯಪುರ

ಜಿಲ್ಲಾ ಆರೋಗ್ಯ & ಕುಟುಂಬ ಕಲ್ಯಾಣ ಇಲಾಖೆ
ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಚೇರಿ, ಕೊಠಡಿ ಸಂಖ್ಯೆ. 207, 2ನೇ ಮಹಡಿ, ಬೀರಸಂದ್ರ ಗ್ರಾಮ, ವಿಶ್ವನಾಥಪುರ ಅಂಚೆ, ಕುಂದಾಣ ಹೋಬಳಿ, ದೇವನಹಳ್ಳಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ,
ದೂ.: 080–29787452, ಇ–ಮೇಲ್: dhobengalururural-hfws@karnataka.gov.in
ಸಂಖ್ಯೆ : ಜಿ.ಆ.ಕು.ಕ./ಸ.ರ.ಬ./ಇ.ಟೆ.ಪ್ರ./01/2023–24 ದಿನಾಂಕ : 04–01–2024

ಅಲ್ಪಾವಧಿ ಇ-ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಮೂಲಕ) ದ್ವಿ ಲಕೋಟೆ ಪದ್ದತಿ

2023–24 ನೇ ಸಾಲಿನಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲಾ ವ್ಯಾಪ್ತಿಯುಡಿ ಕಾರ್ಯನಿರ್ವಹಿಸುತ್ತಿರುವ ಆಸ್ಪತ್ರೆಗಳಲ್ಲಿನ ವೈದ್ಯಕೀಯ ಉಪಕರಣಗಳೂ ಮತ್ತು ಪೀಠೋಪಕರಣಗಳ ದುರಸ್ಥಿ ಹಾಗೂ ಬಣ್ಣದ ಕೆಲಸಗಳನ್ನು ಮಾಡಲು ದ್ವಿ–ಲಕೋಟೆ ಪದ್ದತಿಯಲ್ಲಿ ಕೆಳಕಂಡಂತೆ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಅಲ್ಪಾವಧಿ ಟೆಂಡರ್ ಆಹ್ವಾನಿಸಲಾಗಿದ್ದು, ಆಸಕ್ತರು ವೆಬ್‌ಸೈಟ್ : https://kppp.karnataka.gov.in ರ ಮೂಲಕ ಡೌನ್‌ಲೋಡ್ ಮಾಡಿಕೊಂಡು ಆನ್‌ಲೈನ್ ಮೂಲಕ ಟೆಂಡರ್ ಸಲ್ಲಿಸಬಹುದು.

ವಿವರಗಳು : 1) ಟೆಂಡರ್ ಪ್ರಕಟಣೆ ಸಂಖ್ಯೆ : ಬಿಆರ್/ಎಸ್‌ಯುಪಿ/03/2023–24, 2) ಇ–ಪೋರ್ಟಲ್‌ನಲ್ಲಿ ಟೆಂಡರ್ ದಾಖಲೆಗಳು ಚಾಲ್ತಿಯಲ್ಲಿರುತ್ತದೆ. ದಿನಾಂಕ : 05–01–2024, 3) ಟೆಂಡರ್ ಫಾರಂಗಳನ್ನು ಆನ್‌ಲೈನ್ ಮೂಲಕ ಸಲ್ಲಿಸುವ ಕೊನೆಯ ದಿನಾಂಕ : 16–01–2024, 4) ಟೆಂಡರ್ ಅಂದಾಜು ಮೊತ್ತ : ರೂ. 11.00 ಲಕ್ಷಗಳು, 5) ಇ.ಎಂ.ಡಿ. ಮೊತ್ತ : ರೂ. 27,500/–, 6) ಟೆಂಡರ್ ಫಾರಂಗಳನ್ನು ತೆರೆಯುವ ದಿನಾಂಕ (ತಾಂತ್ರಿಕ ಬಿಡ್) : 18–01–2024, 7) ಟೆಂಡರ್ ಫಾರಂಗಳನ್ನು ತೆರೆಯುವ ದಿನಾಂಕ (ಆರ್ಥಿಕ ಬಿಡ್) : ಯಶಸ್ವಿ ತಾಂತ್ರಿಕ ಟೆಂಡರ್‌ದಾರರಿಗೆ ತಿಳಿಸಲಾಗುವುದು, 8) ಟೆಂಡರ್ ತೆರೆಯುವ ಸ್ಥಳ (ಆನ್‌ಲೈನ್ ಟೆಂಡರ್ ತೆರೆಯುವ) : ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಚೇರಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಕೊಠಡಿ ಸಂಖ್ಯೆ. 207, 2ನೇ ಮಹಡಿ, ಜಿಲ್ಲಾಡಳಿತ ಭವನ, ಬೀರಸಂದ್ರ, ಕುಂದಾಣ ಹೋಬಳಿ, ದೇವನಹಳ್ಳಿ ತಾಲ್ಲೂಕು.

ಹೆಚ್ಚಿನ ವಿವರಗಳಿಗೆ https://kppp.karnataka.gov.in ಮೂಲಕ ಮಾಹಿತಿ ಪಡೆಯಬಹುದು.

ಸಹಿ/– ಜಿಲ್ಲಾ ಆರೋಗ್ಯ ಮತ್ತು ಕು.ಕ. ಅಧಿಕಾರಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ.
ವಾಸಾಸಂಇ/ಯುನಿಕ/ಬೆಂಗ್ರಾಜಿ/ಮಣಿಪಾಲ್/2874/2023–24

ಕರ್ನಾಟಕ ಸರ್ಕಾರ
ಕರ್ನಾಟಕ ಅರಣ್ಯ ಇಲಾಖೆ
ಉಪ ಅರಣ್ಯ ಸಂರಕ್ಷಣಾಧಿಕಾರಿ, ಮಂಗಳೂರು ವಿಭಾಗ, ಮಂಗಳೂರು ಇವರ ಪ್ರಾಧಿಕಾರ,
ಪಿ.ಡಬ್ಲ್ಯೂ.ಡಿ.ಕಟ್ಟಡ, ನೆಹರೂ ಮೈದಾನದ ಬಳಿ, ಮಂಗಳೂರು 575001
ದೂರವಾಣಿ : 0824 – 2423913/0824 – 2411242
ಇ–ಮೇಲ್: dcf_mngt@yahoo.co.in, dcfmng@aranya.gov.in
ಸಂ. ಎಸ್.ಎ.ಎಸ್.ಸಿಆರ್:08:ಗೇರು ಹರಾಜು:2023–24 ದಿನಾಂಕ: 31–12–2023

ಸಂಕ್ಷಿಪ್ತ ಟೆಂಡರು ಹಾಗೂ ಹರಾಜಿನ ಅಧಿಸೂಚನೆ

ನೋಂದಾಯಿತ ಅರಣ್ಯ ಗುತ್ತಿಗೆದಾರರಿಗೆ ಹಾಗೂ ಸಾರ್ವಜನಿಕರಿಗೆ ಈ ಮೂಲಕ ತಿಳಿಸುವುದೇನೆಂದರೆ ಮಂಗಳೂರು ಅರಣ್ಯ ವಿಭಾಗದ ಇಲಾಖಾ ಗೇರು ನೆಡುತೋಪುಗಳಿಂದ 2023–24 ನೇ ಸಾಲಿಗೆ (ದಿನಾಂಕ 30–06–2024 ಕ್ಕೆ ಅಂತ್ಯವಾಗುವ ಅವಧಿಗೆ) ಫಲೋತ್ಪನ್ನಗಳನ್ನು ಸಂಗ್ರಹಿಸಿಕೊಂಡು ಹೋಗುವ ಹಕ್ಕಿನ ಗುತ್ತಿಗೆಯನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿ, ಮಂಗಳೂರು ವಿಭಾಗ, ಮಂಗಳೂರು ಇವರು ಅಥವಾ ಅವರಿಂದ ಅಧಿಕಾರ ಹೊಂದಿದ ಅಧಿಕಾರಿಯವರಿಂದ ವಲಯ ಅರಣ್ಯ ಅಧಿಕಾರಿ ಕಚೇರಿ, ಪುತ್ತೂರು ವಲಯ ಪುತ್ತೂರು ಇವರ ವಠಾರದಲ್ಲಿ ಈ ಕೆಳಗಿನ ದಿನಾಂಕಗಳಂದು ಟೆಂಡರು ಮತ್ತು ಹರಾಜು ಮೂಲಕ ವಿಲೇವಾರಿ ಮಾಡಲಾಗುವುದು. ಅಸಕ್ತರು ಭಾಗವಹಿಸಿ ಹಕ್ಕನ್ನು ಪಡೆದುಕೊಳ್ಳಬಹುದಾಗಿ ಪ್ರಕಟಿಸಲಾಗಿದೆ.

ಟೆಂಡರು ಮತ್ತು ಹರಾಜು ವಿವರಗಳು

ಕ್ರ. ಸಂ.	ಹರಾಜು ವಿವರಗಳು	ಟೆಂಡರು ದಿನಾಂಕ ಮತ್ತು ಸಮಯ	ಹರಾಜು ದಿನಾಂಕ ಮತ್ತು ಸಮಯ	ಟೆಂಡರು ನಮೂನೆಯನ್ನು ಪಡೆಯಲು ಕೊನೆಯ ದಿನಾಂಕ ಮತ್ತು ಸಮಯ
1	ಮೊದಲನೇ ಹರಾಜು	24–01–2024 ಪೂ.11.30 ರ ತನಕ	24–01–2024 ಪೂ.11.45 ರಿಂದ	23–01–2024 ಅಪರಾಹ್ನ 5.00 ಗಂಟೆಯ ತನಕ
2	ಎರಡನೇ ಹರಾಜು ಮೊದಲನೇ ಹರಾಜಿನಲ್ಲಿ ಹರಾಜಾಗದೇ ಘಟಕಗಳು ಉಳಿದಲ್ಲಿ ಅವುಗಳು	31–01–2024 ಪೂ.11.30 ರ ತನಕ	31–01–2024 ಪೂ.11.45 ರಿಂದ	30–01–2024 ಅಪರಾಹ್ನ 5.00 ಗಂಟೆಯ ತನಕ

(1) ಸಂಚಕಾರಿ ಠೇವಣಿ ರೂ 5000/– (2) ಟೆಂಡರು ನಮೂನೆಗಳನ್ನು ಪ್ರಚಲಿತ ದರ ಹಾಗೂ ತೆರಿಗೆಗಳನ್ನು ಪಾವತಿಸಿ ಈ ಮೇಲಿನ ದಿನಾಂಕಗಳಂದು 5.00 ಗಂಟೆಯವರೆಗೆ ಈ ಕಛೇರಿಯಿಂದ ಪಡಕೊಳ್ಳಬಹುದು. (3) ಹೆಚ್ಚಿನ ಮಾಹಿತಿಗಳಿಗೆ ಸವಿವರ ಟೆಂಡರು ಮತ್ತು ಹರಾಜು ಪ್ರಕಟಣೆ ಹಾಗೂ ಈ ಕಛೇರಿ ಮತ್ತು ವಿಭಾಗದ ವಲಯ ಅರಣ್ಯಾಧಿಕಾರಿಗಳ ಕಛೇರಿಯನ್ನು ಕೆಲಸ ದಿನಗಳಂದು ಸಂಪರ್ಕಿಸಿ ಪಡೆದುಕೊಳ್ಳಬಹುದು.

ಸಹಿ/– ಉಪ ಅರಣ್ಯ ಸಂರಕ್ಷಣಾಧಿಕಾರಿ, ಮಂಗಳೂರು ವಿಭಾಗ, ಮಂಗಳೂರು
DIPR/ADM/KSMCA/1022/23-24 dt.04.01.2024

ಪುರಸಭೆ ಕಾರ್ಯಾಲಯ, ರೋಣ ಜಿ: ಗದಗ, ಕರ್ನಾಟಕ–582209
ದೂರವಾಣಿ : 08381-267234 Email : ka.rona.tmc@gmail.com
Website : www.ronatown.mrc.gov.in
ಕ್ರ.ಸಂ/ಪುಸರೋ/SFC/15th Finance/NMPC/2023–24/ವಹಿ//2023–24
ದಿನಾಂಕ : 04–01–2024

ಅಲ್ಪಾವಧಿ ಟೆಂಡರ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ ಮುಖಾಂತರ)

ರೋಣ ಪುರಸಭೆಯಿಂದ ಕರ್ನಾಟಕ ಪಾರದರ್ಶಕತೆ ಅಧಿನಿಯಮ – 2000 ರ ಪ್ರಕಾರ "ಇ–ಪ್ರಕ್ಯೂರಮೆಂಟ್" ಪದ್ಧತಿಯಲ್ಲಿ ಸನ್. 2023–24 ನೇ ಸಾಲಿನ ಎಸ್.ಎಫ್.ಸಿ/5%/7.25%/SCSP-TSP, 15ನೇ ಹಣಕಾಸು, Non Million Plus Cities 2021-22 ಹಾಗೂ ಪುರಸಭೆ ನಿಧಿಯ ಕ್ರಿಯಾ ಯೋಜನೆಯಲ್ಲಿ ಮಂಜೂರಾದ ಕಾಮಗಾರಿಗಳ ನಿರ್ವಹಣೆಗಾಗಿ ಕೆ.ಎ.ಡಬ್ಲ್ಯು ದಾಸ್ತಾವೇಜಿನಲ್ಲಿ "ಇ–ಪ್ರಕ್ಯೂರಮೆಂಟ್" ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಟೆಂಡರ ಆಹ್ವಾನಿಸಲಾಗಿದೆ. ಕಾಮಗಾರಿ ಮೊತ್ತ ರೂ. 71.45 ಲಕ್ಷಗಳ ಟೆಂಡರನ್ನು ಇ–ಪ್ರಕ್ಯೂರಮೆಂಟ ವೆಬ್‌ಸೈಟ್ www.ronatown.mrc.gov.in/Tenders, ಅಥವಾ https://kppp.karnataka.gov.in/ ಮೂಲಕ ಷರತ್ತುಗಳಂತೆ ಟೆಂಡರ ಹಾಕಲು ಪ್ರಚಾರ ಪಡಿಸಲಾಗಿದೆ.

1) DMA/2023-24/OW/ WORK_INDENT -11700, 1.54 ಲಕ್ಷ,
2) DMA/2023-24/OW/ WORK_INDENT -10443, 2.98 ಲಕ್ಷ,
3) DMA/2023-24/OW/ WORK_INDENT -11703, 6.60 ಲಕ್ಷ,
4) DMA/2023-24/OW/ WORK_INDENT -11705, 5.35 ಲಕ್ಷ,
5) DMA/2023-24/OW/ WORK_INDENT -11706, 14.45 ಲಕ್ಷ,
6) DMA/2023-24/OW/ WORK_INDENT -11776, 7.00 ಲಕ್ಷ,
7) DMA/2023-24/OW/ WORK_INDENT -11702, 15.50 ಲಕ್ಷ, (SL.NO 1-7 are OTHERS),
RESERVED TENDER (SC-2, ST-1)
8) DMA/2023-24/OW/ WORK_INDENT -11704, 6.50 ಲಕ್ಷ,
9) DMA/2023-24/OW/ WORK_INDENT- 4101, 7.10 ಲಕ್ಷ(SC)
10) DMA/2023-24/OW/ WORK_INDENT -11699, 4.43 ಲಕ್ಷ(ST)

ಸೂಚನೆ : ಸದರ ಟೆಂಡರಗಳಿಗೆ ಸಂಬಂಧಿಸಿದಂತೆ ಯಾವುದೇ ತಿದ್ದುಪಡಿಗಳಿದ್ದಲ್ಲಿ ಇ–ಪ್ರಕ್ಯೂರಮೆಂಟ ಪ್ರೋಟಲ್‌ನಲ್ಲಿ ಮಾತ್ರ ಪ್ರಕಟಣೆ ಮಾಡಲಾಗುವುದು.
ನಿರ್ಧಾರಿತ ದಿನಾಂಕಗಳ ವಿವರ : 1) ದಿನಾಂಕ : 12–01–2024 ಸಾಯಂಕಾಲ 5–30 ಘಂಟೆವರೆಗೆ ಇ–ಪ್ರಕ್ಯೂರಮೆಂಟನಲ್ಲಿ ಟೆಂಡರ ಫಾರ್ಮಗಳಿಗೆ ಅರ್ಜಿ ಸಲ್ಲಿಸಬಹುದು. (2) ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 16–01–2024 (3) ಆರ್ಥಿಕ ಬಿಡ್ ತೆರೆಯುವ ದಿನಾಂಕ : 18–01–2024

ಸಹಿ/– ಮುಖ್ಯಾಧಿಕಾರಿ, ಪುರಸಭೆ ರೋಣ
ಸಹಿ/– ಆಡಳಿತಾಧಿಕಾರಿಗಳು, ಪುರಸಭೆ ರೋಣ
ವಾಸಾಸಂಇ/ಗದಗ/ಕೆಎಸ್‌ಎಂ.ಸಿ.ಎ/426/2023–24

ಕರ್ನಾಟಕ ಸರ್ಕಾರ
ವಿದ್ಯುನ್ಮಾನ ನಾಗರಿಕ ಸೇವಾ ವಿತರಣಾ ನಿರ್ದೇಶನಾಲಯ (ಇಡಿಸಿಎಸ್) ಸಿಆಸುಇ (ಇ–ಆಡಳಿತ ಇಲಾಖೆ)
ನಂ.3 4ನೇ ಮಹಡಿ, ಎಂಬೆಸ್ಸಿ ಐಕಾನ್ ಕಟ್ಟಡ ಇನ್‌ಫೆಂಟ್ರಿ ರಸ್ತೆ, ಬೆಂಗಳೂರು – 560001.
ನಂ. DPAREGOV/2023-24/SE0016 ದಿನಾಂಕ: 04.01.2024

ಇ–ಟೆಂಡರ್ ಅಧಿಸೂಚನೆ

ಇಡಿಸಿಎಸ್ ನಿರ್ದೇಶನಾಲಯಕ್ಕೆ ಮಾಸಿಕ ಬಾಡಿಗೆ ಆಧಾರದ ಮೇಲೆ ವಾಹನ ಸೇವೆಗಳನ್ನು ಹೊರಗುತ್ತಿಗೆ ಆಧಾರದಡಿ ಒದಗಿಸಲು ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ದಾಖಲೆಗಳನ್ನು ದಿನಾಂಕ 20.01.2024 ಸಂಜೆ 5.30 ಗಂಟಯೊಳಗೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಲು ಅವಕಾಶ ಕಲ್ಪಿಸಲಾಗಿದೆ. ಟೆಂಡರ್ ಷರತ್ತು ಮತ್ತು ವಿವರಗಳನ್ನು https://www.kppp.karnataka.gov.in ನಲ್ಲಿ ಪಡೆಯಬಹುದಾಗಿದೆ.

DIPR/CP/2865/Zen/2022-23 ಸಹಿ/– ನಿರ್ದೇಶಕರು, (ಇಡಿಸಿಎಸ್)

ನಗರಸಭಾ ಕಾರ್ಯಾಲಯ ಹೊಸಪೇಟೆ
No: CMC HPT/WS/MF/2023-24 Dated: 03-01-2024

ಟೆಂಡರಿಗಾಗಿ ಆಹ್ವಾನ (ಐ.ಎಫ್.ಟಿ.) ಟೆಂಡರ್ ಪ್ರಕಟಣೆ
(ಇ–ಪ್ರೋಕ್ಯೂರಮೆಂಟ್ ಮುಖಾಂತರ)

2023–24ನೇ ಸಾಲಿನ ನಗರಸಭೆ ನಿಧಿ ಅನುದಾನದ ನಿಧಿಯಿಂದ ಈ ಕೆಳಗಿನ ಕೆಲಸಕ್ಕಾಗಿ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ನಿಯಮಾವಳಿಯಂತೆ ಇ–ಪ್ರೋಕ್ಯೂರಮೆಂಟ್ ಪೋರ್ಟಲ್ ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಲಾಗಿದ್ದು, ಗುತ್ತಿಗೆದಾರರು ತಮಗೆ ಬೇಕಾದ ಟೆಂಡರ್ ವಿವರಗಳನ್ನು www.kppp. karnataka. govt.in ವೆಬ್‌ಸೈಟ್ ಮೂಲಕ ಪಡೆದುಕೊಂಡು, ಸದರಿ ಇ–ಪ್ರೋಕ್ಯೂರಮೆಂಟಿನ ಷರತ್ತಿಗೊಳಪಟ್ಟು ಭರ್ತಿ ಮಾಡಿದ ಟೆಂಡರ್‌ಗಳನ್ನು ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಸಲ್ಲಿಸಬಹುದು. 1) ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ:16.01.2024 ಸಂಜೆ 5.00 ಗಂಟೆ ವರೆಗೆ (2) ತಾಂತ್ರಿಕ ಬಿಡ್ ತೆರೆಯುವ ದಿನಾಂಕ:17.01.2024 ಸಂಜೆ 5.10 ಗಂಟೆ ನಂತರ(3) ಆರ್ಥಿಕ ಬಿಡ್ ತೆರೆಯುವ ಸ್ಥಳ ಹಾಗೂ ದಿನಾಂಕ:18–01–2024 ನಗರಸಭೆ, ಹೊಸಪೇಟೆ. 1) **DMA/2023–24/SE1291/CALL–2** ಕಾಯ್ದಿರಿಸಿದ ಮೊತ್ತ ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ): 90.00 ಲಕ್ಷ, ಇ.ಎಂ.ಡಿ(90 ದಿನಗಳ ವ್ಯಾಲಿಡಿಟಿ ರೂ.ಗಳಲ್ಲಿ): 180000.00 2) **DMA/2023–24/SE1292/CALL–2** ಕಾಯ್ದಿರಿಸಿದ ಮೊತ್ತ ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ): 99.00 ಲಕ್ಷ, ಇ.ಎಂ.ಡಿ (90 ದಿನಗಳ ವ್ಯಾಲಿಡಿಟಿ ರೂ.ಗಳಲ್ಲಿ): 198000.00 ಟೆಂಡರ್ ಪ್ರೋಸೆಸ್ಸಿಂಗ್ ಫೀ ಹೆಚ್ಚಿನ ಮಾಹಿತಿಗಾಗಿ ಷರತ್ತು ಮತ್ತು ನಿಬಂದನೆಗಳಿಗೆ ನಗರಸಭೆ ಕಾರ್ಯಾಲಯ ಹೊಸಪೇಟೆ ಕಛೇರಿ ಕೆಲಸದಂದು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು.

ಸಹಿ/– ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ನಗರಸಭೆ, ಹೊಸಪೇಟೆ.
ಸಹಿ/– ಪೌರಾಯುಕ್ತರು, ನಗರಸಭೆ, ಹೊಸಪೇಟೆ.
ಸಹಿ/– ಅಧ್ಯಕ್ಷರು, ನಗರಸಭೆ, ಹೊಸಪೇಟೆ.
ವಾ.ಸಾ.ಇ./ವಿಜಯನಗರ/314/ದೇಶಪಾಂಡೆಪಬ್ಲಿಸಿಟಿ/2023–24.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇಂಜಿನಿಯರಿಂಗ್ ಘಟಕ
ಮುಖ್ಯ ಇಂಜಿನಿಯರ್‌ರವರ ಕಛೇರಿ, ಆರೋಗ್ಯ ಸೌಧ, 3ನೇ ಮಹಡಿ, ಕುಷ್ಠರೋಗ ಆಸ್ಪತ್ರೆ ಆವರಣ, 1ನೇ ಅಡ್ಡರಸ್ತೆ, ಮಾಗಡಿ ರಸ್ತೆ, ಬೆಂಗಳೂರು–560 023.
ದೂ: 080–29557023, ಇ–ಮೇಲ್: cekhsdrp@gmail.com
ಸಂಖ್ಯೆ:ಆಕುಕ/ಇಂಘ/ಮುಇಂ/ತಾಸ–3/ಸಇಂ–8/ಶವಾಗಾರ ಬ್ಲಾಕ್/2023–24/2065 ದಿನಾಂಕ: 04.01.2024

ಅಲ್ಪಾವಧಿ ಟೆಂಡರ್ ಪ್ರಕಟಣೆ (2ನೇ ಕರೆ)

ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ 2ನೇ ದರ್ಜೆ ಮತ್ತು ಮೇಲ್ಪಟ್ಟ ಗುತ್ತಿಗೆದಾರರಿಂದ ಈ ಕೆಳಕಂಡ ಕಾಮಗಾರಿಗೆ ದ್ವಿ ಟೆಂಡರ್ ದಸ್ತಾವೇಜು ಪದ್ಧತಿಯಲ್ಲಿ ವಿದ್ಯುನ್ಮಾನ ಸಂಗ್ರಹಣೆ ವೇದಿಕೆ (KPPP) ಮೂಲಕ ಅಲ್ಪಾವಧಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

(1) ಕಾಮಗಾರಿಯ ವಿವರ: ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ವಿಧಿವೈದ್ಯಶಾಸ್ತ್ರ ವಿಭಾಗದ ಉಪನ್ಯಾಸ ಕೊಠಡಿ ಮತ್ತು ಹೊಸ ಶವಾಗಾರ ನಿರ್ಮಾಣ ಕಾಮಗಾರಿ (2ನೇ ಕರೆ). ಅಂದಾಜು ಮೊತ್ತ: **ರೂ. 400.00 ಲಕ್ಷಗಳು.** ಇಎಂಡಿ ಮೊತ್ತ: **ರೂ. 6.00 ಲಕ್ಷಗಳು.** ಕಾಲಾವಧಿ (ಮಳೆಗಾಲ ಸೇರಿದಂತೆ): **9 ತಿಂಗಳು.**

ಟೆಂಡರ್ ಪ್ರಕ್ರಿಯೆಗಳ ದಿನಾಂಕಗಳು: (1) ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಸ್ವೀಕರಿಸುವ ಕೊನೆಯ ದಿನಾಂಕ ಮತ್ತು ಸಮಯ: **19.01.2024 ರಂದು 16.00 ಗಂಟೆಯವರೆಗೆ. (2)** ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ: **20.01.2024 ರಂದು 16.00 ಗಂಟೆಗೆ.**

ಟೆಂಡರ್ ವಿವರಗಳನ್ನು ವಿದ್ಯುನ್ಮಾನ ಸಂಗ್ರಹಣೆ ವೇದಿಕೆ ಮೂಲಕ (Through Karnataka Public Procurement Portal) **www.kppp.karnataka.gov.in** ದಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ಟೆಂಡರ್ ಪ್ರಕ್ರಿಯೆ ಶುಲ್ಕವನ್ನು **www.kppp.karnataka.gov.in** ನಲ್ಲಿ ವಿದ್ಯುನ್ಮಾನ (Electronic) ವಿಧಾನದಲ್ಲಿ ಪಾವತಿಸಬಹುದಾಗಿರುತ್ತದೆ. ಆಸಕ್ತಿಯುಳ್ಳ ಗುತ್ತಿಗೆದಾರರು ಸದರಿ ಟೆಂಡರ್‌ನಲ್ಲಿ ಭಾಗವಹಿಸಲು ವಿದ್ಯುನ್ಮಾನ ಸಂಗ್ರಹಣೆ ವೇದಿಕೆಯಲ್ಲಿ (Through Karnataka Public Procurement Portal) ನೋಂದಾಯಿಸುವ ಅಗತ್ಯ ಇದೆ.

ಟಿಪ್ಪಣಿ: (1) ಈ ಕೆಳಗೆ ಸಹಿ ಮಾಡಿರುವವರು ಯಾವುದೇ ಕಾರಣಗಳನ್ನು ನೀಡದೆ ಟೆಂಡರ್ ಪ್ರಕ್ರಿಯೆಯನ್ನು ಮುಂದೂಡುವ/ಸಂಪೂರ್ಣವಾಗಿ ಟೆಂಡರ್ ರದ್ದುಗೊಳಿಸುವ/ ಟೆಂಡರ್ ನಿರಾಕರಿಸುವ ಹಕ್ಕನ್ನು ಹೊಂದಿರುತ್ತಾರೆ. **(2)** ಇನ್ನು ಮುಂದೆ ಟೆಂಡರ್ ಪ್ರಕ್ರಿಯೆಯಲ್ಲಿ ಯಾವುದೇ ಬದಲಾವಣೆಗಳು ಇದ್ದಲ್ಲಿ ದಿನ ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ, ಬದಲಾಗಿ ವಿದ್ಯುನ್ಮಾನ ಸಂಗ್ರಹಣೆ ವೇದಿಕೆಯಲ್ಲಿ ಮಾತ್ರ ಬದಲಾವಣೆಗಳನ್ನು ಪ್ರಕಟಿಸಲಾಗುವುದು.

ಸಹಿ/– ಮುಖ್ಯ ಇಂಜಿನಿಯರ್, ಆ&ಕುಕಇ, ಇಂಜಿನಿಯರಿಂಗ್ ಘಟಕ, ಬೆಂಗಳೂರು

ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಬಾಗಲಕೋಟೆ
ಸಂ:ಜಿಮರಘ/ಬಾ/ಸುಸಂ/ಬಾಮಂವೀಆಸಾ/ಟೆಂಡರ/2023–24 ದಿನಾಂಕ:03–01–2024

ಪತ್ರಿಕಾ ಪ್ರಕಟಣೆ
(Notice Inviting Short Term Tender Through E-procurement)

ವಿಷಯ:2023–24ನೇ ಸಾಲಿಗೆ ಬಾಗಲಕೋಟೆ ಜಿಲ್ಲಾ ಮಕ್ಕಳ ರಕ್ಷಣಾ ಘಟಕದಡಿ ಬರುವ ಸರಕಾರಿ ಬಾಲಕರ ಬಾಲಮಂದಿರ ಹಾಗೂ ಬಾಲಕಿಯರ ಬಾಲಮಂದಿರ ಸಂಸ್ಥೆಗಳ ಮಕ್ಕಳ ಉಪಯೋಗಕ್ಕಾಗಿ ಆಹಾರ ಸಾಮಗ್ರಿಗಳನ್ನು ಮತ್ತು ಇತರೆ ಸಾಮಗ್ರಿಗಳನ್ನು ಖರೀದಿಸಿ ಸರಬರಾಜು ಮಾಡಲು ಟೆಂಡರ್ ಕರೆಯುವ ಕುರಿತು.
ಉಲ್ಲೇಖ:1)1999 ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯ ಪಾರದರ್ಶಕತೆ ಅಧಿನಿಯಮ ನಿಯಮ 2000, 2)ಮಾನ್ಯ ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಬಾಗಲಕೋಟೆ ರವರು ಟೆಂಡರ್ ಕರೆಯಲು ಅನುಮೋದನೆ ನೀಡಿದ ದಿನಾಂಕ: 27–10–2023

ಬಾಗಲಕೋಟೆ ಜಿಲ್ಲೆಯ ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸುಧಾರಣಾ ಸಂಸ್ಥೆಗಳಾದ ಬಾಲಕರ ಹಾಗೂ ಬಾಲಕಿಯರ ಬಾಲಮಂದಿರಗಳಿಗೆ 2023–24ನೇ ಸಾಲಿಗೆ ಆಹಾರ ಸಾಮಗ್ರಿ ಮತ್ತು ಇನ್ನಿತರ ಸಾಮಗ್ರಿಗಳನ್ನು ಪಡೆಯಲು E-Procurement ಮೂಲಕ ಟೆಂಡರ್ ಆಹ್ವಾನಿಸಲಾಗಿದೆ. ಕರ್ನಾಟಕ ರಾಜ್ಯ ಸಹಕಾರ ಸಂಘಗಳ ಅಧಿನಿಯಮದಡಿ ನೋಂದಾಯಿಸಲ್ಪಟ್ಟ ಕೆ.ಸಿ.ಸಿ.ಎಫ್, ಮಹಿಳಾ ವಿವಿಧೋದ್ದೇಶಗಳ ಸಹಕಾರಿ ಸಂಘಗಳು, ಕೆ.ಸಿ.ಸಿ.ಎಫ್ ನಿಂದ ನಡೆಸಲ್ಪಡುವ ಜನತಾ ಬಜಾರ ಮತ್ತು ಜಿಲ್ಲಾ ಮಟ್ಟದ ಕನ್ಸೂಮರ್ಸ ಸಹಕಾರಿ ಸಂಘಗಳು, ಎನ್.ಸಿ.ಸಿ.ಎಫ್, ಸ್ತ್ರೀ–ಶಕ್ತಿ ಸ್ವಸಹಾಯ ಗುಂಪುಗಳ ಒಕ್ಕೂಟ ಮತ್ತು ಮಹಿಳಾ ಮಂಡಳಿಗಳು E-Portal ಮೂಲಕ ಟೆಂಡರ್ ಸಲ್ಲಿಸಬಹುದು.

ಟೆಂಡರ್ ವೇಳಾಪಟ್ಟಿ

ಅ.ಸಂ	ವಿವರ	ದಿನಾಂಕ
1	ಖಾಲಿ ಟೆಂಡರ ಅರ್ಜಿಗಳನ್ನು (ಅನುಬಂಧ 1&2) ನ್ನು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಡೌನಲೋಡ್ ಮಾಡಿಕೊಳ್ಳುವ ಹಾಗೂ ಅಪ್‌ಲೋಡ್ ಮಾಡುವ ಕೊನೆಯ ದಿನಾಂಕ	04–01–2024 ರಿಂದ 29–01–2024
2	ಇ–ಪ್ರೊಕ್ಯೂರಮೆಂಟ್‌ನಲ್ಲಿ ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ	ದಿನಾಂಕ:31–01–2024 ಬೆಳಿಗ್ಗೆ 11:00 ಘಂಟೆ
3	ಇ–ಪೋರ್ಟಲ್‌ನಲ್ಲಿ ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ	ದಿನಾಂಕ: 01–02–2024 ಬೆಳಿಗ್ಗೆ 11:00 ಘಂಟೆ
4	ಅಂದಾಜು ಮೌಲ್ಯ	ರೂ.20/– ಲಕ್ಷಗಳು
5	ಇ.ಎಮ್.ಡಿ. ಮೊತ್ತ	ರೂ.50,000/–ಗಳು
6	ಇ–ಟೆಂಡರ್‌ಗೆ ಸಂಬಂಧಿಸಿದ ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ಕಛೇರಿ ವಿಳಾಸ	ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಬಾಗಲಕೋಟೆ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ:08354–295345

ಸಹಿ/–ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಬಾಗಲಕೋಟೆ ಜಿಲ್ಲೆ
DIPR/BGK/RO-NO-278/MCA/2023-24

ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ನಂದಿನಗರ, ಬೀದರ – 585 401.
ಆಸ್ತಿ ಅಧಿಕಾರಿಗಳವರ ಕಛೇರಿ, ಇ–ಮೇಲ್ : eokvafsu@gmail.com
ಸಂಖ್ಯೆ:ಆ.ಅ/ಕ.ಪ.ಪ.ಮೀ.ವಿ.ವಿ/ಟೆ.ನಂ.119/ಕಾಮಗಾರಿ/2023–24 ದಿನಾಂಕ:03.01.2024

ಟೆಂಡರ ಪ್ರಕಟಣೆ (ಇ–ಪ್ರೋಕ್ಯೂರಮೆಂಟ್ ಪೋರ್ಟಲ್ ಮುಖಾಂತರ)

1) ಕಾಮಗಾರಿ ವಿವರ Civil / Electrical works at different campuses of KVAFSU, Bidar. 2) ಕಾಮಗಾರಿ ಅಂದಾಜು ಮೊತ್ತ: Rs.11,29,81,000.00, 3) ಗುತ್ತಿಗೆದಾರರ ಅರ್ಹತೆ ವಿವರ: e-portal ನಲ್ಲಿ ನಮೂದಿಸಿದಂತೆ, 4) ಕಾಮಗಾರಿ ಟೆಂಡರ ಮೊತ್ತದ ವಿವರ: Rs.11,29,81,000.00, 5) ಟೆಂಡರ ಅರ್ಜಿಯ ಬೆಲೆ ಮತ್ತು ಇ.ಎಂ.ಡಿ ಮೊತ್ತದ ವಿವರ e-portal ನಲ್ಲಿ ನಮೂದಿಸಿದಂತೆ, 6) ಟೆಂಡರ ಫಾರಂ ಸಲ್ಲಿಸಲು ಅಂತಿಮ ದಿನಾಂಕ: 15.02.2024 up to 5.00 PM, 7) ತಾಂತ್ರಿಕ ಬಿಡ (ದ್ವೀ ಲಕೋಟೆ ಟೆಂಡರ) ತೆರೆಯುವ ದಿನಾಂಕ: 19.02.2024 at 11.30 AM, 8) ಫೈನಾನ್ಸಿಯಲ ಬಿಡ ಟೆಂಡರ ತೆರೆಯುವ ದಿನಾಂಕ: 23.02.2024 at 11.30. AM, 9) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ, ಕಛೇರಿ, ವಿಳಾಸ, ದೂರವಾಣಿ ಸಂಖ್ಯೆ: ಆಸ್ತಿ ಅಧಿಕಾರಿಗಳ ಕಛೇರಿ, ಕಪಪಮೀವಿವಿ, ನಂದಿನಗರ, ಬೀದರ. 08482–245446, 10) ಅಂತರ್ಜಾಲ ತಾಣದ ವಿಳಾಸ: e-procurement portal- www.eproc.karnataka.gov.in

ಸಹಿ/– ಆಸ್ತಿ ಅಧಿಕಾರಿಗಳು ಕಪಪಮೀವಿವಿ, ಬೀದರ
ವಾ.ಸಾ.ಸಂ.ಇ/ಬೀದರ/212/ಕೆ.ಎಸ್.ಎಂ.ಸಿ.&ಎ/2023–24

ಕರ್ನಾಟಕ ಸರ್ಕಾರ
ನಗರಸಭೆ ಕಾರ್ಯಾಲಯ, ಯಾದಗಿರಿ
ಜಿ: ಯಾದಗಿರಿ. ಕರ್ನಾಟಕ ರಾಜ್ಯ.
E-mail: itstaff_ulb_yadgiri@yahoo.com, Wensite: www.yadgir@yahoo.com
ದೂರವಾಣಿ : 08473–252312
ಸಂ: ಸಸಯಾ:ತಾಂತ್ರಿಕ ಶಾಖೆ:ಇ–ಟೆಂಡರ:2023–24 ದಿನಾಂಕ: 03–01–2024

–: ಇ–ಪ್ರಕ್ಯೂರಮೆಂಟ್ ಮುಂದುವರೆಸಿದ ಟೆಂಡರ ಪ್ರಕಟಣೆ :–
–: ದ್ವೀ–ಲಕೋಟೆ ಪದ್ಧತಿ:–

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಯಾದಗಿರಿ ಜಿಲ್ಲೆಯ ಯಾದಗಿರಿ ನಗರಸಭೆಯ ಪೌರಾಯುಕ್ತರು ಇವರು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 ಹಾಗೂ ನಿಯಮಗಳು 2000ರ ಇ–ಪ್ರಕ್ಯೂರಮೆಂಟ್ ಪದ್ದತಿಯಲ್ಲಿ 2023–24ನೇ ಸಾಲಿನ ಸ್ವಚ್ಛ ಭಾರತ ಮಿಷನ್ 2.0 ಪಾರಂಪರಿಕ ತ್ಯಾಜ್ಯದ ಯೋಜನೆಯ ಅನುದಾನದಡಿಯಲ್ಲಿ ತೆಗೆದುಕೊಂಡಿರುವ ಕಾಮಗಾರಿ DMA/2023- 24/OW/WORK_INDENT 251/CALL-3 ಗೆ ಇ–ಪ್ರಕ್ಯೂರಮೆಂಟ್ ಪೋರ್ಟಲನಲ್ಲಿ ಟೆಂಡರ್ ಕರೆಯಲಾಗಿದ್ದು, ಇ–ಪ್ರಕ್ಯೂರಮೆಂಟ್ ಪೋರ್ಟಲನಲ್ಲಿ ನೋಂದಾಯಿತ ಫರ್ಮ/ನೋಂದಾಯಿತ ಕಂಪನಿ/ನೋಂದಾಯಿತ ಗುತ್ತಿಗೆದಾರರು Standard Tender Document ಗಳ ಅಡಿಯಲ್ಲಿ ಇ–ಟೆಂಡರನ್ನು ಆಹ್ವಾನಿಸಲಾಗಿದೆ. ಇ–ಪ್ರಕ್ಯೂರಮೆಂಟ್‌ನಲ್ಲಿ http://eproc.karnataka.gov.in ರ ಮೂಲಕ ಕೆಳಗಿನ ನಮೂದಿಸಿರುವ ದಿನಾಂಕದಂದು ಆನ್ ಲೈನ್ ಮೂಲಕ ಟೆಂಡರಗಳನ್ನು ಸಲ್ಲಿಸತಕ್ಕದ್ದು. ಹೆಚ್ಚಿನ ಮಾಹಿತಿಗಾಗಿ ಕಛೇರಿಯ ವೆಬ್‌ಸೈಟ್ www.yadgircity.mrc.gov.in ರಲ್ಲಿ ನೋಡಬಹುದು ಹಾಗೂ ತಾಂತ್ರಿಕ ಅಧಿಕಾರಿಗಳನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು.

1) ಟೆಂಡರಗಳನ್ನು ಸಲ್ಲಿಸಲು ಪ್ರಾರಂಭ ದಿನಾಂಕ : 03–01–2024 ರಂದು 10.00 ಗಂಟೆಯಿಂದ **2) ಟೆಂಡರಗಳನ್ನು ಸಲ್ಲಿಸಲು ಕೊನೆಯ ದಿನಾಂಕ:** 17–01–2024 ರಂದು ಸಾಯಂಕಾಲ 5.30ರ ವರೆಗೆ **3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ :** 19–01–2024 **4) ಆರ್ಥಿಕ ಬಿಡ್ ತೆರೆಯುವ ದಿನಾಂಕ :** 29–01–2024.

ಸಹಿ/– ಪೌರಾಯುಕ್ತರು ನಗರಸಭೆ ಯಾದಗಿರಿ
ವಾ.ಸಾ.ಸಂ.ಇ/ಯಾದಗಿರಿ/257/ಕೆ.ಎಸ್.ಎಂ.ಸಿ&ಎ/2023–24

ಸಂಕ್ಷಿಪ್ತ ಸುದ್ದಿ

ಟಿ.ಸಿ ಪಾಳ್ಯ ಜಂಕ್ಷನ್: ಸುಗಮ ಸಂಚಾರ

ಬೆಂಗಳೂರು: ಕೆ.ಆರ್.ಪುರಂ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯ ಟಿ.ಸಿ. ಪಾಳ್ಯ ಜಂಕ್ಷನ್‌ನಲ್ಲಿ ಪೊಲೀಸರು ಕೈಗೊಂಡ ಸುಧಾರಣಾ ಕ್ರಮಗಳಿಂದ ಈ ಭಾಗದಲ್ಲಿ ವಾಹನಗಳು ಸುಗಮವಾಗಿ ಸಂಚರಿಸುತ್ತಿವೆ.

ಇದು ಅತ್ಯಂತ ದಟ್ಟಣೆ ಜಂಕ್ಷನ್ ಆಗಿತ್ತು. ವಾಹನ ಸವಾರರು ಜಂಕ್ಷನ್‌ನಿಂದ ಮುಂದಕ್ಕೆ ಸಾಗಲು ಪರದಾಡುತ್ತಿದ್ದರು. ಸುಧಾರಣಾ ಕ್ರಮಗಳಿಂದ ಈಗ ವಾಹನಗಳು ಸುಗಮವಾಗಿ ಸಾಗುತ್ತಿವೆ.

ನಗರದಿಂದ ಹೊಸಕೋಟೆ ಕಡೆಗೆ ತೆರಳುವ ರಸ್ತೆಯ ಅಭಿವೃದ್ಧಿಗೆ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರಕ್ಕೆ ಜಾಗ ಬಿಟ್ಟುಕೊಟ್ಟಿರಲಿಲ್ಲ. ಇದೇ ಕಾರಣಕ್ಕೆ ಈ ಭಾಗದಲ್ಲಿ ವಾಹನ ದಟ್ಟಣೆ ಆಗುತ್ತಿತ್ತು. ಟಿ.ಸಿ.ಪಾಳ್ಯ ಕಡೆಗೆ ತೆರಳಲು ಹಾಗೂ ಬರಲು ಒಂದೇ ರಸ್ತೆಯಿತ್ತು. ಇದರಿಂದಲೂ ದಟ್ಟಣೆ ಹೆಚ್ಚಾಗಿತ್ತು.

ಬಸವನಪುರ, ಸೀಗೇಹಳ್ಳಿ ಕಡೆಯಿಂದ ಬರುವ ಹೆಚ್ಚಿನ ವಾಹನಗಳು ಟಿ.ಸಿ.ಪಾಳ್ಯದ ಮೂಲಕ ರಾಮಮೂರ್ತಿನಗರ ಜಂಕ್ಷನ್ ಕಡೆಗೆ ಹೋಗುತ್ತಿದ್ದವು. ಈ ಮಾರ್ಗಗಳನ್ನು ಬದಲಾವಣೆ ಮಾಡಲಾಗಿದೆ.

ನಗರದಿಂದ ಬರುವ ವಾಹನಗಳು ಟಿ.ಸಿ.ಪಾಳ್ಯ ಕಡೆ ಹೋಗಲು ಎಡಕ್ಕೆ ತಿರುವು ಪಡೆಯುವ ವ್ಯವಸ್ಥೆ ಜಾರಿಗೆ ತರಲಾಗಿದೆ. ವಾಹನಗಳು ನೇರವಾಗಿ ಚಲಿಸುತ್ತಿವೆ. ಪಾದಚಾರಿಗಳಿಗೆ ರಸ್ತೆದಾಟಲು ಸಿಗ್ನಲ್ ಅಳವಡಿಸಲಾಗಿದೆ ಎಂದು ಸಂಚಾರ ಪೊಲೀಸರು ತಿಳಿಸಿದ್ದಾರೆ.

ಅತ್ಯಾಚಾರ: ಕಾಲ್‌ಸೆಂಟರ್ ವ್ಯವಸ್ಥಾಪಕ ಸೆರೆ

ಬೆಂಗಳೂರು: ಮಹಿಳಾ ಸಹೋದ್ಯೋಗಿ ಮೇಲೆ ಅತ್ಯಾಚಾರ ಎಸಗಿದ ಕಾಲ್‌ಸೆಂಟರ್‌ನ ವ್ಯವಸ್ಥಾಪಕನನ್ನು ಬಸವೇಶ್ವನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಕೆ.ಆರ್.ಪುರ ನಿವಾಸಿ ಅಕ್ರಂ(40) ಬಂಧಿತ ಆರೋಪಿ.

‘32 ವರ್ಷದ ಸಂತ್ರಸ್ತೆ ನೀಡಿದ ದೂರಿನ ಮೇರೆಗೆ ಆರೋಪಿಯನ್ನು ಬಂಧಿಸಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಕಾಲ್ ಸೆಂಟರ್ ಕಂಪನಿಯೊಂದರಲ್ಲಿ ಅಕ್ರಂ ವ್ಯವಸ್ಥಾಕರಾಗಿದ್ದಾರೆ. ಅದೇ ಕಂಪನಿಯಲ್ಲಿ ಸಂತ್ರಸ್ತೆ ಕೂಡ ಕೆಲ ತಿಂಗಳಿಂದ ಕೆಲಸ ಮಾಡುತ್ತಿದ್ದರು. ಈ ಮಧ್ಯೆ ಜ.2ರಂದು ಮನೆಗೆ ಔತಣ ಕೂಟಕ್ಕೆಂದು ಕರೆದೊಯ್ದು ಆಕೆ ಮೇಲೆ ಅತ್ಯಾಚಾರ ಎಸಗಿದ್ದಾರೆ. ಈ ಸಂಬಂಧ ಸಂತ್ರಸ್ತೆ ದೂರು ನೀಡಿದ್ದರು. ತನಿಖೆ ಮುಂದುವರಿದಿದೆ’ ಎಂದು ಪೊಲೀಸರು ಹೇಳಿದರು.

ಗುಂಡು ಹಾರಿಸಿಕೊಂಡು ವಿದ್ಯಾರ್ಥಿ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ವಿಶು ಉತ್ತಪ್ಪ

ಬೆಂಗಳೂರು: ಮನೆಯಲ್ಲಿದ್ದ ಬಂದೂಕಿನಿಂದ ಗುಂಡು ಹಾರಿಸಿಕೊಂಡು ವಿದ್ಯಾರ್ಥಿಯೊಬ್ಬ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಬಿ.ಇ ಮೊದಲ ಸೆಮಿಸ್ಟರ್ ವ್ಯಾಸಂಗ ಮಾಡುತ್ತಿದ್ದ ವಿಶು ಉತ್ತಪ್ಪ (19) ಆತ್ಮಹತ್ಯೆ ಮಾಡಿಕೊಂಡವರು.

‘ನೈಸ್ ರಸ್ತೆಯ ಟೋಲ್ ಸಮೀಪದ ತಿರುಮಲನಗರದಲ್ಲಿ ಪೋಷಕರ ಜೊತೆಗೆ ವಿಶು ವಾಸವಿದ್ದರು. ಮೂಲತಃ ಕೊಡಗು ಜಿಲ್ಲೆ, ಮಡಿಕೇರಿ ತಾಲ್ಲೂಕಿನ ಮುಕೊಡ್ಲು ಗ್ರಾಮದ ಕೆ.ಡಿ.ತಿಮ್ಮಯ್ಯ ಅವರ ಪುತ್ರ’ ಎಂದು ಪೊಲೀಸರು ತಿಳಿಸಿದರು.

‘ತಿಮ್ಮಯ್ಯ ಅವರು ನೈಸ್ ಟೋಲ್‌ನಲ್ಲಿ ಸಂಗ್ರಹಣೆಯಾದ ಹಣವನ್ನು ಬ್ಯಾಂಕ್‌ಗೆ ಜಮೆ ಮಾಡುವ ಕೆಲಸವನ್ನು ಕಳೆದ ಏಳು ವರ್ಷದಿಂದ ಮಾಡುತ್ತಿದ್ದರು. ತಂದೆ ಪರವಾನಗಿ ಹೊಂದಿದ ಬಂದೂಕು ಹೊಂದಿದ್ದರು. ತಂದೆ ಹಾಗೂ ತಾಯಿ ಸಾಮಗ್ರಿ ಖರೀದಿಸಲು ಹೊರಕ್ಕೆ ಹೋದ ಸಂದರ್ಭದಲ್ಲಿ ತಂದೆಯ ಬಂದೂಕಿನಿಂದ ಎದೆಭಾಗಕ್ಕೆ ಗುಂಡು ಹಾರಿಸಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ’ ಎಂದು ಮೂಲಗಳು ಹೇಳಿವೆ.

‘ಗುಂಡು ಹಾರಿಸಿಕೊಂಡ ಮೇಲೆ ತಂದೆಗೆ ವಿಶು ಕರೆ ಮಾಡಿ, ನಾನು ಇನ್ಮುಂದೆ ಯಾವುದೇ ತಪ್ಪು ಮಾಡುವುದಿಲ್ಲ ಎಂದು ಹೇಳಿದ್ದಾರೆ. ಇದರಿಂದ ಅನುಮಾನಗೊಂಡ ತಂದೆ ಮನೆಗೆ ಬಂದು ನೋಡುವಷ್ಟರಲ್ಲಿ ರಕ್ತದ ಮಡುವಿನಲ್ಲಿ ಬಿದ್ದಿದ್ದರು’

‘ಕಳೆದ ನಾಲ್ಕೈದು ದಿನಗಳಿಂದ ಪುತ್ರ ಮೌನವಾಗಿದ್ದ ಎಂದು ತಂದೆ ತಿಳಿಸಿದ್ದಾರೆ. ಕಾಲೇಜು ಬಗ್ಗೆಯೂ ತಂದೆಗೆ ಯಾವುದೇ ಅನುಮಾನ ಇಲ್ಲ. ಆತ್ಮಹತ್ಯೆಗೆ ನಿಖರ ಕಾರಣ ತಿಳಿದುಬಂದಿಲ್ಲ. ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ನಡೆಸಿ, ಪೋಷಕರಿಗೆ ಮೃತದೇಹ ಹಸ್ತಾಂತರಿಸಲಾಗಿದೆ’ ಎಂದು ಪೊಲೀಸರು ಹೇಳಿದರು.

ಬಾಲ್ಯ ವಿವಾಹ: ದೂರು ದಾಖಲು

ಬೆಂಗಳೂರು: 16 ವರ್ಷದ ಬಾಲಕಿಗೆ ತನ್ನ ತಾಯಿ ಹಾಗೂ ಅವರ ತಮ್ಮ ಬಲವಂತದಿಂದ ಮದುವೆ ಮಾಡಿಸಿದ್ದು, ಈ ಸಂಬಂಧ ರಾಜರಾಜೇಶ್ವರಿ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘27 ವರ್ಷದ ಯುವಕನ ಜೊತೆಗೆ ನಗರದ ಅಯ್ಯಪ್ಪಸ್ವಾಮಿ ದೇವಸ್ಥಾನದಲ್ಲಿ ಗುರುವಾರ ಬೆಳಿಗ್ಗೆ ನನ್ನ ಇಚ್ಛೆಗೆ ವಿರುದ್ಧವಾಗಿ ಮದುವೆ ಮಾಡಿಸಿದ್ದಾರೆ. ಮದುವೆ ಬಳಿಕ ಬಲವಂತವಾಗಿ ಲೈಂಗಿಕ ದೌರ್ಜನ್ಯ ಎಸಗಲಾಗಿದೆ’ ಎಂದು ದೂರು ನೀಡಲಾಗಿದೆ. ಯುವಕನ ವಿರುದ್ಧ ಅತ್ಯಾಚಾರ ಪ್ರಕರಣ ದಾಖಲಾಗಿದೆ. ಬಾಲಕಿ ಮಕ್ಕಳ ಕಲ್ಯಾಣ ಸಮಿತಿಗೆ ಹೇಳಿಕೆ ನೀಡಿದ್ದಾಳೆ.

ಮನೆಗೆ ನುಗ್ಗಿ ಗೃಹಿಣಿ ಕೊಲೆ

ನೀಲಂ

ಬೆಂಗಳೂರು: ಎಲೆಕ್ಟ್ರಾನಿಕ್ ಸಿಟಿ ಪೊಲೀಸ್ ಠಾಣಾ ವ್ಯಾಪ್ತಿಯ ಸಾಯಿಶಕ್ತಿ ಬಡಾವಣೆಯ ಗಂಗಾ ಬ್ಲಾಕ್‌ನಲ್ಲಿ ಮನೆಯೊಂದಕ್ಕೆ ಗುರುವಾರ ಮಧ್ಯಾಹ್ನ ದುಷ್ಕರ್ಮಿಗಳು ನುಗ್ಗಿ, ಗೃಹಿಣಿಯ ಕತ್ತು ಹಿಸುಕಿ ಕೊಲೆ ಮಾಡಿ ಪರಾರಿಯಾಗಿದ್ದಾರೆ.

ನೀಲಂ (30) ಕೊಲೆಯಾದವರು.

‘ನೀಲಂ ಅವರ ಪತಿ ಹಾರ್ಡ್‌ವೇರ್ ಶಾಪ್‌ವೊಂದರಲ್ಲಿ ಕೆಲಸ ಮಾಡುತ್ತಿದ್ದರು. ಪತಿ ಎಂದಿನಂತೆ ಗುರುವಾರ ಕೆಲಸಕ್ಕೆ ತೆರಳಿದ್ದರು. ಮಕ್ಕಳು ಶಾಲೆಗೆ ತೆರಳಿದ್ದರು. ಮನೆಯಲ್ಲಿ ನೀಲಂ ಒಂಟಿಯಾಗಿದ್ದರು. ಆಗ ದುಷ್ಕರ್ಮಿಗಳು ಮನೆಗೆ ನುಗ್ಗಿ ಕೊಲೆ ಮಾಡಿದ್ದಾರೆ. ಮಕ್ಕಳು ಶಾಲೆ ಮುಗಿಸಿ ಸಂಜೆ ಮನೆಗೆ ಬಂದು ನೋಡಿದಾಗ ಕೊಲೆ ನಡೆದಿರುವುದು ಗೊತ್ತಾಗಿದೆ’ ಎಂದು ಪೊಲೀಸರು ಹೇಳಿದರು.

‘ಮನೆಯ ಹಾಲ್‌ಗೆ ಬಂದು ಕೊಲೆ ಮಾಡಲಾಗಿದೆ. ಮನೆಯಲ್ಲಿದ್ದ ಚಿನ್ನಾಭರಣ ಹಾಗೂ ನಗದು ಕಳವು ಮಾಡಿಲ್ಲ. ಹೀಗಾಗಿ ಪರಿಚಯಸ್ಥರೇ ಕೊಲೆ ಮಾಡಿರುವ ಶಂಕೆ ವ್ಯಕ್ತವಾಗಿದೆ. ಎಲ್ಲಾ ಆಯಾಮದಿಂದಲೂ ತನಿಖೆ ನಡೆಸಲಾಗುತ್ತಿದೆ. ವಿಶೇಷ ತಂಡ ರಚಿಸಲಾಗಿದೆ’ ಎಂದು ಪೊಲೀಸರು ಹೇಳಿದರು.

ಮರಣೋತ್ತರ ಪರೀಕ್ಷೆ ನಡೆಸಿ, ಮೃತದೇಹವನ್ನು ಕುಟುಂಬಸ್ಥರಿಗೆ ಹಸ್ತಾಂತರ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

ಮಗು ಅಪಹರಣ: ಕಾರ್ಮಿಕನ ವಿರುದ್ಧ ಮಾಲೀಕ ದೂರು

ಅಪರಾಧ ಸುದ್ದಿಗಳು

ಬೆಂಗಳೂರು: ‘ತನ್ನ ಬಳಿ ಕೆಲಸಕ್ಕಿದ್ದ ಕಾರ್ಮಿಕ ಮಗುವನ್ನು ಅಪಹರಿಸಿದ್ದಾನೆ’ ಎಂದು ಅಂಗಡಿ ಮಾಲೀಕ ದೂರು ನೀಡಿದ್ದು, ಈ ಸಂಬಂಧ ಬನಶಂಕರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮಗುವಿನ ತಂದೆ, ಪೀಠೋಪಕರಣ ಅಂಗಡಿ ಮಾಲೀಕ ಶಫೀವುಲ್ಲಾ ಅವರು ತನ್ನ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದ ವಾಸೀಂ ಎಂಬಾತನ ವಿರುದ್ಧ ದೂರು ನೀಡಿದ್ದಾರೆ.

‘ಸದ್ಯ ಮಗು ಪತ್ತೆಯಾಗಿದ್ದು, ತಾಯಿ ಬಳಿಯಿದೆ ಎಂದು ಗೊತ್ತಾಗಿದೆ. ಕೌಟುಂಬಿಕ ವಿಚಾರವಾಗಿ ತಾಯಿಯೇ ವಾಸೀಂ ಎಂಬಾತನ ಮೂಲಕ ಮಗುವನ್ನು ಕರೆಸಿಕೊಂಡಿದ್ದಾಳೆ ಎಂಬುದು ಪತ್ತೆಯಾಗಿದೆ’ ಎಂದು ಪೊಲೀಸರು ಹೇಳಿದರು.

‘ಶಫೀವುಲ್ಲಾ ಅವರಿಗೆ ನಗರದಲ್ಲಿ ಪೀಠೋಪಕರಣ ಮಾರಾಟ ಮಳಿಗೆಯಿದೆ. ಅದಕ್ಕೆ ಒಂದೂವರೆ ವರ್ಷದ ಹಿಂದೆ ವಾಸೀಂ ಎಂಬಾತನನ್ನು ಕೆಲಸಕ್ಕೆ ಸೇರಿಸಿಕೊಂಡಿದ್ದ. ಕೆಲವು ತಿಂಗಳ ಹಿಂದೆ ಆತ ಕೆಲಸ ಬಿಟ್ಟಿದ್ದ’ ಎಂದು ಮೂಲಗಳು ತಿಳಿಸಿವೆ.

‘ಶಫೀವುಲ್ಲಾ 2015ರಲ್ಲಿ ಮದುವೆಯಾಗಿದ್ದು, ದಂಪತಿಗೆ ಮೂರು ವರ್ಷದ ಹೆಣ್ಣು ಮಗು ಇದೆ. ಶಫೀವುಲ್ಲಾ ದಂಪತಿ ವೈಯಕ್ತಿಕ ಕಾರಣಗಳಿಗೆ 3 ವರ್ಷಗಳ ಹಿಂದೆ ವಿಚ್ಛೇದನ ಪಡೆದುಕೊಂಡಿದ್ದರು. ಶಫೀವುಲ್ಲಾ ಪುತ್ರಿಯ ಜತೆ ಬನಶಂಕರಿಯಲ್ಲಿ ವಾಸವಾಗಿದ್ದಾರೆ. ಪತ್ನಿ ಬೇರೆಡೆ ಇದ್ದರು. ಡಿ.28ರಂದು ಕೆಲಸ ಬಿಟ್ಟಿದ್ದ ವಾಸೀಂ ಅಂಗಡಿಗೆ ಬಂದು ಮತ್ತೆ ಕೆಲಸಕ್ಕೆ ಸೇರಿಸಿಕೊಳ್ಳುವಂತೆ ಮನವಿ ಮಾಡಿದ್ದ. ಅದಕ್ಕೆ ಶಫೀವುಲ್ಲಾ ಒಪ್ಪಿ, ಕೆಲಸಕ್ಕೆ ಸೇರಿಸಿಕೊಂಡಿದ್ದರು. ಮತ್ತೆ ಕೆಲಸಕ್ಕೆ ಸೇರಿದ ದಿನವೇ ಮಧ್ಯಾಹ್ನ 3 ಗಂಟೆ ಸುಮಾರಿಗೆ ಪುತ್ರಿಯನ್ನು ಚಾಕೋಲೇಟ್ ಆಸೆ ತೋರಿಸಿ ಕರೆದೊಯ್ದಿದ್ದಾನೆ’ ಎಂದು ಶಫೀವುಲ್ಲಾ ಆರೋಪಿಸಿದ್ದಾರೆ.

ಮಗವನ್ನು ಕರೆದೊಯ್ದ ವಾಸೀಂ, ಶಫೀವುಲ್ಲಾರ ಮಾಜಿ ಪತ್ನಿಗೆ ಒಪ್ಪಿಸಿದ್ದಾನೆ ಎಂಬುದು ಗೊತ್ತಾಗಿದೆ.

ದುರಸ್ತಿ

ಗೊರಗುಂಟೆಪಾಳ್ಯ–ನೆಲಮಂಗಲ ನಡುವಿನ ಮೇಲ್ಸೇತುವೆಯ ಪಿಲ್ಲರ್‌ಗಳ ದುರಸ್ತಿ ಕಾರ್ಯ ನಡೆಯುತ್ತಿರುವ ದೃಶ್ಯ. 2021ರ ಡಿ.25ರಿಂದ ದುರಸ್ತಿ ಕಾರ್ಯ ಆರಂಭವಾಗಿದೆ

ಪ್ರಜಾವಾಣಿ ಚಿತ್ರ: ಬಿ.ಎಚ್. ಶಿವಕುಮಾರ್

‘ಇನ್‌ಸ್ಪೆಕ್ಟರ್ ಅಮಾನತು ಪ್ರಶ್ನೆಯೇ ಇಲ್ಲ’

ಹುಬ್ಬಳ್ಳಿ: ‘1992ರ ಗಲಭೆ ಪ್ರಕರಣದಲ್ಲಿ ಶ್ರೀಕಾಂತ ಪೂಜಾರಿ ಅವರನ್ನು ಬಂಧಿಸಿದ ಶಹರ ಪೊಲೀಸ್ ಠಾಣೆಯ ಇನ್‌ಸ್ಪೆಕ್ಟರ್ ಅವರನ್ನು ಅಮಾನತು ಮಾಡುವ ಪ್ರಶ್ನೆಯೇ ಇಲ್ಲ. ಅಂತಹ ಖಡಕ್ ಅಧಿಕಾರಿಯನ್ನು ಇಲ್ಲಿಯೇ ಉಳಿಸಿಕೊಳ್ಳುತ್ತೇವೆ’ ಎಂದು ಶಾಸಕ ಪ್ರಸಾದ್ ಅಬ್ಬಯ್ಯ ಹೇಳಿದರು.

ನಗರದಲ್ಲಿ ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಹೈಕೋರ್ಟ್ ಆದೇಶದ ಅನುಸಾರ ಸ್ಥಳೀಯ ನ್ಯಾಯಾಲಯದ ಸೂಚನೆಯಂತೆ ದೀರ್ಘಾವಧಿ ಬಾಕಿ ಉಳಿದ ಪ್ರಕರಣ ವಿಲೇವಾರಿ ಮಾಡಲು ಶ್ರೀಕಾಂತ ಪೂಜಾರಿ ಅವರನ್ನು ಬಂಧಿಸಲಾಗಿದೆ. ಇನ್‌ಸ್ಪೆಕ್ಟರ್ ಅವರು ಕಾನೂನಿನಂತೆ ಕೆಲಸ ಮಾಡಿದ್ದಾರೆ’ ಎಂದು ಸ್ಪಷ್ಟಪಡಿಸಿದರು.

‘ಇಂತಹ ಒಟ್ಟು 61 ಪ್ರಕರಣಗಳ ಪೈಕಿ 5 ಪ್ರಕರಣಗಳ ವಿಲೇವಾರಿಗೆ ಕ್ರಮಕೈಗೊಂಡಿದ್ದಾರೆ. ಇದೊಂದೇ ಪ್ರಕರಣವಲ್ಲ. ಈ ಹಿಂದೆ ರೌಡಿಗಳಿಗೆ ಬುದ್ಧಿ ಕಲಿಸಿದ್ದು ಇದೇ ಇನ್‌ಸ್ಪೆಕ್ಟರ್. ಅವರು ಗಣಪತಿ ಆರಾಧನೆ ಮಾಡಿದ ಫೋಟೊಗಳು ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿವೆ. ಹೀಗಿದ್ದೂ, ಬಿಜೆಪಿ ರಾಜಕೀಯಕ್ಕಾಗಿ ಈ ಪ್ರಕರಣವನ್ನು ಬೇರೆ ರೀತಿ ಬಿಂಬಿಸುತ್ತಿದೆ’ ಎಂದು ಟೀಕಿಸಿದರು.

ಸಾವಿತ್ರಿಬಾಯಿ ಫುಲೆ ಜಯಂತ್ಯುತ್ಸವ

‘ಅರಿವಿನ ಬೀಜ ಬಿತ್ತಿದ ಧೀಮಂತೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮನುಸ್ಮೃತಿ ಆಧಾರಿತ ಸಮಾಜ ಉತ್ತುಂಗದಲ್ಲಿದ್ದ ಕಾಲದಲ್ಲಿ ಮಹಿಳೆಯರ ಎದೆಯಲ್ಲಿ ಅಕ್ಷರ ಬೀಜ ಬಿತ್ತಿ ಅರಿವಿನ ಬೆಳೆ ಬೆಳೆದವರು ಸಾವಿತ್ರಿಬಾಯಿ ಫುಲೆ ಅವರು ಎಂದು ಚಿಂತಕಿ ಲೀಲಾ ಸಂಪಿಗೆ ಹೇಳಿದರು.

ರಾಜ್ಯ ಸರ್ಕಾರಿ ಎಸ್‌ಸಿ, ಎಸ್‌ಟಿ ನೌಕರರ ಸಮನ್ವಯ ಸಮಿತಿ ವತಿಯಿಂದ ನಗರದಲ್ಲಿ ಬುಧವಾರ ಹಮ್ಮಿಕೊಂಡಿದ್ದ ಸಾವಿತ್ರಿಬಾಯಿ ಫುಲೆ ಜಯಂತ್ಯುತ್ಸವ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಬಾಲ್ಯವಿವಾಹ, ಸತಿ ಪದ್ಧತಿ, ಅಸ್ಪೃಶ್ಯರು ಉಗುಳಲು ಗೆರಟೆ, ಹೆಜ್ಜೆ ಅಳಿಸಿ ಹಾಕಲು ಪೊರಕೆ ಕಟ್ಟಿಕೊಂಡು ಮಧ್ಯಾಹ್ನ ಮಾತ್ರ ಬರಬೇಕಿದ್ದ, ಶ್ರೇಣೀಕೃತ ವ್ಯವಸ್ಥೆಯಲ್ಲಿ ಕೆಳ ಜಾತಿಯ ಹೆಣ್ಣು ಮಕ್ಕಳು ಎದೆಗೆ ಬಟ್ಟೆ ಹಾಕಿಕೊಳ್ಳಲೂ ಸ್ತನತೆರಿಗೆ ಕಟ್ಟಬೇಕಾಗಿದ್ದ ಕಾಲಘಟ್ಟದಲ್ಲಿ ಬೆಳಕಾಗಿ ಬಂದವರು ಸಾವಿತ್ರಿ ಬಾಯಿ. ಅವರಿಗೆ ಸರಿಯಾದ ಸಾಂಗತ್ಯ ನೀಡಿದವರು ಜ್ಯೋತಿಬಾ ಫುಲೆ ಎಂದರು.

ಈಗ ಶೇ 63ರಷ್ಟು ಹೆಣ್ಣುಮಕ್ಕಳು ವಿದ್ಯಾಭ್ಯಾಸ ಹೊಂದಿದ್ದಾರೆ. ಆದರೆ, ಅತ್ಯಾಚಾರ, ಶೋಷಣೆ, ಹೆಣ್ಣುಭ್ರೂಣಹತ್ಯೆ ಅವ್ಯಾಹತವಾಗಿ ಮುಂದುವರಿದಿದೆ. ಲಿಂಗಾನುಪಾತದ ಅಸಮಾನತೆ ಹೆಚ್ಚಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಸಾವಿತ್ರಿಬಾಯಿ ಫುಲೆ ಜಯಂತಿ ಪ್ರಯುಕ್ತ ಕೆ. ಮಹದೇವಯ್ಯ, ಮಹೇಶ್ ಕುಮಾರ್ ಕೆ.ಪಿ., ಎನ್. ಸುಮಿತ್ರಾ ದೇವಿ, ಅಮೃತಾ, ಹೇಮಲತಾ, ಮೆಹನಾಜ್ ಎಂ.ಐ. ಅವರನ್ನು ಸನ್ಮಾನಿಸಲಾಯಿತು. ಕರ್ನಾಟಕ ರಾಜ್ಯ ಸರ್ಕಾರಿ ಎಸ್.ಸಿ.,ಎಸ್‌ಟಿ ನೌಕರರ ಸಮನ್ವಯ ಸಮಿತಿ ಅಧ್ಯಕ್ಷ ಡಿ. ಶಿವಶಂಕರ್, ಚಿಂತಕಿ ಲೀಲಾ ಸಂಪಿಗೆ , ಸಿದ್ದಲಿಂಗಯ್ಯ ಸ್ಮಾರಕ ಪ್ರತಿಷ್ಠಾನದ ಅಧ್ಯಕ್ಷೆ ಮಾನಸ ಸಿದ್ಧಲಿಂಗಯ್ಯ, ಕೃಷಿ ಇಲಾಖೆ ಜಂಟಿ ನಿರ್ದೇಶಕಿ ಜಾವೇದ ನಸೀಮ ಖಾನಂ ಭಾಗವಹಿಸಿದ್ದರು –ಪ್ರಜಾವಾಣಿ ಚಿತ್ರ

ಅಂಬೇಡ್ಕರ್ ಅವರು ನೀಡಿದ ಸಂವಿಧಾನದಿಂದ ಇಂದು ಕೆಲವು ಹಕ್ಕುಗಳು ಮಹಿಳೆಯರು ಮತ್ತು ದಲಿತರಿಗೆ ಸಿಕ್ಕಿದೆ. ಸಂವಿಧಾನವನ್ನೇ ಬದಲಾಯಿಸಿ ಮತ್ತೆ ಮನುಸ್ಮೃತಿ ಆಡಳಿತ ತರಲು ಪ್ರಯತ್ನಿಸಲಾಗುತ್ತಿದೆ ಎಂದರು.

ಎಸ್‌ಸಿ, ಎಸ್‌ಟಿ ನೌಕರರ ಸಮನ್ವಯ ಸಮಿತಿ ಅಧ್ಯಕ್ಷ ಡಿ. ಶಿವಶಂಕರ್ ಅಧ್ಯಕ್ಷತೆ ವಹಿಸಿದ್ದರು. ಕೃಷಿ ಇಲಾಖೆ ಜಂಟಿ ನಿರ್ದೇಶಕಿ ಜಾವೇದ ನಸೀಮ ಖಾನಂ, ಬಿಬಿಎಂಪಿ ಜಂಟಿ ಆಯುಕ್ತೆ ಲಕ್ಷ್ಮೀದೇವಿ, ಸಿದ್ದಲಿಂಗಯ್ಯ ಸ್ಮಾರಕ ಪ್ರತಿಷ್ಠಾನದ ಅಧ್ಯಕ್ಷೆ ಮಾನಸ ಸಿದ್ಧಲಿಂಗಯ್ಯ ಭಾಗವಹಿಸಿದ್ದರು.

ಬಿಬಿಎಂಪಿ ಪ್ರೌಢಶಾಲೆ ಮುಖ್ಯೋಪಾಧ್ಯಾಯರಾದ ಮೆಹನಾಜ್ ಎಂ.ಇ., ಅತಿಥಿ ಉಪನ್ಯಾಸಕರ ಸಂಘಟನೆಯ ಹೋರಾಟಗಾರ್ತಿ ಹೇಮಲತಾ, ವಾಣಿವಿಲಾಸ ಆಸ್ಪತ್ರೆಯ ಶುಶ್ರೂಷಕ ಅಧೀಕ್ಷಕಿ ಎನ್. ಸುಮಿತ್ರಾದೇವಿ, ಕರ್ನಾಟಕ ಸಚಿವಾಲಯದ ಆಂತರಿಕ ಲೆಕ್ಕ ಪರಿಶೋಧಕಿ ಅಮೃತಾ, ಬಿಬಿಎಂಪಿ ಬಾಲಕಿಯರ ಪದವಿಪೂರ್ವ ಕಾಲೇಜು ಪ್ರಾಂಶುಪಾಲ ಮಹೇಶ್ ಕುಮಾರ್, ಲೇಖಕ ಕೆ. ಮಹೇಶ್‌ಕುಮಾರ್ ಅವರನ್ನು ಸನ್ಮಾನಿಸಲಾಯಿತು.

ಪಾರ್ಟಿಗೆ ಟಿಕೆಟ್ ಕೊಡಿಸುವ ನೆಪದಲ್ಲಿ ವಂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಹೊಸ ವರ್ಷದ ಪಾರ್ಟಿಗೆ ಸ್ಟಾರ್ ಹೋಟೆಲ್‌ನಲ್ಲಿ ರಿಯಾಯಿತಿ ದರದಲ್ಲಿ ಟಿಕೆಟ್ ಕೊಡಿಸುತ್ತೇನೆ’ ಎಂದು ಹೇಳಿ, ವ್ಯಕ್ತಿಯೊಬ್ಬ ಮಹಿಳೆಯಿಂದ ಹಣ ಪಡೆದು ವಂಚಿಸಿದ್ದಾನೆ.

ಈ ಸಂಬಂಧ ಕಬ್ಬನ್‌ಪಾರ್ಕ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಹೇಮಮಾಲಿನಿ ಎಂಬುವರು ದೂರು ನೀಡಿದ್ದಾರೆ.

ಹೊಸ ವರ್ಷಕ್ಕೆ ಸ್ಟಾರ್ ಹೋಟೆಲ್‌ನಲ್ಲಿ ಪಾರ್ಟಿ ನಡೆಸಲು 10 ಟಿಕೆಟ್ ಕೊಡಿಸುವಂತೆ ತಮಗೆ ಪರಿಯಚವಿದ್ದ ಸುರೇಂದ್ರ ಕುಮಾರ್ ಎಂಬುವರಿಗೆ ಕರೆ ಮಾಡಿ ತಿಳಿಸಿದ್ದರು. ಆಗ ಆರೋಪಿ, ಕಬ್ಬನ್ ಪಾರ್ಕ್ ಬಳಿಯ ಹೋಟೆಲ್‌ನಲ್ಲೇ ರಿಯಾಯಿತಿ ದರದಲ್ಲಿ ಟಿಕೆಟ್ ಕೊಡಿಸುತ್ತೇನೆಂದು ಆನ್‌ಲೈನ್ ಮೂಲಕ ₹20 ಸಾವಿರ ಹಣ ಪಡೆದುಕೊಂಡಿದ್ದ. ಬಳಿಕ ಹೇಮಮಾಲಿನಿ, ಆರೋಪಿ ಸೂಚಿಸಿದ್ದ ಹೋಟೆಲ್‌ಗೆ ಡಿ.31ರಂದು ರಾತ್ರಿ ಹೋಗಿ, ಸುರೇಂದ್ರ ಕುಮಾರ್ ಹೆಸರು ಹೇಳಿದ್ದಾರೆ. ಆದರೆ, ಹೋಟೆಲ್ ಸಿಬ್ಬಂದಿ ಆ ಹೆಸರಿನ ವ್ಯಕ್ತಿ ಪರಿಚಯವಿಲ್ಲ ಎಂದು ಹೇಳಿದ್ದಾರೆ. ಯಾವುದೇ ಟಿಕೆಟ್ ಸಹ ಬುಕ್ ಮಾಡಿಲ್ಲವೆಂದು ಹೇಳಿ ಕಳುಹಿಸಿದ್ದಾರೆ ಎಂದು ಪೊಲೀಸರು ಹೇಳಿದರು.

ವಿಶ್ವ ಬ್ರೈಲ್ ದಿನಾಚರಣೆಯಲ್ಲಿ ನಟ ಶ್ರೀನಾಥ್ ಅಭಿಮತ ● ಸನ್ಮಾನ, ಪ್ರತಿಭಾ ಪುರಸ್ಕಾರ

‘ಕಣ್ಣು ಕಾಣದಿದ್ದರೂ ಹೃದಯವಂತರು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ದೃಷ್ಟಿಯಿಲ್ಲದೇ ಇದ್ದರೂ ಹೃದಯದಿಂದ ನೋಡುವ ಹೃದಯವಂತರು ನೀವು’ ಎಂದು ನಟ ಶ್ರೀನಾಥ್ ಹೇಳಿದರು.

ನ್ಯಾಷನಲ್ ಫೆಡರೇಷನ್ ಆಫ್ ದಿ ಬ್ಲೈಂಡ್ ನಗರದಲ್ಲಿ ಗುರುವಾರ ಹಮ್ಮಿಕೊಂಡಿದ್ದ ವಿಶ್ವ ಬ್ರೈಲ್ ದಿನಾಚರಣೆಯಲ್ಲಿ ಅವರು ಮಾತನಾಡಿದರು.

ಕಣ್ಣಿದ್ದವರೇ ತಮ್ಮ ಸಣ್ಣತನದಿಂದ ಕುರುಡರಾಗಿದ್ದಾರೆ. ಕಣ್ಣು ಕಾಣದೇ ಇದ್ದರೂ ಒಳ್ಳೆಯದರೆಡೆಗೆ ಜೀವನ ದೃಷ್ಟಿ ಇರುವ ನೀವು ಕಣ್ಣಿದ್ದವರಿಗಿಂತ ಮಿಗಿಲು ಎಂದು ಬಣ್ಣಿಸಿದರು.

ನ್ಯಾಷನಲ್ ಫೆಡರೇಷನ್ ಆಫ್ ದಿ ಬ್ಲೈಂಡ್ ಸಂಸ್ಥೆಯ ಚನ್ನವೀರ ಅವರು ಬ್ರೈಲ್ ಲಿಪಿಯ ಬಗ್ಗೆ ಮಾತನಾಡಿ, ‘ಅಪಘಾತದಲ್ಲಿ ಕಣ್ಣು ಕಳೆದುಕೊಂಡ ಫ್ರಾನ್ಸ್ ದೇಶ ಲೂಯಿಸ್ ಬ್ರೈಲ್ ಅವರು ಕತ್ತಲು ಬರಹದಲ್ಲಿ ನಿಪುಣರಾದರು. ಕಣ್ಣಿಲ್ಲದ ಎಲ್ಲರಿಗೂ ಉಪಯೋಗವಾಗುಂತೆ ಲಿಪಿ ಪತ್ತೆ ಹಚ್ಚಿದರು’ ಎಂದು ವಿವರಿಸಿದರು.

ಅಂಧರಾಗಿದ್ದೂ ಐಎಎಸ್ ಮಾಡಿರುವ ಅಜಯ್ ಅರೋರ ಅವರನ್ನು ಕಾರ್ಯಕ್ರಮದಲ್ಲಿ ಗೌರವಿಸಲಾಯಿತು. ಸಾಧಕರಿಗೆ ಸನ್ಮಾನ, ಪ್ರತಿಭಾವಂತರಿಗೆ ಪ್ರತಿಭಾ ಪುರಸ್ಕಾರ ನೀಡಲಾಯಿತು.

ಅಂಗವಿಕಲರ ಕಲ್ಯಾಣ ಇಲಾಖೆಯ ಆಯುಕ್ತ ದಾಸ್ ಸೂರ್ಯವಂಶಿ, ಅಂಗವಿಕಲರು ಮತ್ತು ಹಿರಿಯ ನಾಗರಿಕರ ಅಭಿವೃದ್ಧಿ ನಿರ್ದೇಶನಾಲಯದ ನಿರ್ದೇಶಕ ಸಿದ್ದೇಶ್ವರ್, ಓಂ ಸೇವಾ ಕೇಂದ್ರದ ಸಂಸ್ಥಾಪಕ ಸಿ.ಎನ್. ಕೃಷ್ಣ, ದಕ್ಷಿಣ ಭಾರತ ಸಿನಿಮಾ ಇಂಡಸ್ಟ್ರಿ ಸಂಯೋಜಕ ಎಸ್.ಕೆ. ಅನಂತ, ‘ಆಟೊಮನ್ ಲೀವ್ಸ್’ ಪ್ರಿ ಸ್ಕೂಲ್ ಬ್ರ್ಯಾಂಡ್ ಸಹಸಂಸ್ಥಾಪಕ ಶರತ್ ಕದ್ರಿ, ಪತ್ರಕರ್ತ ಹರಿಪ್ರಸಾದ್, ಎಲ್ ಆ್ಯಂಡ್ ಟಿ ಹಿರಿಯ ಉಪಾಧ್ಯಕ್ಷ ನಿತಿನ್ ಮೆಹ್ತಾ, ನ್ಯಾಷನಲ್ ಫೆಡರೇಷನ್ ಆಫ್ ದಿ ಬ್ಲೈಂಡ್ ಅಧ್ಯಕ್ಷ ನಾಗರಾಜ್ ಎಂ., ಪ್ರಧಾನ ಕಾರ್ಯದರ್ಶಿ ಗೌತಮ್ ಪ್ರಕಾಶ್ ಅಗರ್‌ವಾಲ್, ವ್ಯವಸ್ಥಾಪಕ ಟ್ರಸ್ಟಿ ಶೈನಿ ಪೌಲ್ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ನಗರದಲ್ಲಿ ಗುರುವಾರ ನಡೆದ ವಿಶ್ವ ಬ್ರೈಲ್ ದಿನಾಚರಣೆ ಕಾರ್ಯಕ್ರಮದಲ್ಲಿ ಪಂಜಾಬ್ ಸರ್ಕಾರದ ಸಮಾಜ ಕಲ್ಯಾಣ ಇಲಾಖೆಯ ಹೆಚ್ಚುವರಿ ಕಾರ್ಯದರ್ಶಿ ಅಜಯ್ ಅರೋರಾ ಅವರನ್ನು ಚಿತ್ರ ನಟ ಶ್ರೀನಾಥ್ ಸನ್ಮಾನಿಸಿದರು. ಓಂ ಸೇವಾ ಕೇಂದ್ರದ ವ್ಯವಸ್ಥಾಪಕ ನಿರ್ದೇಶಕ ಸಿ.ಎನ್. ಕೃಷ್ಣ, ನ್ಯಾಷನಲ್ ಫೆಡರೇಷನ್ ಆಫ್ ದ ಬ್ಲೈಂಡ್ ಅಧ್ಯಕ್ಷ ನಾಗರಾಜ ಎಂ, ದಕ್ಷಿಣ ಭಾರತ ಚಲನಚಿತ್ರ ಸಂಯೋಜಕ ಎಸ್.ಕೆ. ಅನಂತ್, ವ್ಯವಸ್ಥಾಪಕ ಟ್ರಸ್ಟಿ ಶೈನಿ ಪೌಲ್ ಉಪಸ್ಥಿತರಿದ್ದರು –ಪ್ರಜಾವಾಣಿ ಚಿತ್ರ

ಹೆಬ್ಬಾಳ ಕೆಂಪಾಪುರದ ಸಿಂಧಿ ಕಾಲೇಜಿನಲ್ಲಿ ಆಯೋಜಿಸಿರುವ ‘ಕ್ರೆಸಿಂಡೋ–2024’ ಅಂತರಕಾಲೇಜು ಸಾಂಸ್ಕೃತಿಕ ಸ್ಪರ್ಧೆಗಳ ಉದ್ಘಾಟನಾ ಸಮಾರಂಭದಲ್ಲಿ ವಿದ್ಯಾರ್ಥಿಗಳು ಸಮೂಹನೃತ್ಯ ಪ್ರಸ್ತುತಪಡಿಸಿದರು

ಅಂತರಕಾಲೇಜು ಸಾಂಸ್ಕೃತಿಕ ಸ್ಪರ್ಧೆ

ಪ್ರಜಾವಾಣಿ ವಾರ್ತೆ

ಯಲಹಂಕ: ಹೆಬ್ಬಾಳ ಕೆಂಪಾಪುರದ ಸಿಂಧಿ ಕಾಲೇಜಿನಲ್ಲಿ ಆಯೋಜಿಸಿರುವ ‘ಕ್ರೆಸಿಂಡೋ–2024’ ಅಂತರಕಾಲೇಜು ಸಾಂಸ್ಕೃತಿಕ ಸ್ಪರ್ಧೆಗಳ ಕಾರ್ಯ ಕ್ರಮಕ್ಕೆ ನಟ ಶ್ರೇಯಸ್ ಮಂಜು ಚಾಲನೆ ನೀಡಿದರು.

ಎಲ್ಲರ ಜೀವನದಲ್ಲಿ ಸಮಸ್ಯೆಗಳು ಇದ್ದೇ ಇರುತ್ತವೆ. ಗೆಲ್ಲಬೇಕೆಂಬ ಹಠ ಇಲ್ಲದೇ ಇದ್ದರೆ ಏನನ್ನೂ ಸಾಧಿಸಲು ಸಾಧ್ಯವಿಲ್ಲ. ಗುರಿ ಇಟ್ಟುಕೊಂಡು, ಬದ್ಧತೆ ಮತ್ತು ಕಠಿಣ ಪರಿಶ್ರಮದಿಂದ ತೊಡಗಿಸಿಕೊಂಡಾಗ ಯಾವುದೇ ಕ್ಷೇತ್ರ ದಲ್ಲಿ ಯಶಸ್ಸು ಪಡೆಯಬಹುದು ಎಂದರು.

ಪ್ರಾಂಶುಪಾಲರಾದ ಡಾ.ಆಶಾ ಎನ್. ಮಾತನಾಡಿ, ‘ಎರಡು ದಿನಗಳ ಸಾಂಸ್ಕೃತಿಕ ಉತ್ಸವದಲ್ಲಿ ನಗರದ 100ಕ್ಕೂ ಹೆಚ್ಚು ಕಾಲೇಜುಗಳ 1000ಕ್ಕೂ ಹೆಚ್ಚು ವಿದ್ಯಾರ್ಥಿಗಳು ಪಾಲ್ಗೊಂಡಿದ್ದಾರೆ. ಸಮೂಹನೃತ್ಯ, ಗಾಯನ, ಫ್ಯಾಶನ್ ಷೋ, ರಂಗೋಲಿ, ಮೆಹಂದಿ, ಟಗ್ ಆಫ್ ವಾರ್, ಟ್ರೆಶರ್ ಹಂಟ್, ಬೀಟ್ ಬಾಕ್ಸಿಂಗ್, ಸ್ಕ್ರಿಪ್ಟೋಗ್ರಫಿ , ಗೇಮಿಂಗ್ ಸೇರಿ 27 ಸ್ಪರ್ಧೆಗಳನ್ನು ಏರ್ಪಡಿಸಲಾಗಿದೆ ಎಂದು ಮಾಹಿತಿ ನೀಡಿದರು.

ಸಿಂಧಿ ಸೇವಾ ಸಮಿತಿಯ ಅಧ್ಯಕ್ಷ ಸಂಜೀವ್ ಆತ್ಮಾರಾಂ, ಸಿಂಧಿ ಕಾಲೇಜಿನ ಅಧ್ಯಕ್ಷ ಆಶಿಶ್ ಅಮರ್‌ಲಾಲ್, ಖಜಾಂಚಿ ಹರೀಶ್ ಈಶ್ವರ್‌ದಾಸ್, ಜಂಟಿ ಕಾರ್ಯದರ್ಶಿ ರೋಹಿತ್ ಆರ್. ಕುಕ್ರೇಜ ಉಪಸ್ಥಿತರಿದ್ದರು.

ತುಮಕೂರು ಬಳಿ ಮತ್ತೊಂದು ವಿಮಾನ ನಿಲ್ದಾಣ

ತುಮಕೂರು: ರಾಜ್ಯದಲ್ಲಿ ಮತ್ತೊಂದು ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ತುಮಕೂರು ಬಳಿ ಎಂಟು ಸಾವಿರ ಎಕರೆ ಜಾಗ ಗುರುತಿಸಲಾಗಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಜಿ. ಪರಮೇಶ್ವರ ಹೇಳಿದ್ದಾರೆ.

ತುಮಕೂರು, ಕೊರಟಗೆರೆ, ಮಧುಗಿರಿ ಹಾಗೂ ಶಿರಾ ತಾಲ್ಲೂಕಿನ ಮಧ್ಯ ಭಾಗದಲ್ಲಿ ಎಂಟು ಸಾವಿರ ಎಕರೆ ಜಮೀನು ಗುರುತಿಸಿ ಕೆಐಎಡಿಬಿಗೆ ಪ್ರಸ್ತಾವ ಸಲ್ಲಿಸಲಾಗಿದೆ. ಕೆಐಎಡಿಬಿ ಮುಂದಿನ ನಿರ್ಧಾರ ಕೈಗೊಳ್ಳಬೇಕಿದೆ. ಹಿಂದಿನ ಸರ್ಕಾರದ ಸಮಯದಲ್ಲೇ ಪ್ರಾಥಮಿಕ ಹಂತದ ಚರ್ಚೆ ನಡೆದಿತ್ತು. ಈಗ ಭೂಮಿ ಗುರುತಿಸುವ ಕೆಲಸ ಮಾಡಲಾಗಿದೆ ಎಂದು ಹೇಳಿದರು.

ದೇವನಹಳ್ಳಿ ಬಳಿ ಇರುವ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಎರಡು ರನ್‌ವೇ ನಿರ್ಮಾಣ ಮಾಡಿದ್ದರೂ ಸಾಲದಾಗಿದೆ. ಜನದಟ್ಟಣೆ, ಒತ್ತಡ ಹೆಚ್ಚಾಗಿದ್ದರಿಂದ ಮತ್ತೊಂದು ವಿಮಾಣ ನಿಲ್ದಾಣ ನಿರ್ಮಿಸುವುದು ಅನಿವಾರ್ಯವಾಗಿದೆ. ಇನ್ನೂ ಪ್ರಾಥಮಿಕ ಹಂತದ ಚಟುವಟಿಕೆ ಗಳಷ್ಟೇ ನಡೆದಿದ್ದು, ಮುಂದಿನ ದಿನಗಳಲ್ಲಿ ಸ್ಪಷ್ಟ ರೂಪ ಸಿಗಲಿದೆ. ಎಲ್ಲಾ ರೀತಿಯಲ್ಲೂ ಚರ್ಚಿಸಿದ ನಂತರ ಒಂದು ನಿರ್ಧಾರಕ್ಕೆ ಬರಲಾಗುವುದು ಎಂದು ಪರಮೇಶ್ವರ ಸ್ಪಷ್ಟಪಡಿಸಿದರು.

ಬೆಂಗಳೂರು ನಗರ ವಿಶ್ವವಿದ್ಯಾನಿಲಯ BENGALURU CITY UNIVERSITY

Office of the Registrar, Central College Campus, Dr. B.R Ambedkar Veedhi, Bengaluru – 560 001.Ph.No.080-22961016 / 22131385, E-mail: registrarbcu@gmail.com

ಇಂಡೆಂಟ್ ಸಂಖ್ಯೆ: BCU/2023-24/IND0006 ದಿನಾಂಕ: 03.01.2024

ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಅಧಿಸೂಚನೆ

ಕಾಮಗಾರಿಯ ಹೆಸರು	Supply installation and commissioning of IT Components and accessories to Digitalization of Library at Bengaluru City University, Central College Campus, Bengaluru.
ಇ.ಎಮ್.ಡಿ	ರೂ. 1,75,000/–
ಪ್ರಶ್ನೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ	18.01.2024 12.30 ಗಂಟೆಗಳವರೆಗೆ
ಪೂರ್ವ ಬಿಡ್ ಸಭೆಯ ದಿನಾಂಕ ಮತ್ತು ಸ್ಥಳ:	19.01.2024, 11.00 ಗಂಟೆಗೆ ಕುಲಸಚಿವರ ಕಛೇರಿ, ಸೆಂಟ್ರಲ್ ಕಾಲೇಜು ಆವರಣ, ಬೆಂಗಳೂರು ನಗರ ವಿಶ್ವವಿದ್ಯಾಲಯ, ಬೆಂಗಳೂರು
ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ	22.01.2024, 16.00 ಗಂಟೆಯವರೆಗೆ
ತಾಂತ್ರಿಕ ಬಿಡ್ ತೆರೆಯುವ ದಿನಾಂಕ	24.01.2024, 16.30 ಗಂಟೆಗೆ

ಸೂಚನೆ: ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರ್ ಪ್ರಕ್ರಿಯೆ ಶುಲ್ಕ ಮತ್ತು ಇ.ಎಮ್.ಡಿ ಮೊತ್ತವನ್ನು ಪಾವತಿಸುವುದು.

ಸಹಿ/–
ಕುಲಸಚಿವರು

ವಾಸಸಂಇ/ವಾ.ಪ್ರ/2870/ಎಸ್‌ಎಸ್‌ಸಿ/2023–24

ಪುರಸಭೆ ಕಾರ್ಯಾಲಯ, ಹುಣಸಮಾರನಹಳ್ಳಿ

ಯಲಹಂಕ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ–562157 ದೂರವಾಣಿ: 080–23901864
ಇ–ಮೇಲ್: itstaff_ulb_hmhalli@gmail.com ವೆಬ್‌ಸೈಟ್: www.hunasamaranahallitown.mrc.gov.in

ಸಂಖ್ಯೆ: ಹು.ಪು/ತಾ.ಶಾ/ಸಿ.ಆರ್/08/2023–24 ದಿನಾಂಕ: 04–01–2024

ಅಲ್ಪಾವಧಿ ಟೆಂಡರ್ ಪ್ರಕಟಣೆ (ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

ಹುಣಸಮಾರನಹಳ್ಳಿ ಪುರಸಭಾ ವ್ಯಾಪ್ತಿಯಲ್ಲಿನ 2023–24 ನೇ ಸಾಲಿನ ಸ್ವಚ್ಛ ಭಾರತ್ ಮಿಷನ್ (ನಗರ) 2.0 ಯೋಜನೆ ಅಡಿ, ಪುರಸಭಾ ನಿಧಿ, 15ನೇ ಹಣಕಾಸು ಮತ್ತು 2022–23, 2023–24ನೇ ಸಾಲಿನ ಎಸ್.ಎಫ್.ಸಿ ಮುಕ್ತನಿಧಿಯಡಿ ಕಾಮಗಾರಿಗಳನ್ನು ಕೈಗೊಳ್ಳಲು ಲೋಕೋಪಯೋಗಿ ಇಲಾಖೆಯ ನೊಂದಾಯಿತ ಅರ್ಹ ದರ್ಜೆ ಗುತ್ತಿಗೆದಾರರು ಹಾಗೂ ನೊಂದಾಯಿತ ಅರ್ಹ ಏಜೆನ್ಸಿದಾರರಿಂದ ಕಾಮಗಾರಿಗಳನ್ನು ನಿರ್ವಹಿಸಲು ಮೊಹರಾದ ಟೆಂಡರ್‌ನ್ನು ಆಹ್ವಾನಿಸಲಾಗಿದೆ.

ಕ್ರಮ. ಸಂ.	ಇಂಡೆಂಟ್ ಸಂಖ್ಯೆ	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ವರ್ಗ	ಯೋಜನೆ
1	DMA/2023-24/BD/Work-Indent 9166/Call-2	20.00	Others	SBM (2.0)
2	DMA/2023-24/BD/Work-Indent 9162/Call-2	15.00	Others	MF
3	DMA/2023-24/BD/WorkIndent11878	12.50	Others	SFC
4	DMA/2023-24/OW /Work-Indent No 6220/Call-3	20.00	Others	MF
5	DMA/2023-24/RD/Work-Indent No 6215/Call-3	15.00	Others	MF
6	DMA/2023-24/OWO/Work-Indent 6223/Call-3	9.90	Others	MF
7	DMA/2023-24/IND 1196	0.735	Others	SFC
8	DMA/2023-24/IND 1197	1.50	Others	MF
9	DMA/2023-24/IND 1195	1.00	Others	SFC

ಟೆಂಡರ್ ಸಲ್ಲಿಸುವ ವಿವರಗಳು:– 1) ಆಕ್ಷೇಪಣೆ/ಮಾಹಿತಿಯನ್ನು ಸಲ್ಲಿಸಲು ದಿನಾಂಕ: **08.01.2024 ಸಂಜೆ 5.00 ಗಂಟೆ ವರೆಗೆ.** 2) ಕಾಮಗಾರಿಗೆ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: **16.01.2024 ಸಂಜೆ 5.00 ಗಂಟೆ ವರೆಗೆ.** (3) ಟೆಂಡರ್ ನ ತಾಂತ್ರಿಕ ಬಿಡ್ನ್ನು ತೆರೆಯುವ ದಿನಾಂಕ: **17.01.2024 ಸಂಜೆ 5.15 ಗಂಟೆಗೆ.** (4) ಆರ್ಥಿಕ ಬಿಡ್ನ್ನು ತೆರೆಯುವ ದಿನಾಂಕ: **19.01.2024 ರಂದು ಬೆಳಿಗ್ಗೆ 11.00 ಗಂಟೆ ನಂತರ.** (5) ಹೆಚ್ಚಿನ ವಿವರಗಳಿಗೆ ಕಛೇರಿಯ ತಾಂತ್ರಿಕ ಶಾಖೆಯನ್ನು ಸಂಪರ್ಕಿಸಿ ತಿಳಿದುಕೊಳ್ಳುವುದು ಮತ್ತು ಯಾವುದೇ ತಿದ್ದುಪಡಿ ಹಾಗೂ ಬದಲಾವಣೆಯಿದ್ದಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://kppp.karnataka.gov.in ಮುಖಾಂತರ ಮಾತ್ರ ತಿಳಿಸಲಾಗುವುದು.

ಸಹಿ/– ಮುಖ್ಯಾಧಿಕಾರಿಗಳು, ಪುರಸಭಾ ಕಾರ್ಯಾಲಯ, ಹುಣಸಮಾರನಹಳ್ಳಿ
ಸಹಿ/– ಆಡಳಿತಾಧಿಕಾರಿಗಳು, ಪುರಸಭಾ ಕಾರ್ಯಾಲಯ, ಹುಣಸಮಾರನಹಳ್ಳಿ

ವಾಸಾಸಂಇ/ವಾಪ್ರ/ಸ್ಕ್ಯಾನ್ /2873/2023–24

ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರ

ಮಹಾನಗರ ಆಯುಕ್ತರ ಕಛೇರಿ, ಬಿ.ಎಂ.ಆರ್.ಡಿ.ಎ., ನಂ.1, ಅಲಿ ಆಸ್ಕರ್ ರಸ್ತೆ, ಬೆಂಗಳೂರು–560 052
ದೂರವಾಣಿ ಸಂಖ್ಯೆ: 080–22263479

ಸಂಖ್ಯೆ: STRRPA/TP/ಭೂ.ಪ/54/2023-24 ದಿನಾಂಕ: 04.01.2024

ಪ್ರಕಟಣೆ

ಉಪನಗರ ವರ್ತುಲ ರಸ್ತೆ ಸ್ಥಳೀಯ ಯೋಜನಾ ಪ್ರದೇಶದಲ್ಲಿ ಈ ಕೆಳಕಂಡ ಅರ್ಜಿದಾರರು ಪ್ರಸ್ತಾಪಿತ ಪ್ರದೇಶದಲ್ಲಿ **ಶೈಕ್ಷಣಿಕ** ಉದ್ದೇಶಕ್ಕೆ ಭೂಪರಿವರ್ತನೆ ಮಾಡಲು ಅಭಿಪ್ರಾಯ ಕೋರಿರುತ್ತಾರೆ. ಸದರಿ ಜಮೀನು ಅನುಮೋದಿತ ಮಹಾಯೋಜನೆ ನಕ್ಷೆಯಂತೆ ಕೃಷಿ ವಲಯದಲ್ಲಿದ್ದು, ವಲಯ ನಿಯಮಾವಳಿಗಳಂತೆ ಕೃಷಿ ವಲಯದಲ್ಲಿ ವಿಶೇಷ ಸಂದರ್ಭದಲ್ಲಿ ಶೈಕ್ಷಣಿಕ ಉದ್ದೇಶಕ್ಕೆ ಅನುಮತಿ ನೀಡಲು ಅವಕಾಶ ಇದ್ದು, ವಿವರಗಳನ್ನು ಈ ಕೆಳಕಂಡಂತೆ ನೀಡಲಾಗಿದೆ.

ಕ್ರ. ಸಂ.	ಅರ್ಜಿದಾರರ ಹೆಸರು ಮತ್ತು ವಿಳಾಸ	ತಾಲ್ಲೂಕು, ಹೋಬಳಿ, ಗ್ರಾಮ	ಸ.ನಂ.	ವಿಸ್ತೀರ್ಣ ಎ–ಗು	ಅನುಮೋದಿತ ಮಹಾ ಯೋಜನೆಯಂತೆ ಭೂಉಪಯೋಗ	ಬದಲಾವಣೆ ಕೋರಿರುವ ಭೂಉಪಯೋಗ
1	ಶ್ರೀ ಟಿ.ಎನ್.ಚಂದ್ರಶೇಖರ್‌ಗೌಡ ಬಿನ್ ಲೇಟ್ ಎಂ.ನಾರಾಯಣಗೌಡ, ನಂ.45, ಥಣಿಸಂದ್ರ ಗ್ರಾಮ, ಕೆ.ಆರ್.ಪುರಂ ಹೋಬಳಿ, ಬೆಂಗಳೂರು–560077	ದೇವನಹಳ್ಳಿ ತಾಲ್ಲೂಕು, ಕಸಬಾ ಹೋಬಳಿ, ಬೂದಿಹಾಳ	14/4	0–35	ವ್ಯವಸಾಯ	ಶೈಕ್ಷಣಿಕ
			14/3	2–00		
			16/9	0–14		
			16/8	0–07		
			17/10	0–12		
			17/9	0–22		

ಸದರಿ ಪ್ರಸ್ತಾವನೆಯ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದಲ್ಲಿ ಈ ಪ್ರಕಟಣೆ ದಿನಾಂಕದಿಂದ ಹದಿನೈದು ದಿನದೊಳಗಾಗಿ ಲಿಖಿತವಾಗಿ ಈ ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ಅವಧಿ ಮುಗಿದ ನಂತರ ಸಲ್ಲಿಸುವ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಸಹಿ/–
ಸದಸ್ಯ ಕಾರ್ಯದರ್ಶಿಗಳು ಹಾಗೂ ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು,
ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರ, ಬೆಂಗಳೂರು.

ವಾಸಾಸಂಇ/ವಾಪ್ರ/ಸ್ಕ್ಯಾನ್/2862/2023–24

ಭಾರತ ಸರ್ಕಾರ ಬಾಹ್ಯಾಕಾಶ ಇಲಾಖೆ
ಮಾನವ ಬಾಹ್ಯಾಕಾಶ ಹಾರಾಟ ಕೇಂದ್ರ, (ಹೆಚ್‌ಎಸ್‌ಎಫ್‌ಸಿ)

ನಿರ್ಮಾಣ ಮತ್ತು ನಿರ್ವಹಣೆ ಸಮೂಹ (ಸಿಎಂಜಿ), ಅಂತರಿಕ್ಷ ಭವನ,
ಬೆಂಗಳೂರು – 560 094. ದೂ: (080) 22172614/2613

ಇ–ಟೆಂಡರ್ ಪ್ರಕಟಣೆ

ಭಾರತದ ರಾಷ್ಟ್ರಪತಿಯವರ ಪರವಾಗಿ ಕೆಳಕಂಡ ಕಾಮಗಾರಿಗಳಿಗಾಗಿ ಇ–ಟೆಂಡರಿಂಗ್ ಮೂಲಕ ಆನ್‌ಲೈನ್ ಐಟಂ ದರದ ಟೆಂಡರುಗಳನ್ನು ಆಹ್ವಾನಿಸಲಾಗಿದೆ.

ಕಾಮಗಾರಿ ಹೆಸರು ಮತ್ತು ಎನ್‌ಐಟಿ ಸಂ.	ದೇವನಹಳ್ಳಿ, ಹೆಚ್‌ಎಸ್‌ಎಫ್‌ಸಿ, ಬೆಂಗಳೂರು ಇಲ್ಲಿರುವ ಇಸಿಎಲ್‌ಎಸ್‌ಎಸ್ ಫೆಸಿಲಿಟಿಗೆ ಫಿಟ್ಟಿಂಗ್ ಶಾಪ್ ನಿರ್ಮಾಣ (ಸಿವಿಲ್ ಕಾಮಗಾರಿ) ಹೆಚ್‌ಎಸ್‌ಎಫ್‌ಸಿ/ಸಿಎಂಜಿ/ಎಂಎಂ/ಸಿ/94/ 2023–24 ದಿನಾಂಕ: 04.01.2024
ಟೆಂಡರಿಗಿಟ್ಟಿರುವ ಅಂದಾಜು ಮೊತ್ತ	ರೂ.19.16 ಲಕ್ಷಗಳು
ಪೂರ್ಣಗೊಳಿಸುವ ಅವಧಿ	03 ತಿಂಗಳು
ಟೆಂಡರ್ ದಸ್ತಾವೇಜುಗಳನ್ನು ಡೌನ್ ಲೋಡ್ ಮಾಡಿಕೊಳ್ಳುವ ಅವಧಿ	05.01.2024 ರಂದು 11.00 ಗಂಟೆಯಿಂದ 16.01.2024 ರಂದು 23.30 ಗಂಟೆವರೆಗೆ
ಟೆಂಡರ್ ಸಲ್ಲಿಸುವ ಕಡೆಯ ದಿನಾಂಕ ಮತ್ತು ಸಮಯ	19.01.2024 ರಂದು 11.00 ಗಂಟೆ ವರೆಗೆ
ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ	19.01.2024 ರಂದು 11.30 ಗಂಟೆಗೆ
ಇಎಂಡಿ ಮೊತ್ತ	ರೂ. 38,320/-

ಟೆಂಡರ್ ವಿಜಾರ್ಡ್‌ನಲ್ಲಿ ನೋಂದಣಿ ಮಾಡಿಸಿ ಮತ್ತು ಟೆಂಡರ್ ಪ್ರಕ್ರಿಯಾ ಶುಲ್ಕ ಪಾವತಿ ಮಾಡಿ ಟೆಂಡರ್ ದಸ್ತಾವೇಜುಗಳನ್ನು ವೆಬ್‌ಸೈಟ್ www.tenderwizard.com/ISRO ಇಲ್ಲಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ವೆಂಡರ್ ನೋಂದಣಿಯ ಕ್ರಮಾವಳಿಗಳನ್ನು ಮೇಲೆ ತಿಳಿಸಿರುವ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ.

ಆಸಕ್ತಿಯುಳ್ಳ ಟೆಂಡರುದಾರರು ವೆಬ್‌ಸೈಟ್ www.isro.gov.in ಇಲ್ಲಿ ವಿವರವಾದ ಟೆಂಡರ್ ಆಹ್ವಾನ ಪ್ರಕಟಣೆಯನ್ನು (ಎನ್‌ಐಟಿ) ಪರಿವೀಕ್ಷಿಸಬಹುದು ಮತ್ತು ಹೆಚ್ಚಿನ ವಿವರಗಳಿಗಾಗಿ ಮತ್ತು ಟೆಂಡರ್ ದಸ್ತಾವೇಜುಗಳ ಖರೀದಿಗಾಗಿ www.tenderwizard.com/ISRO ಇಲ್ಲಿಗೆ ಭೇಟಿನೀಡಿ.

ಸಹಿ/- ಮುಖ್ಯಸ್ಥರು, ಸಿಎಂಡಿ, ಸಿಎಂಜಿ, ಹೆಚ್‌ಎಸ್‌ಎಫ್‌ಸಿ

ನಗರಸಭೆ ಕಾರ್ಯಾಲಯ, ನೆಲಮಂಗಲ

ಬೆಂಗಳೂರು ಗ್ರಾಮಾಂತರ ಜಿಲ್ಲೆ–562123

ಸಂಖ್ಯೆ: ನಸನೆ/ತಾಂತ್ರಿಕ(ವಿ)/ಟೆಂಡರ್/89/2023–24 ದಿನಾಂಕ: 03.01.2024

ಟೆಂಡರ್ ಪ್ರಕಟಣೆ (ಕೆಪಿಪಿಪಿ ಪೋರ್ಟಲ್ ಮೂಲಕ ಮಾತ್ರ)
(ಸ್ಟಾಂಡರ್ಡ್ ಡಾಕ್ಯುಮೆಂಟ್ KW 1&2ರ ನಿಬಂಧನೆಗಳಂತೆ ಅರ್ಜಿ ಆಹ್ವಾನಿಸಲಾಗಿದೆ)

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, 2023–24ನೇ ಸಾಲಿನ 15ನೇ ಹಣಕಾಸು ಮೂಲ ಅನುದಾನದಡಿ, 2021–22ನೇ ಸಾಲಿನ 15ನೇ ಹಣಕಾಸು Millian Plus City (BBMP) ಯೋಜನೆಯ, 2023–24ನೇ ಸಾಲಿನ ನಗರಸಭೆ ನಿಧಿಯಡಿ ಬೀದಿ ನಾಯಿಗಳ ಸಂತಾನ ಹರಣ ಚಿಕಿತ್ಸೆ (ABC) ಮಾಡಿಸುವ ಬಗ್ಗೆ ಹಾಗೂ 2023–24ನೇ ಸಾಲಿನ ನಗರಸಭೆ ನಿಧಿಯಡಿ ವಿವಿಧ ಕಾಮಗಾರಿಗಳನ್ನು ಕೈಗೊಳ್ಳಲು ಹಾಗೂ ಮರು ಟೆಂಟರ್ ಕಾಮಗಾರಿಗಳನ್ನು ಕೈಗೊಳ್ಳಲು ಒಟ್ಟು ಮೊತ್ತ **ರೂ.782.18 ಲಕ್ಷಗಳ** ಕೈಗೊಳ್ಳುವ ಕಾಮಗಾರಿಗಳ ಐಟಾಂವಾರು ಮತ್ತು ಕೆಪಿಪಿಪಿ ಪೋರ್ಟಲ್‌ನ ಏಕ ಲಕೋಟೆ ಪದ್ಧತಿಯಲ್ಲಿ ಕಾಮಗಾರಿಗಳಿಗೆ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿಸಲ್ಪಟ್ಟ ಅರ್ಹ ಗುತ್ತಿಗೆದಾರರಿಂದ ಟೆಂಡರ್ ಆಹ್ವಾನಿಸಲಾಗಿದೆ. ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್: https://kppp.karnataka.gov.in ಮೂಲಕ ಟೆಂಡರ್ ಸಲ್ಲಿಸುವುದು.
ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : (As per KPPP Portal ಘಂಟೆಯವರೆಗೆ) ಟೆಂಡರ್ ತೆರೆಯುವ ದಿನಾಂಕ : (As per KPPP Portal) ಹೆಚ್ಚಿನ ವಿವರಗಳಿಗಾಗಿ ನಗರಸಭೆಯ ತಾಂತ್ರಿಕ ಶಾಖೆಯನ್ನು ಸಂಪರ್ಕಿಸುವುದು.

ಸಹಿ/– ಶ್ರೀಮತಿ ಲತಾ ಹೇಮಂತ್‌ಕುಮಾರ್, ಮಾನ್ಯ ಅಧ್ಯಕ್ಷರು, ನಗರಸಭೆ, ನೆಲಮಂಗಲ
ಸಹಿ/– ಶ್ರೀಮತಿ ಸುಜಾತ ಮುನಿಯಪ್ಪ, ಮಾನ್ಯ ಉಪಾಧ್ಯಕ್ಷರು, ನಗರಸಭೆ, ನೆಲಮಂಗಲ
ಸಹಿ/– ಶ್ರೀ ಪ್ರದೀಪ್ ಸಿ, ಮಾನ್ಯ ಸ್ಥಾಯಿ ಸಮಿತಿಅಧ್ಯಕ್ಷರು, ನಗರಸಭೆ, ನೆಲಮಂಗಲ
ಸಹಿ/– ಶ್ರೀ ಮನುಕುಮಾರ್ ಹೆಚ್ ಎಂ(ಕೆ.ಎಂ.ಎ.ಎಸ್), ಪೌರಾಯುಕ್ತರು, ನಗರಸಭೆ, ನೆಲಮಂಗಲ

ವಾಸಾಸಂಇ/ವಾ.ಪ್ರ/2850/ಶಿರಡಿ ಸಾಯಿ/2023–24

ಸಾರ್ವಜನಿಕ ಪ್ರಕಟಣೆ

ಉನ್ನತ ಮಟ್ಟದ ಸಮಿತಿ–ಒಂದು ದೇಶ, ಒಂದು ಚುನಾವಣೆ

ದೇಶಾದ್ಯಂತ ನಿರಂತರ ಚುನಾವಣೆಗಳ ಸಶಕ್ತಿಕರಣಕ್ಕಾಗಿ ಪ್ರಸ್ತುತ ಅಸ್ತಿತ್ವದಲ್ಲಿರುವ ಕಾನೂನು ಆಡಳಿತ ಕಾರ್ಯ ಚೌಕಟ್ಟಿನಲ್ಲಿ ಸೂಕ್ತ ಬದಲಾವಣೆಗಳನ್ನು ಮಾಡಲು ಸಾಮಾನ್ಯ ಸಾರ್ವಜನಿಕ ಸದಸ್ಯರಿಂದ ಸಲಹೆಗಳನ್ನು ಆಹ್ವಾನಿಸಿ ಪ್ರಕಟಣೆ

ಭಾರತ ಸರ್ಕಾರವು ದಿನಾಂಕ **ಸೆಪ್ಟಂಬರ್ 2, 2023ರ** ಗೆಜೆಟ್ ನೋಟಿಫಿಕೇಶನ್ ನಂ. 211ರ (https://onoe.gov.in/onoe-gazette-notification) ಮುಖೇನ ಒಂದು ದೇಶ, ಒಂದು ಚುನಾವಣೆ – ಉನ್ನತ ಮಟ್ಟದ ಸಮಿತಿ ರೂಪಿಸಿದೆ. ಉಲ್ಲೇಖದ ನಿಬಂಧನೆಗಳ ಪ್ರಕಾರ, ಸದರಿ ಸಮಿತಿಯು ಒಂದು ಶಾಶ್ವತ ಆಧಾರದಲ್ಲಿ ನಿರಂತರ ಚುನಾವಣೆಗಳನ್ನು ನಡೆಸುವುದಕ್ಕಾಗಿ ಒಂದು ಸೂಕ್ತ ಕಾನೂನಾತ್ಮಕ ಹಾಗೂ ಆಡಳಿತಾತ್ಮಕ ಕಾರ್ಯ ಚೌಕಟ್ಟು ರೂಪಿಸಲು, ಸಂವಿಧಾನಕ್ಕೆ ಅಗತ್ಯ ತಿದ್ದುಪಡಿಗಳನ್ನು ಗುರುತಿಸಲು ಮತ್ತು ಸಂಬಂಧಿತ ಚುನಾವಣಾ ಕಾನೂನುಗಳ, ಕಾಮನ್ ಇಲೆಕ್ಟೊರಲ್ ರೋಲ್‌ಗಳ, ಎವಿಎಂ/ ವಿವಿಪ್ಯಾಟ್ ಮುಂತಾದ ಲಾಜಿಸ್ಟಿಕ್‌ಗಳ ತಯಾರಿಗಾಗಿ ಅಗತ್ಯ ಶಿಫಾರಸ್ಸುಗಳನ್ನು ನೀಡಬೇಕಾಗುತ್ತದೆ.

ಸಮಿತಿಯ ಉಲ್ಲೇಖ ನಿಬಂಧನೆಗಳ ವಿವರ ಮತ್ತು ಪರಿಣಿತ ಅಂಗಗಳ ವರದಿಗಳನ್ನು https://onoe.gov.in/onoe-reports ವೆಬ್‌ಸೈಟ್‌ನಲ್ಲಿ ಪರಿಶೀಲಿಸಬಹುದು. ದೇಶಾದ್ಯಂತ ನಿರಂತರ ಚುನಾವಣೆಗಳನ್ನು ಸಶಕ್ತಗೊಳಿಸಲು ಪ್ರಸ್ತುತ ಅಸ್ತಿತ್ವದಲ್ಲಿರುವ ಕಾನೂನು ಆಡಳಿತಾತ್ಮಕ ಕಾರ್ಯ ಚೌಕಟ್ಟಿಗೆ ಸೂಕ್ತ ಬದಲಾವಣೆಗಳನ್ನು ತರುವುದಕ್ಕಾಗಿ ಸಾಮಾನ್ಯ ಸಾರ್ವಜನಿಕ ಸದಸ್ಯರಿಂದ ಲಿಖಿತ ರೂಪದಲ್ಲಿ ಸಲಹೆಗಳನ್ನು ಆಹ್ವಾನಿಸಲಾಗಿದೆ. **ಜನವರಿ 15, 2024** ರೊಳಗೆ ಸಲ್ಲಿಕೆಯಾಗುವ ಎಲ್ಲಾ ಸಲಹೆಗಳನ್ನು ಸಮಿತಿಯ ಪರಿಗಣನೆಗಾಗಿ, ಸಮಿತಿಯ ಎದುರು ಮಂಡಿಸಲಾಗುತ್ತದೆ. ಸಲಹೆಗಳನ್ನು https://onoe.gov.in ಇಲ್ಲಿ ಪ್ರಕಟಿಸಬಹುದು ಅಥವಾ sc-hlc@gov.in ವಿಳಾಸಕ್ಕೆ ಇಮೇಲ್ ಮಾಡಬಹುದು ಅಥವಾ ಕೆಳಗಿನ ವಿಳಾಸಕ್ಕೆ ಅಂಚೆ ಮೂಲಕ ರವಾನಿಸಬಹುದು.

ಕಾರ್ಯದರ್ಶಿ
ಉನ್ನತ ಮಟ್ಟದ ಸಮಿತಿ – ಒಂದು ದೇಶ, ಒಂದು ಚುನಾವಣೆ
ಜೋಧಪುರ ಆಫೀಸರ್ಸ್ ಹಾಸ್ಟೆಲ್, (ಬ್ಲಾಕ್ ನಂ. 9)
ನ್ಯಾಷನಲ್ ಗ್ಯಾಲರಿ ಆಫ್ ಮಾಡರ್ನ್ ಆರ್ಟ್ಸ್ ಹತ್ತಿರ
‘ಸಿ’ ಹೆಕ್ಸಾಗಾನ್ (ಇಂಡಿಯಾ ಗೇಟ್ ಸರ್ಕಲ್)
ನವದೆಹಲಿ–110003

CBC 24301/11/0003/2324

ಭಾರತ ಸರ್ಕಾರ ಬಾಹ್ಯಾಕಾಶ ಇಲಾಖೆ
ಮಾನವ ಬಾಹ್ಯಾಕಾಶ ಹಾರಾಟ ಕೇಂದ್ರ, (ಹೆಚ್‌ಎಸ್‌ಎಫ್‌ಸಿ)

ನಿರ್ಮಾಣ ಮತ್ತು ನಿರ್ವಹಣೆ ಸಮೂಹ (ಸಿಎಂಜಿ), ಅಂತರಿಕ್ಷ ಭವನ,
ಬೆಂಗಳೂರು – 560 094. ದೂ: (080) 22172614/2613/5610

ಇ–ಟೆಂಡರ್ ಪ್ರಕಟಣೆ ಸಂ.: ಹೆಚ್‌ಎಸ್‌ಎಫ್‌ಸಿ/ಸಿಎಂಜಿ/2(4)/ಸಿ/99/2023–24 ದಿನಾಂಕ: 04.01.2024

ಸಂಕ್ಷಿಪ್ತ ಇ–ಟೆಂಡರ್ ಆಹ್ವಾನ ಪ್ರಕಟಣೆ

ಭಾರತದ ರಾಷ್ಟ್ರಪತಿಗಳ ಪರವಾಗಿ, ಈ ಕೆಳಕಂಡ ಕಾಮಗಾರಿಗಾಗಿ ಇ–ಟೆಂಡರಿಂಗ್ ಮೂಲಕ ಆನ್‌ಲೈನ್ ಐಟಂ ದರ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಕಾಮಗಾರಿ ಹೆಸರು	ದೇವನಹಳ್ಳಿ, ಹೆಚ್‌ಎಸ್‌ಎಫ್‌ಸಿ, ಬೆಂಗಳೂರು ಇಲ್ಲಿರುವ ಇಸಿಎಲ್‌ಎಸ್‌ಎಸ್ ಫೆಸಿಲಿಟಿಗೆ ಮಳೆ ನೀರು ಚರಂಡಿ ಮತ್ತು ಅಪ್ರೋಚಿಂಗ್ ರೋಡ್‌ಗೆ ಬಿಟುಮಿನಸ್ ಫಿನಿಶಿಂಗ್ ನಿರ್ಮಾಣ. (ಸಿವಿಲ್ ಕಾಮಗಾರಿ)
ಟೆಂಡರಿಗಿಟ್ಟ ಅಂದಾಜು ವೆಚ್ಚ	ರೂ. 68.20 ಲಕ್ಷಗಳು
ಕಾಮಗಾರಿಗೆ ಮಂಜೂರು ನೀಡಿದ 15 ದಿನಗಳಿಂದ ಪೂರ್ಣಗೊಳಿಸುವ ಅವಧಿ	(04) ನಾಲ್ಕು ತಿಂಗಳು
ಟೆಂಡರ್ ದಸ್ತಾವೇಜುಗಳಿಗೆ ಕೋರಿಕೆ ಸಲ್ಲಿಸುವ ಕಾಲಾವಧಿ	05.01.2024, 11:00 ಗಂಟೆಯಿಂದ 16.01.2024, 23:30 ಗಂಟೆಯವರೆಗೆ
ಟೆಂಡರ್ ದಸ್ತಾವೇಜುಗಳನ್ನು ಡೌನ್ ಲೋಡ್ ಮಾಡುವ ಕಾಲಾವಧಿ	05.01.2024, 11:10 ಗಂಟೆಯಿಂದ 16.01.2024, 23:59 ಗಂಟೆಯವರೆಗೆ
ಬಿಡ್ ಸ್ಪಷ್ಟೀಕರಣ	05.01.2024, 11:30 ಗಂಟೆಯಿಂದ 17.01.2024, 10:30 ಗಂಟೆಯವರೆಗೆ
ಬಿಡ್ ಸ್ಪಷ್ಟೀಕರಣಕ್ಕೆ ಪ್ರತ್ಯುತ್ತರ	18.01.2024, 17:00 ಗಂಟೆವರೆಗೆ.
ಟೆಂಡರ್ ಸ್ವೀಕರಿಸಲು ದಿನಾಂಕ ಮತ್ತು ಸಮಯ	19.01.2024, 11:00 ಗಂಟೆವರೆಗೆ.
ಟೆಂಡರುಗಳನ್ನು ತೆರೆಯುವ ಕೊನೆಯ ದಿನಾಂಕ ಮತ್ತು ಸಮಯ (ತಾಂತ್ರಿಕ ಬಿಡ್)	19.01.2024, 11:30 ಗಂಟೆಗೆ
ಇಎಂಡಿ	ರೂ. 1,36,400/–

ಆಸಕ್ತಿಯುಳ್ಳ ಟೆಂಡರ್‌ದಾರರು ಅರ್ಹತಾ ಅಗತ್ಯತೆ ಮತ್ತು ಇತರೆ ವಿವರಗಳಿಗೆ ಇ–ಟೆಂಡರ್ ಪ್ರಕಟಣೆಯನ್ನು ಪರಿವೀಕ್ಷಿಸಿ www.tenderwizard.com/ISRO ರಿಂದ ಡೌನ್‌ಲೋಡ್ ಮಾಡಿಕೊಳ್ಳಿ.

ಸಹಿ/– ಮುಖ್ಯಸ್ಥರು ಸಿಎಂಡಿ, ಸಿಎಂಜಿ, ಹೆಚ್‌ಎಸ್‌ಎಫ್‌ಸಿ

ಪ್ರೆಸ್ಟೀಜ್ ನ್ಯೂ ಇಯರ್ ಬೊನಾಂಜ಼ಾ

ಈ ಹೊಸ ವರ್ಷಕ್ಕೆ ಮನೆಗೆ ತನ್ನಿ ಪ್ರೆಸ್ಟೀಜ್‌ನ ನವೀನ ಉತ್ಪನ್ನಗಳನ್ನು

*ಈ ಆಫರ್ 23 ಡಿಸೆಂಬರ್ 2023ರಿಂದ 28 ಜನವರಿ 2024ರವರೆಗೆ ಲಭ್ಯ.

75 Years of Prestige

ಭಾರತದ ಮೊತ್ತಮೊದಲ ಹೊರಚೆಲ್ಲುವಿಕೆ ನಿಯಂತ್ರಿಸಬಲ್ಲ ಫ್ಲಿಪ್-ಆನ್ ಟ್ರೈ-ಪ್ಲೈ ಪ್ರೆಷರ್ ಕುಕ್ಕರ್



ಲಾಕ್

ಅನ್ಲಾಕ್

ಖರೀದಿಸಿ ಯಾವುದೇ ಫ್ಲಿಪ್-ಆನ್ ಟ್ರೈ-ಪ್ಲೈ ಪ್ರೆಷರ್ ಕುಕ್ಕರ್ (3ಲೀ ಅಥವಾ ಹೆಚ್ಚಿನ ಗಾತ್ರದ್ದು) (1 ಯೂನಿಟ್) ಮತ್ತು ಪಡೆಯಿರಿ ₹2 150.00 ಮೌಲ್ಯದ ಒಮೆಗಾ ಡೀಲಕ್ಸ್ ಗ್ರಾನೈಟ್ ಟ್ವಿನ್ ಪ್ಯಾಕ್ (1 ಸೆಟ್) ಉಚಿತ
(ಕಾನ್‌ಕೇವ್ ತವಾ 25 ಸೆಂಮೀ (1 ಯೂನಿಟ್) ಮತ್ತು ಫ್ರೈ ಪ್ಯಾನ್ 20 ಸೆಂಮೀ (1 ಯೂನಿಟ್)
ಟ್ರೈ-ಪ್ಲೈ ಔಟರ್-ಲಿಡ್ ಮತ್ತು ಇನ್ನರ್-ಲಿಡ್ ಸರಣಿಗಳ (3 ಲೀ ಅಥವಾ ಹೆಚ್ಚಿನ ಗಾತ್ರದ್ದು) ಖರೀದಿಯ ಮೇಲೂ ಈ ಆಫರ್ ಅನ್ವಯ.

ಭಾರತದ ಏಕೈಕ ಆಟೊಮ್ಯಾಟಿಕ್ ವಿಸಿಲ್ ಕೌಂಟರ್ ಇಂಡಕ್ಷನ್ ಕುಕ್‌ಟಾಪ್‌ಗಳನ್ನು ಬಳಸಿ ಚೆನ್ನಾಗಿ ಅಡುಗೆ ಮಾಡಿ

ಖರೀದಿಸಿ ಯಾವುದೇ ವಿಸಿಲ್ ಕೌಂಟರ್ ಸಹಿತ ಇಂಡಕ್ಷನ್ ಕುಕ್‌ಟಾಪ್ (1 ಯೂನಿಟ್) ಮತ್ತು ಪಡೆಯಿರಿ ಪಾಪ್ಯುಲರ್ ಸ್ವಚ್ಛ್ ಸ್ಟೈನ್‌ಲೆಸ್ ಸ್ಟೀಲ್ ಪ್ರೆಷರ್ ಕುಕ್ಕರ್ (5 ಲೀ) (1 ಯೂನಿಟ್)ನ ಎಮ್‌ಆರ್‌ಪಿ ಮೇಲೆ 15% ರಿಯಾಯಿತಿ ಮತ್ತು ₹500.00 ಕಡಿತ

ಕ್ರಾಂತಿಕಾರಕ ಸುಲಭವಾಗಿ ಶುಚಿಗೊಳಿಸಬಲ್ಲ ವಿನ್ಯಾಸ

ಎತ್ತಿ ಸ್ವಚ್ಛ ಮಾಡಿ

ಖರೀದಿಸಿ ಯಾವುದೇ ಸ್ವಚ್ಛ್™ ಗ್ಲಾಸ್ ಟಾಪ್ ಗ್ಯಾಸ್ ಸ್ಟವ್ (1 ಯೂನಿಟ್) ಎಮ್‌ಆರ್‌ಪಿ ಮೇಲೆ ಪಡೆಯಿರಿ 15% ರಿಯಾಯಿತಿ ಜೊತೆಗೆ ₹2 895.00 ಮೌಲ್ಯದ ಎಕ್ಸ್‌ಪ್ರೆಸ್ ಇಂಡಕ್ಷನ್ ಕುಕ್‌ಟಾಪ್ (1 ಯೂನಿಟ್) ಪಡೆಯಿರಿ ಉಚಿತವಾಗಿ

ಆಲ್ ಇನ್ ಒನ್ 14 ಕಾರ್ಯಸಾಧ್ಯತೆಗಳು ಹೊಂದಿರುವ ಮಿಕ್ಸರ್ ಗ್ರೈಂಡರ್

POWERFUL 1000W MOTOR

WARRANTY ON MOTOR 5 YEAR

SILENTLY POWERFUL GRINDING WITH BALL BEARING MOTOR

14 Functionalities

ಖರೀದಿಸಿ ಎಂಡುರಾ ಪ್ರೊ ಮಿಕ್ಸರ್ ಗ್ರೈಂಡರ್ (1 ಯೂನಿಟ್) ಎಮ್‌ಆರ್‌ಪಿ ಮೇಲೆ ಪಡೆಯಿರಿ 25% ರಿಯಾಯಿತಿ ಜೊತೆಗೆ ₹1 795.00 ಮೌಲ್ಯದ ಸ್ಯಾಂಡ್ವಿಚ್ ಮೇಕರ್ (1 ಯೂನಿಟ್) ಪಡೆಯಿರಿ ಉಚಿತವಾಗಿ
ಆಫರ್ ಎಂಡುರಾ 3, 4, 6 ಜಾರ್‌ಗಳ ಮಿಕ್ಸರ್ ಗ್ರೈಂಡರ್ ಮತ್ತು ಡಿಲೈಟ್ ಪ್ರೊ ಮಿಕ್ಸರ್ ಗ್ರೈಂಡರ್‌ಗಳಿಗೂ ಅನ್ವಯ

ಭಾರತದ ಮೊತ್ತಮೊದಲ ಸೇಫ್ ಸೆನ್ಸ್ ಟೆಕ್ನಾಲಜಿ™ ಸಹಿತ ಚಿಮಣಿಯನ್ನು ಪ್ರಸ್ತುತಪಡಿಸುತ್ತಿದ್ದೇವೆ

ಹೊಗೆ ಮತ್ತು ಗ್ಯಾಸ್ ಲೀಕೇಜ್‌ಗಳನ್ನು ಆಟೊಮ್ಯಾಟಿಕ್ ಆಗಿ ಪತ್ತೆಹಚ್ಚುತ್ತದೆ

SafeSense™ technology

Controlled through Mobile App - Prestige Smart Chef App



ಖರೀದಿಸಿ ಆಸ್ಟರ್ ಸೇಫ್‌ಸೆನ್ಸ್ ಚಿಮಣಿ (1 ಯೂನಿಟ್) ಎಮ್‌ಆರ್‌ಪಿ ಮೇಲೆ ಪಡೆಯಿರಿ 30% ರಿಯಾಯಿತಿ ಜೊತೆಗೆ ₹12 395.00 ಮೌಲ್ಯದ ರೊಯಲ್ ಪ್ಲಸ್ ಗ್ಲಾಸ್ ಟಾಪ್ ಗ್ಯಾಸ್ ಸ್ಟವ್ (3B) ಪಡೆಯಿರಿ ಉಚಿತವಾಗಿ

ಒಮೆಗಾ ಡೀಲಕ್ಸ್ ಗ್ರಾನೈಟ್ ಕುಕ್‌ವೇರ್ ಸೆಟ್, ಭಾರತದ ಮೊತ್ತಮೊದಲ 5-ಪದರಗಳ ಡ್ಯೂರಬಲ್ ನಾನ್-ಸ್ಟಿಕ್

ಖರೀದಿಸಿ ಒಮೆಗಾ ಡೀಲಕ್ಸ್ ಗ್ರಾನೈಟ್ 4 ಪೀಸ್ ಕುಕ್‌ವೇರ್ (1 ಸೆಟ್) ಎಮ್‌ಆರ್‌ಪಿ ಮೇಲೆ ಪಡೆಯಿರಿ 20% ರಿಯಾಯಿತಿ ಜೊತೆಗೆ ₹1 780.00 ಮೌಲ್ಯದ ಸ್ವಚ್ಛ್™ ಪಾಪ್ಯುಲರ್ ಪ್ಲಸ್ ಅಲ್ಯುಮಿನಿಯಂ ಪ್ರೆಷರ್ ಕುಕ್ಕರ್ (3ಲೀ) (1 ಯೂನಿಟ್) ಪಡೆಯಿರಿ ಉಚಿತವಾಗಿ

*ಷರತ್ತುಗಳು ಅನ್ವಯಿಸುತ್ತವೆ. ಮೇಲೆ ಸೂಚಿಸಿದ ಬೆಲೆಗಳು ಉತ್ಪನ್ನದ ಎಂ ಆರ್ ಪಿ (ಎಲ್ಲಾ ತೆರಿಗೆಗಳನ್ನು ಒಳಗೊಂಡಂತೆ). ಎಂ ಆರ್ ಪಿ ಮೇಲೆ ಮಾತ್ರ ರಿಯಾಯಿತಿಗಳನ್ನು ನೀಡಲಾಗುತ್ತದೆ. ಯಾವುದೇ ಎರಡು ಕೊಡುಗೆಗಳನ್ನು ಸೇರಿಸಲಾಗದು. ಆಫರ್‌ಗಳು ಆಯ್ದ ಮಾಡೆಲ್‌ಗಳ ಮೇಲೆ, ಆಯ್ದ ಸ್ಟೋರ್‌ಗಳಲ್ಲಿ, ಸ್ಟಾಕ್ ಮುಗಿಯುವವರೆಗೆ ಮಾತ್ರ ಅನ್ವಯ. ಒಮೆಗಾ ಡೀಲಕ್ಸ್ ಗ್ರಾನೈಟ್ 4 ಪೀಸ್ ಕುಕ್‌ವೇರ್ (1 ಸೆಟ್)ನಲ್ಲಿ ಫ್ರೈ ಪ್ಯಾನ್ – 24ಸೆಂಮೀ (1 ಯೂನಿಟ್), ಕಡಾಯಿ – 24 ಸೆಂಮೀ ಗಾಜಿನ ಮುಚ್ಚಳ ಸಹಿತ (1 ಯೂನಿಟ್), ಆಮ್ನಿ ತವಾ – 28 ಸೆಂಮೀ (1 ಯೂನಿಟ್) ಮತ್ತು ಮಿಲ್ಕ್ ಪ್ಯಾನ್ – 16 ಸೆಂಮೀ ಗಾಜಿನ ಮುಚ್ಚಳ ಸಹಿತ (1 ಯೂನಿಟ್) ಸೇರಿವೆ. ಕೊಡುಗೆಗಳು ತಮಿಳುನಾಡು, ಕೇರಳ, ಕರ್ನಾಟಕ ಮತ್ತು ಗೋವಾ ರಾಜ್ಯಗಳಲ್ಲಿ ಮಾತ್ರ ಅನ್ವಯ. ಪ್ರೆಸ್ಟೀಜ್® ಲೋಗೋ ಭಾರತದಲ್ಲಿ ಟಿಟಿಕೆ ಪ್ರೆಸ್ಟೀಜ್ ಲಿಮಿಟೆಡ್‌ಗೆ ನೋಂದಾಯಿತ ಟ್ರೇಡ್ ಮಾರ್ಕ್ ಆಗಿದೆ. ನಿಯಮಗಳು ಮತ್ತು ಷರತ್ತುಗಳನ್ನು ವಿವರವಾಗಿ ತಿಳಿಯಲು ನಿಮ್ಮ ಸಮೀಪದ ಪ್ರೆಸ್ಟೀಜ್ ಎಕ್ಸ್‌ಕ್ಲೂಸಿವ್ / ಡೀಲರ್ ಔಟ್‌ಲೆಟ್‌ಗೆ ಭೇಟಿ ನೀಡಿ ಅಥವಾ ನಮ್ಮ ವೆಬ್‌ಸೈಟ್ https://shop.ttkprestige.com/new-year-offer-tc ಗೆ ಭೇಟಿ ನೀಡಿ.

Prestige®

ತಮ್ಮವರನ್ನು ಪ್ರೀತಿಸುವವರು ಪ್ರೆಸ್ಟೀಜನ್ನು ಹೇಗೆ ನಿರಾಕರಿಸುತ್ತಾರೆ?

CUSTOMER CARE NO 080-6000 4411

Follow 'TTK Prestige' on

PRESTIGE XPERT on WhatsApp 97423 34411

Shop Online on shop.ttkprestige.com

ttk

Prestige® Xclusive

Outer Ring Road- Hennur Coco, Ph: 7204250679; **Tumkur Rd. 8th Mile T.Dasarahalli,** Ph: 9972541116; **Koramangala, Ph:** 9663515616; **Bull Temple Rd, Ph:** 26609012; **Malleswaram, Ph:** 9448282470; **Rt Nagar Main Rd, Ph:** 41698761; **Ganganagar Cbi Rd, Ph:** 43705914; **Wheeler Rd, Ph:** 25803080; **Kattriguppe Circle, Ph:** 40900685; **Vijayanagar, Ph:** 41330034; **Hsr Bda Cmplx, Ph:** 25726991; **Marathahalli, Ph:** 42197088; **Sanjaynagar, Ph:** 41258300 ; **Banaswadi Ring Rd, Ph:** 41634115; **Jayanagar, Ph:** 9845066549; **J.P.Nagar , Ph:** 41122235, **Rajarajeshwaringr, Ph:** 28603540, 9008418800; **Kengeri Stl Town, Ph:** 28485296; **Rajajinagar, Ph:** 41731224; **B.T.M.Layout , Ph:** 40939168; **Sarjapura Rd, Ph:** 42038646; **Konankunte Cross, Ph:** 26860350; **Nagharabhavi Bda Cmplx, Ph:** 9739004750; **Begur, Ph:** 8073408322; **Vidyaranayapura, Ph:** 9845518824; **Wilson Garden, Ph:** 9480010720; **Brookefield, Ph:** 28541555; **Ramamurthynagar, Ph: 08042049545**; **Kr Puram, Ph:** 8861494277; **Cambridge Layout, Ph:** 42074468; **Kaggadaspura, Ph:** 7306666610; **Kammanahalli, Ph:** 41606044; **Whitefield, Ph:** 40907273; **Chandapura, Ph:** 9036190725; **Dommasandra, Ph:** 9611423555; **Hesarghatta Road, Ph:** 28370400; **Uttarahalli, Ph:** 9986879095; **Anjananagr Magadi Rd, Ph:** 23281206; **Kadugodi, Ph:** 8123042234; **Hosur Rd Huskur Gate, Ph:** 9606406009; **Yelahanka Newtown, Ph:** 8668034376; **Jayamahal Ext, Ph:** 41616484; **Mahalakshmi Lyt, Ph:** 23572233; **Jpnagar 7th Phase, Puttenahalli, Ph:** 41465855; **Kumaraswamy Lyt, Ph:** 08026664702; **Chandralyt, Ph:** 9845146418; **Channasandra, Ph:** 9986369569; **Sheshadripuram, Ph:** 8711090976; **Kasturinagar, Ph:** 08049923166; **Attibele, Ph:** 9341221525; **Jigani, Ph:** 8762069852; **Sarjapura Town, Ph:** 9036373175; **Hosa Rd Junction, Ph:** 9845597099; **Mathikere, Ph:** 6366636592; **Basaveshwaranagar, Ph:** 9739591008; **Thalagatapura,Vajarahalli, Ph:** 9964116888; **Hegganahalli, Ph:** 28360289; **Gottigere, Ph:** 8431241099;**Amruthahalli, Ph:** 9141169883; **Ullal, Ph:** 9686646565; **Jayanagar 4th Block East Extension, Ph:** 9945446335; **Nelamangala, Ph:** 9632356627; **Kolar, Ph:** 9738882584; **Channapatna, Ph:** 9686661294; **Madhugiri, Ph:** 9611552805; **Gauribidanur, Ph:** 8317399465; **Gubbi, Ph:** 9035195120, 8095459040; **Banshankari Stage 2, Bda Complex , Ph:** 49890679, 9740677740; **Vijayabank Colony, Bilekahalli, Ph:** 8970366139; **Whitefield, Ph:** 080 4090 7273; **Malur, Ph:** 9845028859; **Kumbalagodu, Ph:** 9845014860; **Devanahalli, Ph:** 9845737576; **Thanisandra, Ph:** 9686340159; **E.City Phase 1, Ph:** 7557000060; **Hulimavu, Ph:** 8904654433; **Singanayakanahalli, Ph:** 9591059156; **Anekal, Ph:** 8660070202; **Tiptur**, Ph: 9164688773; **Ramnagar, Ph:** 9686661294; **Bhyadarahalli, Ph:** 9845982089; **Hennur Bande, Ph:** 9980097982; **Tc Palya Road, Ph:** 9148775224; **Chikkajaala, Ph:** 9036202892; **Mutthanallur, Ph:** 8970736606;

Jayanagar: Sarathy, Ph: 41210047; Vishaals, Ph: 08022447285; Royal Mart, Ph: 8790311104; Anjana Super Stores, Ph: 41301836; Kitchenmart, Ph: 26652885; Aravinda, Ph: 41301989; **Sajjan Rao Circle:** Vardhaman Intl, Ph: 8073383878; **Vv Puram:** Kesariya, Ph: 080-41531515; 41131535; **Bankcolony:** Vardhaman Ind, Ph: 22428300; **Banashankari:** Varada Glass & Crky, Ph: 9980949316; Patel Agn, Ph: 26714285; Patel Kitchen Apl, Ph: 9079061706; Chamundi Ind, Ph: 26712633; **Bilekhalli:** Sree Pooja Ha, Ph:9036919084; **Begur Rd**: Hari Om Appl, Ph: 9916107669; **Bommanahalli:**Sri Durga Ha, Ph: 9900674018; **Chamarjpet:**Vadirajstores, Ph: 41517646; **Hosa Rd:** Maharaja Kw, Ph: 9036400829; **Isro Layout;** Bhumi Kitchen, Ph: 9916830850; **Jp Nagar;**Santripti, Ph: 9986699193; S.R.Appl, Ph: 8618846934; M.K.Ahmed Sm, Ph: 9900108877; **Kanakapura Rd:** Royal Mart, Ph: 28425777; **Padmanabnagar:** Royalmart, Ph: 9886088993; **Uttarahalli:**Royalmart, Ph: 26394114; Rme Super Market, Ph: 9964228208; **Mysore Road:** The Karnataka Metal Industry, Ph: 9449342727; **Ayyappanagar:** Top Mart Sm, Ph: 7204448111; **Babusapalya:** Karnataka Ha, Ph: 8105754544; **Basaveshwarnagar:** Bigday Hm, Ph: 9972517344; Mahaveer Ha, Ph: 9845288857; Modern Colln, Ph: 8095758444; Adhinath Kitchen Gal, Ph: 8553583206; **Gayathri Ngr:**J.K.Steel, Ph: 9110806115; **Giri Nagar**: Vidya Ent, Ph: 9449988650; **Bagalgunte:** Royal Mart, Ph: 9538000072; **Chandra Layout:** Rajguru Kw, Ph: 8792686851; Pavan Kw, Ph: 8618028319; Milan Ha, Ph: 7411738812; **Ganganagar:**Patel Ind, Ph: 8050899296; Salem Ind, Ph: 9880795414; Bhagavathi Kitchenware, Ph: 8762161579; **Hanumanthanagar:** Home Studio, Ph: 9945933111; Kamal Appliances, Ph: 9008800881; **Hesargatta Main Rd:** Royal Mart, Ph: 28398200; **Horamavu:** Mamtha Ha, Ph: 8880050050; **Hbr Layout:** Bhavani Ha, Ph: 9845916164; **Harlur** Vinayaka Ha, Ph: 7760531454; **Katriguppe:** Mk Metal Mart, Ph: 9035779199; **Kr Puram:** Srm Elect, Ph: 9845445748; Pooja Ele And Mob, Ph: 9738850503; **Kammanahalli:** Ramdev Steel, Ph: 7259575732; Hm Traders, Ph: 9964797616; **Konenkunte Cross:** Mahalaxmi Elct & Ha, Ph: 8123203588; **Kasavanahalli:** Mathaji Ha, Ph: 8880796036; **Kengeri**; Alankar Elec, Ph: 8762805452; **Koramangala:** Sowbhagya Traders, Ph: 7337733887; **Kmr Swy Layout:** Bhoomi Kitchen, Ph: 9036850850; Patel Ha, Ph: 8951979665; **Laggere:** Top Mart, Ph: 9110246047; **Lnpura:** Arihanth Ent, Ph: 7899633338; **Malleshwaram:** Deviprasad Ha, Ph: 23564536; Bright Novelty, Ph: 23343505; **Mathikere:** M.Bhawarlals Inc, Ph: 41724740; Maharaja Agency, Ph: 41278050; **Kadugodi:** Little Wonder, Ph: 9961224224; **Madiwala:** Surya Ha, Ph: 9449635332; **Malleshpalya:** Bajrang Ha, Ph: 9449526463; New Bheru Ha, Ph: 9448680738; Ramdev Ha, Ph: 9035175860; Sri Bhagawathi Ha, Ph: 9590575427; Maa Ambe Ha, Ph: 8884198322; Maruthi Ha, Ph: 9952660769; **Magadiroad:** Kesariya, Ph: 6361685271; Royal Mart, Ph: 23584498; **Annaporneshwari Nagar:** Deepak Ha, Ph: 9148912736; **Iti Lyaout:**Radhakrishna Ent, Ph: 9739198531; **M S Palya:** Royal Mart, Ph: 8147014079; **B Narayanpura:** Yellow Mart, Ph: 7676726487; **Rajajinagar:** Mahalakshmi Metal House, Ph: 23355994; Rathna Sales, Ph: 23375566; Dhanalakshmi Kitchen World , Ph: 41285801; Jayalakshmi Kw, Ph: 9844755146; R S Mart, Ph: 6363602929; Pooja Stl Cent, Ph: 23327014; Vardhaman Intl, Ph: 080-40974556; **Rajankunte:** Rmr Super Market, Ph: 9108636912; **Rr Nagar:** Milan Ha, Ph: 28605619; Pavan Kg, Ph: 9739207043; **Tavarakere:**Mytri Mart Sm, Ph: 9036466761; **T C Palya:** Rhk Super Mkt, Ph: 9731668995; Karnataka Ha, Ph: 6363064024; **Tipsandra:** Pawar Ha, Ph: 9980517021; Milan Ha, Ph: 9986196375; Ramdev Ha, Ph: 7406901545; **Ulsoor:** Aishwaryapranam Hn, Ph: 9902788429; Pranam Steel Center, Ph: 9448053781; **Udaynagar:** Mother India, Ph: 9036189765; **Madanayakana Halli:** Vardhaman Intl, Ph: 8553170346; **Venkatapura:** Pooja Kg, Ph: 9900426176; **Vijayanagar:** Mahendras, Ph: 9986102112; Vijaylaxmi Kw, Ph: 9845022284; Maruthi Ha, Ph: 8904689155; **Vidyarnapura:** Praksh Kw, Ph: 8050620877; Mahalakshmi Steel House, Ph: 9663375159; All Seasons Hm, Ph: 9946728736; **Whitefield:** Little Wonder, Ph: 7975372794; Rolla Hm, Ph: 9148003448; Loyalcity, Ph: 8884046890; Royal Mart, Ph: 7079734574; **Yelahanka:** Royalmart, Ph: 41705760; Mutha Electricals, Ph: 22971920; Sai Kitchen World, Ph: 9632811797; Sai Ram Ka, Ph: 6362506002; **Btm Layout:** Patel Agencies, Ph: 9482853401; **Indranagar**; Kitchen Expert , Ph: 7350436750; **Lalbagh Road:** Mohankheda Impex, Ph: 9986198760; **Nagrathpet**; Mahipal Entpr, Ph: 41248070; Mahadev Dist, Ph: 41514943; Shubham Home Appliances, Ph: 9448674150; Bhagawathi Ha, Ph: 9663850009; Marudhar Ha, Ph: 9945444454; Ramdev Metal, Ph: 8618014985; Puckraj & Sons, Ph: 9448771841; B M Agencies, Ph: 9886617028; Bhagavti Spares, Ph: 9513992993; Pramod Steel, Ph: 9844074193; Jainam Marketing, Ph: 9036783828; Usha Home Ind, Ph: 41519106; Karnataka Metal Ind, Ph: 9844515458; Renuka Mktg, Ph: 41224591; Pooja Dist, Ph: 41234022; **Bvk Iyengar Rd**; Jain Wire Emporium, Ph: 080-41249274; Crockery World, Ph: 9845025420; Manglik Mktng, Ph: 9448970501; Shah Gulab Chand & Sons, Ph: 080-41222095; **Chickpet:** Mahesh Dist, Ph: 9916086085; **Varhtur:** Kitchen Kettles, Ph: 9148994805; **Haraluru:** Maharaja Kitchen World, Ph: 9036400829; **Hsr Layout:** Pawan Kitchen World, Ph: 8618220896; Nandi Kitchen Wd, Ph: 9686549035; **Muddanapalya;** Sri Balaji Innov, Ph: 9611176529; **Electronics City:** Dream Mart Hm, Ph: 9902734586; Village Hm, Ph: 9663966121; **Hegde Nagar**: All Market, Ph: 8892959570; **Tumkur:**N.R Metal Agency, Ph: 0816-2275003; Kavitha Kitchen Needs, Ph: 9538537166; Surya Metal Store, Ph: 9731351050; Tumkur Trade Centre, Ph: 9901432287; Darshan Ha, Ph: 9632132567; Sudha Ha, Ph: 9964011253; Niketana Trading Co, Ph: 9538826927; **Gubbi:**Keerthi Gas Stove, Ph: 9686004169; **Tiptur:** Sri Sai Electronics, Ph: 8861432166; Sri Rama-Ent, Ph: 9880362018; Kumar And Kumar, Ph: 9141609900; **Turuvekere:**Sri Sai Electronics, Ph: 8861432166; **Pavgada:**Shivanagere Ha, Ph: 9880768236; Meenakshi Appl, Ph: 9880360326; **Sira**:Swamy Ent, Ph: 9741561491; Lakshmi Steel, Ph: 9060434807; Mallikarjuna Home Appliances, Ph: 8123206930; **Madhugiri**:Vinayaka Store, Ph: 9900219291; **Kunigal:**Karnataka Metal Stores, Ph: 9448550390; New Karnataka Steel Centre, Ph: 08132221548; Karnataka Home Appliances, Ph: 8892197645; **Chiknayakakanhalli:** Mustafa Elec, Ph: 8861729784; **Huliyar**:Abhi Electronics, Ph: 944866833; **Kgf**-Prakash Ha, Ph: 9845113454; **Bangarpet**-Kumar Stores, Ph: 9845935240; **Gauribidanur:**Sri Raju Hn, Ph: 9448249527; Dhighvijaya Elec, Ph: 7204757456; **Kanakapura:**Sri Kabbalamma Ha, Ph: 9880835508; **Kolar**:Rakesh Ele, Ph: 9880634555; Naveenprakash Ha, Ph: 9844997787; **Malur:**Srm Elec, Ph: 9845445748; Reddy Ele, Ph: 9844435121; **Vijayapura**-Rmcity, Ph: 9845164990; Reddy Ele, Ph: 9900336061; **Devanahalli**:New Sowmya Ele, Ph: 9141335210; Reddy Elec, Ph: 9731001577; **Chintamani:**Great India Ele, Ph: 9742963551; Lavanya Stores, Ph: 9242498294.

12,13ಕ್ಕೆ 'ಪ್ರಶಾಂತೋತ್ಸವ– 2024'

ಬೆಂಗಳೂರು: ಪ್ರಶಾಂತನಗರ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘವು 'ಪ್ರಶಾಂತೋತ್ಸವ–2024' ಪ್ರತಿಭೆಯ ಅನ್ವೇಷಣೆ ಹೆಸರಿನಲ್ಲಿ ಅಂತರ್ ಪ್ರೌಢ ಶಾಲಾ ಪ್ರತಿಭೋತ್ಸವವನ್ನು ಜ.12 ಮತ್ತು 13ರಂದು ಹಮ್ಮಿಕೊಂಡಿದೆ.

100ಕ್ಕೂ ಅಧಿಕ ಪ್ರೌಢಶಾಲೆಗಳ 700ಕ್ಕೂ ಅಧಿಕ ವಿದ್ಯಾರ್ಥಿಗಳು ಭಾಗವಹಿಸಲಿದ್ದಾರೆ. ಭಗವದ್ಗೀತೆ ಕಂಠಪಾಠ, ಭಾವಗೀತೆ ಗಾಯನ–ವೃಂದ, ಜನಪದ ನೃತ್ಯ –ವೃಂದ, ಆಶುಭಾಷಣ ಸ್ಪರ್ಧೆ, ರಸಪ್ರಶ್ನೆ, ಸಾಮಾಜಿಕ ಕಳಕಳಿ ವಿಷಯಾಧಾರಿತ ಕಿರುನಾಟಕ ಸ್ಪರ್ಧೆಗಳು ನಡೆಯಲಿವೆ. ವಿಜೇತರಿಗೆ ₹1 ಲಕ್ಷ ನಗದು, ಪ್ರಶಂಸನಾ ಪತ್ರ ಮತ್ತು ನೆನಪಿನ ಫಲಕ ನೀಡಲಾಗುವುದು. ಸ್ಪರ್ಧಿಗಳಿಗೆ ಪ್ರಮಾಣಪತ್ರ ನೀಡಲಾಗುವುದು. ಮಾಹಿತಿಗೆ ಅಧ್ಯಕ್ಷ ಜಿ. ಫಣಿರಾಜ್ (9844 099545), ಸಂಚಾ ಲಕ ಎ. ಮಧುಕರ್ (9448709975) ಸಂಪರ್ಕಿಸಬಹುದು. ಇ–ಮೇಲ್: prashantotsava@gmail.comಗೆ ಮೇಲ್ ಮಾಡಬಹುದು ಎಂದು ಕಾರ್ಯ ದರ್ಶಿ ಜಿ.ಎ. ಪ್ರವೀಣ್ ಕುಮಾರ್ ತಿಳಿಸಿದ್ದಾರೆ.

ಪದವಿ ಕೋರ್ಸ್: ಶುಲ್ಕ ಇಳಿಸಲು ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಸರ್ಕಾರಿ ವಿಶ್ವವಿದ್ಯಾಲಯಗಳಲ್ಲಿ ಪದವಿ ಕೋರ್ಸ್‌ಗಳ ಶುಲ್ಕ ಇಳಿಸುವಂತೆ ಆಲ್ ಇಂಡಿಯಾ ಡೆಮಾಕ್ರಟಿಕ್ ಸ್ಟೂಡೆಂಟ್ ಆರ್ಗನೈಸೇಷನ್ (ಎಐಡಿಎಸ್‌ಒ) ಆಗ್ರಹಿಸಿದೆ.

'ರಾಜ್ಯದಲ್ಲಿರುವ ಸರ್ಕಾರಿ ವಿಶ್ವವಿದ್ಯಾಲಯಗಳಲ್ಲಿ ಪದವಿ ಹಾಗೂ ಸ್ನಾತಕೋತ್ತರ ಪದವಿ ಕೋರ್ಸ್‌ಗಳ ಶುಲ್ಕದಲ್ಲಿ ಏಕರೂಪತೆ ತರಲು ಉನ್ನತ ಶಿಕ್ಷಣ ಸಮಿತಿಯು ರಾಜ್ಯ ಸರ್ಕಾರದ ಮುಂದೆ ಪ್ರಸ್ತಾವನೆ ಇರಿಸಿದೆ. ಈಗಾಗಲೇ ಹಲವು ಸರ್ಕಾರಿ ವಿಶ್ವವಿದ್ಯಾಲಯಗಳಲ್ಲಿ ದುಬಾರಿ ಶುಲ್ಕ ವಿಧಿಸಿದ್ದು, ಬಡ ವಿದ್ಯಾರ್ಥಿಗಳು ಉನ್ನತ ವ್ಯಾಸಂಗ ಮಾಡಲು ಇದು ಹೊರೆಯಾಗಿ ಪರಿಣಮಿಸಿದೆ' ಎಂದು ಎಐಡಿಎಸ್‌ಒ ರಾಜ್ಯ ಕಾರ್ಯದರ್ಶಿ ಅಜಯ್ ಕಾಮತ್ ತಿಳಿಸಿದ್ದಾರೆ.

'ರಾಜ್ಯ ಸರ್ಕಾರ, ಬಡ ವಿದ್ಯಾರ್ಥಿಗಳ ದೃಷ್ಟಿಯಿಂದ, ಸರ್ಕಾರಿ ವಿಶ್ವವಿದ್ಯಾಲಯಗಳಿಗೆ ಹೆಚ್ಚುವರಿ ಅನುದಾನವನ್ನು ನೀಡಿ, ಇಲ್ಲಿನ ಪದವಿ ಕೋರ್ಸ್‌ಗಳಿಗೆ ಸರ್ಕಾರಿ ಪದವಿ ಕಾಲೇಜಿನ ಶುಲ್ಕ ನಿಗದಿಪಡಿಸಬೇಕು. ಸಮಿತಿಯು ವಿಶ್ವವಿದ್ಯಾಲಯಗಳ ಸಿಂಡಿಕೇಟ್ ಅನುಮತಿ ಪಡೆದು ಪ್ರತಿವರ್ಷ ಶೇ 10ರಷ್ಟು ಶುಲ್ಕವನ್ನು ಹೆಚ್ಚಿಸುವ ನಿರ್ಧಾರ ಕೈಬಿಡಬೇಕು' ಎಂದು ಅಜಯ್ ಕಾಮತ್ ಒತ್ತಾಯಿಸಿದ್ದಾರೆ.

'ಏಕರೂಪ ಶುಲ್ಕ ವಿಧಾನ ತರುವುದೇ ಸರ್ಕಾರದ ಉದ್ದೇಶವಾದರೆ, ಸರ್ಕಾರಿ ಪದವಿ ಕಾಲೇಜುಗಳಶುಲ್ಕದ ಪ್ರಮಾಣವನ್ನೇ ಸರ್ಕಾರಿ ವಿಶ್ವವಿದ್ಯಾಲಯಗಳ ಪದವಿ ಕೋರ್ಸ್‌ಗಳಿಗೂ ಅನ್ವಯಿಸಬೇಕು. ಈ ನಿಟ್ಟಿನಲ್ಲಿ ವಿಶ್ವವಿದ್ಯಾಲಯಗಳ ಆರ್ಥಿಕ ಜವಾಬ್ದಾರಿ ಯನ್ನು ಸರ್ಕಾರ ವಹಿಸಿ ಕೊಳ್ಳಬೇಕು' ಎಂದು ಪತ್ರಿಕಾ ಪ್ರಕಟಣೆಯಲ್ಲಿ ಆಗ್ರಹಿಸಿದ್ದಾರೆ.

'ಹಿಂದೂ ರಾಷ್ಟ್ರ ಆಗುವುದು ತಡೆಯಲಾಗದು'

ಹುಬ್ಬಳ್ಳಿ: '2024ರಲ್ಲಿ ನರೇಂದ್ರ ಮೋದಿ ಅವರು ಪುನಃ ಪ್ರಧಾನಿಯಾದ ಬಳಿಕ ಭಾರತವು ಹಿಂದೂ ರಾಷ್ಟ್ರ ಆಗಲಿದೆ. ತಾಕತ್ತಿದ್ದರೆ ಕಾಂಗ್ರೆಸ್ ತಡೆಯಲಿ' ಎಂದು ಶ್ರೀರಾಮ ಸೇನೆ ಸಂಘಟನೆಯ ರಾಷ್ಟ್ರೀಯ ಘಟಕದ ಅಧ್ಯಕ್ಷ ಪ್ರಮೋದ್ ಮುತಾಲಿಕ್ ಸವಾಲು ಹಾಕಿದರು.

1992ರ ಗಲಭೆ ಪ್ರಕರಣದ ಆರೋಪಿ ಶ್ರೀಕಾಂತ ಪೂಜಾರಿ ಅವರ ಮನೆಗೆ ಗುರುವಾರ ಭೇಟಿ ನೀಡಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಪಾಕಿಸ್ತಾನ ಮುಸ್ಲಿಮರ ದೇಶ ಆಗುವುದಾದರೆ ಭಾರತ ಹಿಂದೂ ರಾಷ್ಟ್ರ ಏಕಾಗಬಾರದು. ಇಲ್ಲಿ ಮುಸ್ಲಿ ಮರು, ಕ್ರೈಸ್ತರು ಸೇರಿ ಎಲ್ಲರೂ ವಾಸಿಸಬಹುದು. ನಾವು ಯಾರನ್ನೂ ಹೊರ ಹಾಕಲ್ಲ. ಶ್ರೀಕಾಂತ ಪೂಜಾರಿ ರೌಡಿಶೀಟರ್, ಅಪರಾಧಿ ಎಂದು ಹೇಳುವ ಮೂಲಕ ಮುಖ್ಯಮಂತ್ರಿ, ಗೃಹ ಸಚಿವ ಹಾಗೂ ಸ್ಥಳೀಯ ಶಾಸಕ (ಪ್ರಸಾದ್ ಅಬ್ಬಯ್ಯ) ಜನರ ದಾರಿ ತಪ್ಪಿಸುತ್ತಿದ್ದಾರೆ. ಹಿಂದೂ ಕಾರ್ಯಕರ್ತರು, ರಾಮನ ಭಕ್ತ ರೇ ಮುಖ್ಯಮಂತ್ರಿ ಅವರ ಟಾರ್ಗೆಟ್' ಎಂದರು.

ಬೆವಿಕಂ BESCOM

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ

ಅಧಿಸೂಚನೆ

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ, #16, ಸಿ–1, ಮಿಲ್ಲರ್ಸ್ ಟ್ಯಾಂಕ್ ಬೆಡ್ ಏರಿಯ, ವಸಂತನಗರ, ಬೆಂಗಳೂರು–560052 ರವರ ಸಮ್ಮುಖದಲ್ಲಿ

ಸಂಖ್ಯೆ: ಬೆವಿಕಂ/ನಿ(ಹ)/ಉಪ್ರವ್ಯ(ಆರ್.ಎ)/ಬಿಸಿ–19/ಕ–1001 ದಿನಾಂಕ: 05.01.2024

ಕವಿನಿ ಆಯೋಗ (ವಿತರಣೆ ಹಾಗೂ ರೀಟೈಲ್ ವಿದ್ಯುತ್ ಸರಬರಾಜಿಗಾಗಿ ವಿದ್ಯುತ್ ದರ ನಿಗದಿಪಡಿಸಲು ಷರತ್ತು ಹಾಗೂ ನಿಬಂಧನೆಗಳು) ವಿನಿಯಮಗಳು 2006 ಹಾಗೂ ಎಂವೈಟಿ ವಿದ್ಯುತ್ ಜಕಾತಿ ದರ ನಿಬಂಧನೆ ಸಂಖ್ಯೆ ಡಿ/01/6, ದಿನಾಂಕ 31.05.2006 ಅನ್ನೂ ಒಳಗೊಂಡಂತೆ, ಅನ್ವಯಿತ ಕವಿನಿ ಆಯೋಗ (ವಿದ್ಯುತ್ ದರ) ನಿಯಮಾವಳಿಯ ಜೊತೆಗೆ ಓದಿಕೊಳ್ಳಲಾಗುವ ಕರ್ನಾಟಕ ವಿದ್ಯುಚ್ಛಕ್ತಿ ಸುಧಾರಣ ಅಧಿನಿಯಮ 1999ರ ಪ್ರಕರಣ 27 ಹಾಗೂ ವಿದ್ಯುಚ್ಛಕ್ತಿ ಕಾಯ್ದೆ 2003ರ ಪರಿಚ್ಛೇದ 61 ಮತ್ತು 62ರ ಅಡಿಯಲ್ಲಿ ಆರ್ಥಿಕ ವರ್ಷ–23ರ ಟ್ರೂಯಿಂಗ್ ಅಪ್, ಆರ್ಥಿಕ ವರ್ಷ–2025 ರ ತಂತಿ ಮತ್ತು ವಿದ್ಯುತ್ ಸರಬರಾಜು ವ್ಯವಹರಣೆಗಾಗಿ ಶುಲ್ಕಗಳಿಂದ ನಿರೀಕ್ಷಿತ ರೆವಿನ್ಯೂ(ಇ.ಆರ್.ಸಿ), ಆರ್ಥಿಕ ವರ್ಷ–25ಕ್ಕೆ ರೀಟೈಲ್ ವಿದ್ಯುತ್ ಸರಬರಾಜು ದರಗಳ ಅನುಮೋದನೆಗಾಗಿ ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತದಿಂದ (ಬೆವಿಕಂ) ಅರ್ಜಿ ಸಲ್ಲಿಕೆ.

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ (ಬೆವಿಕಂ)

ಕೆ.ಆರ್. ವೃತ್ತ, ಬೆಂಗಳೂರು–560 001. ---- **ಅರ್ಜಿದಾರರು**

ಪ್ರಕಟಣೆ

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತವು (ಬೆವಿಕಂ) ಕವಿನಿ ಆಯೋಗದ ವಿತರಣೆ ಹಾಗೂ ರೀಟೈಲ್ ವಿದ್ಯುತ್ ಸರಬರಾಜಿಗಾಗಿ ವಿದ್ಯುತ್ ದರ ನಿಗದಿಪಡಿಸಲು ಷರತ್ತು ಹಾಗೂ ನಿಬಂಧನೆಗಳು, ವಿನಿಯಮಗಳು 2006 ಹಾಗೂ ಎಂವೈಟಿ ವಿದ್ಯುತ್ ಜಕಾತಿ ದರ ನಿಬಂಧನೆ ಸಂಖ್ಯೆ ಡಿ/01/6, ದಿನಾಂಕ 31.05.2006ನ್ನೂ ಒಳಗೊಂಡಂತೆ, ಅನ್ವಯಿತ ಕವಿನಿ ಆಯೋಗ (ವಿದ್ಯುತ್ ದರ) ನಿಯಮಾವಳಿಯ ಜೊತೆಗೆ ಓದಿಕೊಳ್ಳಲಾಗುವ ಕರ್ನಾಟಕ ವಿದ್ಯುಚ್ಛಕ್ತಿ ಸುಧಾರಣ ಅಧಿನಿಯಮ 1999ರ ಪ್ರಕರಣ 27 ಹಾಗೂ ವಿದ್ಯುಚ್ಛಕ್ತಿ ಕಾಯ್ದೆ 2003ರ ಪರಿಚ್ಛೇದ 61 ಮತ್ತು 62ರ ಅಡಿಯಲ್ಲಿ ಆರ್ಥಿಕ ವರ್ಷ–23ರ ಟ್ರೂಯಿಂಗ್ ಅಪ್, ಆರ್ಥಿಕ ವರ್ಷ–2025 ರ ತಂತಿ ಮತ್ತು ವಿದ್ಯುತ್ ಸರಬರಾಜು ವ್ಯವಹರಣೆಗಾಗಿ, ಶುಲ್ಕಗಳಿಂದ ನಿರೀಕ್ಷಿತ ರೆವಿನ್ಯೂ (ಇ.ಆರ್.ಸಿ), ಆರ್ಥಿಕ ವರ್ಷ–25ಕ್ಕೆ ರೀಟೈಲ್ ವಿದ್ಯುತ್ ಸರಬರಾಜು ದರಗಳ ಅನುಮೋದನೆಗಾಗಿ ಮಾನ್ಯ ಆಯೋಗದ ಮುಂದೆ ಅರ್ಜಿಯನ್ನು ಸಲ್ಲಿಸಿದೆ. ಇ.ಆರ್.ಸಿ. ಸಲ್ಲಿಕೆಯ ವಿವರ ಹೀಗಿದೆ:

1. ಪರಿಷ್ಕರಣೆಯ ಅಗತ್ಯತೆ:

ಪ್ರಸಕ್ತ ವಿದ್ಯುತ್ ದರಗಳಿಂದ ಗಳಿಸುತ್ತಿರುವ ಆದಾಯ ಸ್ವೀಕೃತಿ ಹಾಗೂ ಬೆವಿಕಂಪನಿಯ ವಾರ್ಷಿಕ ಆದಾಯ ಅಗತ್ಯತೆಯ ನಡುವೆ ಸ್ವಾಮ್ಯತೆ ಇಲ್ಲದ ಪ್ರಯುಕ್ತ ಕೆಳಕಂಡಂತೆ ಆದಾಯ ಕೊರತೆ ಉಂಟಾಗಿದೆ.

ರೂ.ಕೋಟಿಗಳಲ್ಲಿ

ವರ್ಷ	ಆದಾಯ ಸ್ವೀಕೃತಿ	ಆದಾಯದ ಅಗತ್ಯತೆ	ಆದಾಯ ಕೊರತೆ
2022–23*	26235.49	27295.24	1059.75
2024–25**	33158.47	34897.16	1738.70

* ಟ್ರೂಯಿಂಗ್ ಅಪ್‌ಗಾಗಿ ಸಲ್ಲಿಸಿದೆ

** ಅಂದಾಜಿತ ಕೊರತೆ

ಮೇಲಿನ ವಾರ್ಷಿಕ ಆದಾಯ ಅಗತ್ಯತೆಯನ್ನು ಆಧರಿಸಿ, ಸರಾಸರಿ ರೆವಿನ್ಯೂ ಸ್ವೀಕೃತಿಗಿಂತ ಸರಾಸರಿ ವಿದ್ಯುತ್ ಸರಬರಾಜು ವೆಚ್ಚವು ಅಧಿಕವಾಗಿದೆ. ಸದರಿ ವಿವರ ಕೆಳಕಂಡಂತಿದೆ:

ವರ್ಷ	ವಿದ್ಯುತ್ ಸರಬರಾಜು ವೆಚ್ಚ (ರೂ. ಪ್ರತಿ ಯೂನಿಟ್‌ಗೆ)	ಸರಾಸರಿ ಆದಾಯ ಸ್ವೀಕೃತಿ (ರೂ. ಪ್ರತಿ ಯೂನಿಟ್‌ಗೆ)	ಆದಾಯ ಕೊರತೆ (ರೂ.ಗಳಲ್ಲಿ)
2024–25	9.83	9.34	0.49

ಆದ್ದರಿಂದ, ವಿದ್ಯುತ್ ದರ ಹೆಚ್ಚಳದ ಪರಿಷ್ಕರಣೆಯ ಅಗತ್ಯತೆ ಉಂಟಾಗಿದೆ. ರೂ. 1738.70 ಕೋಟಿ ಕೊರತೆಯನ್ನು ಬೆವಿಕಂಪನಿಯು ಆ.ವ–25ರಲ್ಲಿ ಪ್ರಸ್ತಾಪಿತ ವಿದ್ಯುತ್ ದರ ಪರಿಷ್ಕರಣೆಯ ಮೂಲಕ ವಸೂಲಿ ಮಾಡಲು ಯೋಜಿಸಿದೆ.

2. **ವಿದ್ಯುತ್ ದರ ಹೆಚ್ಚಳದ ಪ್ರಸ್ತಾವನೆ:**
   ಆರ್ಥಿಕ ವರ್ಷ–24 ರ ಕೊರತೆಯನ್ನು ಮುಂದಿನ ದಿನಗಳಲ್ಲಿ ಮಂಡಿಸುವ ಆರ್ಥಿಕ ವರ್ಷ–24ರ ಟ್ರೂಯಿಂಗ್ ಅಪ್ ಹಂತದಲ್ಲಿ ಪರಿಗಣಿಸಲು ಪ್ರಸ್ತಾಪಿಸಿದೆ. ಆರ್ಥಿಕ ವರ್ಷ–25ರ ಅಂದಾಜು ಕೊರತೆ ರೂ. 1738.70 ಕೋಟಿಗಳನ್ನು ವಿದ್ಯುತ್ ದರ ಪರಿಷ್ಕರಣೆಯಿಂದ ತುಂಬಲು ಪ್ರಸ್ತಾಪಿಸಿದೆ. ವಿವಿಧ ಪ್ರವರ್ಗದ ಗ್ರಾಹಕರಿಗೆ ಪ್ರಸ್ತಾಪಿತ ವಿದ್ಯುತ್ ದರ ಹೆಚ್ಚಳದ ವಿವರವನ್ನು **ಅನುಬಂಧ–1** ರಲ್ಲಿ ತೋರಿಸಲಾಗಿದೆ.
3. ವಿವಿಧ ಪ್ರವರ್ಗದ ಗ್ರಾಹಕರಿಗೆ ಹಾಲಿ ವಿಧಿಸುತ್ತಿರುವ ವಿದ್ಯುತ್ ದರದಿಂದ ತಗಲುವ ಅಂದಾಜು ಮಾಸಿಕ ವೆಚ್ಚ ಹಾಗೂ ಪ್ರಸ್ತಾಪಿತ ವಿದ್ಯುತ್ ದರದಿಂದ ತಗಲುವ ಅಂದಾಜು ಮಾಸಿಕ ವೆಚ್ಚದ ವಿವರವುಳ್ಳ ಸಿದ್ಧ ವಿವರಗಳನ್ನು ಅನುಬಂಧ–2 ರಲ್ಲಿ ಒದಗಿಸಲಾಗಿದೆ. ಬೆವಿಕಂ ಸಲ್ಲಿಸಿರುವ ಅರ್ಜಿಯ ಪ್ರತಿಯು ಬೆವಿಕಂಪನಿಯ ಎಲ್ಲಾ ವೃತ್ತ ಕಚೇರಿಗಳು (ಅಧೀಕ್ಷಕ ಇಂಜಿನಿಯರು(ವಿ)(ವಾ, ಕಾ ಮತ್ತು ಪಾ), ಬೆಂಗಳೂರು(ಉತ್ತರ), ಬೆಂಗಳೂರು(ದಕ್ಷಿಣ), ಬೆಂಗಳೂರು(ಪೂರ್ವ), ಬೆಂಗಳೂರು(ಪಶ್ಚಿಮ), ಬೆಂಗಳೂರು ಗ್ರಾಮೀಣ, ತುಮಕೂರು, ಕೋಲಾರ, ರಾಮನಗರ, ದಾವಣಗೆರೆ) ಹಾಗೂ ಕಂಪನಿ ಕಾರ್ಯಾಲಯ, ಬೆವಿಕಂ, ಕೆ.ಆರ್.ವೃತ್ತ, ಬೆಂಗಳೂರು–560001, ಇಲ್ಲಿ ಲಭ್ಯವಿದೆ.
4. ಕವಿನಿ ಆಯೋಗ (ವಿದ್ಯುತ್ ದರ) ನಿಬಂಧನೆಗಳು, 2000ದ ನಿಯಮಾವಳಿ–5ರ ಅನುಸರಣೆಯಾಗಿ, ಮೇಲಿನ ಅರ್ಜಿದಾರರ ಮನವಿಯ ವಿರುದ್ಧ ಆಕ್ಷೇಪಣೆಯನ್ನು ಸಲ್ಲಿಸಲು ಇಚ್ಛಿಸುವ ವ್ಯಕ್ತಿಗಳು ತಮ್ಮ ಆಕ್ಷೇಪಣೆಯನ್ನು 6 (ಆರು) ಪ್ರತಿಗಳಲ್ಲಿ, ಅಫಿಡವಿಟ್‌ನೊಂದಿಗೆ ಈ ಪ್ರಕಟಣೆಯು ಪ್ರಕಟಣೆಗೊಂಡ ದಿನಾಂಕದಿಂದ ಮೂವತ್ತು (30) ದಿನಗಳೊಳಗೆ **ಸ್ವೀಕರಣಾಧಿಕಾರಿ, ಕಾರ್ಯದರ್ಶಿಯವರ ಕಚೇರಿ, ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ, #16, ಸಿ–1, ಮಿಲ್ಲರ್ಸ್ ಟ್ಯಾಂಕ್ ಬೆಡ್ ಏರಿಯ, ವಸಂತನಗರ, ಬೆಂಗಳೂರು–560052** ಇವರಿಗೆ ಸಲ್ಲಿಸತಕ್ಕದ್ದು. ತಮ್ಮ ಆಕ್ಷೇಪಣೆಯಲ್ಲಿ, ಆಲಿಕೆಯಲ್ಲಿ ವೈಯಕ್ತಿಕವಾಗಿ ಭಾಗವಹಿಸುವರೇ ಎಂಬುದನ್ನೂ ತಿಳಿಸತಕ್ಕದ್ದು. ಮುಂದುವರೆದು, ಕವಿನಿ ಆಯೋಗದ ಸೂಚನೆಗಳ ಪ್ರಕಾರ, ಆಯೋಗಕ್ಕೆ ಸಲ್ಲಿಸುವ ಆಕ್ಷೇಪಣೆಗೆ/ಗಳಿಗೆ ಶೀಘ್ರವಾಗಿ ಉತ್ತರಿಸಲು, ಆಕ್ಷೇಪಣೆಯ/ಗಳ ಪ್ರತಿಯನ್ನು **ನಿರ್ದೇಶಕರು (ಹಣಕಾಸು), 2ನೇ ಮಹಡಿ, ಬೆಳಕು ಭವನ, ಕಂಪನಿ ಕಾರ್ಯಾಲಯ, ಬೆವಿಕಂಪನಿ, ಕೆ.ಆರ್. ವೃತ್ತ, ಬೆಂಗಳೂರು–560001** ಇವರಿಗೆ ಸಲ್ಲಿಸಲು ಕೋರಲಾಗಿದೆ. ಆಸಕ್ತ ವ್ಯಕ್ತಿಗಳು ತಮ್ಮ ಆಕ್ಷೇಪಣೆಯನ್ನು ಮೊದಲು ಪ್ರಕಟಣೆಗೊಂಡ ದಿನಾಂಕದಿಂದ 30 ದಿನಗಳೊಳಗೆ ಸಲ್ಲಿಸಬಹುದಾಗಿದೆ.
5. ಆಸಕ್ತದಾರರ ಪರಿಶೀಲನೆಗಾಗಿ, ಅರ್ಜಿದಾರರ ಮನವಿ ಹಾಗೂ ಸಂಬಂಧಿತ ದಾಖಲೆಗಳ ಪೂರ್ಣ ಪ್ರತಿಯು ಎಲ್ಲಾ ವೃತ್ತ ಕಚೇರಿಗಳು (ಅಧೀಕ್ಷಕ ಇಂಜಿನಿಯರು(ವಿ) (ವಾ, ಕಾ ಮತ್ತು ಪಾ), ಬೆಂಗಳೂರು(ಉತ್ತರ), ಬೆಂಗಳೂರು(ದಕ್ಷಿಣ), ಬೆಂಗಳೂರು(ಪೂರ್ವ), ಬೆಂಗಳೂರು(ಪಶ್ಚಿಮ), ಬೆಂಗಳೂರು ಗ್ರಾಮೀಣ, ತುಮಕೂರು, ಕೋಲಾರ, ದಾವಣಗೆರೆ, ರಾಮನಗರ) ಇಲ್ಲಿ ಲಭ್ಯವಿರುತ್ತದೆ.
6. ಅರ್ಜಿದಾರರ ಮನವಿಯ ಯಾವುದೇ ಭಾಗವನ್ನು ಸೂಕ್ತ ಶುಲ್ಕ ನೀಡಿ ಅವುಗಳ ಛಾಯಾ ಪ್ರತಿಗಳನ್ನು ಪಡೆದುಕೊಳ್ಳಬಹುದಾಗಿದೆ.
7. ಅರ್ಜಿದಾರರ ಮನವಿ ಹಾಗೂ ಸಂಬಂಧಿತ ದಾಖಲೆಗಳ ಪೂರ್ಣ ಪ್ರತಿಯು ಎಲ್ಲಾ ವೃತ್ತ ಕಚೇರಿಗಳು (ಅಧೀಕ್ಷಕ ಇಂಜಿನಿಯರು(ವಿ) (ವಾ,ಕಾ ಮತ್ತು ಪಾ), ಬೆಂಗಳೂರು (ಉತ್ತರ), ಬೆಂಗಳೂರು (ದಕ್ಷಿಣ), ಬೆಂಗಳೂರು (ಪೂರ್ವ) ಬೆಂಗಳೂರು (ಪಶ್ಚಿಮ), ಬೆಂಗಳೂರು ಗ್ರಾಮೀಣ, ತುಮಕೂರು, ಕೋಲಾರ, ದಾವಣಗೆರೆ, ರಾಮನಗರ) ಹಾಗೂ ಕಂಪನಿಯ ಕಾರ್ಯಾಲಯ, ಬೆವಿಕಂ, ಕೆ.ಆರ್.ವೃತ್ತ, ಬೆಂಗಳೂರು–560001, ಇಲ್ಲಿ ಲಭ್ಯವಿದ್ದು, ಆಸಕ್ತ ವ್ಯಕ್ತಿಗಳು **ರೂ. 400/–** ಪಾವತಿಸಿ ಪ್ರತಿಯನ್ನು ಖರೀದಿಸಬಹುದಾಗಿದೆ.
8. ಇ.ಆರ್.ಸಿ/ವಿದ್ಯುತ್ ದರ ಪರಿಷ್ಕರಣೆ ಮನವಿಯ ವಿದ್ಯುನ್ಮಾನ ಪ್ರತಿಯನ್ನು ನಮ್ಮ ಜಾಲತಾಣ **(https://bescom.karnataka.gov.in/)** ನಲ್ಲಿ ವೀಕ್ಷಿಸಬಹುದಾಗಿದೆ.

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ಪರವಾಗಿ,
ಸಹಿ/–
ನಿರ್ದೇಶಕರು (ಹಣಕಾಸು)
ಕೆ.ಆರ್. ವೃತ್ತ, ಬೆಂಗಳೂರು–560001

ಪ್ರಸಕ್ತ ಹಾಗೂ ಪ್ರಸ್ತಾಪಿತ ವಿದ್ಯುತ್ ದರಗಳ ವಿವರ

ಅನುಬಂಧ–1 **ಆ.ವ–25**

		ಪ್ರಸಕ್ತ ದರ				ಪ್ರಸ್ತಾಪಿತ ದರ		
ಕ್ರ. ಸಂ.	ಪ್ರವರ್ಗ	ಸ್ಥಾಪನದ ಸ್ವರೂಪ	ವಿವರಗಳು	ದರ/ ರೂ.	ಪ್ರವರ್ಗ	ಸ್ಥಾಪನದ ಸ್ವರೂಪ	ವಿವರಗಳು	ದರ/ರೂ.
1	ಎಲ್.ಟಿ–1	ಭಾಗ್ಯ ಜ್ಯೋತಿ/ ಕುಟೀರ ಜ್ಯೋತಿ	ಕನಿಷ್ಠ ಶುಲ್ಕ ಪ್ರತಿ ಸ್ಥಾವರಕ್ಕೆ	100	ಎಲ್.ಟಿ–1	ಭಾಗ್ಯ ಜ್ಯೋತಿ/ ಕುಟೀರ ಜ್ಯೋತಿ	ಕನಿಷ್ಠ ಶುಲ್ಕ ಪ್ರತಿ ಸ್ಥಾವರಕ್ಕೆ	100
			ಪ್ರತಿ ಸ್ಥಾಪನಕ್ಕೆ, ಮಾಸಿಕ ಕನಿಷ್ಠ ರೂ 100 ಕ್ಕೆ ಒಳಪಟ್ಟು **ಟಿಪ್ಪಣಿ:** ಈ ಪ್ರವರ್ಗಕ್ಕೆ ಉಚಿತ ವಿದ್ಯುತ್ ಸರಬರಾಜನ್ನು ಒದಗಿಸಲು ಕರ್ನಾಟಕ ಸರ್ಕಾರವು ಸಹಾಯ ಧನದ ನೆರವನ್ನು ಮುಂಗಡವಾಗಿ ಒದಗಿಸತಕ್ಕದ್ದು. ವರ್ಷದ ಆಯಾ ತ್ರೈಮಾಸಿಕದ ಪ್ರಾರಂಭದಲ್ಲಿ ಸಹಾಯಧನದ ನೆರವನ್ನು ಬಿಡುಗಡೆ ಮಾಡದಿದ್ದಲ್ಲಿ, ಗ್ರಾಹಕರಿಗೆ ಸೂಕ್ತ ನೋಟೀಸನ್ನು ಜಾರಿಗೊಳಿಸಿ, ಅನುಮೋದಿತ ವಿದ್ಯುತ್ ದರವನ್ನು ವಿಧಿಸಲಾಗುತ್ತದೆ. ಒಂದು ವೇಳೆ ಸ್ಥಾಪನದ ವಿದ್ಯುತ್ ಬಳಕೆಯ ಪ್ರಮಾಣ ಮಾಸಿಕ 40 ಯೂನಿಟ್ಟುಗಳನ್ನು ಮೀರಿದರೆ ಅಥವಾ ಒಂದಕ್ಕಿಂತ ಹೆಚ್ಚು ದೀಪಗಳಿದ್ದರೆ, ಸ್ಥಾಪನವನ್ನು ಎಲ್.ಟಿ–2(ಎ) ಪ್ರವರ್ಗದ ಅಡಿಯಲ್ಲಿ ಒಳಪಡಿಸಿ ಬಿಲ್ ಮಾಡಲಾಗುವುದು.	9.62			ಪ್ರತಿ ಸ್ಥಾಪನಕ್ಕೆ, ಮಾಸಿಕ ಕನಿಷ್ಠ ರೂ. 100.00 ಕ್ಕೆ ಒಳಪಟ್ಟು **ಟಿಪ್ಪಣಿ:** ಈ ಪ್ರವರ್ಗಕ್ಕೆ ಉಚಿತ ವಿದ್ಯುತ್ ಸರಬರಾಜನ್ನು ಒದಗಿಸಲು ಕರ್ನಾಟಕ ಸರ್ಕಾರವು ಸಹಾಯ ಧನದ ನೆರವನ್ನು ಮುಂಗಡವಾಗಿ ಒದಗಿಸತಕ್ಕದ್ದು. ವರ್ಷದ ಆಯಾ ತ್ರೈಮಾಸಿಕದ ಪ್ರಾರಂಭದಲ್ಲಿ ಸಹಾಯಧನದ ನೆರವನ್ನು ಬಿಡುಗಡೆ ಮಾಡದಿದ್ದಲ್ಲಿ, ಗ್ರಾಹಕರಿಗೆ ಸೂಕ್ತ ನೋಟೀಸನ್ನು ಜಾರಿಗೊಳಿಸಿ, ಅನುಮೋದಿತ ವಿದ್ಯುತ್ ದರವನ್ನು ವಿಧಿಸಲಾಗುತ್ತದೆ. ಒಂದು ವೇಳೆ ಸ್ಥಾಪನದ ವಿದ್ಯುತ್ ಬಳಕೆಯ ಪ್ರಮಾಣ ಮಾಸಿಕ 40 ಯೂನಿಟ್ಟುಗಳನ್ನು ಮೀರಿದರೆ ಅಥವಾ ಒಂದಕ್ಕಿಂತ ಹೆಚ್ಚು ದೀಪಗಳಿದ್ದರೆ, ಸ್ಥಾಪನವನ್ನು ಎಲ್.ಟಿ–2(ಎ) ಪ್ರವರ್ಗದ ಅಡಿಯಲ್ಲಿ ಒಳಪಡಿಸಿ ಬಿಲ್ ಮಾಡಲಾಗುವುದು.	9.83
2	ಎಲ್.ಟಿ–2(ಎ)	ಗೃಹ ಬಳಕೆ ದೀಪ/ಗೃಹ ಬಳಕೆ ಸಂಯುಕ್ತ ದೀಪ/ ಸಂಪೂರ್ಣ ವಿದ್ಯುತ್ ಗೃಹ/ ವಾಣಿಜ್ಯೇತರ ದೀಪ, ತಾಪನ ಮತ್ತು ಮೋಟೀವ್ ಪವರ್ (ಎಲ್ಲಾ ಪ್ರದೇಶಗಳಿಗೆ ಅನ್ವಯಿಸುತ್ತದೆ)	**ನಿಗದಿತ ಶುಲ್ಕ:** ಪ್ರತಿ ಸ್ಥಾಪನಕ್ಕೆ, ಪ್ರತಿ ಕಿ.ವಾಟ್‌ಗೆ ಪ್ರತಿ ತಿಂಗಳಿಗೆ 50 ಕಿ.ವಾಟ್ ಅನ್ನು ಒಳಗೊಂಡಂತೆ, ಪ್ರತಿ ಕಿ.ವಾಟ್‌ಗೆ	110	ಎಲ್.ಟಿ–2(ಎ)	ಗೃಹ ಬಳಕೆ ದೀಪ/ಗೃಹ ಬಳಕೆ ಸಂಯುಕ್ತ ದೀಪ/ ಸಂಪೂರ್ಣ ವಿದ್ಯುತ್ ಗೃಹ/ ವಾಣಿಜ್ಯೇತರ ದೀಪ, ತಾಪನ ಮತ್ತು ಮೋಟೀವ್ ಪವರ್ (ಎಲ್ಲಾ ಪ್ರದೇಶಗಳಿಗೆ ಅನ್ವಯಿಸುತ್ತದೆ)	**ನಿಗದಿತ ಶುಲ್ಕ:** ಪ್ರತಿ ಸ್ಥಾಪನಕ್ಕೆ, ಪ್ರತಿ ಕಿ.ವಾಟ್‌ಗೆ ಪ್ರತಿ ತಿಂಗಳಿಗೆ 50 ಕಿ.ವಾಟ್ ಅನ್ನು ಒಳಗೊಂಡಂತೆ, ಪ್ರತಿ ಕಿ.ವಾಟ್‌ಗೆ	110
			50 ಕಿ.ವಾಟ್‌ಗೆ ಮೀರಿದ ಪ್ರತಿ ಹೆಚ್ಚುವರಿ ಕಿಲೋವಾಟ್‌ಗೆ	210			50 ಕಿ.ವಾಟ್‌ಗೆ ಮೀರಿದ ಪ್ರತಿ ಹೆಚ್ಚುವರಿ ಕಿಲೋವಾಟ್‌ಗೆ	210
			ವಿದ್ಯುತ್ ಬಳಕೆ ಶುಲ್ಕ: ಆ ತಿಂಗಳಲ್ಲಿ ಬಳಸಿದ ವಿದ್ಯುತ್ತಿನ ಪ್ರತಿ ಯೂನಿಟ್ಟಿಗೆ,				**ವಿದ್ಯುತ್ ಬಳಕೆ ಶುಲ್ಕ:** ಆ ತಿಂಗಳಲ್ಲಿ ಬಳಸಿದ ವಿದ್ಯುತ್ತಿನ ಪ್ರತಿ ಯೂನಿಟ್ಟಿಗೆ,	
			ಬಳಸಿದ ಮೊದಲ 100 ಯೂನಿಟ್ಟುಗಳವರೆಗೆ, ಪ್ರತಿ ಯೂನಿಟ್ಟಿಗೆ	4.75			ಬಳಸಿದ ಮೊದಲ 100 ಯೂನಿಟ್ಟುಗಳವರೆಗೆ, ಪ್ರತಿ ಯೂನಿಟ್ಟಿಗೆ	5.24
			100 ಯೂನಿಟ್ಟುಗಳನ್ನು ಮೀರಿ ಬಳಸಿದ ಪ್ರತಿ ಯೂನಿಟ್ಟಿಗೆ	7.00			100 ಯೂನಿಟ್ಟುಗಳನ್ನು ಮೀರಿ ಬಳಸಿದ ಪ್ರತಿ ಯೂನಿಟ್ಟಿಗೆ	7.49
			ಗ್ರಾಮ ಪಂಚಾಯತಿಗಳ ಗ್ರಾಹಕರಿಗೆ ಇಂಧನ ಶುಲ್ಕದಲ್ಲಿ ಪ್ರತಿ ಯೂನಿಟ್‌ಗೆ 30 ಪೈಸೆ ರಿಯಾಯಿತಿ				**ಗ್ರಾಮ ಪಂಚಾಯತಿಗಳ ಗ್ರಾಹಕರಿಗೆ ಇಂಧನ ಶುಲ್ಕದಲ್ಲಿ ಪ್ರತಿ ಯೂನಿಟ್‌ಗೆ 30 ಪೈಸೆ ರಿಯಾಯಿತಿ**	
3	ಎಲ್.ಟಿ–2(ಬಿ)	ಕೇವಲ ದೀಪ ಅಥವಾ ಸಂಯುಕ್ತ ದೀಪ, ತಾಪನ ಮತ್ತು ಮೋಟೀವ್ ಪವರ್‌ಅನ್ನು ಹೊಂದಿರುವ ಅನುದಾನ ಸಹಿತ ಹಾಗೂ ಅನುದಾನ ರಹಿತ ಖಾಸಗಿ ಶಿಕ್ಷಣ ಸಂಸ್ಥೆಗಳನ್ನೂ ಒಳಗೊಂಡಂತೆ ಖಾಸಗಿ ವೃತ್ತಿಪರ ಶಿಕ್ಷಣ ಸಂಸ್ಥೆಗಳು, ಖಾಸಗಿ ಆಸ್ಪತ್ರೆಗಳು (ಎಲ್ಲಾ ಪ್ರದೇಶಗಳಿಗೆ ಅನ್ವಯಿಸುತ್ತದೆ)	**ನಿಗದಿತ ಶುಲ್ಕ:** ಪ್ರತಿ ಸ್ಥಾಪನಕ್ಕೆ, ಪ್ರತಿ ಕಿ.ವಾಟ್‌ಗೆ, ಪ್ರತಿ ತಿಂಗಳಿಗೆ 50 ಕಿ.ವಾಟ್ ಅನ್ನು ಒಳಗೊಂಡಂತೆ, ಪ್ರತಿ ಕಿ.ವಾಟ್‌ಗೆ	180	ಎಲ್.ಟಿ–2(ಬಿ):	ಕೇವಲ ದೀಪ ಅಥವಾ ಸಂಯುಕ್ತ ದೀಪ, ತಾಪನ ಮತ್ತು ಮೋಟೀವ್ ಪವರ್‌ಅನ್ನು ಹೊಂದಿರುವ ಅನುದಾನ ಸಹಿತ ಹಾಗೂ ಅನುದಾನ ರಹಿತ ಖಾಸಗಿ ಶಿಕ್ಷಣ ಸಂಸ್ಥೆಗಳನ್ನೂ ಒಳಗೊಂಡಂತೆ ಖಾಸಗಿ ವೃತ್ತಿಪರ ಶಿಕ್ಷಣ ಸಂಸ್ಥೆಗಳು, ಖಾಸಗಿ ಆಸ್ಪತ್ರೆಗಳು (ಎಲ್ಲಾ ಪ್ರದೇಶಗಳಿಗೆ ಅನ್ವಯಿಸುತ್ತದೆ)	**ನಿಗದಿತ ಶುಲ್ಕ:** ಪ್ರತಿ ಸ್ಥಾಪನಕ್ಕೆ, ಪ್ರತಿ ಕಿ.ವಾಟ್‌ಗೆ, ಪ್ರತಿ ತಿಂಗಳಿಗೆ 50 ಕಿ.ವಾಟ್ ಅನ್ನು ಒಳಗೊಂಡಂತೆ, ಪ್ರತಿ ಕಿ.ವಾಟ್‌ಗೆ	180
			50 ಕಿ.ವಾಟ್ ಮೀರಿದ ಪ್ರತಿ ಹೆಚ್ಚುವರಿ ಕಿಲೋವಾಟ್‌ಗೆ	250			50 ಕಿ.ವಾಟ್ ಮೀರಿದ ಪ್ರತಿ ಹೆಚ್ಚುವರಿ ಕಿಲೋವಾಟ್‌ಗೆ	250
			ವಿದ್ಯುತ್ ಬಳಕೆ ಶುಲ್ಕ:				**ವಿದ್ಯುತ್ ಬಳಕೆ ಶುಲ್ಕ:**	
			ಆ ತಿಂಗಳಲ್ಲಿ ಬಳಸಿದ ವಿದ್ಯುತ್ತಿನ ಪ್ರತಿ ಯೂನಿಟ್ಟಿನ ಸಂಪೂರ್ಣ ಬಳಕೆಗಾಗಿ	7.75			ಆ ತಿಂಗಳಲ್ಲಿ ಬಳಸಿದ ವಿದ್ಯುತ್ತಿನ ಪ್ರತಿ ಯೂನಿಟ್ಟಿನ ಸಂಪೂರ್ಣ ಬಳಕೆಗಾಗಿ	8.24
			ಗ್ರಾಮ ಪಂಚಾಯತಿಗಳ ಗ್ರಾಹಕರಿಗೆ ಇಂಧನ ಶುಲ್ಕದಲ್ಲಿ ಪ್ರತಿ ಯೂನಿಟ್‌ಗೆ 30 ಪೈಸೆ ರಿಯಾಯಿತಿ				**ಗ್ರಾಮ ಪಂಚಾಯತಿಗಳ ಗ್ರಾಹಕರಿಗೆ ಇಂಧನ ಶುಲ್ಕದಲ್ಲಿ ಪ್ರತಿ ಯೂನಿಟ್‌ಗೆ 30 ಪೈಸೆ ರಿಯಾಯಿತಿ**	
4	ಎಲ್.ಟಿ.3(ಎ):	**ವಾಣಿಜ್ಯ ದೀಪ, ತಾಪನ ಮತ್ತು ಮೋಟೀವ್ ಪವರ್ ಮತ್ತು ಕ್ಲಿನಿಕ್‌ಗಳು, ಮಾಹಿತಿ ತಂತ್ರಜ್ಞಾನ ಸಂಬಂಧಿತ ಸೇವಾ ಸ್ಥಾಪನಗಳು, ಹಾಗೂ ಹಾಲಿ ವಿದ್ಯುತ್ ದರದಲ್ಲಿನ ಇತರೆ ಸ್ಥಾಪನಗಳು** (ಎಲ್ಲಾ ಪ್ರದೇಶಗಳಿಗೆ ಅನ್ವಯಿಸುತ್ತದೆ)	ನಿಗದಿತ ಶುಲ್ಕ: ಪ್ರತಿ ಸ್ಥಾಪನಕ್ಕೆ, ಪ್ರತಿ ಕಿ.ವಾಟ್‌ಗೆ, ಪ್ರತಿ ತಿಂಗಳಿಗೆ 50 ಕಿ.ವಾಟ್ ಅನ್ನು ಒಳಗೊಂಡಂತೆ, ಪ್ರತಿ ಕಿ.ವಾಟ್‌ಗೆ	200	ಎಲ್.ಟಿ.3(ಎ):	**ವಾಣಿಜ್ಯ ದೀಪ, ತಾಪನ ಮತ್ತು ಮೋಟೀವ್ ಪವರ್ ಮತ್ತು ಕ್ಲಿನಿಕ್‌ಗಳು, ಮಾಹಿತಿ ತಂತ್ರಜ್ಞಾನ ಸಂಬಂಧಿತ ಸೇವಾ ಸ್ಥಾಪನಗಳು, ಹಾಗೂ ಹಾಲಿ ವಿದ್ಯುತ್ ದರದಲ್ಲಿನ ಇತರೆ ಸ್ಥಾಪನಗಳು** (ಎಲ್ಲಾ ಪ್ರದೇಶಗಳಿಗೆ ಅನ್ವಯಿಸುತ್ತದೆ)	ನಿಗದಿತ ಶುಲ್ಕ: ಪ್ರತಿ ಸ್ಥಾಪನಕ್ಕೆ, ಪ್ರತಿ ಕಿ.ವಾಟ್‌ಗೆ, ಪ್ರತಿ ತಿಂಗಳಿಗೆ 50 ಕಿ.ವಾಟ್ ಅನ್ನು ಒಳಗೊಂಡಂತೆ, ಪ್ರತಿ ಕಿ.ವಾಟ್‌ಗೆ	200
			50 ಕಿ.ವಾಟ್ ಮೀರಿದ ಪ್ರತಿ ಹೆಚ್ಚುವರಿ ಕಿಲೋವಾಟ್‌ಗೆ	300			50 ಕಿ.ವಾಟ್ ಮೀರಿದ ಪ್ರತಿ ಹೆಚ್ಚುವರಿ ಕಿಲೋವಾಟ್‌ಗೆ	300
			ವಿದ್ಯುತ್ ಬಳಕೆ ಶುಲ್ಕ:				ವಿದ್ಯುತ್ ಬಳಕೆ ಶುಲ್ಕ:	
			ಆ ತಿಂಗಳಲ್ಲಿ ಬಳಸಿದ ವಿದ್ಯುತ್ತಿನ ಪ್ರತಿ ಯೂನಿಟ್ಟಿನ ಸಂಪೂರ್ಣ ಬಳಕೆಗಾಗಿ	8.50			ಆ ತಿಂಗಳಲ್ಲಿ ಬಳಸಿದ ವಿದ್ಯುತ್ತಿನ ಪ್ರತಿ ಯೂನಿಟ್ಟಿನ ಸಂಪೂರ್ಣ ಬಳಕೆಗಾಗಿ	8.99
			ಗ್ರಾಮ ಪಂಚಾಯತಿಗಳ ಗ್ರಾಹಕರಿಗೆ ಇಂಧನ ಶುಲ್ಕದಲ್ಲಿ ಪ್ರತಿ ಯೂನಿಟ್‌ಗೆ 30 ಪೈಸೆ ರಿಯಾಯಿತಿ				**ಗ್ರಾಮ ಪಂಚಾಯತಿಗಳ ಗ್ರಾಹಕರಿಗೆ ಇಂಧನ ಶುಲ್ಕದಲ್ಲಿ ಪ್ರತಿ ಯೂನಿಟ್‌ಗೆ 30 ಪೈಸೆ ರಿಯಾಯಿತಿ**	
			ಬೇಡಿಕೆ ಆಧಾರಿತ ದರ(ಐಚ್ಛಿಕ)				**ಬೇಡಿಕೆ ಆಧಾರಿತ ದರ(ಐಚ್ಛಿಕ)**	
			ನಿಗದಿತ ಶುಲ್ಕ: ಪ್ರತಿ ಸ್ಥಾಪನಕ್ಕೆ, ಪ್ರತಿ ಕಿ.ವಾಟ್‌ಗೆ, ಪ್ರತಿ ತಿಂಗಳಿಗೆ 50 ಕಿ.ವಾಟ್ ಅನ್ನು ಒಳಗೊಂಡಂತೆ, ಪ್ರತಿ ಕಿ.ವಾಟ್‌ಗೆ	220			ನಿಗದಿತ ಶುಲ್ಕ: ಪ್ರತಿ ಸ್ಥಾಪನಕ್ಕೆ, ಪ್ರತಿ ಕಿ.ವಾಟ್‌ಗೆ, ಪ್ರತಿ ತಿಂಗಳಿಗೆ 50 ಕಿ.ವಾಟ್ ಅನ್ನು ಒಳಗೊಂಡಂತೆ, ಪ್ರತಿ ಕಿ.ವಾಟ್‌ಗೆ	220
			50 ಕಿ.ವಾಟ್ ಮೀರಿದ ಪ್ರತಿ ಹೆಚ್ಚುವರಿ ಕಿಲೋವಾಟ್‌ಗೆ	320			50 ಕಿ.ವಾಟ್ ಮೀರಿದ ಪ್ರತಿ ಹೆಚ್ಚುವರಿ ಕಿಲೋವಾಟ್‌ಗೆ	320
			ವಿದ್ಯುತ್ ಬಳಕೆ ಶುಲ್ಕ:				ವಿದ್ಯುತ್ ಬಳಕೆ ಶುಲ್ಕ :	
			ಆ ತಿಂಗಳಲ್ಲಿ ಬಳಸಿದ ವಿದ್ಯುತ್ತಿನ ಪ್ರತಿ ಯೂನಿಟ್ಟಿನ ಸಂಪೂರ್ಣ ಬಳಕೆಗಾಗಿ	8.50			**ಆ ತಿಂಗಳಲ್ಲಿ ಬಳಸಿದ ವಿದ್ಯುತ್ತಿನ ಪ್ರತಿ ಯೂನಿಟ್ಟಿನ ಸಂಪೂರ್ಣ ಬಳಕೆಗಾಗಿ**	8.99
	ಎಲ್.ಟಿ.3(ಬಿ)	**ಹೋರ್ಡಿಂಗ್‌ಗಳು ಮತ್ತು ಜಾಹಿರಾತು ಫಲಕಗಳು (ಎಲ್ಲಾ ಪ್ರದೇಶಗಳಿಗೆ ಅನ್ವಯಿಸುತ್ತದೆ)**	ನಿಗದಿತ ಶುಲ್ಕ: ಪ್ರತಿ ಸ್ಥಾಪನಕ್ಕೆ, ಪ್ರತಿ ತಿಂಗಳಿಗೆ, 67 ಹೆಚ್.ಪಿ ವರೆಗೆ ಮಾತ್ರ	200	ಎಲ್.ಟಿ.3(ಬಿ)	**ಹೋರ್ಡಿಂಗ್‌ಗಳು ಮತ್ತು ಜಾಹಿರಾತು ಫಲಕಗಳು (ಎಲ್ಲಾ ಪ್ರದೇಶಗಳಿಗೆ ಅನ್ವಯಿಸುತ್ತದೆ)**	ನಿಗದಿತ ಶುಲ್ಕ: ಪ್ರತಿ ಸ್ಥಾಪನಕ್ಕೆ, ಪ್ರತಿ ತಿಂಗಳಿಗೆ, 67 ಹೆಚ್.ಪಿ ವರೆಗೆ ಮಾತ್ರ	200
			ವಿದ್ಯುತ್ ಬಳಕೆ ಶುಲ್ಕ:				ವಿದ್ಯುತ್ ಬಳಕೆ ಶುಲ್ಕ:	
			ಸಂಪೂರ್ಣ ಬಳಕೆಗಾಗಿ	10.50			ಸಂಪೂರ್ಣ ಬಳಕೆಗಾಗಿ	10.99
5	ಎಲ್.ಟಿ–4	**ಎಲ್.ಟಿ–4(ಎ):** 10 ಹೆಚ್.ಪಿ. ಹಾಗೂ ಕಡಿಮೆ ಹೊರೆಯ ನೀರಾವರಿ ಪಂಪುಸೆಟ್ಟು ಸ್ಥಾಪನಗಳಿಗೆ:	**ವಿದ್ಯುತ್ ಪೂರೈಕೆ ಪಡೆಯುತ್ತಿರುವ 10 ಹೆಚ್.ಪಿ.ವರೆಗಿನ ಕೃಷಿ ಪಂಪುಸೆಟ್ಟುಗಳಿಗೆ ಅನ್ವಯಿಸುತ್ತದೆ.**	ಕ.ಸ. ಆದೇಶದ ಪ್ರಕಾರ ಉಚಿತ	ಎಲ್.ಟಿ–4	**ಎಲ್.ಟಿ–4(ಎ):** 10 ಹೆಚ್.ಪಿ. ಹಾಗೂ ಕಡಿಮೆ ಹೊರೆಯ ನೀರಾವರಿ ಪಂಪುಸೆಟ್ಟು ಸ್ಥಾಪನಗಳಿಗೆ:	**ವಿದ್ಯುತ್ ಪೂರೈಕೆ ಪಡೆಯುತ್ತಿರುವ 10 ಹೆಚ್.ಪಿ.ವರೆಗಿನ ಕೃಷಿ ಪಂಪುಸೆಟ್ಟುಗಳಿಗೆ ಅನ್ವಯಿಸುತ್ತದೆ.**	ಕ.ಸ. ಆದೇಶದ ಪ್ರಕಾರ ಉಚಿತ
			ವಿದ್ಯುತ್ ಬಳಕೆ ಶುಲ್ಕ: ಆ ತಿಂಗಳಲ್ಲಿ ಬಳಸಿದ ವಿದ್ಯುತ್ತಿನ ಪ್ರತಿ ಯೂನಿಟ್ಟಿಗೆ				**ವಿದ್ಯುತ್ ಬಳಕೆ ಶುಲ್ಕ:** ಆ ತಿಂಗಳಲ್ಲಿ ಬಳಸಿದ ವಿದ್ಯುತ್ತಿನ ಪ್ರತಿ ಯೂನಿಟ್ಟಿಗೆ	
			ಟಿಪ್ಪಣಿ: ಕರ್ನಾಟಕ ಸರ್ಕಾರವು ಸಹಾಯ ಧನದ ನೆರವನ್ನು ಮುಂಗಡವಾಗಿ ಒದಗಿಸತಕ್ಕದ್ದು. ವರ್ಷದ ಆಯಾ ತ್ರೈಮಾಸಿಕದ ಪ್ರಾರಂಭದಲ್ಲಿ ಸಹಾಯಧನದ ನೆರವನ್ನು ಬಿಡುಗಡೆ ಮಾಡದಿದ್ದಲ್ಲಿ, ವಿದ್ಯುತ್ ಸರಬರಾಜು ಕಂಪನಿಗಳು, ಗ್ರಾಹಕರಿಗೆ ಸೂಕ್ತ ನೋಟೀಸನ್ನು ಜಾರಿಗೊಳಿಸಿ, ಮೇಲಿನಂತೆ ಬಳಕೆಯ ಪ್ರತಿ ಯೂನಿಟ್ಟಿಗೆ ವಿದ್ಯುತ್ ಬಳಕೆ ಶುಲ್ಕವನ್ನು ವಸೂಲು ಮಾಡತಕ್ಕದ್ದು.	4.76			**ಟಿಪ್ಪಣಿ: ಕರ್ನಾಟಕ ಸರ್ಕಾರವು ಸಹಾಯ ಧನದ ನೆರವನ್ನು ಮುಂಗಡವಾಗಿ ಒದಗಿಸತಕ್ಕದ್ದು. ವರ್ಷದ ಆಯಾ ತ್ರೈಮಾಸಿಕದ ಪ್ರಾರಂಭದಲ್ಲಿ ಸಹಾಯಧನದ ನೆರವನ್ನು ಬಿಡುಗಡೆ ಮಾಡದಿದ್ದಲ್ಲಿ, ವಿದ್ಯುತ್ ಸರಬರಾಜು ಕಂಪನಿಗಳು, ಗ್ರಾಹಕರಿಗೆ ಸೂಕ್ತ ನೋಟೀಸನ್ನು ಜಾರಿಗೊಳಿಸಿ, ಮೇಲಿನಂತೆ ಬಳಕೆಯ ಪ್ರತಿ ಯೂನಿಟ್ಟಿಗೆ ವಿದ್ಯುತ್ ಬಳಕೆ ಶುಲ್ಕವನ್ನು ವಸೂಲು ಮಾಡತಕ್ಕದ್ದು.**	5.25
		ಎಲ್.ಟಿ.4(ಬಿ): 10 ಹೆಚ್.ಪಿ. ಗಿಂತ ಹೆಚ್ಚಿನ ಸಾಮರ್ಥ್ಯದ ನೀರಾವರಿ ಪಂಪು ಸೆಟ್ಟುಗಳಿಗೆ ಅನ್ವಯಿಸುತ್ತದೆ	**ನಿಗದಿತ ಶುಲ್ಕ:** ಪ್ರತಿ ತಿಂಗಳಿಗೆ, ಪ್ರತಿ ಹೆಚ್.ಪಿ.ಗೆ.	135		**ಎಲ್.ಟಿ.4(ಬಿ):** 10 ಹೆಚ್.ಪಿ. ಗಿಂತ ಹೆಚ್ಚಿನ ಸಾಮರ್ಥ್ಯದ ನೀರಾವರಿ ಪಂಪು ಸೆಟ್ಟುಗಳಿಗೆ ಅನ್ವಯಿಸುತ್ತದೆ	**ನಿಗದಿತ ಶುಲ್ಕ:** ಪ್ರತಿ ತಿಂಗಳಿಗೆ, ಪ್ರತಿ ಹೆಚ್.ಪಿ.ಗೆ.	135
			ವಿದ್ಯುತ್ ಬಳಕೆ ಶುಲ್ಕ: ಆ ತಿಂಗಳಲ್ಲಿ ಬಳಸಿದ ವಿದ್ಯುತ್ತಿನ ಪ್ರತಿ ಯೂನಿಟ್ಟಿಗೆ	4.10			**ವಿದ್ಯುತ್ ಬಳಕೆ ಶುಲ್ಕ:** ಆ ತಿಂಗಳಲ್ಲಿ ಬಳಸಿದ ವಿದ್ಯುತ್ತಿನ ಪ್ರತಿ ಯೂನಿಟ್ಟಿಗೆ	4.59
		ಎಲ್.ಟಿ.4(ಸಿ): ಖಾಸಗಿ ತೋಟಗಾರಿಕೆ ನರ್ಸರಿಗಳು, ಕಾಫಿ, ಟೀ ಬೆಳೆಗಳಿಗೆ ಅನ್ವಯಿಸುತ್ತದೆ.	**ನಿಗದಿತ ಶುಲ್ಕ:** ಪ್ರತಿ ತಿಂಗಳಿಗೆ, ಪ್ರತಿ ಹೆಚ್.ಪಿ.ಗೆ. ರೂ.	135		**ಎಲ್.ಟಿ.4(ಸಿ):** ಖಾಸಗಿ ತೋಟಗಾರಿಕೆ ನರ್ಸರಿಗಳು, ಕಾಫಿ, ಟೀ ಬೆಳೆಗಳಿಗೆ ಅನ್ವಯಿಸುತ್ತದೆ.	**ನಿಗದಿತ ಶುಲ್ಕ:** ಪ್ರತಿ ತಿಂಗಳಿಗೆ, ಪ್ರತಿ ಹೆಚ್.ಪಿ.ಗೆ. ರೂ.	135
			ವಿದ್ಯುತ್ ಬಳಕೆ ಶುಲ್ಕ: ಆ ತಿಂಗಳಲ್ಲಿ ಬಳಸಿದ ವಿದ್ಯುತ್ತಿನ ಪ್ರತಿ ಯೂನಿಟ್ಟಿಗೆ	4.25			**ವಿದ್ಯುತ್ ಬಳಕೆ ಶುಲ್ಕ:** ಆ ತಿಂಗಳಲ್ಲಿ ಬಳಸಿದ ವಿದ್ಯುತ್ತಿನ ಪ್ರತಿ ಯೂನಿಟ್ಟಿಗೆ	4.74
6	ಎಲ್.ಟಿ–5	**ದೀಪವೂ ಸೇರಿದಂತೆ, ಕೈಗಾರಿಕೆ, ಕೈಗಾರಿಕೇತರ, ತಾಪನ ಮತ್ತು ಮೋಟೀವ್ ಪವರ್** (ಎಲ್ಲಾ ಪ್ರದೇಶಗಳಿಗೆ ಅನ್ವಯಿಸುತ್ತದೆ)	**ನಿಗದಿತ ಶುಲ್ಕ:**		ಎಲ್.ಟಿ–5	**ದೀಪವೂ ಸೇರಿದಂತೆ, ಕೈಗಾರಿಕೆ, ಕೈಗಾರಿಕೇತರ, ತಾಪನ ಮತ್ತು ಮೋಟೀವ್ ಪವರ್** (ಎಲ್ಲಾ ಪ್ರದೇಶಗಳಿಗೆ ಅನ್ವಯಿಸುತ್ತದೆ)	**ನಿಗದಿತ ಶುಲ್ಕ:**	
			100 ಹೆಚ್.ಪಿಯನ್ನು ಒಳಗೊಂಡಂತೆ 100 ಹೆಚ್.ಪಿ ವರೆಗಿನ ಪ್ರತಿ ಹೆಚ್.ಪಿ ವರೆಗೆ	140			100 ಹೆಚ್.ಪಿಯನ್ನು ಒಳಗೊಂಡಂತೆ 100 ಹೆಚ್.ಪಿ ವರೆಗಿನ ಪ್ರತಿ ಹೆಚ್.ಪಿ ವರೆಗೆ	140
			100 ಹೆಚ್.ಪಿ ಮೀರಿದ ಪ್ರತಿ ಹೆಚ್.ಪಿ ವರೆಗೆ	250			100 ಹೆಚ್.ಪಿ ಮೀರಿದ ಪ್ರತಿ ಹೆಚ್.ಪಿ ವರೆಗೆ	250
			ವಿದ್ಯುತ್ ಬಳಕೆ ಶುಲ್ಕ: ಆ ತಿಂಗಳಲ್ಲಿ ಬಳಸಿದ ವಿದ್ಯುತ್ತಿನ ಪ್ರತಿ ಯೂನಿಟ್ಟಿಗೆ				**ವಿದ್ಯುತ್ ಬಳಕೆ ಶುಲ್ಕ:** ಆ ತಿಂಗಳಲ್ಲಿ ಬಳಸಿದ ವಿದ್ಯುತ್ತಿನ ಪ್ರತಿ ಯೂನಿಟ್ಟಿಗೆ	
			ಬಳಸಿದ ಮೊದಲ 500 ಯೂನಿಟ್ಟುಗಳವರೆಗೆ, ಪ್ರತಿ ಯೂನಿಟ್ಟಿಗೆ	6.10			ಬಳಸಿದ ಮೊದಲ 500 ಯೂನಿಟ್ಟುಗಳವರೆಗೆ, ಪ್ರತಿ ಯೂನಿಟ್ಟಿಗೆ	6.59
			500 ಯೂನಿಟ್ಟುಗಳನ್ನು ಮೀರಿ ಬಳಸಿದ ಪ್ರತಿ ಯೂನಿಟ್ಟಿಗೆ	7.10			500 ಯೂನಿಟ್ಟುಗಳನ್ನು ಮೀರಿ ಬಳಸಿದ ಪ್ರತಿ ಯೂನಿಟ್ಟಿಗೆ	7.59
			ಗ್ರಾಮ ಪಂಚಾಯತಿಗಳ ಗ್ರಾಹಕರಿಗೆ ಇಂಧನ ಶುಲ್ಕದಲ್ಲಿ ಪ್ರತಿ ಯೂನಿಟ್‌ಗೆ 30 ಪೈಸೆ ರಿಯಾಯಿತಿ				**ಗ್ರಾಮ ಪಂಚಾಯತಿಗಳ ಗ್ರಾಹಕರಿಗೆ ಇಂಧನ ಶುಲ್ಕದಲ್ಲಿ ಪ್ರತಿ ಯೂನಿಟ್‌ಗೆ 30 ಪೈಸೆ ರಿಯಾಯಿತಿ**	
			ಬೇಡಿಕೆ ಆಧಾರಿತ ದರ(ಐಚ್ಛಿಕ)				**ಬೇಡಿಕೆ ಆಧಾರಿತ ದರ(ಐಚ್ಛಿಕ)**	
			ನಿಗದಿತ ಶುಲ್ಕ: (ಬಿಲ್ಲಿಂಗ್ ಡಿಮ್ಯಾಂಡ್ ಮೇಲೆ) ಪ್ರತಿ ಕಿ.ವ್ಯಾ. ಪ್ರತಿ ತಿಂಗಳಿಗೆ				**ನಿಗದಿತ ಶುಲ್ಕ:** (ಬಿಲ್ಲಿಂಗ್ ಡಿಮ್ಯಾಂಡ್ ಮೇಲೆ) ಪ್ರತಿ ಕಿ.ವ್ಯಾ. ಪ್ರತಿ ತಿಂಗಳಿಗೆ	
			100 ಹೆಚ್.ಪಿಯನ್ನು ಒಳಗೊಂಡಂತೆ 100 ಹೆಚ್.ಪಿ ವರೆಗಿನ ಪ್ರತಿ ಹೆಚ್.ಪಿ ವರೆಗೆ	190			100 ಹೆಚ್.ಪಿಯನ್ನು ಒಳಗೊಂಡಂತೆ 100 ಹೆಚ್.ಪಿ ವರೆಗಿನ ಪ್ರತಿ ಹೆಚ್.ಪಿ ವರೆಗೆ	190
			100 ಹೆಚ್.ಪಿ ಮೀರಿದ ಪ್ರತಿ ಹೆಚ್.ಪಿ ವರೆಗೆ	300			100 ಹೆಚ್.ಪಿ ಮೀರಿದ ಪ್ರತಿ ಹೆಚ್.ಪಿ ವರೆಗೆ	300
			ವಿದ್ಯುತ್ ಬಳಕೆ ಶುಲ್ಕ: ಆ ತಿಂಗಳಲ್ಲಿ ಬಳಸಿದ ವಿದ್ಯುತ್ತಿನ ಪ್ರತಿ ಯೂನಿಟ್ಟಿಗೆ				**ವಿದ್ಯುತ್ ಬಳಕೆ ಶುಲ್ಕ:** ಆ ತಿಂಗಳಲ್ಲಿ ಬಳಸಿದ ವಿದ್ಯುತ್ತಿನ ಪ್ರತಿ ಯೂನಿಟ್ಟಿಗೆ	
			ಬಳಸಿದ ಮೊದಲ 500 ಯೂನಿಟ್ಟುಗಳವರೆಗೆ, ಪ್ರತಿ ಯೂನಿಟ್ಟಿಗೆ	6.10			ಬಳಸಿದ ಮೊದಲ 500 ಯೂನಿಟ್ಟುಗಳವರೆಗೆ, ಪ್ರತಿ ಯೂನಿಟ್ಟಿಗೆ	6.59
			500 ಯೂನಿಟ್ಟುಗಳನ್ನು ಮೀರಿ ಬಳಸಿದ ಪ್ರತಿ ಯೂನಿಟ್ಟಿಗೆ	7.10			500 ಯೂನಿಟ್ಟುಗಳನ್ನು ಮೀರಿ ಬಳಸಿದ ಪ್ರತಿ ಯೂನಿಟ್ಟಿಗೆ	7.59
		ಸಮಯಾಧಾರಿತ ವಿದ್ಯುತ್ ದರ (ಐಚ್ಛಿಕ)–ಎಲ್.ಟಿ.5ಗೆ ಅನ್ವಯಿಸುತ್ತದೆ				**ಸಮಯಾಧಾರಿತ ವಿದ್ಯುತ್ ದರ (ಐಚ್ಛಿಕ)–ಎಲ್.ಟಿ.5ಗೆ ಅನ್ವಯಿಸುತ್ತದೆ**		
		ಅನ್ವಯವಾಗುವ ಸಾಮಾನ್ಯ ಸುಂಕಕ್ಕಿಂತ ದಿನದ ಸಮಯ ಹೆಚ್ಚಳ (+)/ಕಡಿತ(–)				**ಅನ್ವಯವಾಗುವ ಸಾಮಾನ್ಯ ಸುಂಕಕ್ಕಿಂತ ದಿನದ ಸಮಯ ಹೆಚ್ಚಳ (+)/ಕಡಿತ(–)**		
		ಸಮಯಾಧಾರಿತ ಅವಧಿ	**ಜುಲೈ–ನವೆಂಬರ್(ಪೈಸೆ/ಯುನಿಟ್)**	**ಡಿಸೆಂಬರ್–ಜೂನ್ (ಪೈಸೆ/ ಯುನಿಟ್)**		**ಸಮಯಾಧಾರಿತ ಅವಧಿ**	**ಜುಲೈ–ನವೆಂಬರ್(ಪೈಸೆ/ಯುನಿಟ್)**	**ಡಿಸೆಂಬರ್–ಜೂನ್ (ಪೈಸೆ/ ಯುನಿಟ್)**
		06.00 ರಿಂದ 10.00 ರವರೆಗೆ	0.00	0.00		06.00 ರಿಂದ 10.00 ರವರೆಗೆ	0.00	0.00
		10.00 ರಿಂದ 18.00 ರವರೆಗೆ	0.00	0.00		10.00 ರಿಂದ 18.00 ರವರೆಗೆ	0.00	0.00
		18.00 ರಿಂದ 22.00 ರವರೆಗೆ	0.00	(+)100		18.00 ರಿಂದ 22.00 ರವರೆಗೆ	0.00	(+)100
		22.00 ರಿಂದ 06.00 ರವರೆಗೆ	0.00	(–)100		22.00 ರಿಂದ 06.00 ರವರೆಗೆ	0.00	(–)100
7	ಎಲ್.ಟಿ–6	**ಎಲ್.ಟಿ–6 (ಎ):** ನೀರು ಸರಬರಾಜು: ನಿವಾಸಿ ಬಡಾವಣೆಗಳು ನೀರು ಸರಬರಾಜು ಸ್ಥಾಪನಗಳು	**ನಿಗದಿತ ಶುಲ್ಕ:** 67 ಹೆಚ್.ಪಿಯನ್ನು ಒಳಗೊಂಡಂತೆ 67 ಹೆಚ್.ಪಿ ವರೆಗಿನ ಪ್ರತಿ ಹೆಚ್.ಪಿ ವರೆಗೆ	175	ಎಲ್.ಟಿ–6	**ಎಲ್.ಟಿ–6 (ಎ):** ನೀರು ಸರಬರಾಜು: ನಿವಾಸಿ ಬಡಾವಣೆಗಳು ನೀರು ಸರಬರಾಜು ಸ್ಥಾಪನಗಳು	ನಿಗದಿತ ಶುಲ್ಕ: 67 ಹೆಚ್.ಪಿಯನ್ನು ಒಳಗೊಂಡಂತೆ 67 ಹೆಚ್.ಪಿ ವರೆಗಿನ ಪ್ರತಿ ಹೆಚ್.ಪಿ ವರೆಗೆ	175
			67 ಹೆಚ್.ಪಿ ಮೀರಿದ ಪ್ರತಿ ಹೆಚ್.ಪಿ ವರೆಗೆ	275			67 ಹೆಚ್.ಪಿ ಮೀರಿದ ಪ್ರತಿ ಹೆಚ್.ಪಿ ವರೆಗೆ	275
			ಮತ್ತು				ಮತ್ತು	
			ವಿದ್ಯುತ್ ಬಳಕೆ ಶುಲ್ಕ: ಆ ತಿಂಗಳಲ್ಲಿ ಬಳಸಿದ ವಿದ್ಯುತ್ತಿನ ಪ್ರತಿ ಯೂನಿಟ್ಟಿಗೆ	5.50			**ವಿದ್ಯುತ್ ಬಳಕೆ ಶುಲ್ಕ:** ಆ ತಿಂಗಳಲ್ಲಿ ಬಳಸಿದ ವಿದ್ಯುತ್ತಿನ ಪ್ರತಿ ಯೂನಿಟ್ಟಿಗೆ	5.99
		ಎಲ್.ಟಿ–6 (ಬಿ): ಬೀದಿ ದೀಪ: ಸಾರ್ವಜನಿಕ ದೀಪ, ಸಂಚಾರ ನಿಯಂತ್ರಣ ದೀಪ, ಸಬ್–ವೇಗಳಿಗೆ ಅನ್ವಯಿಸುತ್ತದೆ	**ನಿಗದಿತ ಶುಲ್ಕ:** ಮಂಜೂರಾದ ವಿದ್ಯುತ್ ಪ್ರಮಾಣದ ಪ್ರತಿ ಕಿ.ವಾಟ್‌ಗೆ, ಪ್ರತಿ ತಿಂಗಳಿಗೆ	175		**ಎಲ್.ಟಿ–6 (ಬಿ):** ಬೀದಿ ದೀಪ: ಸಾರ್ವಜನಿಕ ದೀಪ, ಸಂಚಾರ ನಿಯಂತ್ರಣ ದೀಪ, ಸಬ್–ವೇಗಳಿಗೆ ಅನ್ವಯಿಸುತ್ತದೆ	**ನಿಗದಿತ ಶುಲ್ಕ:** ಮಂಜೂರಾದ ವಿದ್ಯುತ್ ಪ್ರಮಾಣದ, ಪ್ರತಿ ಕಿ.ವಾಟ್‌ಗೆ, ಪ್ರತಿ ತಿಂಗಳಿಗೆ	175
			ಮತ್ತು				ಮತ್ತು	
			ವಿದ್ಯುತ್ ಬಳಕೆ ಶುಲ್ಕ: ಆ ತಿಂಗಳಲ್ಲಿ ಬಳಸಿದ ವಿದ್ಯುತ್ತಿನ ಪ್ರತಿ ಯೂನಿಟ್ಟಿಗೆ	7.00			**ವಿದ್ಯುತ್ ಬಳಕೆ ಶುಲ್ಕ:** ಆ ತಿಂಗಳಲ್ಲಿ ಬಳಸಿದ ವಿದ್ಯುತ್ತಿನ ಪ್ರತಿ ಯೂನಿಟ್ಟಿಗೆ	7.49
		ಎಲ್.ಇ.ಡಿ ದೀಪ	**ವಿದ್ಯುತ್ ಬಳಕೆ ಶುಲ್ಕ:** ಆ ತಿಂಗಳಲ್ಲಿ ಬಳಸಿದ ವಿದ್ಯುತ್ತಿನ ಪ್ರತಿ ಯೂನಿಟ್ಟಿಗೆ	6.00		ಎಲ್.ಇ.ಡಿ ದೀಪ	**ವಿದ್ಯುತ್ ಬಳಕೆ ಶುಲ್ಕ:** ಆ ತಿಂಗಳಲ್ಲಿ ಬಳಸಿದ ವಿದ್ಯುತ್ತಿನ ಪ್ರತಿ ಯೂನಿಟ್ಟಿಗೆ	6.00
		ಎಲ್.ಟಿ–6(ಸಿ): ಎಲೆಕ್ಟ್ರಿಕ್ ವೆಹಿಕಲ್ ಚಾರ್ಜಿಂಗ್ ಸ್ಟೇಷನ್‌ಗಳಿಗೆ ಅನ್ವಯಿಸುತ್ತದೆ (ಎಲ್ಲಾ ಪ್ರದೇಶಗಳಿಗೆ ಅನ್ವಯಿಸುತ್ತದೆ)	ನಿಗದಿತ ಶುಲ್ಕ: 50 ಕಿ.ವಾಟ್ ವರೆಗೆ ಪ್ರತಿ ಕಿ.ವಾಟ್‌ಗೆ, ಪ್ರತಿ ತಿಂಗಳಿಗೆ–ಎಲ್.ಟಿ.	70		**ಎಲ್.ಟಿ–6(ಸಿ):** ಎಲೆಕ್ಟ್ರಿಕ್ ವೆಹಿಕಲ್ ಚಾರ್ಜಿಂಗ್ ಸ್ಟೇಷನ್‌ಗಳಿಗೆ ಅನ್ವಯಿಸುತ್ತದೆ (ಎಲ್ಲಾ ಪ್ರದೇಶಗಳಿಗೆ ಅನ್ವಯಿಸುತ್ತದೆ)	ನಿಗದಿತ ಶುಲ್ಕ: 50 ಕಿ.ವಾಟ್ ವರೆಗೆ ಪ್ರತಿ ಕಿ.ವಾಟ್‌ಗೆ, ಪ್ರತಿ ತಿಂಗಳಿಗೆ–ಎಲ್.ಟಿ.	70
			ನಿಗದಿತ ಶುಲ್ಕ: 50 ಕಿ.ವಾಟ್‌ಗಿಂತ ಮೇಲ್ಪಟ್ಟು ಪ್ರತಿ ಹೆಚ್ಚುವರಿ ಕಿ.ವಾಟ್‌ಗೆ, ಪ್ರತಿ ತಿಂಗಳಿಗೆ –ಎಲ್.ಟಿ.	170			ನಿಗದಿತ ಶುಲ್ಕ: 50 ಕಿ.ವಾಟ್‌ಗಿಂತ ಮೇಲ್ಪಟ್ಟು ಪ್ರತಿ ಹೆಚ್ಚುವರಿ ಕಿ.ವಾಟ್‌ಗೆ, ಪ್ರತಿ ತಿಂಗಳಿಗೆ –ಎಲ್.ಟಿ.	170
			ನಿಗದಿತ ಶುಲ್ಕ: ಮಂಜೂರಾದ ವಿದ್ಯುತ್ ಪ್ರಮಾಣದ ಪ್ರತಿ ಕಿ.ವಾಟ್‌ಗೆ, ಪ್ರತಿ ತಿಂಗಳಿಗೆ –ಹೆಚ್.ಟಿ.	200			ನಿಗದಿತ ಶುಲ್ಕ: ಮಂಜೂರಾದ ವಿದ್ಯುತ್ ಪ್ರಮಾಣದ ಪ್ರತಿ ಕಿ.ವಾಟ್‌ಗೆ, ಪ್ರತಿ ತಿಂಗಳಿಗೆ –ಹೆಚ್.ಟಿ.	200
			ವಿದ್ಯುತ್ ಬಳಕೆ ಶುಲ್ಕ: ಆ ತಿಂಗಳಲ್ಲಿ ಬಳಸಿದ ವಿದ್ಯುತ್ತಿನ ಪ್ರತಿ ಯೂನಿಟ್ಟಿಗೆ–ಹೆಚ್.ಟಿ ಮತ್ತು ಎಲ್.ಟಿ.	4.50			ವಿದ್ಯುತ್ ಬಳಕೆ ಶುಲ್ಕ: ಆ ತಿಂಗಳಲ್ಲಿ ಬಳಸಿದ ವಿದ್ಯುತ್ತಿನ ಪ್ರತಿ ಯೂನಿಟ್ಟಿಗೆ–ಹೆಚ್.ಟಿ ಮತ್ತು ಎಲ್.ಟಿ.	4.99
		ಸಮಯಾಧಾರಿತ ವಿದ್ಯುತ್ ದರ (ಐಚ್ಛಿಕ)–ಎಲ್.ಟಿ.6(ಸಿ)ಗೆ ಅನ್ವಯಿಸುತ್ತದೆ				**ಸಮಯಾಧಾರಿತ ವಿದ್ಯುತ್ ದರ (ಐಚ್ಛಿಕ)–ಎಲ್.ಟಿ.6(ಸಿ)ಗೆ ಅನ್ವಯಿಸುತ್ತದೆ**		
		ಅನ್ವಯವಾಗುವ ಸಾಮಾನ್ಯ ಸುಂಕಕ್ಕಿಂತ ದಿನದ ಸಮಯ ಹೆಚ್ಚಳ (+)/ಕಡಿತ(–)				**ಅನ್ವಯವಾಗುವ ಸಾಮಾನ್ಯ ಸುಂಕಕ್ಕಿಂತ ದಿನದ ಸಮಯ ಹೆಚ್ಚಳ (+)/ಕಡಿತ(–)**		
		ಸಮಯಾಧಾರಿತ ಅವಧಿ	**ಜುಲೈ–ನವೆಂಬರ್(ಪೈಸೆ/ಯುನಿಟ್)**	**ಡಿಸೆಂಬರ್–ಜೂನ್ (ಪೈಸೆ/ ಯುನಿಟ್)**		**ಸಮಯಾಧಾರಿತ ಅವಧಿ**	**ಜುಲೈ–ನವೆಂಬರ್(ಪೈಸೆ/ಯುನಿಟ್)**	**ಡಿಸೆಂಬರ್–ಜೂನ್ (ಪೈಸೆ/ ಯುನಿಟ್)**
		06.00 ರಿಂದ 10.00 ರವರೆಗೆ	0.00	0.00		06.00 ರಿಂದ 10.00 ರವರೆಗೆ	0.00	0.00
		10.00 ರಿಂದ 18.00 ರವರೆಗೆ	0.00	0.00		10.00 ರಿಂದ 18.00 ರವರೆಗೆ	0.00	0.00
		18.00 ರಿಂದ 22.00 ರವರೆಗೆ	0.00	(+)100		18.00 ರಿಂದ 22.00 ರವರೆಗೆ	0.00	(+)100
		22.00 ರಿಂದ 06.00 ರವರೆಗೆ	0.00	(–)100		22.00 ರಿಂದ 06.00 ರವರೆಗೆ	0.00	(–)100

ರೈತರಿಗೆ ಪರಿಹಾರ ನೀಡಲು ಕುಂಟು ನೆಪ: ಬೊಮ್ಮಾಯಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಸರ್ಕಾರ ಎಲ್ಲ ರೈತರಿಗೂ ಬರ ಪರಿಹಾರ ನೀಡಲು ಆಧಾರ್ ಸಂಖ್ಯೆ ಜೋಡಣೆಯ ಕುಂಟು ನೆಪ ಹೇಳದೇ, ರೈತರ ಖಾತೆಗಳಿಗೆ ತಕ್ಷಣವೇ ₹2,000 ವರ್ಗಾವಣೆ ಮಾಡಬೇಕು ಎಂದು ಶಾಸಕ ಬಸವರಾಜ ಬೊಮ್ಮಾಯಿ ಒತ್ತಾಯಿಸಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, ರಾಜ್ಯದಲ್ಲಿ ಈಗಾಗಲೇ 69 ಲಕ್ಷ ರೈತರ ಬ್ಯಾಂಕ್ ಖಾತೆಗಳಿಗೆ ಆಧಾರ್ ಜೋಡಣೆ ಮಾಡಲಾಗಿದೆ. ಆದರೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸರ್ಕಾರದ ಆರ್ಥಿಕ ಸ್ಥಿತಿ ಮರೆ ಮಾಚಲು ತಾಂತ್ರಿಕ ನೆಪ ಹೇಳುತ್ತಿದ್ದಾರೆ. ರಾಜ್ಯದಲ್ಲಿ ಬಹುತೇಕ ತಾಲ್ಲೂಕುಗಳು ಬರಪೀಡಿತ ಎಂದು ಘೋಷಣೆ ಆಗಿವೆ. ಮುಂಗಾರು, ಹಿಂಗಾರು ವಿಫಲವಾಗಿದೆ. ರಾಜ್ಯ ಸರ್ಕಾರ ಬರ ನಿರ್ವಹಣೆಗೆ ಯಾವುದೇ ಹಣ ಬಿಡುಗಡೆ ಮಾಡಿಲ್ಲ. ಕಾಮಗಾರಿ ಗಳನ್ನೂ ಆರಂಭಿಸಿಲ್ಲ. ಆರು ತಿಂಗಳು ಕಳೆದರೂ ಕೆಲಸ ಮಾಡದ ಸಿದ್ದರಾಮಯ್ಯ ಸರ್ಕಾರ ಈಗ ಆಧಾರ್ ಜೋಡಣೆ ನೆಪ ಹೇಳಿ ರೈತರಿಗೆ ವಂಚನೆ ಮಾಡುತ್ತಿದೆ ಎಂದು ಕಿಡಿ ಕಾರಿದರು.

‘ಗುಪ್ತಚರ ಇಲಾಖೆ ಸಂಪೂರ್ಣ ವೈಫಲ್ಯ’



ವಿಧಾನಪರಿಷತ್ ಸದಸ್ಯ ಬಿ.ಕೆ.ಹರಿಪ್ರಸಾದ್ ಅವರು ಕರಸೇವಕರ ಕುರಿತು ನೀಡಿರುವ ಹೇಳಿಕೆಯಂತೆ ತಮ್ಮ ಇಲಾಖೆಗೆ ಯಾವುದೇ ಮಾಹಿತಿ ಬಂದಿಲ್ಲ ಎಂದು ಗೃಹ ಸಚಿವ ಪರಮೇಶ್ವರ ಹೇಳಿರುವುದು ಗುಪ್ತಚರ ಇಲಾಖೆಯ ಸಂಪೂರ್ಣ ವೈಫಲ್ಯ ಎಂದು ಬೊಮ್ಮಾಯಿ ಹೇಳಿದರು.
ವಿಧಾನಪರಿಷತ್ ಸದಸ್ಯನಿಗಿರುವ ಮಾಹಿತಿ ಗೃಹ ಇಲಾಖೆಗೆ ಇಲ್ಲ. ಹರಿಪ್ರಸಾದ್ ಪ್ರಚೋದನಾತ್ಮಕವಾಗಿ ಹೇಳಿಕೆ ನೀಡಿದ್ದಾರೆ. ಬೇರೆಯವರು ಈ ರೀತಿ ಹೇಳಿದ್ದರೆ ಇಷ್ಟೊತ್ತಿಗೆ ಬಂಧಿಸುತ್ತಿದ್ದರು. ಸಿದ್ದರಾಮಯ್ಯ ಅವಧಿಯಲ್ಲಿ ಅಪರಾಧ ಪ್ರಕರಣಗಳು ಹೆಚ್ಚಾಗಿವೆ. ಮಹಿಳೆಯರ ಮೇಲಿನ ದೌರ್ಜನ್ಯ ಹೆಚ್ಚುತ್ತಿದ್ದು, ಅಕ್ರಮ ಸಾರಾಯಿ ದಂಧೆ, ಇಸ್ಪೀಟ್ ಅಡ್ಡೆಗಳು ಅವ್ಯಾಹತವಾಗಿ ನಡೆಯುತ್ತಿವೆ ಎಂದು ದೂರಿದರು.

₹ 802 ಕೋಟಿ ಮೊತ್ತದ ಒಪ್ಪಂದ

ನವದೆಹಲಿ(ಪಿಟಿಐ): ಭಾರತೀಯ ಸೇನೆಗೆ ವಿವಿಧ ಸಲಕರಣೆ ಹಾಗೂ ಸಾಧನಗಳನ್ನು ಖರೀದಿಸುವುದಕ್ಕಾಗಿ ರಕ್ಷಣಾ ಇಲಾಖೆಯು ಗುರುವಾರ ₹ 802 ಕೋಟಿ ಮೊತ್ತದ ಎರಡು ಒಪ್ಪಂದಗಳಿಗೆ ಸಹಿ ಹಾಕಿದೆ. 697 ಬೋಗಿಗಳನ್ನು ಒದಗಿಸಲು ಜುಪಿಟರ್ ವ್ಯಾಗನ್ಸ್ ಲಿಮಿಟೆಡ್ ಜೊತೆ,56 ‘ಮೆಕಾನಿಕಲ್ ಮೈನ್‌ಫೀಲ್ಡ್ ಮಾರ್ಕಿಂಗ್ ಈಕ್ವಿಪ್‌ಮೆಂಟ್’ಗಳ ಪೂರೈಕೆಗಾಗಿ ಬಿಇಎಂಎಲ್ ಜೊತೆ ಒಪ್ಪಂದಕ್ಕೆ ಸಹಿ ಹಾಕಲಾಗಿದೆ.

ಕಾಡುಗೋಡಿ: ಫೀಡರ್ ಬಸ್ ಸೌಲಭ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೈಟ್‌ಫೀಲ್ಡ್ ಸುತ್ತಮುತ್ತಲಿನ ಪ್ರಯಾಣಿಕರಿಗೆ ಅನುಕೂಲವಾಗುವಂತೆ ಕಾಡುಗೋಡಿಯಿಂದ ಹವಾನಿಯಂತ್ರಿತ ಮೆಟ್ರೊ ಫೀಡರ್ ಬಸ್‌ಗಳ ಕಾರ್ಯಾಚರಣೆ ನಡೆಸಲು ಬಿಎಂಟಿಸಿ ನಿರ್ಧರಿಸಿದೆ.

ಜ.6 ರಿಂದ ಕಾಡುಗೋಡಿಯಿಂದ ಎರಡು ಮಾರ್ಗಗಳಲ್ಲಿ ತಲಾ ಎರಡು ಬಸ್‌ಗಳು ಒಟ್ಟು 29 ಟ್ರಿಪ್‌ಗಳಲ್ಲಿ ಸಂಚರಿಸಲಿವೆ.

ಹೋಪ್‌ಫಾರಂ, ಐಟಿಪಿಎಲ್, ವೈಟ್‌ಫೀಲ್ಡ್ ಟಿಟಿಎಂಸಿ, ಗ್ರಾಫೈಟ್ ಇಂಡಿಯಾ, ಕುಂದಲಹಳ್ಳಿ ಗೇಟ್, ವರ್ತೂರು ಕೋಡಿ, ವೈಟ್‌ಫೀಲ್ಡ್ ಪೋಸ್ಟ್ ಆಫೀಸ್ ಮೂಲಕ 14 ಟ್ರಿಪ್‌ಗಳಿದ್ದರೆ. ಹೋಪ್‌ಫಾರಂ, ವೈಟ್‌ಫೀಲ್ಡ್ ಪೋಸ್ಟ್ ಆಫೀಸ್, ವರ್ತೂರು ಕೋಡಿ, ಕುಂದಲಹಳ್ಳಿ ಗೇಟ್, ಗ್ರಾಫೈಟ್ ಇಂಡಿಯಾ, ವೈಟ್‌ಫೀಲ್ಡ್ ಟಿಟಿಎಂಸಿ, ಐಟಿಪಿಎಲ್ ಮಾರ್ಗದ ಮೂಲಕ 15 ಟ್ರಿಪ್‌ಗಳಲ್ಲಿ ಸಂಚರಿಸಲಿವೆ ಎಂದು ಬಿಎಂಟಿಸಿ ಅಧಿಕಾರಿಗಳು ತಿಳಿಸಿದ್ದಾರೆ.

8	ಎಲ್.ಟಿ-7	ಜಾಹೀರಾತು ಫಲಕಗಳ ಖಾಯಂವಿದ್ಯುತ್ ಸರಬರಾಜು ಮತ್ತು ತಾತ್ಕಾಲಿಕ ವಿದ್ಯುತ್ ಸರಬರಾಜು (ಎಲ್ಲಾ ಪ್ರದೇಶಗಳಿಗೆ ಅನ್ವಯಿಸುತ್ತದೆ)	ನಿಗದಿತ ಶುಲ್ಕ: ಮಂಜೂರಾದ ವಿದ್ಯುತ್ ಪ್ರಮಾಣದ ಪ್ರತಿ ಕಿ.ವಾಟ್‌ಗೆ, ಪ್ರತಿ ತಿಂಗಳಿಗೆ	200	ಎಲ್.ಟಿ-7	ಜಾಹೀರಾತು ಫಲಕಗಳ ಖಾಯಂವಿದ್ಯುತ್ ಸರಬರಾಜು ಮತ್ತು ತಾತ್ಕಾಲಿಕ ವಿದ್ಯುತ್ ಸರಬರಾಜು (ಎಲ್ಲಾ ಪ್ರದೇಶಗಳಿಗೆ ಅನ್ವಯಿಸುತ್ತದೆ)	ನಿಗದಿತ ಶುಲ್ಕ: ಮಂಜೂರಾದ ವಿದ್ಯುತ್ ಪ್ರಮಾಣದ ಪ್ರತಿ ಕಿ.ವಾಟ್‌ಗೆ, ಪ್ರತಿ ತಿಂಗಳಿಗೆ	200.00
			ವಿದ್ಯುತ್ ಬಳಕೆ ಶುಲ್ಕ : ಆ ತಿಂಗಳಲ್ಲಿ ಬಳಸಿದ ವಿದ್ಯುತ್ತಿನ ಪ್ರತಿ ಯೂನಿಟ್ಟಿಗೆ	11.50			ವಿದ್ಯುತ್ ಬಳಕೆ ಶುಲ್ಕ : ಆ ತಿಂಗಳಲ್ಲಿ ಬಳಸಿದ ವಿದ್ಯುತ್ತಿನ ಪ್ರತಿ ಯೂನಿಟ್ಟಿಗೆ	11.99
	ಹೆಚ್.ಟಿ.ಸರಬರಾಜು – 11ಕೆವಿ ಮತ್ತು ಅದಕ್ಕೂ ಮೇಲ್ಪಟ್ಟು				ಹೆಚ್.ಟಿ.ಸರಬರಾಜು – 11ಕೆವಿ ಮತ್ತು ಅದಕ್ಕೂ ಮೇಲ್ಪಟ್ಟು			
9	ಹೆಚ್.ಟಿ-1	ಸಾರ್ವಜನಿಕ ನೀರು ಸರಬರಾಜು, ಒಳಚರಂಡಿ ಮತ್ತು ಮಲಿನ ನೀರು ಶುದ್ಧೀಕರಣ ಹಾಗೂ ಪಂಪ್ ಮಾಡುವ ಸ್ಥಾಪನಗಳು (ಎಲ್ಲಾ ಪ್ರದೇಶಗಳಿಗೆ ಅನ್ವಯಿಸುತ್ತದೆ)	ಬಿಲ್ಲಿಂಗ್ ಡಿಮ್ಯಾಂಡ್‌ನ ಪ್ರತಿ ಕೆ.ವಿ.ಎ.ಗೆ, ಪ್ರತಿ ತಿಂಗಳಿಗೆ ಬೇಡಿಕೆ ಶುಲ್ಕ	350	ಹೆಚ್.ಟಿ-1	ಸಾರ್ವಜನಿಕ ನೀರು ಸರಬರಾಜು, ಒಳಚರಂಡಿ ಮತ್ತು ಮಲಿನ ನೀರು ಶುದ್ಧೀಕರಣ ಹಾಗೂ ಪಂಪ್ ಮಾಡುವ ಸ್ಥಾಪನಗಳು (ಎಲ್ಲಾ ಪ್ರದೇಶಗಳಿಗೆ ಅನ್ವಯಿಸುತ್ತದೆ)	ಬಿಲ್ಲಿಂಗ್ ಡಿಮ್ಯಾಂಡ್‌ನ ಪ್ರತಿ ಕೆ.ವಿ.ಎ.ಗೆ, ಪ್ರತಿ ತಿಂಗಳಿಗೆ ಬೇಡಿಕೆ ಶುಲ್ಕ	350
			ಮತ್ತು				ಮತ್ತು	
			ವಿದ್ಯುತ್ ಬಳಕೆ ಶುಲ್ಕ : ಆ ತಿಂಗಳಲ್ಲಿ ಬಳಸಿದ ವಿದ್ಯುತ್ತಿನ ಪ್ರತಿ ಯೂನಿಟ್ಟಿಗೆ	6.00			ವಿದ್ಯುತ್ ಬಳಕೆ ಶುಲ್ಕ : ಆ ತಿಂಗಳಲ್ಲಿ ಬಳಸಿದ ವಿದ್ಯುತ್ತಿನ ಪ್ರತಿ ಯೂನಿಟ್ಟಿಗೆ	6.49
		ಸಮಯಾಧಾರಿತ ವಿದ್ಯುತ್ ದರ (ಐಚ್ಛಿಕ)–ಹೆಚ್.ಟಿ-1 ಗೆ ಅನ್ವಯಿಸುತ್ತದೆ				ಸಮಯಾಧಾರಿತ ವಿದ್ಯುತ್ ದರ (ಐಚ್ಛಿಕ)–ಹೆಚ್.ಟಿ-1 ಗೆ ಅನ್ವಯಿಸುತ್ತದೆ		
		ಅನ್ವಯವಾಗುವ ಸಾಮಾನ್ಯ ಸುಂಕಕ್ಕಿಂತ ದಿನದ ಸಮಯ ಹೆಚ್ಚಳ (+)/ಕಡಿತ(-)				ಅನ್ವಯವಾಗುವ ಸಾಮಾನ್ಯ ಸುಂಕಕ್ಕಿಂತ ದಿನದ ಸಮಯ ಹೆಚ್ಚಳ (+)/ಕಡಿತ(-)		
		ಸಮಯಾಧಾರಿತ ಅವಧಿ	ಜುಲೈ–ನವೆಂಬರ್(ಪೈಸೆ/ಯುನಿಟ್)	ಡಿಸೆಂಬರ್–ಜೂನ್ (ಪೈಸೆ/ ಯುನಿಟ್)		ಸಮಯಾಧಾರಿತ ಅವಧಿ	ಜುಲೈ–ನವೆಂಬರ್(ಪೈಸೆ/ಯುನಿಟ್)	ಡಿಸೆಂಬರ್–ಜೂನ್ (ಪೈಸೆ/ ಯುನಿಟ್)
		06.00 ರಿಂದ 10.00 ರವರೆಗೆ	0.00	0.00		06.00 ರಿಂದ 10.00 ರವರೆಗೆ	0.00	0.00
		10.00 ರಿಂದ 18.00 ರವರೆಗೆ	0.00	0.00		10.00 ರಿಂದ 18.00 ರವರೆಗೆ	0.00	0.00
		18.00 ರಿಂದ 22.00 ರವರೆಗೆ	0.00	(+)100		18.00 ರಿಂದ 22.00 ರವರೆಗೆ	0.00	(+)100
		22.00 ರಿಂದ 06.00 ರವರೆಗೆ	0.00	(–)100		22.00 ರಿಂದ 06.00 ರವರೆಗೆ	0.00	(–)100
10	ಹೆಚ್.ಟಿ-2(ಎ)	ಕೈಗಾರಿಕೆ, ಕೈಗಾರಿಕೇತರ, ವಾಣಿಜ್ಯೇತರ ಉದ್ದೇಶ (ಎಲ್ಲಾ ಪ್ರದೇಶಗಳಿಗೆ ಅನ್ವಯಿಸುತ್ತದೆ)	ಬಿಲ್ಲಿಂಗ್ ಡಿಮ್ಯಾಂಡಿನ ಪ್ರತಿ ಕೆವಿಎಗೆ, ಪ್ರತಿ ತಿಂಗಳಿಗೆ ಬೇಡಿಕೆ ಶುಲ್ಕ	350	ಹೆಚ್.ಟಿ-2(ಎ)	ಕೈಗಾರಿಕೆ, ಕೈಗಾರಿಕೇತರ, ವಾಣಿಜ್ಯೇತರ ಉದ್ದೇಶ (ಎಲ್ಲಾ ಪ್ರದೇಶಗಳಿಗೆ ಅನ್ವಯಿಸುತ್ತದೆ)	ಬಿಲ್ಲಿಂಗ್ ಡಿಮ್ಯಾಂಡಿನ ಪ್ರತಿ ಕೆವಿಎಗೆ, ಪ್ರತಿ ತಿಂಗಳಿಗೆ ಬೇಡಿಕೆ ಶುಲ್ಕ	365
			ಮತ್ತು				ಮತ್ತು	
			ವಿದ್ಯುತ್ ಬಳಕೆ ಶುಲ್ಕ :				ವಿದ್ಯುತ್ ಬಳಕೆ ಶುಲ್ಕ :	
			ಸಂಪೂರ್ಣ ಬಳಕೆಗಾಗಿ	7.40			ಸಂಪೂರ್ಣ ಬಳಕೆಗಾಗಿ	7.79
		ರೈಲ್ವೆ ಕರ್ಷಣ ಸ್ಥಾವರಗಳು (ಎಲ್ಲಾ ಪ್ರದೇಶಗಳಿಗೆ ಅನ್ವಯಿಸುತ್ತದೆ)	ಬಿಲ್ಲಿಂಗ್ ಡಿಮ್ಯಾಂಡಿನ ಪ್ರತಿ ಕೆವಿಎಗೆ, ಪ್ರತಿ ತಿಂಗಳಿಗೆ ಬೇಡಿಕೆ ಶುಲ್ಕ	350		ರೈಲ್ವೆ ಕರ್ಷಣ ಸ್ಥಾವರಗಳು (ಎಲ್ಲಾ ಪ್ರದೇಶಗಳಿಗೆ ಅನ್ವಯಿಸುತ್ತದೆ)	ನಿಗದಿತ ಶುಲ್ಕ: ಪ್ರತಿ ಸ್ಥಾಪನಕ್ಕೆ, ಪ್ರತಿ ತಿಂಗಳಿಗೆ ಮಂಜೂರಾದ ವಿದ್ಯುತ್‌ನ ಮೊದಲ ಒಂದು ಕಿ.ವಾಟ್‌ಗೆ	350
			ವಿದ್ಯುತ್ ಬಳಕೆ ಶುಲ್ಕ :ಸಂಪೂರ್ಣ ಬಳಕೆಗಾಗಿ	7.00			ವಿದ್ಯುತ್ ಬಳಕೆ ಶುಲ್ಕ : ಸಂಪೂರ್ಣ ಬಳಕೆಗಾಗಿ	7.00
		ಮಲಿನ ನೀರು ಶುದ್ಧೀಕರಣ ಸ್ಥಾವರಗಳು (ಎಲ್ಲಾ ಪ್ರದೇಶಗಳಿಗೆ ಅನ್ವಯಿಸುತ್ತದೆ)	ಬಿಲ್ಲಿಂಗ್ ಡಿಮ್ಯಾಂಡಿನ ಪ್ರತಿ ಕೆವಿಎಗೆ, ಪ್ರತಿ ತಿಂಗಳಿಗೆ ಬೇಡಿಕೆ ಶುಲ್ಕ	350		ಮಲಿನ ನೀರು ಶುದ್ಧೀಕರಣ ಸ್ಥಾವರಗಳು (ಎಲ್ಲಾ ಪ್ರದೇಶಗಳಿಗೆ ಅನ್ವಯಿಸುತ್ತದೆ)	ನಿಗದಿತ ಶುಲ್ಕ: ಪ್ರತಿ ಸ್ಥಾಪನಕ್ಕೆ, ಪ್ರತಿ ತಿಂಗಳಿಗೆ ಮಂಜೂರಾದ ವಿದ್ಯುತ್‌ನ ಮೊದಲ ಒಂದು ಕಿ.ವಾಟ್‌ಗೆ	350
			ವಿದ್ಯುತ್ ಬಳಕೆ ಶುಲ್ಕ :ಸಂಪೂರ್ಣ ಬಳಕೆಗಾಗಿ	7.00			ವಿದ್ಯುತ್ ಬಳಕೆ ಶುಲ್ಕ : ಸಂಪೂರ್ಣ ಬಳಕೆಗಾಗಿ	7.00
		ಬೆಂಗಳೂರು ಮೆಟ್ರೋ ಸ್ಥಾವರಗಳು	ಬಿಲ್ಲಿಂಗ್ ಡಿಮ್ಯಾಂಡಿನ ಪ್ರತಿ ಕೆವಿಎಗೆ, ಪ್ರತಿ ತಿಂಗಳಿಗೆ ಬೇಡಿಕೆ ಶುಲ್ಕ	300		ಬೆಂಗಳೂರು ಮೆಟ್ರೋ ಸ್ಥಾವರಗಳು	ನಿಗದಿತ ಶುಲ್ಕ: ಪ್ರತಿ ಸ್ಥಾಪನಕ್ಕೆ, ಪ್ರತಿ ತಿಂಗಳಿಗೆ ಮಂಜೂರಾದ ವಿದ್ಯುತ್‌ನ ಮೊದಲ ಒಂದು ಕಿ.ವಾಟ್‌ಗೆ	300
			ಮತ್ತು				ಮತ್ತು	
			ವಿದ್ಯುತ್ ಬಳಕೆ ಶುಲ್ಕ : ಸಂಪೂರ್ಣ ಬಳಕೆಗಾಗಿ	5.25			ವಿದ್ಯುತ್ ಬಳಕೆ ಶುಲ್ಕ : ಸಂಪೂರ್ಣ ಬಳಕೆಗಾಗಿ	5.25
11	ಹೆಚ್.ಟಿ-2(ಬಿ):	ವಾಣಿಜ್ಯ ಸ್ಥಾಪನಗಳು, ಹೋಟೆಲ್‌ಗಳು, ಬ್ಯಾಂಕುಗಳು, ಮಾಹಿತಿ ತಂತ್ರಜ್ಞಾನ ಸೇವಾ ಸಂಸ್ಥೆಗಳು, ಪೆಟ್ರೋಲ್/ ಡೀಸೆಲ್ ಶೇಖರಣ ಸ್ಥಾವರಗಳು (ಎಲ್ಲಾ ಪ್ರದೇಶಗಳಿಗೆ ಅನ್ವಯಿಸುತ್ತದೆ)	ಬಿಲ್ಲಿಂಗ್ ಡಿಮ್ಯಾಂಡಿನ ಪ್ರತಿ ಕೆವಿಎಗೆ, ಪ್ರತಿ ತಿಂಗಳಿಗೆ ಬೇಡಿಕೆ ಶುಲ್ಕ	375	ಹೆಚ್.ಟಿ-2(ಬಿ):	ವಾಣಿಜ್ಯ ಸ್ಥಾಪನಗಳು, ಹೋಟೆಲ್‌ಗಳು, ಬ್ಯಾಂಕುಗಳು, ಮಾಹಿತಿ ತಂತ್ರಜ್ಞಾನ ಸೇವಾ ಸಂಸ್ಥೆಗಳು, ಪೆಟ್ರೋಲ್/ ಡೀಸೆಲ್ ಶೇಖರಣ ಸ್ಥಾವರಗಳು (ಎಲ್ಲಾ ಪ್ರದೇಶಗಳಿಗೆ ಅನ್ವಯಿಸುತ್ತದೆ)	ನಿಗದಿತ ಶುಲ್ಕ: ಪ್ರತಿ ಸ್ಥಾಪನಕ್ಕೆ, ಪ್ರತಿ ತಿಂಗಳಿಗೆ ಮಂಜೂರಾದ ವಿದ್ಯುತ್‌ನ ಮೊದಲ ಒಂದು ಕಿ.ವಾಟ್‌ಗೆ	385
			ಮತ್ತು				ಮತ್ತು	
			ವಿದ್ಯುತ್ ಬಳಕೆ ಶುಲ್ಕ : ಸಂಪೂರ್ಣ ಬಳಕೆಗಾಗಿ	9.25			ವಿದ್ಯುತ್ ಬಳಕೆ ಶುಲ್ಕ : ಸಂಪೂರ್ಣ ಬಳಕೆಗಾಗಿ	9.62
12	ಹೆಚ್.ಟಿ-2(ಸಿ)	ಹೆಚ್.ಟಿ-2(ಸಿ)(i): ಸರ್ಕಾರಿ ಅಸ್ಪತ್ರೆಗಳು, ಇಎಸ್ಐ, ವಿಶ್ವ ವಿದ್ಯಾಲಯಗಳೂ, ರಾಜ್ಯ ಸರ್ಕಾರದ, ರಾಜ್ಯ ಸರ್ಕಾರದ ಧನ ಸಹಾಯದಿಂದ ನಡೆಯುವ ವಿದ್ಯಾ ಸಂಸ್ಥೆಗಳನ್ನು ಹೊರತುಪಡಿಸಿದ ಅಸ್ಪತ್ರೆಗಳು, ವಿಶ್ವ ವಿದ್ಯಾಲಯಗಳೂ, ವಿದ್ಯಾಸಂಸ್ಥೆಗಳು (ಎಲ್ಲಾ ಪ್ರದೇಶಗಳಿಗೆ ಅನ್ವಯಿಸುತ್ತದೆ)	ಬಿಲ್ಲಿಂಗ್ ಡಿಮ್ಯಾಂಡಿನ ಪ್ರತಿ ಕೆವಿಎಗೆ, ಪ್ರತಿ ತಿಂಗಳಿಗೆ ಬೇಡಿಕೆ ಶುಲ್ಕ	300	ಹೆಚ್.ಟಿ-2(ಸಿ)	ಹೆಚ್.ಟಿ-2(ಸಿ)(i): ಸರ್ಕಾರಿ ಅಸ್ಪತ್ರೆಗಳು, ಇಎಸ್ಐ, ವಿಶ್ವ ವಿದ್ಯಾಲಯಗಳೂ, ರಾಜ್ಯ ಸರ್ಕಾರದ, ರಾಜ್ಯ ಸರ್ಕಾರದ ಧನ ಸಹಾಯದಿಂದ ನಡೆಯುವ ವಿದ್ಯಾ ಸಂಸ್ಥೆಗಳನ್ನು ಹೊರತುಪಡಿಸಿದ ಅಸ್ಪತ್ರೆಗಳು, ವಿಶ್ವ ವಿದ್ಯಾಲಯಗಳೂ, ವಿದ್ಯಾಸಂಸ್ಥೆಗಳು (ಎಲ್ಲಾ ಪ್ರದೇಶಗಳಿಗೆ ಅನ್ವಯಿಸುತ್ತದೆ)	ಬಿಲ್ಲಿಂಗ್ ಡಿಮ್ಯಾಂಡಿನ ಪ್ರತಿ ಕೆವಿಎಗೆ, ಪ್ರತಿ ತಿಂಗಳಿಗೆ ಬೇಡಿಕೆ ಶುಲ್ಕ	310
			ಮತ್ತು				ಮತ್ತು	
			ವಿದ್ಯುತ್ ಬಳಕೆ ಶುಲ್ಕ : ಸಂಪೂರ್ಣ ಬಳಕೆಗಾಗಿ	7.50			ವಿದ್ಯುತ್ ಬಳಕೆ ಶುಲ್ಕ : ಸಂಪೂರ್ಣ ಬಳಕೆಗಾಗಿ	7.93
		ಹೆಚ್.ಟಿ-2(ಸಿ) (ii): ಹೆಚ್.ಟಿ-2(ಸಿ) (1) ನ್ನು ಹೊರತುಪಡಿಸಿದ ಅಸ್ಪತ್ರೆಗಳು, ವಿಶ್ವ ವಿದ್ಯಾಲಯಗಳೂ, ವಿದ್ಯಾ ಸಂಸ್ಥೆಗಳು (ಎಲ್ಲಾ ಪ್ರದೇಶಗಳಿಗೆ ಅನ್ವಯಿಸುತ್ತದೆ)	ಬಿಲ್ಲಿಂಗ್ ಡಿಮ್ಯಾಂಡಿನ ಪ್ರತಿ ಕೆವಿಎಗೆ, ಪ್ರತಿ ತಿಂಗಳಿಗೆ ಬೇಡಿಕೆ ಶುಲ್ಕ	350		ಹೆಚ್.ಟಿ-2(ಸಿ) (ii): ಹೆಚ್.ಟಿ-2(ಸಿ) (1) ನ್ನು ಹೊರತುಪಡಿಸಿದ ಅಸ್ಪತ್ರೆಗಳು, ವಿಶ್ವ ವಿದ್ಯಾಲಯಗಳೂ, ವಿದ್ಯಾ ಸಂಸ್ಥೆಗಳು (ಎಲ್ಲಾ ಪ್ರದೇಶಗಳಿಗೆ ಅನ್ವಯಿಸುತ್ತದೆ)	ಬಿಲ್ಲಿಂಗ್ ಡಿಮ್ಯಾಂಡಿನ ಪ್ರತಿ ಕೆವಿಎಗೆ, ಪ್ರತಿ ತಿಂಗಳಿಗೆ ಬೇಡಿಕೆ ಶುಲ್ಕ	360
			ಮತ್ತು				ಮತ್ತು	
			ವಿದ್ಯುತ್ ಬಳಕೆ ಶುಲ್ಕ : ಸಂಪೂರ್ಣ ಬಳಕೆಗಾಗಿ	8.50			ವಿದ್ಯುತ್ ಬಳಕೆ ಶುಲ್ಕ : ಸಂಪೂರ್ಣ ಬಳಕೆಗಾಗಿ	8.92
		ಸಮಯಾಧಾರಿತ ವಿದ್ಯುತ್ ದರ (ಐಚ್ಛಿಕ)–) ಹೆಚ್.ಟಿ-2(ಎ), ಹೆಚ್.ಟಿ-2(ಬಿ), ಹೆಚ್.ಟಿ-2(ಸಿ)(i) ಮತ್ತು ಹೆಚ್.ಟಿ-2(ಸಿ)(ii) ಗೆ ಅನ್ವಯಿಸುತ್ತದೆ				ಸಮಯಾಧಾರಿತ ವಿದ್ಯುತ್ ದರ (ಐಚ್ಛಿಕ)–) ಹೆಚ್.ಟಿ-2(ಎ), ಹೆಚ್.ಟಿ-2(ಬಿ), ಹೆಚ್.ಟಿ-2(ಸಿ)(i) ಮತ್ತು ಹೆಚ್.ಟಿ-2(ಸಿ)(ii) ಗೆ ಅನ್ವಯಿಸುತ್ತದೆ		
		ಅನ್ವಯವಾಗುವ ಸಾಮಾನ್ಯ ಸುಂಕಕ್ಕಿಂತ ದಿನದ ಸಮಯ ಹೆಚ್ಚಳ (+)/ಕಡಿತ(-)				ಅನ್ವಯವಾಗುವ ಸಾಮಾನ್ಯ ಸುಂಕಕ್ಕಿಂತ ದಿನದ ಸಮಯ ಹೆಚ್ಚಳ (+)/ಕಡಿತ(-)		
		ಸಮಯಾಧಾರಿತ ಅವಧಿ	ಜುಲೈ–ನವೆಂಬರ್(ಪೈಸೆ/ಯುನಿಟ್)	ಡಿಸೆಂಬರ್–ಜೂನ್ (ಪೈಸೆ/ ಯುನಿಟ್)		ಸಮಯಾಧಾರಿತ ಅವಧಿ	ಜುಲೈ–ನವೆಂಬರ್(ಪೈಸೆ/ಯುನಿಟ್)	ಡಿಸೆಂಬರ್–ಜೂನ್ (ಪೈಸೆ/ ಯುನಿಟ್)
		06.00 ರಿಂದ 10.00 ರವರೆಗೆ	0.00	0.00		06.00 ರಿಂದ 10.00 ರವರೆಗೆ	0.00	0.00
		10.00 ರಿಂದ 18.00 ರವರೆಗೆ	0.00	0.00		10.00 ರಿಂದ 18.00 ರವರೆಗೆ	0.00	0.00
		18.00 ರಿಂದ 22.00 ರವರೆಗೆ	0.00	(+)100		18.00 ರಿಂದ 22.00 ರವರೆಗೆ	0.00	(+)100
		22.00 ರಿಂದ 06.00 ರವರೆಗೆ	0.00	(–)100		22.00 ರಿಂದ 06.00 ರವರೆಗೆ	0.00	(–)100
13	ಹೆಚ್.ಟಿ.3	ಖಾಸಗಿ ಏತ ನೀರಾವರಿ ಯೋಜನೆಗಳು ಹಾಗೂ ಏತ ನೀರಾವರಿ ಸಂಘಗಳಿಗೆ ಅನ್ವಯಿಸುತ್ತದೆ (ಎಲ್ಲಾ ಪ್ರದೇಶಗಳಿಗೆ ಅನ್ವಯಿಸುತ್ತದೆ)	ನಿಗದಿತ ಶುಲ್ಕ :ಮಂಜೂರಾದ ವಿದ್ಯುತ್‌ನ ಪ್ರತಿ ಹೆಚ್.ಪಿ ಗೆ, ಪ್ರತಿ ತಿಂಗಳಿಗೆ ರೂ.	150	ಹೆಚ್.ಟಿ.3	ಖಾಸಗಿ ಏತ ನೀರಾವರಿ ಯೋಜನೆಗಳು ಹಾಗೂ ಏತ ನೀರಾವರಿ ಸಂಘಗಳಿಗೆ ಅನ್ವಯಿಸುತ್ತದೆ (ಎಲ್ಲಾ ಪ್ರದೇಶಗಳಿಗೆ ಅನ್ವಯಿಸುತ್ತದೆ)	ನಿಗದಿತ ಶುಲ್ಕ :ಮಂಜೂರಾದ ವಿದ್ಯುತ್‌ನ ಪ್ರತಿ ಹೆಚ್.ಪಿ ಗೆ, ಪ್ರತಿ ತಿಂಗಳಿಗೆ ರೂ.	165
			ಮತ್ತು				ಮತ್ತು	
			ವಿದ್ಯುತ್ ಬಳಕೆ ಶುಲ್ಕ: ಆ ತಿಂಗಳಲ್ಲಿ ಬಳಸಿದ ವಿದ್ಯುತ್ತಿನ ಪ್ರತಿ ಯೂನಿಟ್ಟಿಗೆ	3.50			ವಿದ್ಯುತ್ ಬಳಕೆ ಶುಲ್ಕ : ಆ ತಿಂಗಳಲ್ಲಿ ಬಳಸಿದ ವಿದ್ಯುತ್ತಿನ ಪ್ರತಿ ಯೂನಿಟ್ಟಿಗೆ	3.63
14	ಹೆಚ್.ಟಿ-4	ಸ್ವತಂತ್ರವಾಗಿ ವಿದ್ಯುತ್ ಪಡೆಯುತ್ತಿರುವ ನಿವಾಸಿ ಅಪಾರ್ಟ್‌ಮೆಂಟುಗಳು, ಕಾಲೋನಿಗಳು (ಎಲ್ಲಾ ಪ್ರದೇಶಗಳಿಗೆ ಅನ್ವಯಿಸುತ್ತದೆ)	ಡಿಮ್ಯಾಂಡ್ ಶುಲ್ಕ: ಪ್ರತಿ ತಿಂಗಳಿಗೆ ಬಿಲ್ಲಿಂಗ್ ಡಿಮ್ಯಾಂಡಿನ, ಪ್ರತಿ ಹೆಚ್.ಪಿ ಗೆ		ಹೆಚ್.ಟಿ-4	ಸ್ವತಂತ್ರವಾಗಿ ವಿದ್ಯುತ್ ಪಡೆಯುತ್ತಿರುವ ನಿವಾಸಿ ಅಪಾರ್ಟ್‌ಮೆಂಟುಗಳು, ಕಾಲೋನಿಗಳು (ಎಲ್ಲಾ ಪ್ರದೇಶಗಳಿಗೆ ಅನ್ವಯಿಸುತ್ತದೆ)	ಡಿಮ್ಯಾಂಡ್ ಶುಲ್ಕ: ಪ್ರತಿ ತಿಂಗಳಿಗೆ ಬಿಲ್ಲಿಂಗ್ ಡಿಮ್ಯಾಂಡಿನ, ಪ್ರತಿ ಹೆಚ್.ಪಿ ಗೆ	
			ಪ್ರತಿ ಕೆವಿಎಗೆ	300			ಪ್ರತಿ ಕೆವಿಎಗೆ	320
			ಮತ್ತು				ಮತ್ತು	
			ವಿದ್ಯುತ್ ಬಳಕೆ ಶುಲ್ಕ : ಸಂಪೂರ್ಣ ಬಳಕೆಗಾಗಿ	7.25			ವಿದ್ಯುತ್ ಬಳಕೆ ಶುಲ್ಕ : ಸಂಪೂರ್ಣ ಬಳಕೆಗಾಗಿ	7.63
15	ಹೆಚ್.ಟಿ-5	ತಾತ್ಕಾಲಿಕ ದೀಪ (67 ಹೆಚ್.ಪಿ ಗಿಂತ ಹೆಚ್ಚಿನ ಹೊರೆಯ ತಾತ್ಕಾಲಿಕ ಸ್ಥಾಪನಿಗಳಿಗೆ ಅನ್ವಯಿಸುತ್ತದೆ) (ಎಲ್ಲಾ ಪ್ರದೇಶಗಳಿಗೆ ಅನ್ವಯಿಸುತ್ತದೆ)	ಡಿಮ್ಯಾಂಡ್ ಶುಲ್ಕ: ಪ್ರತಿ ತಿಂಗಳಿಗೆ ಬಿಲ್ಲಿಂಗ್ ಡಿಮ್ಯಾಂಡಿನ, ಪ್ರತಿ ಹೆಚ್.ಪಿ ಗೆ	400	ಹೆಚ್.ಟಿ-5	ತಾತ್ಕಾಲಿಕ ದೀಪ (67 ಹೆಚ್.ಪಿ ಗಿಂತ ಹೆಚ್ಚಿನ ಹೊರೆಯ ತಾತ್ಕಾಲಿಕ ಸ್ಥಾಪನಿಗಳಿಗೆ ಅನ್ವಯಿಸುತ್ತದೆ) (ಎಲ್ಲಾ ಪ್ರದೇಶಗಳಿಗೆ ಅನ್ವಯಿಸುತ್ತದೆ)	ಡಿಮ್ಯಾಂಡ್ ಶುಲ್ಕ: ಪ್ರತಿ ತಿಂಗಳಿಗೆ ಬಿಲ್ಲಿಂಗ್ ಡಿಮ್ಯಾಂಡಿನ, ಪ್ರತಿ ಹೆಚ್.ಪಿ ಗೆ	415
			ವಿದ್ಯುತ್ ಬಳಕೆ ಶುಲ್ಕ : ಸಂಪೂರ್ಣ ಬಳಕೆಗಾಗಿ	11.50			ವಿದ್ಯುತ್ ಬಳಕೆ ಶುಲ್ಕ : ಸಂಪೂರ್ಣ ಬಳಕೆಗಾಗಿ	11.90
		ಬೆಂಗಳೂರು ಅಂತರಾಷ್ಟ್ರೀಯ ಪ್ರದರ್ಶನ ಕೇಂದ್ರ (67 ಹೆಚ್.ಪಿ ಗಿಂತ ಹೆಚ್ಚಿನ ಹೊರೆಯ ತಾತ್ಕಾಲಿಕ ಸ್ಥಾಪನಿಗಳಿಗೆ ಅನ್ವಯಿಸುತ್ತದೆ) (ಎಲ್ಲಾ ಪ್ರದೇಶಗಳಿಗೆ ಅನ್ವಯಿಸುತ್ತದೆ)	ನಿಗದಿತ ಶುಲ್ಕ:	0.00		ಬೆಂಗಳೂರು ಅಂತರಾಷ್ಟ್ರೀಯ ಪ್ರದರ್ಶನ ಕೇಂದ್ರ (67 ಹೆಚ್.ಪಿ ಗಿಂತ ಹೆಚ್ಚಿನ ಹೊರೆಯ ತಾತ್ಕಾಲಿಕ ಸ್ಥಾಪನಿಗಳಿಗೆ ಅನ್ವಯಿಸುತ್ತದೆ) (ಎಲ್ಲಾ ಪ್ರದೇಶಗಳಿಗೆ ಅನ್ವಯಿಸುತ್ತದೆ)	ನಿಗದಿತ ಶುಲ್ಕ:	0.00
			ವಿದ್ಯುತ್ ಬಳಕೆ ಶುಲ್ಕ : ಸಂಪೂರ್ಣ ಬಳಕೆಗಾಗಿ	13.00			ವಿದ್ಯುತ್ ಬಳಕೆ ಶುಲ್ಕ : ಸಂಪೂರ್ಣ ಬಳಕೆಗಾಗಿ	13.00
16	ಹೆಚ್.ಟಿ-6	ನೀರಾವರಿ ಮತ್ತು ಕೃಷಿ ಫಾರ್ಮ್‌ಗಳು, ಸರ್ಕಾರಿ ತೋಟಗಾರಿಕಾ ಫಾರ್ಮ್‌ಗಳು, ಖಾಸಗಿ ತೋಟಗಾರಿಕಾ ನರ್ಸರಿಗಳು, ಕಾಫಿ ಟೀ, ರಬ್ಬರ್, ತೆಂಗು ಮತ್ತು ಅಡಿಕೆ ತೋಟಗಳಿಗೆ ಅನ್ವಯಿಸುತ್ತದೆ (ಎಲ್ಲಾ ಪ್ರದೇಶಗಳಿಗೆ ಅನ್ವಯಿಸುತ್ತದೆ)	ಡಿಮ್ಯಾಂಡ್ ಶುಲ್ಕ: ಪ್ರತಿ ತಿಂಗಳಿಗೆ ಬಿಲ್ಲಿಂಗ್ ಡಿಮ್ಯಾಂಡಿನ, ಪ್ರತಿ ಹೆಚ್.ಪಿ ಗೆ	150.00	ಹೆಚ್.ಟಿ-6	ನೀರಾವರಿ ಮತ್ತು ಕೃಷಿ ಫಾರ್ಮ್‌ಗಳು, ಸರ್ಕಾರಿ ತೋಟಗಾರಿಕಾ ಫಾರ್ಮ್‌ಗಳು, ಖಾಸಗಿ ತೋಟಗಾರಿಕಾ ನರ್ಸರಿಗಳು, ಕಾಫಿ ಟೀ, ರಬ್ಬರ್, ತೆಂಗು ಮತ್ತು ಅಡಿಕೆ ತೋಟಗಳಿಗೆ ಅನ್ವಯಿಸುತ್ತದೆ (ಎಲ್ಲಾ ಪ್ರದೇಶಗಳಿಗೆ ಅನ್ವಯಿಸುತ್ತದೆ)	ಡಿಮ್ಯಾಂಡ್ ಶುಲ್ಕ: ಪ್ರತಿ ತಿಂಗಳಿಗೆ ಬಿಲ್ಲಿಂಗ್ ಡಿಮ್ಯಾಂಡಿನ, ಪ್ರತಿ ಹೆಚ್.ಪಿ ಗೆ	165.00
			ವಿದ್ಯುತ್ ಬಳಕೆ ಶುಲ್ಕ : ಸಂಪೂರ್ಣ ಬಳಕೆಗಾಗಿ	5.50			ವಿದ್ಯುತ್ ಬಳಕೆ ಶುಲ್ಕ : ಸಂಪೂರ್ಣ ಬಳಕೆಗಾಗಿ	5.91

ಮೇಲಿನ ಶುಲ್ಕಗಳ ಜೊತೆಗೆ, ರಾಜ್ಯ ಸರ್ಕಾರವು ವಿಧಿಸಿದ/ವಿಧಿಸಬಹುದಾದ ತೆರಿಗೆಗಳು ಅನ್ವಯಿಸುತ್ತವೆ.

ಸಿದ್ಧ ಮಾಹಿತಿ

ಅನುಬಂಧ–2

ಪ್ರವರ್ಗ	ಸ್ಥಾಪನದ ಮಾದರಿ	ಮಾಸಿಕ ಬಳಕೆ ಮಟ್ಟ (ಕೆ.ಡಬ್ಲ್ಯೂಎಚ್) (ಯೂನಿಟ್)	ಹಾಲಿ ವಿದ್ಯುತ್ ದರದ ಪ್ರಕಾರ ಮಾಸಿಕ ಬಿಲ್(ರೂ.)	ಪ್ರಸ್ತಾಪಿತ ವಿದ್ಯುತ್ ದರದ ಪ್ರಕಾರ ಮಾಸಿಕ ಬಿಲ್ (ರೂ.)	ತೆರಿಗೆ ಹೊರತುಪಡಿಸಿ ಶೇ. ಹೆಚ್ಚಳ
ಎಲ್.ಟಿ-1	ಭಾಗ್ಯ ಜ್ಯೋತಿ/ಕುಟೀರ ಜ್ಯೋತಿ (ರಾಜ್ಯ ಸರ್ಕಾರದ ಸಹಾಯ ಧನದಿಂದ ಭರಿಸಲಾಗುವುದು)				
	100 ವಾಟ್	20	192	197	2.60
		40	385	393	2.08
ಎಲ್.ಟಿ-2 ಎ	ಗೃಹ ಬಳಕೆ/ಎ.ಇ.ಎಚ್ (ಎಲ್ಲಾ ಪ್ರದೇಶಗಳಿಗೆ ಅನ್ವಯಿಸುತ್ತದೆ)				
	1ಕಿ.ವಾಟ್ ವರೆಗೆ	50	348	372	6.90
		100	585	634	8.38
	3 ಕಿ.ವಾಟ್	200	1730	1828	5.66
		300	2430	2577	6.05
		400	3130	3326	6.26
ಎಲ್.ಟಿ-2 ಎ	ಗೃಹ ಬಳಕೆ/ಎ.ಇ.ಎಚ್ (ಪ್ರತಿ ಯೂನಿಟ್‌ಗೆ 30 ಪೈಸೆ ರಿಯಾಯಿತಿಯನ್ನು ಗ್ರಾಮ ಪಂಚಾಯತ್ ಪ್ರದೇಶಗಳ ಅಡಿಯಲ್ಲಿ ಬರುವ ಗ್ರಾಹಕರಿಗೆ)				
	1ಕಿ.ವಾಟ್ ವರೆಗೆ	50	333	357	7.21
		100	555	604	8.83
	3 ಕಿ.ವಾಟ್	200	1670	1768	5.87
		300	2340	2487	6.28
		400	3010	3206	6.51
ಎಲ್.ಟಿ-2 ಬಿ	ಖಾಸಗಿ ಶಿಕ್ಷಣ ಸಂಸ್ಥೆಗಳು ಮತ್ತು ಆಸ್ಪತ್ರೆಗಳು (ಎಲ್ಲಾ ಪ್ರದೇಶಗಳಿಗೆ ಅನ್ವಯಿಸುತ್ತದೆ)				
	1ಕಿ.ವಾಟ್ ವರೆಗೆ	100	955	1004	5.13
	3 ಕಿ.ವಾಟ್	200	2090	2188	4.69
		300	2865	3012	5.13
		400	3640	3836	5.38
ಎಲ್.ಟಿ-2 ಬಿ	ಖಾಸಗಿ ಶಿಕ್ಷಣ ಸಂಸ್ಥೆಗಳು ಮತ್ತು ಆಸ್ಪತ್ರೆಗಳು (ಪ್ರತಿ ಯೂನಿಟ್‌ಗೆ 30 ಪೈಸೆ ರಿಯಾಯಿತಿಯನ್ನು ಗ್ರಾಮ ಪಂಚಾಯತ್ ಪ್ರದೇಶಗಳ ಅಡಿಯಲ್ಲಿ ಬರುವ ಗ್ರಾಹಕರಿಗೆ)				
	1ಕಿ.ವಾಟ್ ವರೆಗೆ	100	925	974	5.30
	3 ಕಿ.ವಾಟ್	200	2030	2128	4.83
		300	2775	2922	5.30
		400	3520	3716	5.57
ಎಲ್.ಟಿ-3ಎ	ವಾಣಿಜ್ಯ ದೀಪ (ಎಲ್ಲಾ ಪ್ರದೇಶಗಳಿಗೆ ಅನ್ವಯಿಸುತ್ತದೆ)				
	1ಕಿ.ವಾಟ್ ವರೆಗೆ	50	625	650	4.00
		100	1050	1099	4.67
	5 ಕಿ.ವಾಟ್‌ಗೆ	100	1850	1899	2.65
		300	3550	3697	4.14
		500	5250	5495	4.67
	10 ಕಿ.ವಾಟ್‌ಗೆ	100	2850	2899	1.72
		300	4550	4697	3.23
		500	6250	6495	3.92
		1000	10500	10990	4.67
ಎಲ್.ಟಿ-3ಎ	ವಾಣಿಜ್ಯ ದೀಪ (ಪ್ರತಿ ಯೂನಿಟ್‌ಗೆ 30 ಪೈಸೆ ರಿಯಾಯಿತಿಯನ್ನು ಗ್ರಾಮ ಪಂಚಾಯತ್ ಪ್ರದೇಶಗಳ ಅಡಿಯಲ್ಲಿ ಬರುವ ಗ್ರಾಹಕರಿಗೆ)				
	1ಕಿ.ವಾಟ್ ವರೆಗೆ	50	610	635	4.10
		100	1020	1069	4.80
	5 ಕಿ.ವಾಟ್‌ಗೆ	100	1820	1869	2.69
		300	3460	3607	4.25
		500	5100	5345	4.80
	10 ಕಿ.ವಾಟ್‌ಗೆ	100	2820	2869	1.74
		300	4460	4607	3.30
		500	6100	6345	4.02
		1000	10200	10690	4.80
ಎಲ್.ಟಿ-4a	ನೀರಾವರಿ ಪಂಪುಸೆಟ್ (ಎಲ್ಲಾ ಪ್ರದೇಶಗಳಿಗೆ ಅನ್ವಯಿಸುತ್ತದೆ)				
	10ಹೆಚ್.ಪಿ ವರೆಗಿನ	600	2856	3150	10.29
	(10ಹೆಚ್.ಪಿ ವರೆಗಿನ ನೀರಾವರಿ ಪಂಪುಸೆಟ್ ಗಳಿಗೆ ರಾಜ್ಯ ಸರ್ಕಾರದ ಸಹಾಯ ಧನದಿಂದ ಭರಿಸಲಾಗುವುದು)				
ಎಲ್.ಟಿ-4b	10 ಹೆಚ್.ಪಿ ಗಿಂತ ಹೆಚ್ಚಿನ ಸಾಮರ್ಥ್ಯ	375	3023	3206	6.05
ಎಲ್.ಟಿ-4c	10 ಹೆಚ್‌ಪಿ ವರೆಗಿನ	284	2557	2696	5.44

‘ಉಕ್ರೇನ್‌ನಲ್ಲಿ ಭಾರತದ ಶೆಲ್: ಸತ್ಯಕ್ಕೆ ದೂರ’

ನವದೆಹಲಿ (ಪಿಟಿಐ): ಭಾರತ ಮೂಲದ ಫಿರಂಗಿ ಶೆಲ್‌ಗಳು ಉಕ್ರೇನ್‌ನಲ್ಲಿ ಪತ್ತೆಯಾಗಿವೆ ಎಂಬ ವರದಿಗಳು ಸತ್ಯಕ್ಕೆ ದೂರವಾಗಿವೆ ಎಂದು ಕೇಂದ್ರ ಸರ್ಕಾರ ಗುರುವಾರ ಹೇಳಿದೆ. ಉಕ್ರೇನ್‌ಗೆ ಭಾರತದಿಂದ ಶಸ್ತ್ರಾಸ್ತ್ರ ರವಾನೆ ಆಗಿಲ್ಲ ಎಂದು ಕೇಂದ್ರ ಸ್ಪಷ್ಟಪಡಿಸಿದೆ.

‘ಉಕ್ರೇನ್‌ಗೆ ನಾವು ಫಿರಂಗಿ ಮದ್ದುಗುಂಡುಗಳನ್ನು ಕಳುಹಿಸಿಲ್ಲ’ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ ಹೇಳಿದ್ದಾರೆ. ಭಾರತದಿಂದ ಕಳುಹಿಸಿದ ಶೆಲ್‌ಗಳು ಉಕ್ರೇನ್‌ನಲ್ಲಿ ಸಿಕ್ಕಿವೆ ಎಂಬ ವರದಿಗಳು, ಭಾರತ ಮತ್ತು ರಷ್ಯಾ ನಡುವಿನ ಸಂಬಂಧಕ್ಕೆ ಹುಳಿ ಹಿಂಡುವ ಕೆಲಸ ಮಾಡಬಾರದು ಎಂಬ ಉದ್ದೇಶದಿಂದ ಈ ಸ್ಪಷ್ಟನೆ ನೀಡಲಾಗಿದೆ ಎಂದು ವಿಶ್ಲೇಷಿಸಲಾಗಿದೆ.

ರಷ್ಯಾ ಮತ್ತು ಉಕ್ರೇನ್ ನಡುವಿನ ಬಿಕ್ಕಟ್ಟನ್ನು ಮಾತುಕತೆಯ ಮೂಲಕವೇ ಬಗೆಹರಿಸಬೇಕು ಎಂಬ ನಿಲುವನ್ನು ಭಾರತವು ಹೊಂದಿದೆ. ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್ ಅವರು ಉಕ್ರೇನ್‌ನ ವಿದೇಶಾಂಗ ಸಚಿವರ ಜೊತೆ ಮಂಗಳವಾರ ಮಾತುಕತೆ ನಡೆಸಿದ್ದಾರೆ. ಜೈಶಂಕರ್ ಅವರು ತಮ್ಮ ರಷ್ಯಾ ಭೇಟಿಯ ನಂತರ, ಉಕ್ರೇನ್ ಸಚಿವರ ಜೊತೆ ದೂರವಾಣಿ ಮೂಲಕ ಮಾತುಕತೆ ನಡೆಸಿದ್ದಾರೆ.

ಇರಾನ್ ಸ್ಫೋಟ: ಹೊಣೆ ಹೊತ್ತ ಐಎಸ್

ಬೈರೂತ್(ಎಎಫ್‌ಪಿ): ಇರಾನ್‌ನ ಕೆರ್ಮಾನ್ ನಗರದಲ್ಲಿ ಸಂಭವಿಸಿದ್ದ ಎರಡು ಬಾಂಬ್ ಸ್ಫೋಟದ ಹೊಣೆಯನ್ನು ಜಿಹಾದಿ ಸಂಘಟನೆ ಇಸ್ಲಾಮಿಕ್ ಸ್ಟೇಟ್ (ಐಎಸ್) ಗುರುವಾರ ಹೊತ್ತುಕೊಂಡಿದೆ.

ಈ ಕುರಿತು ಸಾಮಾಜಿಕ ಮಾಧ್ಯಮ ‘ಟೆಲಿಗ್ರಾಮ್’ನಲ್ಲಿ ಹೇಳಿಕೆ ಬಿಡುಗಡೆ ಮಾಡಿರುವ ಸಂಘಟನೆ, ತನ್ನ ಇಬ್ಬರು ಸದಸ್ಯರು ಈ ಕೃತ್ಯ ಎಸಗಿದ್ದಾರೆ ಎಂದು ಹೇಳಿದೆ. ಕೆರ್ಮಾನ್‌ನಲ್ಲಿರುವ, ರೆವಲ್ಯೂಷನರಿ ಗಾರ್ಡ್ಸ್‌ನ ಜನರಲ್ ಖಾಸಿಂ ಸುಲೇಮಾನಿ ಸಮಾಧಿ ಬಳಿ ಬುಧವಾರ ಸಂಸ್ಮರಣಾ ಕಾರ್ಯಕ್ರಮ ನಡೆಯುತ್ತಿದ್ದಾಗ ಸ್ಫೋಟ ಸಂಭವಿಸಿ, 103 ಜನರ ಮೃತಪಟ್ಟಿದ್ದರು.

ನೆಲಮಂಗಲ ತಾಲ್ಲೂಕಿನ ಶಿವಗಂಗೆ ಗಂಗಾಧರೇಶ್ವರ ಜಾತ್ರಾ ಮಹೋತ್ಸವ

ಕಳೆಗುಂದಿದ ಜಾನುವಾರು ಜಾತ್ರೆ

• ಮೋಹನ್ ಕುಮಾರ್ ಸಿ.ಜಿ.

ಶಿವಗಂಗೆಯ ಗಂಗಾಧರೇಶ್ವರ ಜಾತ್ರೆಯಲ್ಲಿರುವ ಜಾನುವಾರುಗಳು

ದಾಬಸ್ ಪೇಟೆ: ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಹೆಸರಾಗಿರುವ ನೆಲಮಂಗಲ ತಾಲ್ಲೂಕಿನ ಶಿವಗಂಗೆ ಗಂಗಾಧರೇಶ್ವರ ಜಾನುವಾರು ಜಾತ್ರೆ, ವರ್ಷದಿಂದ ವರ್ಷಕ್ಕೆ ಆಕರ್ಷಣೆ ಕಳೆದು-ಕೊಳ್ಳುತ್ತಿದೆ. ಜಾತ್ರೆಗೆ ಬರುವ ರಾಸುಗಳ ಸಂಖ್ಯೆ ಕ್ಷೀಣಿಸುತ್ತಿದೆ.

ಕೆಲವು ವರ್ಷಗಳ ಹಿಂದೆ ಎರಡು ಸಾವಿರಕ್ಕೂ ಅಧಿಕ ರಾಸುಗಳು ಜಾತ್ರೆಗೆ ಬರುತ್ತಿದ್ದವು. ಇಲ್ಲಿನ ಹಿಪ್ಪೆ ತೋಪು ಭರ್ತಿಯಾಗಿ ಪಕ್ಕದ ಹೊಲಗಳಲ್ಲಿಯೂ ರೈತರು ಜಾನುವಾರುಗಳನ್ನು ಕಟ್ಟುತ್ತಿದ್ದರು. ಈ ಬಾರಿಯ ಜಾತ್ರೆಯಲ್ಲಿ ನೂರು ಜೋಡಿಯೂ ಇರಲಿಲ್ಲ.

₹20 ಸಾವಿರದಿಂದ ₹2 ಲಕ್ಷದ ವರೆಗೂ ಬೆಲೆಯಿರುವ ದೇಶಿಯ ಜಾನುವಾರುಗಳ ಜೊತೆಗೆ ಅಮೃತ ಮಹಲ್, ಹಳ್ಳಿಕಾರ್ ರಾಸುಗಳು ಜಾತ್ರೆಗೆ ಬರುತ್ತಿದ್ದವು. ಮಾಗಡಿ, ರಾಮನಗರ, ಚನ್ನಪಟ್ಟಣ, ಕುಣಿಗಲ್, ಮಂಡ್ಯ, ಹಾಸನ, ಕೋಲಾರ, ಚಿಕ್ಕಬಳ್ಳಾಪುರ, ತುಮಕೂರು, ಕೊರಟಗೆರೆ, ಮಧುಗಿರಿ, ತೆಲಂಗಾಣ ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ರೈತರು ಜಾತ್ರೆಗೆ ರಾಸುಗಳನ್ನು ಕರೆ ತರುತ್ತಿದ್ದರು. ಮಳೆಯ ಅಭಾವ ಮೇವಿನ ಕೊರತೆ ಹಾಗೂ ಸಾಕಾಣಿಕೆ ವೆಚ್ಚದ ಹೆಚ್ಚಳದಿಂದಾಗಿ ರಾಸುಗಳ ಸಾಕಣೆಯಿಂದ ಗ್ರಾಮೀಣ ಜನರು ವಿಮುಖರಾಗುತ್ತಿದ್ದಾರೆ.

‘ಹಿಂದೆಲ್ಲ ಜಾತ್ರೆ ನಡೆಯುವ ದಿನ ತಿಳಿದುಕೊಂಡು ಮೇವು, ಪಾತ್ರೆ, ದವಸ ಧಾನ್ಯ, ರಾಸುಗಳೊಂದಿಗೆ ಗಾಡಿ ಕಟ್ಟಿಕೊಂಡು ಬರುತ್ತಿದ್ದೆವು. ವಾರಗಟ್ಟಲೆ ಜಾತ್ರೆಯಲ್ಲಿ ಉಳಿದುಕೊಳ್ಳುತ್ತಿದ್ದೆವು. ರಾಸುಗಳನ್ನು ಮಾರಿ, ಬೇಕಾದ ರಾಸುಗಳನ್ನು ಜಾತ್ರೆಯಿಂದ ಖರೀದಿಸುತ್ತಿದ್ದೆವು’ ಎಂದು ರೈತರೊಬ್ಬರು ನೆನಪಿಸಿಕೊಂಡರು.

‘ಈಗ ಜಾತ್ರೆಯಲ್ಲಿ ಬಹುಮಾನಕ್ಕಾಗಿ ರಾಸುಗಳನ್ನು ಸಾಕುತ್ತಿದ್ದಾರೆ. ಹೆಚ್ಚು ಹಾಲು ಕೊಡುವ ಸಿಂದಿ, ಜೆರ್ಸಿ ತಳಿಗಳನ್ನು ಸಾಕುತ್ತಿದ್ದಾರೆ. ನಾಟಿ ದನಗಳನ್ನು ಸಾಕುವುದನ್ನು ಬಿಡುತ್ತಿದ್ದಾರೆ. ಹಾಗಾಗಿ ಜಾತ್ರೆಗೆ ಜಾನುವಾರುಗಳು ಬರುತ್ತಿಲ್ಲ’ ಎಂದು ರೈತ ಗೋವಿಂದಪ್ಪ ವಿವರಿಸಿದರು.

ಜಾತ್ರೆ ಎಂದರೆ ಜಾನುವಾರುಗಳು ಕೊಡು-ಕೊಳ್ಳುವಿಕೆಯಷ್ಟೇ ಅಲ್ಲ. ಹತ್ತಾರು ಜನಕ್ಕೆ ಜೀವನೋಪಾಯದ ದಾರಿಯೂ ಆಗಿತ್ತು. ಕೊಳ್ಳುವವರ ಮಾರುವವರ ಮಧ್ಯೆ ದಲ್ಲಾಳಿಗಳು ವ್ಯಾಪಾರ ಕುದುರಿಸಿ ಕಮಿಷನ್ ಪಡೆಯುತ್ತಿದ್ದರು. ದಲ್ಲಾಳಿಗಳು ಒಂದಷ್ಟು ಹಣ ಮಾಡಿಕೊಳ್ಳುತ್ತಿದ್ದರು. ಆದರೆ, ಜಾತ್ರೆಯಲ್ಲಿ ರಾಸುಗಳು ಸಂಖ್ಯೆ ಕ್ಷೀಣಿಸಿದ ಕಾರಣ ದಲ್ಲಾಳಿಗಳಿಗೂ ಕೆಲಸವಿಲ್ಲದಂತಾಗಿದೆ ಎಂದು ದಲ್ಲಾಳಿ ಕೆಲಸ ಮಾಡುತ್ತಾ ಬಂದಿರುವ ಮೂರ್ತಿ ಬೇಸರ ವ್ಯಕ್ತಪಡಿಸಿದರು.

ಜಾತ್ರೆಯಲ್ಲಿ ಜಾನುವಾರುಗಳಿಗೆ ಬೇಕಾದ ಹಗ್ಗ, ಮೂಗುದಾರ, ಗೆಜ್ಜೆ, ದಂಡೆಗಳ ಮಾರಾಟ ಮಾಡಿ ಜೀವನ ನಡೆಸುತ್ತಿದ್ದವರಿಗೂ ಜಾತ್ರೆ ಸೊಬಗು ಕಳೆದುಕೊಂಡಿರುವುದು ನಷ್ಟವನ್ನುಂಟು ಮಾಡಿದೆ.

‘ಅರ್ಜುನ್’ ಪ್ರಶಸ್ತಿ ಪುರಸ್ಕೃತ ಪೊಲೀಸ್ ಅಧಿಕಾರಿ ಹತ್ಯೆ

ನವದೆಹಲಿ: ಪಂಜಾಬ್‌ನ ಜಲಂಧರ್ ನಗರದಲ್ಲಿ ನಡೆದಿದ್ದ ಪೊಲೀಸ್ ಅಧಿಕಾರಿಯೊಬ್ಬರ ಹತ್ಯೆ ಪ್ರಕರಣವನ್ನು ಆಧುನಿಕ ತಾಂತ್ರಿಕತೆ ಬಳಸಿ ತನಿಖೆ ಮೂಲಕ ಭೇದಿಸಲಾಗಿದ್ದು, 48 ಗಂಟೆಗಳಲ್ಲಿಯೇ ಆರೋಪಿಯನ್ನು ಬಂಧಿಸಲಾಗಿದೆ.

ಪೊಲೀಸ್ ಅಧಿಕಾರಿ ದಲ್ಬೀರ್ ಸಿಂಗ್ ಡಿಯೋಲ್ ಹತ್ಯೆಯಾದ ಅಧಿಕಾರಿ. ವೇಟ್ ಲಿಫ್ಟರ್ ಆಗಿದ್ದ ಅವರು ಪ್ರತಿಷ್ಠಿತ ಅರ್ಜುನ್ ಪ್ರಶಸ್ತಿ ಪುರಸ್ಕೃತರೂ ಆಗಿದ್ದರು.

ಕಾಲುವೆಯೊಂದರ ಬಳಿ ಬುಧವಾರ ಅವರ ಶವ ಪತ್ತೆಯಾಗಿತ್ತು. ಅವರ ತಲೆಯಲ್ಲಿ ಗುಂಡಿನಿಂದಾದ ಗಾಯ ಇತ್ತು.

ಅದೇ ಮಾರ್ಗವಾಗಿ ಹೊರಟಿದ್ದ ಮತ್ತೊಬ್ಬ ಪೊಲೀಸ್ ಅಧಿಕಾರಿ ಜುಗಲ್ ಕಿಶೋರ್ ಅವರು ದಲ್ಬೀರ್ ಸಿಂಗ್ ಮೃತದೇಹವನ್ನು ಗಮನಿಸಿ, ತಮ್ಮ ಸಹೋದ್ಯೋಗಿ-ಗಳಿಗೆ ತಿಳಿಸಿದ್ದಾರೆ. ಇದರ ಬೆನ್ನಲ್ಲೇ ತನಿಖೆಯನ್ನು ಆರಂಭಿಸಲಾಯಿತು ಎಂದು ಮೂಲಗಳನ್ನು ಉಲ್ಲೇಖಿಸಿ ಎನ್‌ಡಿಟಿವಿ ವರದಿ ಮಾಡಿದೆ.

ಸಿ.ಸಿ.ಟಿ.ವಿಯಲ್ಲಿ ದಾಖಲಾಗಿದ್ದ ದೃಶ್ಯಗಳನ್ನು ಪರಿಶೀಲಿಸಿದಾಗ, ಆಟೊವೊಂದರಲ್ಲಿ ದಲ್ಬೀರ್ ಸಿಂಗ್ ತೆರಳಿದ್ದು ಗೊತ್ತಾಗಿದೆ. ನಂತರ ಆಟೊ ನಂಬರ್ ಹಾಗೂ ಮೊಬೈಲ್ ಸಿಗ್ನಲ್‌ಗಳ ಕೂಲಂಕಷ ಪರಿಶೀಲನೆ ನಂತರ, ಆಟೊ ಚಾಲಕ ವಿಜಯಕುಮಾರ್ ಎಂಬಾತನನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದ್ದಾರೆ.

‘ಪೊಲೀಸ್ ಅಧಿಕಾರಿ ದಲ್ಬೀರ್ ಸಿಂಗ್ ಅವರನ್ನು ಅವರ ಗ್ರಾಮಕ್ಕೆ ಬಿಡಲು ಆಟೊ ಚಾಲಕ ನಿರಾಕರಿಸಿದ್ದಾನೆ. ಇಬ್ಬರ ನಡುವೆ ಮಾತಿನ ಚಕಮಕಿ ನಡೆದಿದೆ. ಆಗ, ದಲ್ಬೀರ್ ಸಿಂಗ್ ಬಳಿ ಇದ್ದ ರಿವಾಲ್ವರ್ ಕಿತ್ತುಕೊಂಡ ವಿಜಯಕುಮಾರ್, ಅವರ ತಲೆಗೆ ಗುಂಡು ಹೊಡೆದಿದ್ದಾನೆ ಎಂಬುದು ಪ್ರಾಥಮಿಕ ತನಿಖೆಯಿಂದ ಗೊತ್ತಾಗಿದೆ’ ಎಂದು ಪೊಲೀಸ್ ಅಧಿಕಾರಿಗಳು ಹೇಳಿದ್ದಾರೆ.

ಬೆಂಗಳೂರು ರೇಸ್

ಜಮಾರಿ ಗೆಲ್ಲುವ ನಿರೀಕ್ಷೆ

ಬುಕ್‌ಮೇಕರ್ಸ್ ಅಸೋಸಿಯೇಶನ್ ಬೆಂಗಳೂರು ಓಕ್ಸ್ ಶುಕ್ರವಾರದ ಬೆಂಗಳೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಜಮಾರಿ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1:30ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ಗೋಲ್ಡನ್ ಲೆಜೆಂಡ್ 3, ಭರತ್ 1, ಎಲ್ ಅಸೆಸಿನೊ 2

2ನೇ ರೇಸ್: ರೋಮನ್ ಸ್ಪಿರಿಟ್ 1, ಹನಿ ಕೇಕ್ 4, ಮಾಸ್ಟರ್ ಆಫ್ ಕರೇಜ್ 7

3ನೇ ರೇಸ್: ವಿಕ್ಟೋರಿಯಾ ದೊರೆಸಾನಿ 3, ನಾರ್ವೀಗಿಯನ್ ವುಡ್ 5, ನೆವೆಡಾ ಗೋಲ್ಡ್ 8

4ನೇ ರೇಸ್: ಸ್ಪ್ಲೆಂಡಿಡೊ 2, ಗಲಾಹಡ್ 4, ಕಾಲಾಮಿಟ್ಸ 1

5ನೇ ರೇಸ್: ಇಂಪೀರಿಯಲ್ ಬ್ಲೂ 1, ಸೀಝ್ ಕರೇಜಿಯಸ್ 2, ಪಾಲಿಶ್ಡ್ ಗರ್ಲ್ 6

6ನೇ ರೇಸ್: ಜಮಾರಿ 2, ಟೆಹಾನಿ 4, ವಂಡರ್ ವುಮನ್ 5

7ನೇ ರೇಸ್: ಸ್ಟಾರ್ ಆಫ್ ಮೈಸೂರ್ 8. ಡಿವೊ 3, ಸ್ಟಾರ್ ಕಾನ್ಸೆಪ್ಟ್ 1

ಉತ್ತಮ ಬೆಟ್: ವಿಕ್ಟೋರಿಯಾ ದೊರೆಸಾನಿ

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
4,5,6,7,8	2,3,4	5,6,7

ಸಚಿವರಾದ ಸತೀಶ, ಪರಮೇಶ್ವರ, ಮಹದೇವಪ್ಪ ಸಮಾಲೋಚನೆ

ಕುತೂಹಲ ಮೂಡಿಸಿದ ರಹಸ್ಯ ಸಭೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ನಿವಾಸದಲ್ಲಿ ಗೃಹ ಸಚಿವ ಜಿ. ಪರಮೇಶ್ವರ ಮತ್ತು ಸಮಾಜ ಕಲ್ಯಾಣ ಸಚಿವ ಎಚ್‌.ಸಿ. ಮಹದೇವಪ್ಪ ಅವರು ಗುರುವಾರ ರಾತ್ರಿ ಭೋಜನ ಸವಿಯುವ ನೆಪದಲ್ಲಿ ಸುಮಾರು ಒಂದು ಗಂಟೆಗೂ ಹೆಚ್ಚು ಹೊತ್ತು ಸಮಾಲೋಚನೆ ನಡೆಸಿರುವುದು ಕುತೂಹಲ ಮೂಡಿಸಿದೆ.

ಸತೀಶ ಜಾರಕಿಹೊಳಿ ಮನೆಗೆ ಬಂದ ಪರಮೇಶ್ವರ ಮತ್ತು ಎಚ್‌.ಸಿ. ಮಹದೇವಪ್ಪ ಜೊತೆಯಾಗಿ ನಾಲ್ಕು ಗೋಡೆಗಳ ಮಧ್ಯೆ ಯಾವ ವಿಚಾರದ ಬಗ್ಗೆ ಚರ್ಚೆ ನಡೆಸಿದರು ಎಂಬ ಮಾಹಿತಿ ಲಭ್ಯ ಆಗಿಲ್ಲ.

ಲೋಕಸಭೆ ಚುನಾವಣೆಗೆ ತಯಾರಿ ಕುರಿತಂತೆ ದೆಹಲಿಯಲ್ಲಿ ಪಕ್ಷದ ವರಿಷ್ಠರ ಜೊತೆ ಚರ್ಚೆ ನಡೆಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತೆರಳಿರುವ ಬೆನ್ನಲ್ಲೆ, ಮೂವರು ಸಚಿವರು ರಹಸ್ಯವಾಗಿ ವಿಚಾರ ವಿನಿಮಯ ನಡೆಸಿದ್ದಾರೆ.

ಬುಧವಾರ ರಾತ್ರಿ ದೆಹಲಿಗೆ ಹೊರಟಿದ್ದ ಸಿದ್ದರಾಮಯ್ಯ ಜೊತೆ ಸತೀಶ ಜಾರಕಿಹೊಳಿ ಕೂಡಾ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದವರೆಗೆ ತೆರಳಿದ್ದರು. ಬಳಿಕ ವಿಮಾನ ನಿಲ್ದಾಣದಿಂದ ಅವರು ವಾಪಸಾಗಿದ್ದರು. ಈ ಬಗ್ಗೆ ಸುದ್ದಿಗಾರರು ಕೇಳಿದಾಗ, ‘ಇಲಾಖೆಗೆ ಸಂಬಂಧಿಸಿದ್ದು ಸೇರಿದಂತೆ ಕೆಲವು ವಿಚಾರಗಳ ಬಗ್ಗೆ ಮುಖ್ಯಮಂತ್ರಿ ಜೊತೆ ಚರ್ಚಿಸಬೇಕಿತ್ತು. ಹೀಗಾಗಿ ಅವರ ಜೊತೆ ವಿಮಾನ ನಿಲ್ದಾಣದವರೆಗೆ ಹೋಗಿದ್ದೆ’ ಎಂದಿದ್ದಾರೆ.

ಲೋಕಸಭೆ ಚುನಾವಣೆಗೂ ಮೊದಲು ಮೂರು ಉಪ ಮುಖ್ಯಮಂತ್ರಿ ಹುದ್ದೆಯನ್ನು ಸೃಷ್ಟಿಸಬೇಕೆಂಬ ಅಭಿಪ್ರಾಯವನ್ನು ಈಗಾಗಲೇ ಈ ಮೂವರೂ ವ್ಯಕ್ತಪಡಿಸಿದ್ದಾರೆ. ಲಿಂಗಾಯತ, ದಲಿತ ಮತ್ತು ಪರಿಶಿಷ್ಟ ಪಂಗಡಕ್ಕೆ ಉಪ ಮುಖ್ಯಮಂತ್ರಿ ಹುದ್ದೆ ನೀಡಬೇಕೆಂಬ ಬೇಡಿಕೆಯಿದೆ. ಈ ವಿಚಾರದ ಬಗ್ಗೆ ಮತ್ತು ನಿಗಮ ಮಂಡಳಿಗಳಿಗೆ ನೇಮಕ ಕುರಿತಂತೆ ಈ ಮೂವರು ನಾಯಕರು ಚರ್ಚಿಸಿರುವ ಸಾಧ್ಯತೆಯಿದೆ ಎನ್ನಲಾಗಿದೆ.

ಕೆಲವು ದಿನಗಳ ಹಿಂದೆ ಪರಮೇಶ್ವರ ನಿವಾಸದಲ್ಲಿಯೂ ಈ ಮೂವರು ಊಟಕ್ಕೆ ಸೇರಿ ರಹಸ್ಯ ಸಭೆ ನಡೆಸಿದ್ದರು. ಅಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಕೂಡಾ ಜೊತೆಯಾಗಿದ್ದರು.

ಕರ್ನಾಟಕ ಸೇರಿ 11 ರಾಜ್ಯಗಳ ಸಿ.ಎಸ್‌ಗಳಿಗೆ ಸಮನ್ಸ್

ಪ್ರಜಾವಾಣಿ ವಾರ್ತೆ

ನವದೆಹಲಿ: ಮದರಸಾಗಳಲ್ಲಿರುವ ಮುಸ್ಲಿಂಯೇತರ ವಿದ್ಯಾರ್ಥಿಗಳನ್ನು ಗುರುತಿಸಬೇಕು ಎಂಬ ನಿರ್ದೇಶನ ಕುರಿತು ಕ್ರಮ ಜರುಗಿಸದ 11 ರಾಜ್ಯಗಳ ಮುಖ್ಯ ಕಾರ್ಯದರ್ಶಿಗಳಿಗೆ ರಾಷ್ಟ್ರೀಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ (ಎನ್‌ಸಿಪಿಸಿಆರ್) ಸಮನ್ಸ್ ನೀಡಿದೆ.

ಹರಿಯಾಣ, ಗೋವಾ, ಮಧ್ಯ ಪ್ರದೇಶ, ಕರ್ನಾಟಕ, ಕೇರಳ, ಆಂಧ್ರ ಪ್ರದೇಶ, ಛತ್ತೀಸಗಢ, ಜಾರ್ಖಂಡ್ ಸೇರಿದಂತೆ ಒಟ್ಟು 11 ರಾಜ್ಯಗಳ ಸಿಎಸ್‌ಗಳಿಗೆ ಸೂಚನೆ ನೀಡಲಾಗಿದೆ. ಜನವರಿ 17ರಂದು ಹಾಜರಾಗುವಂತೆ ಕರ್ನಾಟಕದ ಮುಖ್ಯ ಕಾರ್ಯದರ್ಶಿ ಅವರಿಗೆ ಸೂಚನೆ ನೀಡಲಾಗಿದೆ. ಸರ್ಕಾರ ನೆರವು ನೀಡುತ್ತಿರುವ ಮದರಸಾಗಳಲ್ಲಿ ಕಲಿಯುತ್ತಿರುವ ಮುಸ್ಲಿಂಯೇತರ ವಿದ್ಯಾರ್ಥಿಗಳನ್ನು ಗುರುತಿಸಬೇಕು. ವ್ಯಕ್ತಿಗತವಾಗಿ ಪರಿಶೀಲನೆ ನಡೆಸಿ ಅಂತಹ ಮಕ್ಕಳನ್ನು ಶಾಲೆಗೆ ಸೇರಿಸಲು ಕ್ರಮವಹಿಸಬೇಕು ಎಂದು ಆಯೋಗವು ಈ ಹಿಂದೆ ಆದೇಶಿಸಿತ್ತು.

ಈ ಬಗ್ಗೆ ಮೊದಲು 2022ರ ಡಿ. 8ರಂದು, ನಂತರ 2023ರ ಜ. 20 ಹಾಗೂ ಅ.17ರಂದು ಸೂಚನೆ ನೀಡಲಾಗಿತ್ತು. ನಿಗದಿತ ಸಮಯ ಕಳೆದಿರುವ ಕಾರಣ, ಕಾಯ್ದೆಯಡಿ ದತ್ತವಾಗಿರುವ ಅಧಿಕಾರವನ್ನು ಬಳಸಿ ವ್ಯಕ್ತಿಗತವಾಗಿ ಹಾಜರಾಗಿ ವಿವರಣೆ ನೀಡುವಂತೆ ಈಗ ಸೂಚಿಸಲಾಗಿದೆ.

ಎಲ್.ಟಿ–5	ಕೈಗಾರಿಕೆ, ಕೈಗಾರಿಕೇತರ ತಾಪನ, ದೀಪವನ್ನು ಒಳಗೊಂಡಂತೆ ಮೋಟೀವ್ ಪವರ್ (ಎಲ್ಲಾ ಪ್ರದೇಶಗಳಿಗೆ ಅನ್ವಯಿಸುತ್ತದೆ)				
	5 ಎಚ್.ಪಿ	200	1920	2018	5.10
		300	2530	2677	5.81
		500	3750	3995	6.53
	10 ಎಚ್.ಪಿ	600	5160	5454	5.70
		800	6580	6972	5.96
		1000	8000	8490	6.13
	20 ಎಚ್.ಪಿ	1500	12950	13685	5.68
		2000	16500	17480	5.94
		3000	23600	25070	6.23
	50 ಎಚ್.ಪಿ	3000	27800	29270	5.29
		4000	34900	36860	5.62
		7000	56200	59630	6.10
	65 ಎಚ್.ಪಿ	4000	37000	38960	5.30
		5000	44100	46550	5.56
		10000	79600	84500	6.16
	75 ಎಚ್.ಪಿ	7000	59700	63130	5.75
		9000	73900	78310	5.97
		11000	88100	93490	6.12
ಎಲ್.ಟಿ–5	ಕೈಗಾರಿಕೆ, ಕೈಗಾರಿಕೇತರ ತಾಪನ, ದೀಪವನ್ನು ಒಳಗೊಂಡಂತೆ ಮೋಟೀವ್ ಪವರ್ (ಪ್ರತಿ ಯೂನಿಟ್‌ಗೆ 30 ಪೈಸೆ ರಿಯಾಯಿತಿಯನ್ನು ಗ್ರಾಮ ಪಂಚಾಯತ್ ಪ್ರದೇಶಗಳ ಅಡಿಯಲ್ಲಿ ಬರುವ ಗ್ರಾಹಕರಿಗೆ)				
	5 ಎಚ್.ಪಿ	200	1860	1958	5.27
		300	2440	2587	6.02
		500	3600	3845	6.81
	10 ಎಚ್.ಪಿ	600	4980	5274	5.90
		800	6340	6732	6.18
		1000	7700	8190	6.36
	20 ಎಚ್.ಪಿ	1500	12500	13235	5.88
		2000	15900	16880	6.16
		3000	22700	24170	6.48
	50 ಎಚ್.ಪಿ	3000	26900	28370	5.46
		4000	33700	35660	5.82
		7000	54100	57530	6.34
	65 ಎಚ್.ಪಿ	4000	35800	37760	5.47
		5000	42600	45050	5.75
		10000	76600	81500	6.40
	75 ಎಚ್.ಪಿ	7000	57600	61030	5.95
		9000	71200	75610	6.19
		11000	84800	90190	6.36
ಎಲ್.ಟಿ–6(a)	ಬೀದಿ ದೀಪ/ಸಾರ್ವಜನಿಕ ದೀಪ ಸ್ಥಾಪನಗಳು (ಎಲ್ಲಾ ಪ್ರದೇಶಗಳಿಗೆ ಅನ್ವಯಿಸುತ್ತದೆ)				
	3 ಕಿ.ವಾಟ್	200	1925	2023	5.09
	5 ಕಿ.ವಾಟ್	300	2975	3122	4.94
	10 ಕಿ.ವಾಟ್	500	5250	5495	4.67
ಎಲ್.ಟಿ–6(b)	ನೀರು ಸರಬರಾಜು ಮತ್ತು ಒಳ ಚರಂಡಿ ಪಂಪಿಂಗ್ ಸ್ಥಾಪನಗಳು (ಎಲ್ಲಾ ಪ್ರದೇಶಗಳಿಗೆ ಅನ್ವಯಿಸುತ್ತದೆ)				
	3 ಎಚ್.ಪಿ	500	3275	3520	7.48
	5 ಎಚ್.ಪಿ	1000	6375	6865	7.69
	10 ಎಚ್.ಪಿ	2000	12750	13730	7.69
ಎಲ್.ಟಿ–6(c)	ವಿದ್ಯುತ್ ಚಾಲಿತ ವಾಹನ –ಎಲ್.ಟಿ (ಎಲ್ಲಾ ಪ್ರದೇಶಗಳಿಗೆ ಅನ್ವಯಿಸುತ್ತದೆ)				
	1ಕಿ.ವಾಟ್‌ಗೆ	50	295	320	8.47
		100	520	569	9.42
	5 ಕಿ.ವಾಟ್‌ಗೆ	100	800	849	6.13
		300	1700	1847	8.65
		500	2600	2845	9.42
ಎಲ್.ಟಿ–6(c)	ವಿದ್ಯುತ್ ಚಾಲಿತ ವಾಹನ –ಹೆಚ್.ಟಿ (ಎಲ್ಲಾ ಪ್ರದೇಶಗಳಿಗೆ ಅನ್ವಯಿಸುತ್ತದೆ)				
	100 ಕೆವಿಎ	6000	47000	49940	6.26
		10000	65000	69900	7.54
		14000	83000	89860	8.27
	1000 ಕೆವಿಎ	60000	470000	499400	6.26
		100000	650000	699000	7.54
		210000	1145000	1247900	8.99

ಎಚ್.ಟಿ – 1	ನೀರು ಸರಬರಾಜು ಮತ್ತು ಒಳ ಚರಂಡಿ ಸ್ಥಾಪನಗಳು (ಎಲ್ಲಾ ಪ್ರದೇಶಗಳಿಗೆ ಅನ್ವಯಿಸುತ್ತದೆ)				
	100 ಕೆವಿಎ	9000	89000	93410	4.96
		10000	95000	99900	5.16
		11000	101000	106390	5.34
	300 ಕೆವಿಎ	10000	165000	169900	2.97
		14000	189000	195860	3.63
		20000	225000	234800	4.36
	1000 ಕೆವಿಎ	110000	1010000	1063900	5.34
		130000	1130000	1193700	5.64
		150000	1250000	1323500	5.88
	6000 ಕೆವಿಎ	400000	4500000	4696000	4.36
		500000	5100000	5345000	4.80
		600000	5700000	5994000	5.16
ಎಚ್.ಟಿ–2(a)	ಕೈಗಾರಿಕೆ (ಎಲ್ಲಾ ಪ್ರದೇಶಗಳಿಗೆ ಅನ್ವಯಿಸುತ್ತದೆ)				
	300 ಕೆವಿಎ	12000	193800	202980	4.74
		15000	216000	226350	4.79
		20000	253000	265300	4.86
		110000	919000	966400	5.16
	ರೈಲ್ವೆ ಕರ್ಷಣ (ಎಲ್ಲಾ ಪ್ರದೇಶಗಳಿಗೆ ಅನ್ವಯಿಸುತ್ತದೆ)				
	9000 ಕೆವಿಎ	1000000	10150000	10150000	0.00
		2000000	17150000	17150000	0.00
	ಎಫ್ಲೂಯೆಂಟ್ ಟ್ರೀಟ್‌ಮೆಂಟ್ ಪ್ಲಾಂಟ್ (ಎಲ್ಲಾ ಪ್ರದೇಶಗಳಿಗೆ ಅನ್ವಯಿಸುತ್ತದೆ)				
	9000 ಕೆವಿಎ	1000000	10150000	10150000	0.00
		2000000	17150000	17150000	0.00
	ಬಿ.ಎಂ.ಆರ್.ಸಿ.ಎಲ್				
	9000 ಕೆವಿಎ	1000000	7950000	7950000	0.00
		2000000	13200000	13200000	0.00
ಎಚ್.ಟಿ–2(b)	ವಾಣಿಜ್ಯ (ಎಲ್ಲಾ ಪ್ರದೇಶಗಳಿಗೆ ಅನ್ವಯಿಸುತ್ತದೆ)				
	100 ಕೆವಿಎ	6000	93000	96220	3.46
		10000	130000	134700	3.62
		14000	167000	173180	3.70
	1000 ಕೆವಿಎ	60000	930000	962200	3.46
		100000	1300000	1347000	3.62
		210000	2317500	2405200	3.78
ಎಚ್.ಟಿ–2(c)(i)	ಸರ್ಕಾರಿ ಅಸ್ಪತ್ರೆಗಳು,ಇಎಸ್ಐ, ವಿಶ್ವ ವಿದ್ಯಾಲಯಗಳೂ, ರಾಜ್ಯ ಸರ್ಕಾರದ, ರಾಜ್ಯಸರ್ಕಾರದ ಧನ ಸಹಾಯದಿಂದ ನಡೆಯುವ ವಿದ್ಯಾಸಂಸ್ಥೆಗಳು (ಎಲ್ಲಾ ಪ್ರದೇಶಗಳಿಗೆ ಅನ್ವಯಿಸುತ್ತದೆ)				
	100 ಕೆವಿಎ	6000	75000	78580	4.77
		10000	105000	110300	5.05
		14000	135000	142020	5.20
	1000 ಕೆವಿಎ	60000	750000	785800	4.77
		100000	1050000	1103000	5.05
		210000	1875000	1975300	5.35
ಎಚ್.ಟಿ–2(c)(ii)	ಎಚ್.ಟಿ–2(ಸಿ)(1) ನ್ನು ಹೊರತುಪಡಿಸಿದ ಅಸ್ಪತ್ರೆಗಳು, ವಿಶ್ವ ವಿದ್ಯಾಲಯಗಳೂ, ವಿದ್ಯಾಸಂಸ್ಥೆಗಳು (ಎಲ್ಲಾ ಪ್ರದೇಶಗಳಿಗೆ ಅನ್ವಯಿಸುತ್ತದೆ)				
	100 ಕೆವಿಎ	6000	86000	89520	4.09
		10000	120000	125200	4.33
		14000	154000	160880	4.47
	1000 ಕೆವಿಎ	60000	860000	895200	4.09
		100000	1200000	1252000	4.33
		210000	2135000	2233200	4.60
ಎಚ್.ಟಿ–4	ಗೃಹ ನಿವಾಸಿ ಅಪಾರ್ಟ್‌ಮೆಂಟುಗಳು (ಎಲ್ಲಾ ಪ್ರದೇಶಗಳಿಗೆ ಅನ್ವಯಿಸುತ್ತದೆ)				
	100 ಕೆವಿಎ	6000	73500	77780	5.82
		10000	102500	108300	5.66
		12000	117000	123560	5.61
	1000 ಕೆವಿಎ	60000	735000	777800	5.82
		100000	1025000	1083000	5.66
		120000	1170000	1235600	5.61

ಟಿಪ್ಪಣಿ: ಹೆಚ್.ಟಿ. ಗ್ರಾಹಕರು 22.00 ರಿಂದ 06.00 ರವರೆಗೆ 100 ಪೈಸೆ/ಯೂನಿಟ್‌ನ ಸಮಯಾಧಾರಿತ ಜಕಾತಿಯ ರಿಯಾಯಿತಿಯನ್ನು ಹೊಂದಿರುತ್ತಾರೆ.
ಹೆಚ್.ಟಿ. ಗ್ರಾಹಕರು 18.00 ರಿಂದ 22.00 ರವರೆಗೆ 100 ಪೈಸೆ/ಯೂನಿಟ್‌ನ ಸಮಯಾಧಾರಿತ ಜಕಾತಿಯ ದಂಡ ವಿಧಿಸುವುದು.
ಮೇಲಿನ ಶುಲ್ಕಗಳ ಜೊತೆಗೆ, ರಾಜ್ಯ ಸರ್ಕಾರವು ವಿಧಿಸಿದ /ವಿಧಿಸಬಹುದಾದ ತೆರಿಗೆಗಳು ಅನ್ವಯಿಸುತ್ತವೆ.

ಸುವರ್ಣ ಮಹೋತ್ಸವ

ಪಿಇಎಸ್ ವಿಶ್ವವಿದ್ಯಾಲಯದ ಸುವರ್ಣ ಮಹೋತ್ಸವದ ಅಂಗವಾಗಿ ಗುರುವಾರ ಭಾರತೀಯ ರೈಲ್ವೆಯ ಇಂಟೆಗ್ರಲ್ ಕೋಚ್ ಫ್ಯಾಕ್ಟರಿಯ ನಿವೃತ್ತ ಪ್ರಧಾನ ವ್ಯವಸ್ಥಾಪಕ ಸುಧಾಂಶು ಮಣಿ ಅವರೊಂದಿಗೆ ಆಯೋಜಿಸಿದ್ದ ಸಂವಾದ ಕಾರ್ಯಕ್ರಮದಲ್ಲಿ ಕಾಲೇಜಿನ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು –ಪ್ರಜಾವಾಣಿ ಚಿತ್ರ

ಬೆಂಗಳೂರು ದಕ್ಷಿಣ ಲೋಕಸಭಾ ಕ್ಷೇತ್ರ • ಸ್ಪರ್ಧೆಗೆ ಆಸಕ್ತಿ ತೋರದ 'ಕೈ' ನಾಯಕರು

ಸಮರ್ಥ ಅಭ್ಯರ್ಥಿಗೆ ಕಾಂಗ್ರೆಸ್ ಶೋಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಕೇಂದ್ರ, ಉತ್ತರ ಮತ್ತು ಗ್ರಾಮಾಂತರ ಲೋಕಸಭಾ ಕ್ಷೇತ್ರಗಳಲ್ಲಿ ಸಂಭಾವ್ಯ ಅಭ್ಯರ್ಥಿಗಳ ಬಗ್ಗೆ ಬಿರುಸಿನ ಚರ್ಚೆ ಆರಂಭವಾಗಿದೆ. ಆದರೆ, ದಕ್ಷಿಣ ಲೋಕಸಭಾ ಕ್ಷೇತ್ರದಲ್ಲಿ ಚರ್ಚೆ ಇನ್ನೂ ಆರಂಭವಾಗಿಲ್ಲ.

ಹಾಲಿ ಸಂಸದ ಬಿಜೆಪಿಯ ತೇಜಸ್ವಿ ಸೂರ್ಯ ಮತ್ತೊಮ್ಮೆ ಸ್ಪರ್ಧಿಸುವುದು ನಿಶ್ಚಿತವಾಗಿದೆ. ಹೀಗಾಗಿ ಕಮಲ ಪಕ್ಷದಲ್ಲಿ ಬೇರೆ ಪ್ರತಿ ಸ್ಪರ್ಧಿಗಳು ಹುಟ್ಟಿಕೊಂಡಿಲ್ಲ. ಬಿಜೆಪಿಯ ಭದ್ರಕೋಟೆ ಎನಿಸಿರುವ ಇಲ್ಲಿ ಕಾಂಗ್ರೆಸ್‌ನಿಂದ ಯಾವುದೇ ಅಭ್ಯರ್ಥಿಯ ಹೆಸರು ಮುನ್ನೆಲೆಗೆ ಬಂದಿಲ್ಲ. ಕಾಂಗ್ರೆಸ್‌ನ ಯಾವ ನಾಯಕರು ಸ್ಪರ್ಧಿಸುವ ಬಗ್ಗೆ ಆಸಕ್ತಿ ತೋರಿಸಿಲ್ಲ.

ಕಳೆದ ಬಾರಿ ಕಾಂಗ್ರೆಸ್‌ನಿಂದ ಬಿ.ಕೆ. ಹರಿಪ್ರಸಾದ್ ಸ್ಪರ್ಧಿಸಿದ್ದರು. ಸಚಿವ ರಾಮಲಿಂಗಾರೆಡ್ಡಿ ಅವರ ಪುತ್ರಿ, ಮಾಜಿ ಶಾಸಕಿ ಸೌಮ್ಯಾರೆಡ್ಡಿ ಅವರ ಹೆಸರು ಸದ್ಯ ಚಲಾವಣೆಗೆ ಬಂದಿದೆ. ಆದರೆ, ರಾಮಲಿಂಗಾರೆಡ್ಡಿ ಆಗಲಿ, ಸೌಮ್ಯಾರೆಡ್ಡಿ ಅವರಾಗಲಿ ಈ ಕುರಿತು ಅಧಿಕೃತ ಹೇಳಿಕೆ ನೀಡಿಲ್ಲ.

ಈ ಹಿಂದಿನ ಲೋಕಸಭಾ ಚುನಾವಣೆಗಳಲ್ಲಿ ಜೆಡಿಎಸ್ ತನ್ನ ಅಭ್ಯರ್ಥಿಗಳನ್ನು ಕಣಕ್ಕೆ ಇಳಿಸಿತ್ತು. ಈ ಬಾರಿ ಜೆಡಿಎಸ್ ಎನ್‌ಡಿಎ ಒಕ್ಕೂಟ ಸೇರಿರುವುದರಿಂದ, ಯಾರನ್ನೂ ಕಣಕ್ಕೆ ಇಳಿಸುವುದಿಲ್ಲ. ಹೀಗಾಗಿ ಬಿಜೆಪಿ- ಕಾಂಗ್ರೆಸ್ ಪಕ್ಷಗಳ ಮಧ್ಯೆಯೇ ನೇರ ಹಣಾಹಣಿ ನಡೆಯಲಿದೆ.

'ಅಭ್ಯರ್ಥಿ ಆಯ್ಕೆ ಪ್ರಕ್ರಿಯೆಗೆ ಚಾಲನೆ ನೀಡುವ ಸಂದರ್ಭದಲ್ಲಿ ಆಕಾಂಕ್ಷಿಗಳು ಮುಂದಕ್ಕೆ ಬರಬಹುದು. ಸದ್ಯಕ್ಕಂತೂ ಯಾರೂ ಸ್ಪರ್ಧಿಸುವ ಬಗ್ಗೆ ಆಸಕ್ತಿ ವ್ಯಕ್ತಪಡಿಸಿಲ್ಲ' ಎಂದು ಕಾಂಗ್ರೆಸ್ ಮೂಲಗಳು ಹೇಳಿವೆ.

ಈ ಕ್ಷೇತ್ರದಿಂದ ಕಾಂಗ್ರೆಸ್ ಪ್ರಬಲ ಅಭ್ಯರ್ಥಿಯನ್ನು ಕಣಕ್ಕಿಳಿಸಿದರೆ, ಬಿಜೆಪಿ ಅಭ್ಯರ್ಥಿಗೆ ಪೈಪೋಟಿ ನೀಡಬಹುದು. ಅಂತಹ ಅಭ್ಯರ್ಥಿಗಳು ಯಾರಿದ್ದಾರೆ ಎಂದು ಪಕ್ಷ ಹುಡುಕಾಟ ನಡೆಸಿದೆ. ಡಿ.ಕೆ.ಶಿವಕುಮಾರ್ ಅವರು ಬಿಜೆಪಿಯಿಂದಲೇ ಯಾರನ್ನಾದರೂ ಸೆಳೆದು ಕಣಕ್ಕೆ ಇಳಿಸಲೂ ಬಹುದು ಎಂಬ ಚರ್ಚೆಯೂ ರಾಜಕೀಯ ವಲಯದಲ್ಲಿ ನಡೆದಿದೆ.

ಈ ಕ್ಷೇತ್ರದಲ್ಲಿ ಹಿಂದಿನಿಂದಲೂ ಕಾಂಗ್ರೆಸೇತರ ಪಕ್ಷಗಳೇ ಗೆಲುವು ಸಾಧಿಸಿಕೊಂಡು ಬಂದಿವೆ. 1977 ರಿಂದ ಈಚೆಗೆ ಒಮ್ಮೆ ಮಾತ್ರ ಕಾಂಗ್ರೆಸ್ ಗೆದ್ದಿದೆ. ಈ ಕಾರಣಕ್ಕಾಗಿ ಕಾಂಗ್ರೆಸ್‌ನಿಂದ ಸ್ಪರ್ಧಿಸಲು ಯಾರೂ ಮುಂದೆ ಬರುತ್ತಿಲ್ಲ. ಚುನಾವಣೆಯಲ್ಲಿ ಕೋಟಿಗಟ್ಟಲೆ ಹಣ ಖರ್ಚು ಮಾಡಬೇಕಾಗುತ್ತದೆ. ಗೆಲುವಿನ ಖಾತರಿ ಇಲ್ಲ. ಆದ್ದರಿಂದ ಸ್ಪರ್ಧೆಯ ಸಹವಾಸವೇ ಬೇಡ ಎಂದು ಹಿಂದೇಟು ಹಾಕುತ್ತಾರೆ ಎಂದು ಮೂಲಗಳು ತಿಳಿಸಿವೆ.

46 ವರ್ಷಗಳಲ್ಲಿ ಕಾಂಗ್ರೆಸ್ ಗೆದ್ದಿದ್ದು ಒಂದೇ ಸಲ

ಈ ಕ್ಷೇತ್ರದಲ್ಲಿ 1977 ರಿಂದ 2019 ರ ಅವಧಿಯಲ್ಲಿ ನಡೆದ ಲೋಕಸಭಾ ಚುನಾವಣೆಗಳಲ್ಲಿ ಕಾಂಗ್ರೆಸ್ ಪಕ್ಷ ಒಮ್ಮೆ ಮಾತ್ರ ಗೆದ್ದಿದ್ದು, 1977 ರಿಂದ 1984 ರ ಅವಧಿಯಲ್ಲಿ ನಡೆದ ಮೂರು ಚುನಾವಣೆಗಳಲ್ಲಿ ಜನತಾಪಕ್ಷದಿಂದ ಕೆ.ಎಸ್.ಹೆಗ್ಡೆ, ಟಿ.ಆರ್.ಶಾಮಣ್ಣ ಮತ್ತು ವಿ.ಎಸ್.ಕೃಷ್ಣಯ್ಯರ್ ಗೆಲುವು ಸಾಧಿಸಿದ್ದರು. 1989 ರಲ್ಲಿ ಮಾತ್ರ ಕಾಂಗ್ರೆಸ್‌ನಿಂದ ಆರ್.ಗುಂಡೂರಾವ್ ಅವರು ಗೆದ್ದಿದ್ದರು. 1991 ರಲ್ಲಿ ಬಿಜೆಪಿಯಿಂದ ಕೆ.ವೆಂಕಟಗಿರಿಗೌಡ ಅವರು ಚೊಚ್ಚಲ ಗೆಲುವು ಸಾಧಿಸಿದ್ದರು. ಆ ಬಳಿಕ ಅಂದರೆ, 1996 ರಿಂದ 2014 ರವರೆಗೆ ಆರು ಚುನಾವಣೆಗಳಲ್ಲಿ ಬಿಜೆಪಿಯಿಂದ ಅನಂತಕುಮಾರ್ ಗೆಲುವು ಸಾಧಿಸಿದ್ದರು. ಅನಂತಕುಮಾರ್ ನಿಧನದ ಬಳಿಕ 2019 ರಲ್ಲಿ ನಡೆದ ಲೋಕಸಭಾ ಚುನಾವಣೆಯಲ್ಲಿ ತೇಜಸ್ವಿ ಸೂರ್ಯ ಅವರು ಗೆಲುವು ಸಾಧಿಸಿದರು.

'ದೇವೇಗೌಡ, ಎಚ್‌ಡಿಕೆಗೆ ಅಸ್ತಿತ್ವದ ಭಯ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಎಚ್.ಡಿ.ಕುಮಾರಸ್ವಾಮಿ ಮಗ ಮಂಡ್ಯದಲ್ಲಿ ಸೋತಿದ್ದಾನೆ. ತುಮಕೂರಿನಲ್ಲಿ ಅವರಪ್ಪ ಸೋತಿದ್ದಾರೆ. ಇವರಿಗೆ ಅಸ್ತಿತ್ವದ ಭಯವಿದೆ' ಎಂದು ಕಾಂಗ್ರೆಸ್ ಶಾಸಕ ಎಚ್.ಸಿ.ಬಾಲಕೃಷ್ಣ ಅವರು ಹೇಳಿದರು.

ಶಾಸಕರ ಭವನದಲ್ಲಿ ಸುದ್ದಿಗಾರರ ಜತೆ ಮಾತನಾಡಿದ ಅವರು, 'ಕುಮಾರಸ್ವಾಮಿ ಬೇಕಿದ್ದರೆ ಬೆಂಗಳೂರು ಗ್ರಾಮಾಂತರ ಕ್ಷೇತ್ರದಿಂದಲೇ ಸ್ಪರ್ಧಿಸಲಿ. ಅವರು ಈಗ ಪ್ರತಿನಿಧಿಸುವ ಕ್ಷೇತ್ರ ಗ್ರಾಮಾಂತರವೇ ಆಗಿದೆಯಲ್ಲವೇ? ಮಂಡ್ಯ, ತುಮಕೂರು ಕ್ಷೇತ್ರಗಳು ಏಕೆ ಬೇಕು' ಎಂದು ಪ್ರಶ್ನಿಸಿದರು.

'ಹಾಸನದವರು ಹೇಮಾವತಿ ವಿಚಾರದಲ್ಲಿ ತುಮಕೂರಿನವರಿಗೆ ಅನ್ಯಾಯ ಮಾಡಿದ್ದಾರೆ. ಹೀಗಾಗಿ ದೇವೇಗೌಡರು ಅಲ್ಲಿ ಸೋತರು. ಕುಮಾರಸ್ವಾಮಿ ಸಂಸದರಾಗಿದ್ದಾಗ ಒಂದು ದಿನವೂ ಕ್ಷೇತ್ರಕ್ಕೆ ಮುಖ ತೋರಿಸಲಿಲ್ಲ. ಇವರಿಗೆ ಅಧಿಕಾರ ಬೇಕಿತ್ತು. ಅದಕ್ಕಾಗಿ ದೆಹಲಿಗೆ ಓಡಾಡಿಕೊಂಡಿದ್ದರು' ಎಂದು ಹೇಳಿದರು.

'ಬೆಂಗಳೂರು ಗ್ರಾಮಾಂತರ ಜನ ಡಿ.ಕೆ. ಸುರೇಶ್ ಅವರಂತಹ ಸಂಸದರನ್ನು ಕಳೆದುಕೊಂಡರೆ ಕ್ಷೇತ್ರಕ್ಕೆ ನಷ್ಟ. ಈ ರೀತಿಯ ಸಂಸದರನ್ನು ನಮ್ಮ ಜೀವನದಲ್ಲಿ ನೋಡಲು ಸಾಧ್ಯವಿಲ್ಲ. ಸುರೇಶ್ ಗೆದ್ದರೆ ನಮಗೆ ಅನುಕೂಲ. ಬಿಜೆಪಿ–ಜೆಡಿಎಸ್ ಮೈತ್ರಿಯಿಂದ ಕಾಂಗ್ರೆಸ್‌ಗೆ ಅನುಕೂಲ. ಜೆಡಿಎಸ್ ಬಿಟ್ಟು ಕಾಂಗ್ರೆಸ್‌ಗೆ ಸಾಕಷ್ಟು ಜನ ಬರುತ್ತಾರೆ' ಎಂದು ಹೇಳಿದರು.

ನಗರದಲ್ಲಿ ಇಂದು

ಕನ್ನಡ ಹಬ್ಬ: ಅತಿಥಿಗಳು: ಧರ್ಮೇಂದ್ರ ಕುಮಾರ್, ಎಸ್. ರಾಮಲಿಂಗೇಶ್ವರ, ಅಧ್ಯಕ್ಷತೆ: ಪ್ರಣೀತ ಬಿ.ಎಸ್., ಆಯೋಜನೆ ಮತ್ತು ಸ್ಥಳ: ಶೇಷಾದ್ರಿಪುರ ಕಾನೂನು ಮಹಾವಿದ್ಯಾಲಯ, ಶೇಷಾದ್ರಿಪುರ, ಬೆಳಿಗ್ಗೆ 9

ಸುಧಾ ಬೆಳವಾಡಿ

'ಅತರಾಶಿ ಆರಂಭ' ಇಕೆಬಾನ ಪ್ರದರ್ಶನದ ಉದ್ಘಾಟನೆ: ನಕಾನೆ, ಕಾವಾಯಿ, ಉದ್ಘಾಟನೆ: ವೈಷ್ಣವಿ, ಸುಧಾ ಬೆಳವಾಡಿ, ಮರ್‍ರೈಕಾಯರ್, ಆಯೋಜನೆ: ಸೊಗೆಟ್ಸು ಸ್ಕೂಲ್ ಆಫ್ ಇಕೆಬಾನ, ಸ್ಥಳ: ಇಟಿಎ ಮಾಲ್, ಬಿನ್ನಿಪೇಟೆ, ಬೆಳಿಗ್ಗೆ 9.30

'ಬಾಗಿಲಿಗೆ ಬಂತು ಸರ್ಕಾರ–ಸೇವೆಗೆ ಇರಲಿ ಸಹಕಾರ': ಉದ್ಘಾಟನೆ: ಡಿ.ಕೆ. ಶಿವಕುಮಾರ್, ಆಯೋಜನೆ: ಬಿಬಿಎಂಪಿ, ಸ್ಥಳ: ಡಾ.ಬಿ.ಆರ್. ಅಂಬೇಡ್ಕರ್ ಭವನ, ಯಲಹಂಕ ನ್ಯೂಟೌನ್, ಬೆಳಿಗ್ಗೆ 9.30

'ಕರ್ನಾಪೆಕ್ಸ್–2024' ಅಂಚೆ ಚೀಟಿಗಳ ಹಬ್ಬಕ್ಕೆ ಚಾಲನೆ: ಅತಿಥಿಗಳು: ಪಿ.ಸಿ. ಮೋಹನ್, ರಿಜ್ವಾನ್ ಅರ್ಷದ್, ಎನ್.ಎ. ಹ್ಯಾರಿಸ್, ಅಶ್ವಿನಿ ಪುನೀತ್ ರಾಜ್‌ಕುಮಾರ್, ರಮೇಶಚಂದ್ರ ಲಹೋಟಿ, ಮಹೇಶ ಜೋಶಿ, ಎಂ.ಎ. ಸಲೀಂ, ಮನೋಜ್ ಕುಮಾರ್, ಮಹಮ್ಮದ ಫಾರೂಕ್, ರಾಮಪ್ರಸಾತ್ ಮನೋಹರ ವಿ., ಪ್ರಶಾಂತ್, ಆಯೋಜನೆ: ಅಂಚೆ ಇಲಾಖೆ, ಸ್ಥಳ: ಕಂಠೀರವ ಒಳಾಂಗಣ ಕ್ರೀಡಾಂಗಣ, ಕಸ್ತೂರಿ ಬಾ ರಸ್ತೆ, ಬೆಳಿಗ್ಗೆ 10ರಿಂದ

ವಾಸವಿ ಅವರೆಬೇಳೆ ಮೇಳ: ಸಾನ್ನಿಧ್ಯ: ಶಿವರುದ್ರ ಸ್ವಾಮೀಜಿ, ಉದ್ಘಾಟನೆ: ಡಿ.ಕೆ. ಶಿವಕುಮಾರ್, ಅತಿಥಿಗಳು: ತೇಜಸ್ವಿ ಸೂರ್ಯ, ಡಿ.ಕೆ. ಸುರೇಶ್, ರಾಮಲಿಂಗಾರೆಡ್ಡಿ, ಉದಯ್ ಬಿ. ಗುರುಡಾಚಾರ್, ಎಚ್.ಸಿ. ಬಾಲಕೃಷ್ಣ, ತುಷಾರ್ ಗಿರಿನಾಥ್, ತಾರಾ ಅನುರಾಧ, ಆಯೋಜನೆ: ವಾಸವಿ ಕಾಂಡಿಮೆಂಟ್ಸ್, ಸ್ಥಳ: ಫುಡ್ ಸ್ಟ್ರೀಟ್, ಸಜ್ಜನ್ ರಾವ್ ವೃತ್ತ, ವಿವಿ ಪುರ, ಬೆಳಿಗ್ಗೆ 10ರಿಂದ

'ಒಂದು ಬೊಗಸೆ ನೀರು' ಕಾರ್ಯಕ್ರಮದ ಉದ್ಘಾಟನೆ: ಕೆ. ರಾಮಯ್ಯ, ಅತಿಥಿ: ಜಯಲಕ್ಷ್ಮಿ ಪಾಟೀಲ್, ಪುಸ್ತಕ ಬಿಡುಗಡೆ: ಕೆ.ವೈ. ನಾರಾಯಣಸ್ವಾಮಿ, ಅಧ್ಯಕ್ಷತೆ: ಲಕ್ಷ್ಮಣದಾಸ್, ಆಯೋಜನೆ: ಸಂಭ್ರಮ, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಬೆಳಿಗ್ಗೆ 10

ಸಂತೋಷ್ ಹೆಗ್ಡೆ

ಸಮತ 'ಸಾಮಾಜಿಕ ಮೌಲ್ಯಗಳ ಕುಸಿತ ಮತ್ತು ಅದರ ಪರಿಣಾಮಗಳು- ಸಾಂವಿಧಾನಿಕ ದೃಷ್ಟಿಕೋನ' ಕುರಿತು ಉಪನ್ಯಾಸ: ಅತಿಥಿಗಳು: ಎನ್. ಸಂತೋಷ್ ಹೆಗ್ಡೆ, ಎಂ.ಎಸ್. ನಟರಾಜ್, ಡಬ್ಲ್ಯು.ಡಿ. ಅಶೋಕ್, ಅಧ್ಯಕ್ಷತೆ: ಎಸ್. ಶೇಷನಾರಾಯಣ, ಆಯೋಜನೆ ಮತ್ತು ಸ್ಥಳ: ಶೇಷಾದ್ರಿಪುರ ಕಾಲೇಜು, ಶೇಷಾದ್ರಿಪುರ, ಬೆಳಿಗ್ಗೆ 10.30

'ಜ್ಞಾನವರ್ಧಿನಿ' ದ್ವಿತೀಯ ಪಿಯು ವಿದ್ಯಾರ್ಥಿಗಳಿಗೆ ಒಂದು ವಾರದ ಸೇತುಬಂಧ ಕಾರ್ಯಾಗಾರ: ಸಂಪನ್ಮೂಲ ವ್ಯಕ್ತಿ: ನೀಲಕಂಠೇಗೌಡ ಎಚ್.ಎನ್., ಆಯೋಜನೆ ಮತ್ತು ಸ್ಥಳ: ವಿ.ವಿ.ಎನ್. ಪಿಯು ಕಾಲೇಜು, ವಿವಿ ಪುರ, ಬೆಳಿಗ್ಗೆ 10

ಸಿರಿಧಾನ್ಯ ಮತ್ತು ಸಾವಯವ ಅಂತರರಾಷ್ಟ್ರೀಯ ಮೇಳ–2024: ಉದ್ಘಾಟನೆ: ಸಿದ್ದರಾಮಯ್ಯ, ವಸ್ತು ಪ್ರದರ್ಶನದ ಉದ್ಘಾಟನೆ: ಡಿ.ಕೆ. ಶಿವಕುಮಾರ್, ರೈತರ ಕಾರ್ಯಾಗಾರ ಉದ್ಘಾಟನೆ: ಶೋಭಾ ಕರಂದ್ಲಾಜೆ, ಉಪಸ್ಥಿತಿ: ಎನ್. ಚಲುವರಾಯಸ್ವಾಮಿ, ಅಧ್ಯಕ್ಷತೆ: ಡಾ.ಸಿ.ಎನ್. ಅಶ್ವತ್ಥನಾರಾಯಣ, ಆಯೋಜನೆ: ಕೃಷಿ ಇಲಾಖೆ, ಸ್ಥಳ: ತ್ರಿಪುರವಾಸಿನಿ ಅರಮನೆ ಮೈದಾನ, ಬೆಳಿಗ್ಗೆ 11

ರಜತ ಮಹೋತ್ಸವ: ಅತಿಥಿಗಳು: ತೇಜಸ್ವಿ ಸೂರ್ಯ, ಕೆ.ಎಸ್. ಸಮೀರಸಿಂಹ, ಡಾ. ವಿಜಯಲಕ್ಷ್ಮಿ ಬಾಳೇಕುಂದ್ರಿ, ಶಿವರುದ್ರ, ಆಯೋಜನೆ ಮತ್ತು ಸ್ಥಳ: ಲೇಡಿ ವಿಲ್ಲಿಂಗ್ಟನ್ ಹೈಸ್ಕೂಲ್, ನೃಪತುಂಗ ಬಡಾವಣೆ, ಜೆ.ಪಿ. ನಗರ, ಮಧ್ಯಾಹ್ನ 12.30

ಸುವರ್ಣ ಕರ್ನಾಟಕ ರಾಜ್ಯೋತ್ಸವ: ಅತಿಥಿಗಳು: ಅರುಣಿ ಅಶೋಕ್, ಗಂಡಸಿ ಸದಾನಂದ್ ಸ್ವಾಮಿ, ಅಧ್ಯಕ್ಷತೆ: ನರಸಿಂಹಮೂರ್ತಿ, ಉಪಸ್ಥಿತಿ: ಕೆಂಪಯ್ಯ, ಅಯೋಜನೆ ಮತ್ತು ಸ್ಥಳ: ಕೆ.ಟಿ.ಎಸ್. ವಿ. ಮಹಿಳಾ ಪದವಿಪೂರ್ವ ಕಾಲೇಜು, ವಿಜಯನಗರ, ಸಂಜೆ 4

'ಗೀತಪ್ರೀತಿ' ಜಯಶ್ರೀ ಅರವಿಂದ್ ಅಧ್ಯಯನ ಅಭಿನಂದನಾ ಗ್ರಂಥ ಬಿಡುಗಡೆ, ಜಯಶ್ರೀ ಅರವಿಂದ್ ಪ್ರತಿಷ್ಠಾನ ಉದ್ಘಾಟನೆ: ಉದ್ಘಾಟನೆ: ಎಚ್.ಎಸ್. ವೆಂಕಟೇಶ್ ಮೂರ್ತಿ, ಅಧ್ಯಕ್ಷತೆ: ದೊಡ್ಡರಂಗೇಗೌಡ, ಪುಸ್ತಕ ಬಿಡುಗಡೆ: ಅರಳುಮಲ್ಲಿಗೆ ಪಾರ್ಥಸಾರಥಿ, ಅಭಿನಂದಿತರು: ಜಯಶ್ರೀ ಅರವಿಂದ್, ಸ್ಥಳ: ಯುವಪಥ, ಜಯನಗರ, ಸಂಜೆ 5

ಗಿರಿಜಾ ಲೋಕೇಶ್

'ದಿ ಬಬಲ್ಸ್ ಆಫ್ ಮೆಮೊರಿ' ಪುಸ್ತಕ ಬಿಡುಗಡೆ: ಟಿ.ಎನ್. ಧ್ರುವಕುಮಾರ್, ಅಧ್ಯಕ್ಷತೆ: ರಾಜೇಂದ್ರ ಅರ್ಲೇಕರ್, ಅತಿಥಿಗಳು: ಬಸವರಾಜ ಹೊರಟ್ಟಿ, ಸದಾನಂದ್ ಶೇಟ್ ತನವಾಡೆ, ವಿವೇಕ್ ಸುಬ್ಬಾರೆಡ್ಡಿ, ಸಿ.ಎಸ್. ಷಡಕ್ಷರಿ, ಆಯೋಜನೆ: ಕರ್ನಾಟಕ ಲಾ ಜರ್ನಲ್ ಪಬ್ಲಿಕೇಷನ್ಸ್, ಸ್ಥಳ: ಎನ್‌ಜಿಒ ಅಸೋಸಿಯೇಷನ್, ಕಬ್ಬನ್ ಉದ್ಯಾನ, ಸಂಜೆ 4ರಿಂದ

ಪಿಇಎಸ್ ವಿಶ್ವವಿದ್ಯಾಲಯದ ಸುವರ್ಣ ಮಹೋತ್ಸವ: ಅತಿಥಿಗಳು: ಸಂಜೀವ್ ಸನ್ಯಾಲ್, ಬಿ.ವಿ. ಜಗದೀಶ್, ಸಚಿನ್ ಮಲ್ಹಾನ್, ಸನ್ಮಾನ: ಅಜಯ್ ಕುಮಾರ್, ದೋಶಿ ಜಯಕುಮಾರ್, ಸಂವಾದ ಕಾರ್ಯಕ್ರಮ: ಎಸ್. ಜೈಶಂಕರ್, ತೇಜಸ್ವಿ ಸೂರ್ಯ, ಅಧ್ಯಕ್ಷತೆ: ಎಂ.ಆರ್. ದೊರೆಸ್ವಾಮಿ, ಆಯೋಜನೆ ಮತ್ತು ಸ್ಥಳ: ಪಿಇಎಸ್ ವಿಶ್ವವಿದ್ಯಾಲಯ, ಆರ್.ಆರ್. ಆವರಣ, ಬಿಎಸ್‌ಕೆ 3ನೇ ಹಂತ, ಸಂಜೆ 4.50

'ನಿರಂತರ' 'ಸಂಭ್ರಮ ಪುರಸ್ಕಾರ' ಪ್ರದಾನ: ಯದುಗಿರಿ ಯತಿರಾಜ ರಾಮನುಜ ಜೀಯರ್ ಸ್ವಾಮೀಜಿ, ಪ್ರಶಸ್ತಿ ಪುರಸ್ಕೃತರು: ವೈ.ಕೆ. ಸಂಧ್ಯಾ ಶರ್ಮ, ಆರ್.ಕೆ. ಉಷಾ, ಬನಶಾಸ್ತ್ರಿ ರಾಮನಾಥ್, ಗಿರಿಜಾ ಲೋಕೇಶ್, ರಾಧಾಕೃಷ್ಣ ಜಿ. ಶೇಷಪ್ಪ, ಡಿ. ಬಾಲಕೃಷ್ಣ, ಶ್ರೀಕಾಂತಂ ನಾಗೇಂದ್ರ ಶಾಸ್ತ್ರಿ, ಎಂ.ಎಸ್. ಆನಂದ್, ಸ್ಥಳ: ಸೇವಾ ಸದನ, ಮಲ್ಲೇಶ್ವರ, ಸಂಜೆ 5

ಸಿದ್ಧಾಂತ ಶಿಖಾಮಣಿ ಆಧ್ಯಾತ್ಮಿಕ ಆಶೀರ್ವಚನ, ಧನುರ್ಮಾಸದ ಇಷ್ಟಲಿಂಗ ಮಹಾಶಿವಪೂಜೆ: ಸಾನ್ನಿಧ್ಯ: ಚಂದ್ರಶೇಖರ ಶಿವಾಚಾರ್ಯ ಭಗವತ್ಪಾದ ಸ್ವಾಮೀಜಿ, ಮಲಯ ಶಾಂತಮುನಿ ಶಿವಾಚಾರ್ಯ ಸ್ವಾಮೀಜಿ, ಮಹಾಂತಲಿಂಗ ಶಿವಾಚಾರ್ಯ ಸ್ವಾಮೀಜಿ, ಸಿ. ಶಿವಕುಮಾರಸ್ವಾಮಿ ಅವರು ಕನ್ನಡಕ್ಕೆ ಅನುವಾದಿಸಿದ 'ವೀರಶೈವ ಅಷ್ಟಾವರ ವಿಜ್ಞಾನ' ಗ್ರಂಥ ಬಿಡುಗಡೆ: ವೃಷಭ ದೇಶೀಕೇಂದ್ರ ಸ್ವಾಮೀಜಿ, ಸ್ಥಳ: ಜಗಜ್ಯೋತಿ ಬಸವೇಶ್ವರ ಸುಜ್ಞಾನ ಮಂಟಪ, ಕಾರ್ಡ್ ರಸ್ತೆ, ವಿಜಯನಗರ, ಸಂಜೆ 6

ಕೃಷ್ಣಮೂರ್ತಿ ಹನೂರು

ಕುಮಾರವ್ಯಾಸ ರಚಿಸಿದ 'ಕರ್ಣಾಟ ಭಾರತ ಕಥಾಮಂಜರಿ' ವಿಶೇಷ ಉಪನ್ಯಾಸ: ಭಾಷಣಕಾರರು: ಎಸ್.ಎನ್. ಶ್ರೀಧರ್, ಕೃಷ್ಣಮೂರ್ತಿ ಹನೂರು, ಸ್ಥಳ: ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರ(ಬಿಐಸಿ), ದೊಮ್ಮಲೂರು, ಸಂಜೆ 6.30ರಿಂದ

ಪ್ರವಚನ ವಾಹಿನಿ: 'ಕುಮಾರವ್ಯಾಸ ಭಾರತ' ಕುರಿತು ಉಪನ್ಯಾಸ: ಕೆ. ಲಕ್ಷ್ಮೀನಾರಾಯಣ, ಆಯೋಜನೆ ಮತ್ತು ಸ್ಥಳ: ರಾಗಿಗುಡ್ಡದ ಪ್ರಸನ್ನ ಆಂಜನೇಯಸ್ವಾಮಿ ಭಕ್ತಮಂಡಳಿ ಟ್ರಸ್ಟ್, ಜಯನಗರ, ಸಂಜೆ 6.30

'ಮಲ್ಲಿಗೆ ತೋಟದಲ್ಲಿ ಮರ್ಡರ್' ನಾಟಕ ಪ್ರದರ್ಶನ: ನಿರ್ದೇಶನ: ರಾಜೇಂದ್ರ ಕಾರಂತ್, ಆಯೋಜನೆ: ನಮ್ದೆ ನಟನೆ, ಸ್ಥಳ: ಕೆ.ಎಚ್. ಕಲಾಸೌಧ, ಹನುಮಂತನಗರ, ಸಂಜೆ 7.30

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ

nagaradalli_indu@prajavani.co.in

ಜಯಂತ್ ಕಾಯ್ಕಿಣಿಗೆ ವಿಶ್ವಪ್ರಭಾ ಪುರಸ್ಕಾರ

ಪ್ರಜಾವಾಣಿ ವಾರ್ತೆ

ಉಡುಪಿ: ಸಂಸ್ಕೃತಿ ವಿಶ್ವ ಪ್ರತಿಷ್ಠಾನ ಉಡುಪಿ ವತಿಯಿಂದ ಕೊಡಮಾಡುವ ಪ್ರಭಾವತಿ ಹಾಗೂ ಉಡುಪಿ ವಿಶ್ವನಾಥ್ ಶೆಣೈ ಪ್ರಾಯೋಜಿತ 'ವಿಶ್ವಪ್ರಭಾ ಪುರಸ್ಕಾರ'ಕ್ಕೆ ಸಾಹಿತಿ ಜಯಂತ್ ಕಾಯ್ಕಿಣಿ ಅವರನ್ನು ಆಯ್ಕೆ ಮಾಡಲಾಗಿದೆ.

ಪ್ರಶಸ್ತಿಯು ₹1 ಲಕ್ಷ ನಗದು ಸಹಿತ ಪ್ರಶಸ್ತಿ ಪತ್ರ, ಫಲಕ ಒಳಗೊಂಡಿದೆ. ಜ.24 ರಂದು ಉಡುಪಿಯ ಎಂಜಿಎಂ ಕಾಲೇಜಿನ ಮುದ್ದಣ್ಣ ಮಂಟಪದಲ್ಲಿ ನಡೆಯುವ ಸಂಸ್ಕೃತಿ ಉತ್ಸವದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ವಿಶ್ವಪ್ರಭಾ ಪುರಸ್ಕಾರ ಸಮಿತಿಯ ಸಂಚಾಲಕ ಮರವಂತೆ ನಾಗರಾಜ ಹೆಬ್ಬಾರ್ ತಿಳಿಸಿದ್ದಾರೆ.

'ಶಾಸಕರ ವೇತನ ಪರಿಷ್ಕರಣೆಗೆ ಆಯೋಗ ರಚಿಸಿ'

ಪ್ರಜಾವಾಣಿ ವಾರ್ತೆ

ಧಾರವಾಡ: 'ಶಾಸಕರ ಸಂಬಳವನ್ನು ಶಾಸಕರೇ ಹೆಚ್ಚಿಸಿಕೊಳ್ಳುವುದು ತಪ್ಪು. ಸರ್ಕಾರಿ ನೌಕರರ ವೇತನ ಪರಿಷ್ಕರಣೆ ಮಾದರಿಯಲ್ಲೇ ಶಾಸಕರ ವೇತನ ಪರಿಷ್ಕರಣೆಗೂ ಆಯೋಗ ರಚಿಸಬೇಕು' ಎಂದು ವಿಧಾನಸಭೆ ವಿರೋಧ ಪಕ್ಷದ ಉಪನಾಯಕ ಅರವಿಂದ ಬೆಲ್ಲದ ಹೇಳಿದರು.

ನಗರದಲ್ಲಿ ಗುರುವಾರ ನಡೆದ ಮಾಧ್ಯಮ ಸಂವಾದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ಪ್ರಸ್ತುತ ಇರುವಂಥ ವೇತನದಲ್ಲಿ ಎಲ್ಲವನ್ನೂ ನಿರ್ವಹಿಸುವುದು ಕಷ್ಟ ಎಂಬುದು ಎಲ್ಲ ಶಾಸಕರಿಗೂ ಗೊತ್ತಿದೆ. ಶಾಸಕರಿಗೆ ಯಾವುದೆಲ್ಲ ಖರ್ಚು ಇರುತ್ತವೆ, ಖರ್ಚು ನಿಭಾಯಿಸಲು ಸರ್ಕಾರ ಏನು ವ್ಯವಸ್ಥೆ ಮಾಡಬೇಕು ಸೇರಿ ಎಲ್ಲವನ್ನೂ ಆಯೋಗವು ಪರಿಶೀಲಿಸಿ, ನಿರ್ಧರಿಸಬೇಕು' ಎಂದು ಹೇಳಿದರು.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Accounts & Finance

WANTED FEMALE Accounts Assistant with Tally Knowledge B.COM Below 40 Years Known Kannada English Hindi in and around Rajajinagar Contact: 9108458798/ 080-23384085

Multiple Vacancy

STAR INFRATECH
A Leading Construction Company in Karnataka looking for talent acquisition for the following positions
SITE ENGINEERS: B.E Civil – 5 Years & above exp.
QUALITY CONTROL: B.E Civil – 5 Years' experience
QUANTITY SURVEYOR: B.E Civil – 8 Years' experience
PLUMBING ENGINEERS: B.E Civil – 10 Years' experience
STORE EXECUTIVES: Any Degree – 10 Years' experience
ACCOUNTANT: 5 to 10 Years' experience in construction
COMPUTER OPERATOR / DATA ENTRY: PUC & Above – MS Office – 2 Years
Work Location: All over Karnataka
Walk in Interview: Date & Time: 10th January 2024 at 11 A.M
Location: No.177, 6th Main KEB Layout, Sanjaynagar, Bengaluru-560094. Email: hr.starinfratech09@gmail.com
Contact No: 080-23412304 / 05

Overseas

Wanted
Immediately required house help lady care taker for a
Couple and a small child settled in Singapore.
Must know cooking both veg and non veg. Salary 30k per month with accommodation and food, age should be below 50 yrs.
Only valid Passport Holders can apply
Interested may contact: +91 9741913516

Part-Time Jobs

TOP MNC Com. Licensed By Central Govt. Retired/ VRS Persons 2nd Career Opportunity Age Above 45 Years 35K To 40K: 9886641282/ 7019215243

FUTURE FOCUS

Astrology

LEARN REGULAR/ Advanced Course of Astrology in K.P. System. For Details: Mahesh Iyer: 8095927785/ 9448044153/ 26422156.

EDUCATIONAL

Training

NURSERY TEACHERS TRAINING Course at JNANABHARATHI,with in Class Training 6 Months/1 year (offline/online),100% Job Assurance. Call:6363032729

REAL ESTATE SELLING

Joint Development

Mysore Road

MADDUR MAIN Road MC Road 3200 sqft 80*40 vacant Land Opp Park, Central location available for Joint Venture. Suitable for Hospitals, Commercial Banks, Showrooms, Supermarkets. Contact: 91-9844648304/ 9980944275. naveen.thandavamurthy@gmail.com

Sites

Gnanabharathi

DIRECT OWNER 20X30 BDA SITE SALE Gnanabharathi 1st-Block Valagerahalli, Full Developed Area ₹51 Lakhs. 9742681666

House

Vijayanagar

BUILDING SALE Vijayanagar Pipe Line Road 55x62 Sqft 3 Floors Rental Income 1.45 Lakhs 'A' Khata 3.5Cr Call: 6361579235

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

PERSONAL

Change of Name

CHANGE OF NAME
I, CELINE NIRMALA JOSEPH, Residing at # 38/1, Davis Road, Opp. Sunny Side Bistro, Cooke Town, Bengaluru- 560084, have changed my name to CELINE NIRMALA vide affidavit dt:04-01-2024, before Notary Gangaraju B N, Bengaluru. Henceforth I shall be called CELINE NIRMALA only.

CHANGE OF NAME
I, NOREEN T DSOUZA, Residing at Mystic Rose, St. Thomas Town, 13 VST Road, L.R.Pruam, Bengaluru- 560084, have changed my name to NOREEN DSOUZA vide affidavit dt:15-03-2023, before Notary C. Santosh, Bengaluru. Henceforth I shall be called NOREEN DSOUZA only.

CHANGE OF NAME
I, NAMOOS FATHIMA, Residing at TF01, North Star 23, North Road, Cooke Town, St. Thomas Town, Bengaluru- 560084, have changed my name to NAMOUS FATIMA vide affidavit dt:04-01-2024, before Notary Bhagya Kumari N, Bengaluru. Henceforth I shall be called NAMOUS FATIMA only.

I, KULJIT KAUR BANSAL W/o.Kulwinder Singh R/a#407/12, 4th main 1st cross VinayakaNagar B Block,HAL Airport Road Bangalore- 560017 have changed my Name to KULJIT KAUR vide affidavit dated:30.12.2023 before Notary DK.Prakash Bangalore

CHANGE OF NAME
I, ZEFFERINE DSOUZA, Residing at Mystic Rose, St. Thomas Town, 13 VST Road, L.R.Pruam, Bengaluru- 560084, have changed my name to ZEPHERINO FELIX DSOUZA vide affidavit dt:28-02-2023, before Notary C. Santosh, Bengaluru. Henceforth I shall be called ZEPHERINO FELIX DSOUZA only.

CHANGE OF NAME
I, MIR MAHABOOB RAZA Aged 70 year son of MOOSA RAZA presently Residing at No. # 2743-1, Chikkapete, Doddaballapur, Bangalore Rural, Bangalore-561203 have changed my name to MAHABOOB RAZA vide affidavit dated 3.1.2024 before notary A.R. Sampath Kumar, Doddaballapur. Henceforth I shall be called MAHABOOB RAZA only.

I, KULWINDER SINGH BANSAL S/o.Chand Singh R/a#407/12, 4th main, 1st cross VinayakaNagar B Block,HAL Airport Road Bangalore-560017 have changed my Name to KULWINDER SINGH vide affidavit dated:30.12.2023 before Notary DK.Prakash Bangalore

PROPERTY CORNER

BUNGALOW FOR SALE
60x40 feet East facing Independent Bungalow for Sale 45 squares building, Ground Floor, 1st Floor and II Floor with 5 Bedrooms, built with teak wood, Italian Marble Tiles, located at BEML Layout, Basaveshwaranagar, Bangalore - 560 079. Clear Titles & 'A' Katha.
~ CONTACT ~ 9845765559 / 9845043282

PUBLIC NOTICE

PUBLIC NOTICE
IN THE COURT OF SH. ANIL KUMAR SISODIA DISTRICT JUDGE (COMMERCIA)-04, ROOM NO. 304 EXTENSION BLOCK CENTRAL, TIS HAZARI COURTS, DELHI
PROCLAMATION REQUIRING ATTENDANCE OF DEFENDANT Order 5, rule 20 of the Code of Civil Procedure
M/S SAMUNDER SAREE CENTRE VS. M/S NIKALI COLLECTION
CS (COMM)4901/2021
To,
M/S NIKAH COLLECTION THROUGH ITS PROPRIETOR AND AUTHORIZED SINGATORY MR. LIAQAT ALI, AT NO. 31, QUADRANT ROAD, OPP RENUKA TALKIES, SHIVAJI NAGAR, BANGALORU (BENGALORE), KARNATAKA-560001.
ALSO AT HOUSE NO. 19-3-543/58/61, NAFEES COTTAGE, ALI NAGAR, SYED ALI CHABUTRA, HYDERABAD-500002
Note:To be circulated in the local area.
Whereas you are intentionally evading service of summons is is hereby noified that if you shall not defend the case on ther 06.01.2024 the day or the final disposal, it will be heard and determined ex parte. Gaven under my hand and the seal of the court, this 18.12.2013
District Judge
Commercial Court, Central Delhi

PUBLIC NOTICE
My client intends to purchase the agricultural dry land mentioned and described in the Schedule herebelow from its owner, **Sri. Naveen Srinivas**, son of Sri. Y. Jitin Kumar who represents that he is the sole and absolute owner of the Schedule Property and he has a good marketable, right, title and interest thereto and that apart from him there are no other person/s having any sort of right, title or claim over the Schedule Property. The Owner further represents that he has not entered into any Agreements/ Memorandum of Understanding etc., for sale/transfer of the Schedule Property nor has he mortgaged, created any right, interest, lien or encumbered the Schedule Property or any part thereof in any manner to any person/s. Any person/s having objection/s or claims, shall with documentary evidence lodge their objection/s or claims within **Fifteen (15) days** from the date of this Notice with the Undersigned, failing which, my client shall proceed with the above-mentioned transaction.

SCHEDULE
All that piece and parcel of the agricultural dry land bearing Survey No. 8/3, *(earlier part of Survey No. 8/2)*, measuring 1 acre 10 guntas, situated at Kempalinganapura Village, Kasaba Hobli, Devanahalli Taluk, Bengaluru Rural District and is bounded on the:
East by : Government Road to Kempalingana pura
West by : Land bearing Survey No. 8/1
North by : Government Tank Road
South by : Land bearing Survey No. 8/4

Ayush Rao, Advocate, No. 111, 3rd Main, 3rd Stage,Basveshwarnagar, Bengaluru- 560 079. Ph: 7892210091
Bengaluru
Date:04-01-2024

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

DH DECCAN HERALD
To Place your ad in Deccan Herald & Prajavani Classifieds
For details contact :
9845114560 : 9731810277
080 - 45557163 / 164

DH DECCAN HERALD Classifieds More value, more impact
REAL ESTATE
ಪ್ರಜಾವಾಣಿ
The 1st thing to do when Selling/Buying your Property
#1 PLACE YOUR AD HERE
BOOK NOW
www.dhclassifieds.com
Book your ad with us now! For more details contact:
+91 9900428036 | +91 9731810277 |
+91 9845114560 | +91 9901641752 |
+91 9886213331 | 080- 45557163/164

ಐಎಡಿ ಯಶೋಗಾಥೆ

ಒಂದನೇ ಪುಟದಿಂದ

ಸಂಯೋಜಿತ ಔಷಧಿ ಸಿದ್ಧಗೊಂಡ ಬಗೆ: 'ಸಂಯೋಜಿತ ಚಿಕಿತ್ಸಾ ವಿಧಾನದಲ್ಲಿ ಔಷಧಿಯೂ ಸೇರಿದೆ. ಇದನ್ನು ಸಿದ್ಧಪಡಿಸುವ ಮೊದಲು ಆಯುರ್ವೇದ ಮತ್ತಿತರ ಶಾಖೆಗಳ ವೈದ್ಯರ ಜೊತೆ ಚರ್ಚೆ ನಡೆದಿತ್ತು. ಔಷಧಿಗಳ ಸಮೀಕ್ಷೆಯೂ ಆಗಿತ್ತು. ರೋಗಿಗಳು ತರುತ್ತಿದ್ದ ಫೈಲ್‌ಗಳ ಸೂಕ್ಷ್ಮ ಪರಿಶೀಲನೆಯಿಂದ ಚಿಕಿತ್ಸೆಗೆ ಉಪಯೋಗ ಆಗುವಂಥ ಹಾಗೂ ಉಪಯೋಗ ಶೂನ್ಯವಾದ ಔಷಧಿಗಳ ಮಾಹಿತಿ ಲಭಿಸಿತು. ರೋಗದ ಲಕ್ಷಣಗಳನ್ನು ಅಲೋಪತಿ ಪರೀಕ್ಷಾ ವಿಧಾನದ ಮೂಲಕವೇ ಅರಿಯಲಾಯಿತು. ಪೆಥಾಲಜಿಯ ಜ್ಞಾನವನ್ನು ಪೂರಕವಾಗಿ ಬಳಸಿ ಕೊಳ್ಳಲಾಯಿತು. ಇದೆಲ್ಲದರ ಪರಿಣಾಮವಾಗಿ ಕಾಲಿನ ಗಾಯಗಳು ಮಾಯವಾದವು. ಯೋಗಾಸನ ಮತ್ತು ಮಸಾಜ್‌ನಿಂದ ಊತವೂ ಕಡಿಮೆಯಾಯಿತು' ಎಂದು ಡಾ.ನರಹರಿ ತಿಳಿಸಿದರು.

'ಐಎಡಿಯಲ್ಲಿ ಆವಿಷ್ಕಾರಗೊಂಡ ಚಿಕಿತ್ಸಾ ಪದ್ಧತಿ ಬಳಸಿ 2004ರಲ್ಲಿ ಮೊದಲ ಬಾರಿ ಚಿಕಿತ್ಸೆ ನೀಡಲಾಗಿತ್ತು. ಡಬ್ಲ್ಯುಎಚ್‌ಒ ನವದೆಹಲಿಯಲ್ಲಿರುವ ಆಗ್ನೇಯ ಏಷ್ಯಾ ಕಚೇರಿಯಿಂದ ಒಂದು ದಶಕದ ಮಾಹಿತಿಯನ್ನು ಈಚೆಗೆ ಕೇಳಲಾಗಿತ್ತು. 1,698 ಪುಟಗಳ ಮಾಹಿತಿಯನ್ನು ಸಲ್ಲಿಸಲಾಗಿತ್ತು' ಎಂದರು.

136 ಅಧಿಕಾರಿಗಳ ಬಡ್ತಿಗೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ತರಾತುರಿ ಪ್ರಕ್ರಿಯೆ

ಬಡ್ತಿ ನೀಡಲು ನಿಯಮ ಉಲ್ಲಂಘನೆ

• ಚಂದ್ರಹಾಸ ಹಿರೇಮಳಲಿ

ಬೆಂಗಳೂರು: ರದ್ದುಗೊಂಡಿದ್ದ 312 ನಿಲಯ ಪಾಲಕರ (ಹಾಸ್ಟೆಲ್ ವಾರ್ಡನ್) ಹುದ್ದೆಗಳಿಗೆ ಐದು ತಿಂಗಳ ಹಿಂದೆ ಬಡ್ತಿ ನೀಡಿ ವಿವಾದಕ್ಕೆ ಒಳಗಾಗಿದ್ದ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಈಗ ಅರ್ಹತೆ ಪಡೆಯದ 136 ಮಂದಿಗೆ ತಾಲ್ಲೂಕು ಕಲ್ಯಾಣಾಧಿಕಾರಿಗಳ ಹುದ್ದೆಗೆ ಬಡ್ತಿ ನೀಡಲು ಮುಂದಾಗಿದೆ.

'ಕರ್ನಾಟಕ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಸೇವಾ (ವೃಂದ ಮತ್ತು ನೇಮಕಾತಿ) ನಿಯಮಗಳು–2019' ಪ್ರಕಾರ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿಗಳು ಮತ್ತು ಸಿಬ್ಬಂದಿ ಒಂದು ಬಡ್ತಿ ಪಡೆದ ನಂತರ ಮತ್ತೊಂದು ಬಡ್ತಿ ಪಡೆಯಲು ಕನಿಷ್ಠ ಐದು ವರ್ಷಗಳ ಕಾರ್ಯನಿರ್ವಹಿಸಿರಬೇಕು. ಮಂಜೂರಾದ ಹುದ್ದೆಗಳಲ್ಲಿ ಶೇ 50ರಷ್ಟು ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಿಕೊಳ್ಳಬೇಕು. ಈ ಎರಡೂ ನಿಯಮಗಳನ್ನು ಪಾಲಿಸದೇ ತಾಲ್ಲೂಕು ಕಲ್ಯಾಣಾಧಿಕಾರಿಗಳು/ಪತ್ರಾಂಕಿತ ವ್ಯವಸ್ಥಾಪಕರ ಹುದ್ದೆಗಳಿಗೆ ಬಡ್ತಿ ನೀಡುವ ಪ್ರಕ್ರಿಯೆ ಆರಂಭಿಸಲಾಗಿದೆ.

> ಒಬ್ಬ ಅಧಿಕಾರಿ ಹಲವು ಪ್ರಭಾರ ನಿಭಾಯಿಸುತ್ತಿದ್ದಾರೆ. ಅಂಥವರಿಗೆ ನಿಯಮಾನುಸಾರವೇ ಬಡ್ತಿ ನೀಡಲಾಗುತ್ತಿದೆ. ಈ ಬಗ್ಗೆ ಮರುಪರಿಶೀಲಿಸಲಾಗುವುದು
>
> **ಶಿವರಾಜ ತಂಗಡಗಿ,** ಹಿಂದುಳಿದ ವರ್ಗಗಳ ಕಲ್ಯಾಣ ಸಚಿವ

ಪ್ರಜಾವಾಣಿ ವಿಶೇಷ

ನೇರ ನೇಮಕಾತಿಯ 106 ಹುದ್ದೆಗಳಿಗೂ ಬಡ್ತಿ: ಕಲ್ಯಾಣ ಕರ್ನಾಟಕ ವೃಂದದ 19 ಹುದ್ದೆಗಳು ಸೇರಿದಂತೆ ನೇರ ನೇಮಕಾತಿಗೆ ಮೀಸಲಾದ 106 ತಾಲ್ಲೂಕು ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ ಹುದ್ದೆಗಳು ಖಾಲಿ ಇವೆ. ಹಲವು ವರ್ಷಗಳಿಂದ ಹುದ್ದೆ ಭರ್ತಿ ಮಾಡದ ಕಾರಣ ಕೆಳ ಹಂತದ ಅಧಿಕಾರಿಗಳೇ ಪ್ರಭಾರ ಜವಾಬ್ದಾರಿ ನಿಭಾಯಿಸುತ್ತಿದ್ದಾರೆ. ಇಂತಹ ನೇರ ನೇಮಕಾತಿ ಹುದ್ದೆಗಳನ್ನೂ ಸೇರಿಸಿ ಬಡ್ತಿ ನೀಡಲು ಜ್ಯೇಷ್ಠತಾ ಪಟ್ಟಿ ಬಿಡುಗಡೆ ಮಾಡಲಾಗಿದೆ.

ಮೊದಲ ಬಡ್ತಿ ಪಡೆದು ಮೂರೇ ವರ್ಷ: ತಾಲ್ಲೂಕು ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳ ಹುದ್ದೆಗೆ ಬಡ್ತಿ ನೀಡಲು ಸಿದ್ಧಪಡಿಸಿರುವ ಪಟ್ಟಿಯಲ್ಲಿ ಇರುವ ಎಲ್ಲರೂ ವಿಸ್ತರಣಾಧಿಕಾರಿ, ನಿಲಯ ಪಾಲಕರ ಹುದ್ದೆಗಳಿಗೆ ಬಡ್ತಿ ಪಡೆದು ಮೂರು ವರ್ಷಗಳೂ ಆಗಿಲ್ಲ. 2020ರ ಅಕ್ಟೋಬರ್, ನವೆಂಬರ್‌ನಲ್ಲಿ ಬಡ್ತಿ ಪಡೆದವರೇ ಜ್ಯೇಷ್ಠತಾ ಪಟ್ಟಿಯಲ್ಲಿ ಉನ್ನತ ಕ್ರಮಾಂಕದಲ್ಲಿದ್ದಾರೆ.

'ಜ್ಯೇಷ್ಠತಾ ಪಟ್ಟಿ ಬಿಡುಗಡೆ ಮಾಡಿದ ನಂತರ ಇಲಾಖೆಯ ಆಯಾ ಜಿಲ್ಲೆಗಳ ಜಿಲ್ಲಾ ಅಧಿಕಾರಿಗಳು (ಡಿಒ) ಕರೆ ಮಾಡಿ, ಆಯುಕ್ತರ ಕಚೇರಿಯ ಆಡಳಿತ ವಿಭಾಗದ ಜಂಟಿ ನಿರ್ದೇಶಕರನ್ನು ಕಾಣಲು ಸೂಚಿಸುತ್ತಿದ್ದಾರೆ. ಕಾಣುವುದು ಎನ್ನುವುದಕ್ಕೆ, ಅರ್ಥ, ವ್ಯಾಖ್ಯಾನ ಬೇಕಿಲ್ಲ ಎಂದುಕೊಳ್ಳುವೆ. ಬಡ್ತಿ ನೀಡುತ್ತಿರುವ ಇಂತಹ ತರಾತುರಿಯ ಹಿಂದೆ ನೌಕರರ ಹಿತಾಸಕ್ತಿಯಂತೂ ಇಲ್ಲ ಎನ್ನುವುದನ್ನಷ್ಟೇ ಹೇಳಬಲ್ಲೆ' ಎನ್ನುತ್ತಾರೆ ಬಡ್ತಿ ಪಟ್ಟಿಯಲ್ಲಿ ಹೆಸರಿರುವ ಒಬ್ಬ ಅಧಿಕಾರಿ.

ಡಿಒ ಹುದ್ದೆಗೂ ಇಲ್ಲ ನಿಯಮ ಪಾಲನೆ

ರಾಜ್ಯದಲ್ಲಿ 31 ಜಿಲ್ಲೆಗಳು ಸೇರಿ ಜಿಲ್ಲಾ ಅಧಿಕಾರಿ (ಡಿಒ) ದರ್ಜೆಯ 41 ಹುದ್ದೆಗಳಿವೆ. ನಿಯಮದಂತೆ ಅವುಗಳಲ್ಲಿ ಅರ್ಧದಷ್ಟು ಹುದ್ದೆಗಳಿಗೆ ನೇರ ನೇಮಕಾತಿ ಮಾಡಬೇಕು. ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ 15 ಜಿಲ್ಲಾ ಅಧಿಕಾರಿಗಳಿಗೆ ಬಡ್ತಿ ನೀಡಲಾಗುತ್ತಿದ್ದು, ಖಾಲಿಯಾಗುವ ಆ ಹುದ್ದೆಗಳಿಗೂ ಬಡ್ತಿ ಪಟ್ಟಿ ಸಿದ್ಧಪಡಿಸಲಾಗಿದೆ.

ವೃಂದ ಮತ್ತು ನೇಮಕಾತಿ ನಿಯಮದ ಪ್ರಕಾರ ಜಿಲ್ಲಾ ಅಧಿಕಾರಿಗಳ ಒಂದಕ್ಕಿಂತ ಹೆಚ್ಚು ಹುದ್ದೆಗಳಿಗೆ ಅನ್ಯ ಇಲಾಖೆಯ ಅಧಿಕಾರಿಗಳನ್ನು ನೇಮಿಸಬಾರದು ಎಂಬ ನಿಯಮವಿದೆ. ಆದರೆ, 20ಕ್ಕೂ ಹೆಚ್ಚು ಹುದ್ದೆಗಳಲ್ಲಿ ಅನ್ಯ ಇಲಾಖೆಯ ಅಧಿಕಾರಿಗಳೇ ಕಾರ್ಯನಿರ್ವಹಿಸುತ್ತಿದ್ದಾರೆ.

213	ಮಂಜೂರಾದ ತಾಲ್ಲೂಕು ಅಧಿಕಾರಿ ಹುದ್ದೆಗಳು
106	ನೇರ ನೇಮಕಾತಿ ಹುದ್ದೆಗಳು
107	ಬಡ್ತಿ ಮೂಲಕ ಭರ್ತಿ ಮಾಡುವ ಹುದ್ದೆಗಳು
30	ಬಡ್ತಿಗೆ ಇರುವ ಖಾಲಿ ಹುದ್ದೆಗಳು
136	ಬಡ್ತಿ ನೀಡಲು ಮುಂದಾಗಿರುವ ಹುದ್ದೆಗಳು

ಸುದ್ದಿ 2 ನಿಮಿಷ

ಗಡಿ ವಿವಾದದ ಅಡೆತಡೆಗೆ ತಿದ್ದುಪಡಿ: ಮಾನೆ

ಬೆಳಗಾವಿ: 'ಕರ್ನಾಟಕ–ಮಹಾರಾಷ್ಟ್ರ ಗಡಿ ವಿವಾದ ಪ್ರಕರಣದಲ್ಲಿ ಕೆಲ ಕಾನೂನು ಅಡೆತಡೆಗಳಿವೆ. ಇದೇ ಕಾರಣಕ್ಕೆ ಸುಪ್ರೀಂ–ಕೋರ್ಟಿನಲ್ಲಿ ಪ್ರಕರಣ ನಿಲ್ಲುತ್ತಿಲ್ಲ. ಇದೆಲ್ಲವನ್ನೂ ಸರಿಪಡಿಸಲು ಮಹಾರಾಷ್ಟ್ರ ಸರ್ಕಾರ ತಿದ್ದುಪಡಿಗೆ ಮುಂದಾಗಿದೆ' ಎಂದು ಕರ್ನಾಟಕ–ಮಹಾರಾಷ್ಟ್ರ ಗಡಿ ವಿವಾದದ ಮಹಾರಾಷ್ಟ್ರದ ಉನ್ನತಾಧಿಕಾರ ಸಮಿತಿ ಅಧ್ಯಕ್ಷ ಹಾಗೂ ಸಂಸದ ಧೈರ್ಯಶೀಲ ಮಾನೆ ಹೇಳಿದರು.

ನಗರದಲ್ಲಿ ಗುರುವಾರ ಮಹಾರಾಷ್ಟ್ರ ಏಕೀಕರಣ ಸಮಿತಿ (ಎಂಇಎಸ್) ವತಿಯಿಂದ ನಡೆದ 'ಮಹಾರಾಷ್ಟ್ರ ಸರ್ಕಾರದ ಆರೋಗ್ಯ ವಿಮೆಯ ಫಲಾನುಭವಿಗಳ ಸಭೆ, ಮಾರ್ಗದರ್ಶಿ ಕೈಪಿಡಿ ಬಿಡುಗಡೆ ಹಾಗೂ ಉದ್ಯೋಗ ಭರವಸೆ' ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ಗಡಿ ವಿವಾದ ಬಗೆಹರಿಸುವುದೇ ನಮ್ಮ ಸರ್ಕಾರದ ಪ್ರಥಮ ಆದ್ಯತೆ' ಎಂದರು.

'ಗಡಿ ತಂಟೆಯ ಪ್ರಕರಣ ಇಷ್ಟು ದೀರ್ಘಾವಧಿ ತೆಗೆದು–ಕೊಳ್ಳಬಾರದಿತ್ತು. ಪ್ರಕರಣ ದಾಖಲಿಸುವಾಗ ಎಂಇಎಸ್ ಮಾಡಿದ ಕೆಲ ಲೋಪಗಳ ಕಾರಣ ಸುಪ್ರೀಂಕೋರ್ಟ್ ಕೈಗೆತ್ತಿಕೊಳ್ಳುತ್ತಿ–ಲ್ಲ. ಈ ವಿಚಾರದಲ್ಲಿ ಮಹಾರಾಷ್ಟ್ರ ಸರ್ಕಾರ ಕಾನೂನು ತಜ್ಞರೊಂದಿಗೆ ನಿರಂತರ ಸಂಪರ್ಕ ದಲ್ಲಿದೆ. ಆದಷ್ಟು ಬೇಗ ತಿದ್ದುಪಡಿಯ ಮೂಲಕ ಅಡೆತಡೆ ನಿವಾರಣೆ ಮಾಡುವ ಭರವಸೆ ಇದೆ' ಎಂದರು.

'ವಿವಾದಕ್ಕೆ ಒಳಪಟ್ಟ ಗಡಿಯ 865 ಹಳ್ಳಿಗಳ ಜನರನ್ನೂ ನಾವು ಮಹಾರಾಷ್ಟ್ರದ ಪ್ರಜೆಗಳು ಎಂದೇ ಪರಿಗಣಿಸಿದ್ದೇವೆ' ಎಂದೂ ಮಾನೆ ಹೇಳಿದರು.

ಪಿಯುಸಿ ಶುಲ್ಕ ಹೆಚ್ಚಳಕ್ಕೆ ಪ್ರಸ್ತಾವ

ಬೆಂಗಳೂರು: ಪಿಯು ಕಾಲೇಜುಗಳಲ್ಲಿನ ವಿವಿಧ ಕೋರ್ಸ್‌ಗಳ ಶುಲ್ಕ ಹೆಚ್ಚಳ ಮಾಡಲು ಅನುಮತಿ ಕೋರಿ ಪದವಿಪೂರ್ವ ಶಿಕ್ಷಣ ಇಲಾಖೆ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಿದೆ.

ಪದವಿಪೂರ್ವ ಶಿಕ್ಷಣ ಇಲಾಖೆ ಸಲ್ಲಿಸಿದ ಶುಲ್ಕ ಹೆಚ್ಚಳ ಪ್ರಸ್ತಾವಕ್ಕೆ ಅನುಮತಿ ಕೋರಿ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಆರ್ಥಿಕ ಇಲಾಖೆಗೆ ಕಳುಹಿಸಿದೆ. ಕಾಲೇಜುಗಳ ಪ್ರವೇಶ, ಹೊಸ ಕೋರ್ಸ್‌ಗಳು, ಸಂಯೋಜಕತ್ವಕ್ಕೂ ಶುಲ್ಕ ಹೆಚ್ಚಳ ಅನ್ವಯವಾಗಲಿದೆ.

'ಮೂರು ವರ್ಷಕ್ಕೊಮ್ಮೆ ಶುಲ್ಕ ಪರಿಷ್ಕರಣೆ ನಡೆಯುತ್ತದೆ. 2018-19ರಲ್ಲಿ ಶುಲ್ಕ ಹೆಚ್ಚಳ ಮಾಡಲಾಗಿತ್ತು.ಕೋವಿಡ್ ನಂತರ ಶುಲ್ಕ ಪರಿಷ್ಕರಣೆ ಆಗಿರಲಿಲ್ಲ. ಹಾಗಾಗಿ, ಪ್ರಸ್ತಾವ ಸಲ್ಲಿಸಲಾಗಿದೆ. ಸರ್ಕಾರ ಅನುಮತಿ ನೀಡಿದರೆ 2024-25ನೇ ಶೈಕ್ಷಣಿಕ ಸಾಲಿನಿಂದ ಶುಲ್ಕ ಹೆಚ್ಚಳ ಮಾಡಲಾಗುತ್ತದೆ' ಎಂದು ಇಲಾಖೆಯ ಮೂಲಗಳು ಹೇಳಿವೆ.

'ಕಾಲೇಜುಗಳಲ್ಲಿ ಮೂಲಸೌಕರ್ಯ ಸುಧಾರಣೆಗೆ ಆದ್ಯತೆ ನೀಡಬೇಕಿದೆ. ವಿದ್ಯಾರ್ಥಿಗಳು ಮತ್ತು ಪೋಷಕರಿಗೆ ಹೊರೆಯಾಗದಂತೆ ಪರಿಷ್ಕೃತ ಶುಲ್ಕಗಳನ್ನು ನಿಗದಿ ಮಾಡಲಾಗಿದೆ. 2013-14ರಲ್ಲಿ ಶೇ 30ರಷ್ಟು ಹಾಗೂ 2018-19ರಲ್ಲಿ ಶೇ 60ರಷ್ಟು ಶುಲ್ಕ ಹೆಚ್ಚಿಸಲಾಗಿತ್ತು. ಈ ಬಾರಿ ಶೇ 10ರಿಂದ 20ರಷ್ಟು ಹೆಚ್ಚಳಕ್ಕೆ ಅನುಮತಿ ದೊರೆಯುವ ನಿರೀಕ್ಷೆ ಇದೆ' ಎಂದು ಪದವಿಪೂರ್ವ ಶಿಕ್ಷಣ ಇಲಾಖೆಯ ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ
ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು–560 002
ದೂರವಾಣಿ: 080–22213530/22241325
ಇ–ಮೇಲ್: kanbhavblr@gmail.com
ವೆಬ್‌ಸೈಟ್: www.kannadasiri.in, www.kanaja.in
ಸಂಖ್ಯೆ: DKC/2023-24/SE0016 ದಿನಾಂಕ: 04.01.2024

ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಏರ್ಪಡಿಸುವ ಜಯಂತಿಗಳು, ಪ್ರಶಸ್ತಿ ಪ್ರದಾನ, ರಾಷ್ಟ್ರೀಯ ಹಬ್ಬಗಳ ಆಚರಣೆ ಇತ್ಯಾದಿ ಕಾರ್ಯಕ್ರಮಗಳಿಗೆ ಅಗತ್ಯವಿರುವ ಫೋಟೋ/ವಿಡಿಯೋ/ಸಾಮಾಜಿಕ ತಾಣಗಳ ಮಾಧ್ಯಮದಲ್ಲಿ ನೇರ ಪ್ರಸಾರ ಇತ್ಯಾದಿ ವ್ಯವಸ್ಥೆ ಮಾಡಲು ನೋಂದಾಯಿತ ಸಂಸ್ಥೆಗಳಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ನಿಗದಿತ ನಮೂನೆಯಲ್ಲಿ ತಾಂತ್ರಿಕ ಹಾಗೂ ಆರ್ಥಿಕ ಬಿಡ್ ವಿಧಾನದಲ್ಲಿ ಟೆಂಡರ್ ಆಹ್ವಾನಿಸಲಾಗಿದೆ.

1) ಟೆಂಡರ್‌ಗೆ ಇಟ್ಟ ಮೊತ್ತ : ರೂ. 20,00,000/–. **2) ಬಿಡ್ ದಾಖಲೆಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವ ವೆಬ್‌ಸೈಟ್ / ದಿನಾಂಕ:** http://www.kppp.karnataka.gov.in ದಿನಾಂಕ: 06.01.2024. **3) ಇಎಂಡಿ ಮೊತ್ತ:** ರೂ.50,000/–. **4) ಟೆಂಡರ್ ಡಾಕ್ಯುಮೆಂಟ್ ಅಂತರ್ಜಾಲದಲ್ಲಿ ಅಪ್ಲೋಡ್ ಮಾಡುವ ಅಂತಿಮ ದಿನಾಂಕ ಮತ್ತು ಸಮಯ :** 13.01.2024 ಸಂಜೆ 5.00 ಗಂಟೆ. **5) ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ :** 16.01.2024 ಸಂಜೆ 3.00 ಗಂಟೆ. **6) ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ:** 18.01.2024 ಸಂಜೆ 4.00 ಗಂಟೆ. **7) ಯಾವುದೇ ವಿಚಾರಣೆ, ಸ್ಪಷ್ಟೀಕರಣಕ್ಕಾಗಿ ಸಂಪರ್ಕಿಸಬಹುದಾದ ಅಧಿಕಾರಿ ವಿಳಾಸ ಹಾಗೂ ದೂರವಾಣಿ ಸಂಖ್ಯೆ:** ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು–560002. ದೂ : 080–22213530.

ಸಹಿ/– ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು
ವಾ.ಸಾ.ಸಂ.ಇ/ವಾಪ್ರ/2866/ಆಕಾರ್/2023–24

ಧರಣಿ ಆರಂಭಿಸಿದ 'ಅತಿಥಿ'ಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸೇವಾ ಭದ್ರತೆಗೆ ಆಗ್ರಹಿಸಿ ಸರ್ಕಾರಿ ಪ್ರಥಮದರ್ಜೆ ಕಾಲೇಜುಗಳ ಅತಿಥಿ ಉಪನ್ಯಾಸಕರು ಗುರುವಾರ ಸ್ವಾತಂತ್ರ್ಯ ಉದ್ಯಾನದಲ್ಲಿ ಧರಣಿ ಆರಂಭಿಸಿದರು.

ಕನಿಷ್ಠ ಮೂರು ವರ್ಷಗಳು ಸೇವೆ ಸಲ್ಲಿಸಿದ ಅತಿಥಿ ಉಪನ್ಯಾಸಕರನ್ನು ಕಾಯಂ ಮಾಡಬೇಕು. ಅಲ್ಲಿಯವರೆಗೂ 2018ರಲ್ಲಿ ವಿಶ್ವವಿದ್ಯಾಲಯ ಅನುದಾನ ಆಯೋಗ ಹೊರಡಿಸಿದ್ದ ಆದೇಶದಂತೆ ಪ್ರತಿ ಗಂಟೆಗೆ ₹1,500 ವೇತನದಂತೆ ತಿಂಗಳಿಗೆ ಕನಿಷ್ಠ ₹50 ಸಾವಿರ ವೇತನ ನಿಗದಿ ಮಾಡಬೇಕು. ಪ್ರತಿ ವರ್ಷ ಕೌನ್ಸೆಲಿಂಗ್ ನಡೆಸುವ ಬದಲು ಸೇವಾಜ್ಯೇಷ್ಠತೆಯ ಆಧಾರದಲ್ಲಿ ನೇಮಕ ಮಾಡಿಕೊಳ್ಳಬೇಕು ಎಂದು ಆಗ್ರಹಿಸಿದರು.

ಉನ್ನತ ಶಿಕ್ಷಣ ಸಚಿವರು ಈಚೆಗೆ ನೀಡಿದ ನಾಲ್ಕು ಭರವಸೆಗಳಿಂದ ನೈಜ ಸಮಸ್ಯೆಗಳು ನಿವಾರಣೆ–ಯಾಗುವುದಿಲ್ಲ. ಸೇವಾ ಭದ್ರತೆ ಇಲ್ಲದ ಭರವಸೆಗಳಿಂದ ಯಾವ ಪ್ರಯೋಜನವೂ ಇಲ್ಲ. 60 ವರ್ಷಕ್ಕೆ ₹5 ಲಕ್ಷ ಧನಸಹಾಯದ ಭರವಸೆ ಇದೆ. ಆದರೆ, ಸಹಾಯಕ ಪ್ರಾಧ್ಯಾಪಕರ ನೇಮಕ, ವರ್ಗಾವಣೆಯಿಂದ ಕಾರ್ಯಭಾರ ಕಡಿಮೆಯಾಗುತ್ತಿದೆ. ಪ್ರತಿವರ್ಷ ನಡೆಸುವ ಕೌನ್ಸೆಲಿಂಗ್‌ನಿಂದ ಬಹಳಷ್ಟು ಅತಿಥಿ ಉಪನ್ಯಾಸಕರು ಕೆಲಸ ಕಳೆದುಕೊಳ್ಳುತ್ತಿದ್ದಾರೆ. ಸಹಾಯಧನ ನೀಡುವ ಮೊದಲು 60 ವರ್ಷದವರೆಗೆ ಸೇವಾ ಭದ್ರತೆಯ ಭರವಸೆ ನೀಡಬೇಕು ಎಂದು ಒತ್ತಾಯಿಸಿದರು.

ಸರ್ಕಾರಿ ಪ್ರಥಮದರ್ಜೆ ಕಾಲೇಜುಗಳ ಅತಿಥಿ ಉಪನ್ಯಾಸಕರು ಸೇವಾಭದ್ರತೆಗೆ ಆಗ್ರಹಿಸಿ ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಗುರುವಾರ ಧರಣಿ ನಡೆಸಿದರು —ಪ್ರಜಾವಾಣಿ ಚಿತ್ರ.

ಅತಿಥಿ ಉಪನ್ಯಾಸಕ ಅಸ್ವಸ್ಥ

ಧರಣಿ ನಡೆಯುತ್ತಿದ್ದ ವೇಳೆ ತುಮಕೂರಿನ ಅತಿಥಿ ಉಪನ್ಯಾಸಕ ಲೋಕೇಶ್ ಅವರು ಅಸ್ವಸ್ಥರಾದರು. ತಕ್ಷಣ ಅವರಿಗೆ ಚಿಕಿತ್ಸೆ ನೀಡಲಾಯಿತು. ನಿರಂತರ ಪ್ರತಿಭಟನೆ, ಪಾದಯಾತ್ರೆಯಲ್ಲಿ ಭಾಗವಹಿಸಿದ್ದರಿಂದ ಬಳಲಿದ್ದರು. ಆರೈಕೆಯ ನಂತರ ಚೇತರಿಸಿಕೊಂಡಿದ್ದಾರೆ ಎಂದು ಸಂಘಟನೆಯ ಮುಖಂಡರು ಹೇಳಿದರು.

ನಿವೃತ್ತ ಮೇಜರ್ ಜನರಲ್ ಸಿ.ಕೆ. ಕರುಂಬಯ್ಯ ನಿಧನ



ಮೈಸೂರು: ನಿವೃತ್ತ ಮೇಜರ್ ಜನರಲ್ ಸಿ.ಕೆ.ಕರುಂಬಯ್ಯ (87) ವಯೋಸಹಜ ಅನಾರೋಗ್ಯದಿಂದ ಗುರುವಾರ ಬೆಳಿಗ್ಗೆ 7.45ರಲ್ಲಿ ತಾಲ್ಲೂಕಿನ ಹೆಮ್ಮನಹಳ್ಳಿಯ ತಮ್ಮ ತೋಟದ ಮನೆಯಲ್ಲಿ ನಿಧನರಾದರು. ಅವರಿಗೆ ಪತ್ನಿ, ಪುತ್ರ ಹಾಗೂ ಪುತ್ರಿ ಇದ್ದಾರೆ.

ಅಂತ್ಯಕ್ರಿಯೆ ಶುಕ್ರವಾರ (ಜ.5) ಮಧ್ಯಾಹ್ನ ವಿಜಯನಗರದ ಚಿತಾಗಾರದಲ್ಲಿ ನಡೆಯಲಿದೆ ಎಂದು ಕುಟುಂಬದವರು ತಿಳಿಸಿದ್ದಾರೆ.

ಮಡಿಕೇರಿಯಲ್ಲಿ 1936ರ ಡಿ.3ರಂದು ಡಾ.ಸಿ.ಬಿ.ಕಾರಿಯಪ್ಪ ಪುತ್ರರಾಗಿ ಜನಿಸಿದ ಅವರು, ಫೀಲ್ಡ್ ಮಾರ್ಷಲ್ ಕೆ.ಎಂ.ಕಾರಿಯಪ್ಪ ಅವರ ಹತ್ತಿರದ ಸಂಬಂಧಿ. ಮರಾಠಾ ಲಘು ಪದಾತಿ ದಳದ (ಎಂಎಲ್‌ಐಆರ್‌ಸಿ) 5ನೇ ಬೆಟಾಲಿಯನ್‌ನಲ್ಲಿ ಸೇನಾ ಸೇವೆ ಆರಂಭಿಸಿದ್ದರು. 1965ರ ಭಾರತ-ಪಾಕಿಸ್ತಾನ ಯುದ್ಧದಲ್ಲಿ ರಾಜಸ್ಥಾನ ಗಡಿಯಲ್ಲಿ ಹೋರಾಟ ನಡೆಸಿ ಪಾಕ್‌ನ ಹಲವು ಗ್ರಾಮಗಳನ್ನು ವಶಪಡಿಸಿಕೊಂಡಿದ್ದರು. 1971ರ ಬಾಂಗ್ಲಾ ವಿಮೋಚನಾ ಯುದ್ಧದಲ್ಲಿ ಸಾವಿರಾರು ಪಾಕ್ ಯೋಧರ ಶರಣಾಗತಿಗೆ ಕಾರಣರಾಗಿದ್ದರು. ಮಗುರಾದಲ್ಲಿ ಶಸ್ತ್ರಾಸ್ತ್ರ ಸಾಗಿಸುತ್ತಿದ್ದ ಪಾಕಿಸ್ತಾನದ 300 ಟ್ರಕ್‌ಗಳನ್ನು ವಶಕ್ಕೆ ಪಡೆದಿದ್ದರು. ಅವರು ಮುನ್ನಡೆಸಿದ್ದ ಪಡೆಗೆ ರಾಷ್ಟ್ರಪತಿ ಗೌರವ ದೊರೆತಿತ್ತು. ಅವರಿಗೆ ಸೇನಾ ಪದಕವೂ ಸಿಕ್ಕಿತ್ತು. 35 ವರ್ಷ ಭಾರತೀಯ ಸೇನೆಯ ವಿವಿಧ ಹುದ್ದೆಗಳಲ್ಲಿ ಕಾರ್ಯನಿರ್ವಹಿಸಿ 1991ರ ಡಿ.31ರಂದು ನಿವೃತ್ತರಾಗಿದ್ದರು.

'ಯುವನಿಧಿಗೆ ನೋಂದಣಿ: 'ನಕಲಿ'ಗಳ ಮೇಲೆ ನಿಗಾ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಸರ್ಕಾರದ 5ನೇ ಗ್ಯಾರಂಟಿ ಯೋಜನೆ 'ಯುವನಿಧಿ'ಗೆ ಅರ್ಹ ಫಲಾನುಭವಿಗಳನ್ನು ಸೇವಾ ಸಿಂಧು ಪೋರ್ಟಲ್‌ನಲ್ಲಿ ನೋಂದಾಯಿಸಲು ಕ್ರಮ ತೆಗೆದುಕೊಳ್ಳಬೇಕು. ಈ ಸಂದರ್ಭದಲ್ಲಿ ನಕಲಿ ಪ್ರಮಾಣಪತ್ರ ಸಲ್ಲಿಕೆಯಾಗದಂತೆ ನಿಗಾ ವಹಿಸಬೇಕು' ಎಂದು ಅಧಿಕಾರಿಗಳಿಗೆ ಕೌಶಲಾಭಿವೃದ್ಧಿ ಹಾಗೂ ಜೀವನೋಪಾಯ ಸಚಿವ ಡಾ. ಶರಣ ಪ್ರಕಾಶ ಪಾಟೀಲ ಕಟ್ಟುನಿಟ್ಟಿನ ಸೂಚನೆ ನೀಡಿದರು.

ಎಲ್ಲ ಜಿಲ್ಲಾಧಿಕಾರಿಗಳು ಮತ್ತು ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿಗಳ ಜೊತೆ ಗುರುವಾರ ವಿಡಿಯೊ ಸಂವಾದ ನಡೆಸಿದ ಸಚಿವರು, 'ವಿಶ್ವವಿದ್ಯಾನಿಲಯಗಳು, ಡಿಪ್ಲೊಮಾ, ಎಂಜಿನಿಯರಿಂಗ್, ವೈದ್ಯಕೀಯ ಕಾಲೇಜುಗಳ ಮಾನ್ಯತೆಯನ್ನು ಕಡ್ಡಾಯವಾಗಿ ಪರಿಶೀಲಿಸಬೇಕು. ಲೋಪಗಳಾದರೆ ತಪ್ಪಿತಸ್ಥರ ವಿರುದ್ಧ ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳಲಾಗುವುದು' ಎಂದು ಎಚ್ಚರಿಕೆ ನೀಡಿದರು.

ಕೆಲವು ಜಿಲ್ಲೆಗಳಲ್ಲಿ ನಿರೀಕ್ಷಿತ ಪ್ರಮಾಣದಲ್ಲಿ ನೋಂದಣಿ ಆಗದಿರುವುದಕ್ಕೆ ಅಧಿಕಾರಿಗಳಿಂದ ವಿವರಣೆ ಪಡೆದ ಸಚಿವರು, ಅಧಿಕಾರಿಗಳು ಹೆಚ್ಚು ಸಕ್ರಿಯರಾಗುವಂತೆ ಸೂಚನೆ ನೀಡಿದರು.

'ಪದವಿ ಕಾಲೇಜುಗಳು, ಡಿಪ್ಲೊಮಾ, ಎಂಜಿನಿಯರಿಂಗ್, ವೈದ್ಯಕೀಯ ಕಾಲೇಜುಗಳ ಮುಖ್ಯಸ್ಥರು, ಪ್ರಾಂಶುಪಾಲರ ಜೊತೆ ತಕ್ಷಣ ಸಭೆ ನಡೆಸಿ ಹೆಚ್ಚಿನ ಪ್ರಮಾಣದಲ್ಲಿ ನೋಂದಣಿ ಮಾಡಿಸಬೇಕು. ಈ ಯೋಜನೆ ಪರಿಣಾಮಕಾರಿಯಾಗಿ ಅನುಷ್ಠಾನವಾಗಲು ಎಲ್ಲ ಪ್ರಯತ್ನಗಳನ್ನು ಮಾಡಬೇಕು' ಎಂದೂ ಸಲಹೆ ನೀಡಿದರು.

'ಯೋಜನೆಯ ಕುರಿತಂತೆ ನಗರಸಭೆ, ಪುರಸಭೆ, ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ಗ್ರಾಮ ಪಂಚಾಯತಿ ಸೇರಿದಂತೆ ಎಲ್ಲ ಸ್ಥಳೀಯ ಸಂಸ್ಥೆಗಳ ಮೂಲಕ ವ್ಯಾಪಕ ಪ್ರಚಾರ ನಡೆಸಬೇಕು. ಸಾಮಾಜಿಕ ಜಾಲತಾಣಗಳನ್ನು ಅಧಿಕಾರಿಗಳು ಹೆಚ್ಚು ಬಳಸಿಕೊಳ್ಳಬೇಕು. ವಾಟ್ಸ್‌ಆ್ಯಪ್, ಫೇಸ್ ಬುಕ್, ಇನ್ಸ್ಟಾಗ್ರಾಂ, ಎಸ್‌ಎಂಎಸ್ ಸೇರಿದಂತೆ ಎಲ್ಲ ವೇದಿಕೆಗಳನ್ನು ಬಳಸಿಕೊಳ್ಳಬೇಕು. ಎಲ್ಲ ಕಾಲೇಜುಗಳ ಮುಂಭಾಗದಲ್ಲಿ ಕಟೌಟ್, ಹೋರ್ಡಿಂಗ್ ಹಾಕಬೇಕು. ಗ್ರಾಮಗಳಲ್ಲಿ ಫ್ಲೆಕ್ಸ್ ಅಳವಡಿಸಿ ಯೋಜನೆಯ ಲಾಭದ ಬಗ್ಗೆಯೂ ಮನವರಿಕೆ ಮಾಡಬೇಕು' ಎಂದು ಸೂಚಿಸಿದರು.

ಉನ್ನತ ಶಿಕ್ಷಣ ಸಚಿವ ಎಂ.ಸಿ. ಸುಧಾಕರ್, ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಸಭೆಯಲ್ಲಿದ್ದರು.

'ತೆರಿಗೆ: ಕನ್ನಡಿಗರ ಪಾಲು ಇಳಿಕೆ'

ಬೆಂಗಳೂರು: 'ಕೇಂದ್ರದ ತೆರಿಗೆ ಹಂಚಿಕೆಯಲ್ಲಿ ಕರ್ನಾಟಕಕ್ಕೆ ಭಾರಿ ಅನ್ಯಾಯವಾಗುತ್ತಿದೆ. ಆದರೆ, ಗುಜರಾತಿ ಗೆ ವಿಪರೀತ ಏರಿಕೆಯಾಗುತ್ತಿದೆ. ವರ್ಷದಿಂದ ವರ್ಷಕ್ಕೆ ಕನ್ನಡಿಗರ ಪಾಲು ಇಳಿಕೆಯಾಗುತ್ತಿದೆ' ಎಂದು ಮುಖ್ಯಮಂತ್ರಿ ಪುನರುಚ್ಚರಿಸಿದ್ದಾರೆ.

'ಪ್ರಜಾವಾಣಿ'ಯಲ್ಲಿ ಪ್ರಕಟವಾದ 'ಕರ್ನಾಟಕಕ್ಕೆ 15ನೇ ಹಣಕಾಸು ಆಯೋಗದ ಅನುದಾನ– ಸಿಕ್ಕಿದ್ದು ಅಲ್ಪ, ಬರಬೇಕಿದೆ ಅಧಿಕ' ಮತ್ತು 'ಕರ್ನಾಟಕಕ್ಕೆ ಭಾರಿ ಅನ್ಯಾಯ, ಗುಜರಾತಿಗೆ ವಿಪರೀತ ಏರಿಕೆ' ವರದಿಗಳನ್ನು ಟ್ಯಾಗ್ ಮಾಡಿ ಅವರು 'ಎಕ್ಸ್' ಮಾಡಿದ್ದಾರೆ.

'ತೆರಿಗೆ ಕಟ್ಟುವುದು ದಕ್ಷಿಣದ ರಾಜ್ಯಗಳು, ಭರಪೂರ ಅನುದಾನ ಬಾಚಿಕೊಳ್ಳುವುದು ಉತ್ತರದ ರಾಜ್ಯಗಳು. ಪ್ರಧಾನಿ ನರೇಂದ್ರ ಮೋದಿಯವರೇ ಇದೇನಾ ನಿಮ್ಮ ಗುಜರಾತ್ ಮಾಡೆಲ್? ಇಂಥ ಹುಸಿ ಮಾಡೆಲ್‌ನಿಂದ ಕನ್ನಡಿಗರು ಕಲಿಯುವುದೇನಿದೆ?' ಎಂದೂ ಕುಟುಕಿದ್ದಾರೆ.

ದಲಿತ ಯುವಕನ ಪ್ರವೇಶ: ದೇಗುಲಕ್ಕೆ ಬೀಗ

ಒಂದನೇ ಪುಟದಿಂದ

'ನಾನು ಮಾದಿಗ ಸಮುದಾಯಕ್ಕೆ ಸೇರಿದವನು ಎಂಬುದು ಗೊತ್ತಾದ ಬಳಿಕ 30–40 ಜನ ಜೆಸಿಬಿಯಿಂದ ಎಳೆದು ಹಲ್ಲೆ ನಡೆಸಿದರು' ಎಂದು ತರೀಕೆರೆ ಪೊಲೀಸ್ ಠಾಣೆಗೆ ಮಾರುತಿ ದೂರು ನೀಡಿದ್ದರು. ಪರಿಶಿಷ್ಟ ಜಾತಿ ಮತ್ತು ಪಂಗಡದವರ ಮೇಲಿನ ದೌರ್ಜನ್ಯ ತಡೆ ಕಾಯ್ದೆಯಡಿ 15 ಜನರ ವಿರುದ್ಧ ಎಫ್‌ಐಆರ್ ದಾಖಲಾಗಿದ್ದು, ಶಂಕರಪ್ಪ ಎಂಬ ಆರೋಪಿಯ ಬಂಧನವಾಗಿದೆ.

ಈ ಘಟನೆ ಬಳಿಕ ದಲಿತ ಸಂಘಟನೆಗಳ ಮುಖಂಡರು ಗ್ರಾಮಕ್ಕೆ ನಿತ್ಯ ಭೇಟಿ ನೀಡಿ ಹಟ್ಟಿಯಲ್ಲಿ ಓಡಾಡುತ್ತಿದ್ದಾರೆ. ಇದಾದ ಬಳಿಕ ಹಟ್ಟಿಯಲ್ಲಿರುವ ಕಂಬದ ರಂಗನಾಥಸ್ವಾಮಿ ಮತ್ತು ತಿಮ್ಮಪ್ಪನ ದೇಗುಲಗಳಲ್ಲಿ ಪೂಜೆ ಸ್ಥಗಿತಗೊಂಡಿದೆ. ಎರಡು ಗುಡಿಗೂ ಬೀಗ ಹಾಕಲಾಗಿದೆ.

ಹಟ್ಟಿಗೆ ಭೇಟಿ ನೀಡಿದ್ದ 'ಪ್ರಜಾವಾಣಿ' ಜತೆ ಮಾತನಾಡಿದ ಹೆಸರು ಹೇಳಲು ಇಚ್ಛಿಸದ ಗೊಲ್ಲರಹಟ್ಟಿ ಮಹಿಳೆಯರು, 'ಈ ಎರಡು ದೇವರ ಮೇಲೆ ಊರಿನ ಜನರಿಗೆ ಇನ್ನಿಲ್ಲದ ಭಕ್ತಿ ಇದೆ. ಯಾವುದೇ ಸಮುದಾಯದವರಾದರೂ ಬಂದು ದೇವರಿಗೆ ಕೈಮುಗಿಯಬಹುದು. ಆದರೆ, ಆದಿ ಕರ್ನಾಟಕ ಜಾತಿಯವರು ಮಾತ್ರ ಬೀದಿ ಪ್ರವೇಶ ಮಾಡುವಂತಿಲ್ಲ. ಪ್ರವೇಶ ಮಾಡಿದರೆ ಅವರಿಗೇ ದೇವರು ಒಳ್ಳೆಯದು ಮಾಡುವುದಿಲ್ಲ' ಎಂದು ಹೇಳಿದರು.

'ಈ ಜಾತಿಯವರು ಪ್ರವೇಶ ಮಾಡಿದ್ದಾರೆ ಎಂಬುದು ಗೊತ್ತಾದರೆ ನಮ್ಮ ಹಟ್ಟಿಯ ಜನರೆಲ್ಲ ಸೇರಿ ದೇವರನ್ನು ಗಂಗೆಸ್ಥಾನಕ್ಕೆ ಕೊಂಡೊಯ್ದು ಪುಣ್ಯಪೂಜೆ ನೆರವೇರಿಸುತ್ತೇವೆ. ಕಲ್ಲತ್ತಗಿರಿ ಜಲಪಾತದ ತನಕ ಸುಮಾರು 15 ಕಿ.ಮೀ ಕಾಲ್ನಡಿಗೆಯಲ್ಲೇ ದೇವರ ಪಲ್ಲಕ್ಕಿ (ಅಡ್ಡೆ) ಹೊತ್ತು ತೆರಳುತ್ತೇವೆ' ಎಂದು ಅವರು ತಿಳಿಸಿದರು.

'ಈಗ ನಿತ್ಯ ಪೊಲೀಸರು, ಹೋರಾಟಗಾರರು ಬಂದು ಹೋಗುತ್ತಿದ್ದಾರೆ. ಇದೆಲ್ಲ ಎಷ್ಟು ದಿನ ನಡೆಯುತ್ತದೆಯೋ ಗೊತ್ತಿಲ್ಲ, ತಿಂಗಳುಗಳೇ ಕಳೆಯಬಹುದು. ಆ ನಂತರವೇ ಗಂಗೆ ಪೂಜೆ ನೆರವೇರಿಸಿ ಪುಣ್ಯಪೂಜೆ ನಡೆಸಲಾಗುವುದು. ಅಲ್ಲಿಯ ತನಕ ದೇಗುಲದ ಬಾಗಿಲು ತೆರೆಯುವುದಿಲ್ಲ' ಎಂದರು.

'ಎಲ್ಲಾ ಗೊಲ್ಲರಹಟ್ಟಿಯಲ್ಲೂ ರಂಗನಾಥಸ್ವಾಮಿ ದೇಗುಲಗಳಿವೆ. ರಂಗನಾಥಸ್ವಾಮಿ ದೇಗುಲ ಇರುವ ಗೊಲ್ಲರ ಹಟ್ಟಿಗೆ ಈ ಜಾತಿಯವರು ಪ್ರವೇಶ ಮಾಡುವುದಿಲ್ಲ. ಪ್ರವೇಶ ಮಾಡಲೇಬೇಕೆಂದು ಹಟ ಹಿಡಿದರೆ ಅವರನ್ನು ದೇವರೇ ನೋಡಿಕೊಳ್ಳುತ್ತಾನೆ. ನಾವು ಯಾರಿಗೂ ಬರಬೇಡಿ ಎನ್ನುವುದಿಲ್ಲ. ಜಾತಿ ಮರೆಮಾಚಿ ಬಂದಿರುವುದು ಗೊತ್ತಾದರೆ ನಾವೇ ಪುಣ್ಯಪೂಜೆ ಮಾಡಿಸುತ್ತೇವೆ' ಎಂದು ತಿಳಿಸಿದರು.

ಆರ್ಥಿಕ ಇಲಾಖೆ ಆಕ್ಷೇಪ

ಬೆಂಗಳೂರು: ಹಣಕಾಸು ಇಲಾಖೆಯಿಂದ ಅನುಮೋದನೆ ಪಡೆಯದೆ ಸರ್ಕಾರಿ ವಿಶ್ವವಿದ್ಯಾಲಯಗಳು ಕೈಗೊಳ್ಳುವ ನೇಮಕಾತಿಗಳನ್ನು ಪರಿಗಣಿಸಲು ಸಾಧ್ಯವಿಲ್ಲ ಎಂದು ಆರ್ಥಿಕ ಇಲಾಖೆ ಸುತ್ತೋಲೆ ಹೊರಡಿಸಿದೆ.

ವೈದ್ಯಕೀಯ, ತಾಂತ್ರಿಕ ಮತ್ತು ಕೃಷಿ ವಿಶ್ವವಿದ್ಯಾಲಯಗಳು ಸೇರಿದಂತೆ ರಾಜ್ಯದ ವಿವಿಧ ಸರ್ಕಾರಿ ವಿಶ್ವವಿದ್ಯಾಲಯಗಳು ನೇಮಕಾತಿಯ ವಿವರಗಳನ್ನು ತಕ್ಷಣ ಸಲ್ಲಿಸಬೇಕು. ಇಲಾಖೆಯ ಅನುಮೋದನೆ ಇಲ್ಲದೆ ಭರ್ತಿ ಮಾಡಿದ ಹುದ್ದೆಗಳ ವಿವರ ನೀಡಬೇಕು ಎಂದು ಸೂಚಿಸಿದೆ. ಕೆಲ ವಿಶ್ವವಿದ್ಯಾಲಯಗಳು ಹುದ್ದೆಗಳ ಭರ್ತಿಗೆ ಪೂರ್ವಾನುಮತಿ ಪಡೆಯದೆ ನೇಮಕಾತಿ ಮಾಡಿಕೊಂಡಿವೆ. ನಂತರ ವೇತನ ಅನುದಾನ ಕೋರಿ ಕಡತಗಳನ್ನು ಸಲ್ಲಿಸಿವೆ. ಇದು ನಿಯಮಗಳಿಗೆ ವಿರುದ್ಧವಾದ ಕ್ರಮ ಎಂದೂ ಹೇಳಿದೆ.

ಅಂಗನವಾಡಿ ಸಹಾಯಕಿ ಮೇಲೆ ಹಲ್ಲೆ: ಬಂಧನ

ಬೆಳಗಾವಿ: ತಾಲ್ಲೂಕಿನ ಬಸುರ್ತೆ ಗ್ರಾಮದಲ್ಲಿ ಅಂಗನವಾಡಿ ಸಹಾಯಕಿ ಸುಗಂಧಾ ಮೋರೆ ಎಂಬುವರ ಮೇಲೆ ಕುಡಗೋಲಿನಿಂದ ಹಲ್ಲೆ ಮಾಡಿ, ಮೂಗು ಕತ್ತರಿಸಿದ ಕಲ್ಯಾಣಿ ಮೋರೆ (50) ಎಂಬ ಆರೋಪಿಯನ್ನು ಪೊಲೀಸರು ಗುರುವಾರ ಬಂಧಿಸಿದ್ದಾರೆ.

ಮಹದೇವ್ ಆ್ಯಪ್: ಇ.ಡಿಯಿಂದ ಮತ್ತೊಂದು ಆರೋಪಪಟ್ಟಿ

ನವದೆಹಲಿ/ರಾಯಪುರ (ಪಿಟಿಐ): ಮಹದೇವ್ ಆ್ಯಪ್ ಮೂಲಕ ಕಾನೂನು ಬಾಹಿರವಾಗಿ ಬೆಟ್ಟಿಂಗ್ ದಂಧೆ ನಡೆಸುತ್ತಿದ್ದ ಪ್ರಕರಣದಲ್ಲಿ ಹಣ ಅಕ್ರಮ ವರ್ಗಾವಣೆ ಆರೋಪದ ಸಂಬಂಧ ಜಾರಿ ನಿರ್ದೇಶನಾಲಯವು (ಇ.ಡಿ) ವಿಶೇಷ ಕೋರ್ಟ್‌ನಲ್ಲಿ ಹೊಸದಾಗಿ ಆರೋಪಪಟ್ಟಿ ಸಲ್ಲಿಸಿದೆ.

'ಇದರ ವಿವರಗಳನ್ನು ಯುಎಇ ಆಡಳಿತಕ್ಕೂ ಸಲ್ಲಿಸಿ, ಆ್ಯಪ್‌ನ ಇಬ್ಬರು ಮುಖ್ಯ ಪ್ರವರ್ತಕರಾದ ರವಿ ಉಪ್ಪಲ್, ಸೌರಭ್ ಚಂದ್ರಕರ್‌ರನ್ನು ಗಡೀಪಾರು ಮಾಡಬೇಕು ಅಥವಾ ತಮ್ಮ ವಶಕ್ಕೆ ಒಪ್ಪಿಸಬೇಕು ಎಂದು ಕೋರಲಾಗುವುದು' ಎಂದು ಇ.ಡಿ ಮೂಲಗಳು ತಿಳಿಸಿವೆ.

ಇ.ಡಿ ಕೋರಿಕೆ ಪರಿಗಣಿಸಿ ಇಂಟರ್‌ಪೋಲ್ ನೀಡಿದ್ದ ರೆಡ್ ನೋಟಿಸ್ ಆಧರಿಸಿ ಇಬ್ಬರನ್ನು ದುಬೈನಲ್ಲಿ ಇತ್ತೀಚೆಗೆ ಬಂಧಿಸಲಾಗಿದೆ. ತನಿಖಾ ಸಂಸ್ಥೆ ಈಗಾಗಲೇ ಮೊದಲ ಆರೋಪಪಟ್ಟಿಯ ವಿವರಗಳನ್ನು ನೀಡಿತ್ತು. ಅದರ ಆಧಾರದಲ್ಲಿ ಜಾಮೀನು ರಹಿತ ವಾರಂಟ್ ಜಾರಿಯಾಗಿತ್ತು.

ಕ್ಯಾಷ್ ಕೊರಿಯರ್ ಅಸೀಂ ದಾಸ್ ಸೇರಿದಂತೆ ಐವರು ಆರೋಪಿಗಳ ವಿರುದ್ಧ ಜನವರಿ 1ರಂದು 1800 ಪುಟಗಳ ಎರಡನೇ ಆರೋಪಪಟ್ಟಿ ದಾಖಲಾಗಿದೆ.

ಪೊಲೀಸ್ ಕಾನ್‌ಸ್ಟೆಬಲ್ ಭೀಮ್ ಸಿಂಗ್ ಯಾದವ್, ಆ್ಯಪ್‌ನ ಎಕ್ಸಿಕ್ಯೂಟಿವ್ ಶುಭಂ ಸೋನಿ ಇತರ ಆರೋಪಿಗಳು.

ಎರಡನೇ ಆರೋಪಪಟ್ಟಿಯನ್ನು ಹಣ ಅಕ್ರಮ ವರ್ಗಾವಣೆ ನಿಯಂತ್ರಣ ಕಾಯ್ದೆಯ (ಪಿಎಂಎಲ್‌ಎ) ವಿಶೇಷ ಕೋರ್ಟ್, ಜೂನ್ 10ರಂದು ನಡೆಯುವ ವಿಚಾರಣೆಯಲ್ಲಿ ಪರಿಗಣಿಸುವ ಸಂಭವವಿದೆ ಎಂದು ಇ.ಡಿ ಪರ ವಕೀಲ ಸೌರಭ್ ಪಾಂಡೆ ತಿಳಿಸಿದ್ದಾರೆ.

ತಾಯಿ, ಆಶಾ ಕಾರ್ಯಕರ್ತೆ ಸೇರಿ ಐವರ ಬಂಧನ

ನವಜಾತ ಶಿಶು ನಿಯಮಬಾಹಿರ ಹಸ್ತಾಂತರ

ಪ್ರಜಾವಾಣಿ ವಾರ್ತೆ

ಗಿರಿಜಾ

ಸುಬ್ರಮಣಿ

ಶ್ರೀಕಾಂತ್

ಉಷಾ

ಸುಮಿತ್ರಾ

ಸಕಲೇಶಪುರ (ಹಾಸನ): ತಾಲ್ಲೂಕಿನ ಹೊಸಳ್ಳಿಯಲ್ಲಿ ಗಂಡು ಮಗುವನ್ನು ಕಾನೂನುಬಾಹಿರವಾಗಿ ಹಸ್ತಾಂತರಿಸಿದ ಆರೋಪದ ಮೇರೆಗೆ ತಾಯಿ ಹಾಗೂ ಆಶಾ ಕಾರ್ಯಕರ್ತೆ ಸೇರಿ ಐವರನ್ನು ಬಂಧಿಸಲಾಗಿದೆ. ಮಗುವಿಗೆ ಜಿಲ್ಲಾ ಮಕ್ಕಳ ರಕ್ಷಣಾ ಘಟಕದಲ್ಲಿ ಆಶ್ರಯ ನೀಡಲಾಗಿದೆ.

ತಾಯಿ ಗಿರಿಜಾ, ಆಶಾ ಕಾರ್ಯಕರ್ತೆ ಸುಮಿತ್ರಾ, ಮಗುವನ್ನು ಪಡೆದ ಮಹಿಳೆ, ಚಿಕ್ಕಮಗಳೂರಿನ ಉಷಾ ಹಾಗೂ ಮಗು ಕೊಡಲು ಪ್ರೇರೇಪಿಸಿದ ಆರೋಪಿಗಳಾದ ಶ್ರೀಕಾಂತ್ ಹಾಗೂ ಸುಬ್ರಮಣಿ ಬಂಧಿತರು.

ವಿವರ: ಸೋಮಶೇಖರ್–ಗಿರಿಜಾ ದಂಪತಿಯು ಹೊಸಳ್ಳಿಯ ಸುಬ್ರಮಣಿ ಎಂಬುವರ ತೋಟದಲ್ಲಿ ಕೆಲಸ ಮಾಡಿಕೊಂಡು ಅಲ್ಲಿಯೇ ವಾಸ್ತವ್ಯವಿದ್ದರು. ಸುಬ್ರಮಣಿಯವರ ಪುತ್ರ ಶ್ರೀಕಾಂತ್, ಗಿರಿಜಾ ಅವರನ್ನು ಹೆತ್ತೂರಿನ ಸರ್ಕಾರಿ ಆಸ್ಪತ್ರೆಗೆ ಹೆರಿಗೆಗೆಂದು ಕರೆದೊಯ್ದಿದ್ದ. ನವೆಂಬರ್ 15 ರಂದು ಆಕೆ ಗಂಡು ಮಗುವಿಗೆ ಜನ್ಮ ನೀಡಿದ ಮರುದಿನವೇ ಉಷಾ ಅವರಿಗೆ ಹಸ್ತಾಂತರಿಸಿದ್ದರು.

ಮೂರು ವಾರವಾದರೂ ಮಗುವಿನ ವಿಷಯ ಬಹಿರಂಗವಾಗದೆ ಅನುಮಾನಗೊಂಡ ಗ್ರಾಮಸ್ಥರು, ಜಿಲ್ಲಾ ಮಕ್ಕಳ ರಕ್ಷಣಾ ಘಟಕಕ್ಕೆ ಮಾಹಿತಿ ನೀಡಿದ್ದರು. ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಕಾಂತರಾಜು ಅವರು, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗೆ ಜನವರಿ 2 ರಂದು ದೂರು ಸಲ್ಲಿಸಿದ್ದರು. ವಿಚಾರಣೆ ನಡೆಸುವಂತೆ ಸಕಲೇಶಪುರ ಗ್ರಾಮಾಂತರ ಠಾಣೆ ಪೊಲೀಸರಿಗೆ ಎಸ್ಪಿ ಮೊಹಮ್ಮದ್ ಸುಜೀತಾ ಸೂಚಿಸಿದ್ದರು.

ವಿಚಾರಣೆ ನಡೆಸಿದ ಪೊಲೀಸರು, ಪ್ರಕರಣವನ್ನು ಪತ್ತೆ ಹಚ್ಚಿ, ಹಿರಿಯೂರು ಗ್ರಾಮದ ಆಶಾ ಕಾರ್ಯಕರ್ತೆ ಸುಮಿತ್ರಾ ಅವರ ಕೈವಾಡವಿರುವುದನ್ನು ಗುರುತಿಸಿದರು. ಇಬ್ಬರು ಮಕ್ಕಳಿರುವುದರಿಂದ, ಇನ್ನೊಂದು ಮಗುವನ್ನು ಸಾಕಲಾಗದೇ ಬೇರೆಯವರಿಗೆ ನೀಡಿದ್ದಾಗಿ ತಾಯಿ ಪೊಲೀಸರಿಗೆ ತಿಳಿಸಿದ್ದಾರೆ.

'ಹಣಕ್ಕಾಗಿ ಮಗು ಮಾರಾಟ ಮಾಡಿರುವುದು ಕಂಡು ಬಂದಿಲ್ಲ. ಹಸ್ತಾಂತರಿಸಿದ ಕಾರಣದ ಬಗ್ಗೆ ತನಿಖೆ ನಡೆದಿದೆ. ಮಗುವಿನ ತಂದೆಯ ಕುರಿತು ತನಿಖೆ ನಡೆದಿದೆ.

ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿ, ಸುಮಿತ್ರಾ ಅವರನ್ನು ತೀವ್ರ ವಿಚಾರಣೆಗೆ ಒಳಪಡಿಸಿದ್ದು, ಬೇರೆ ಪ್ರಕರಣದಲ್ಲಿಯೂ ಭಾಗಿಯಾಗಿರುವ ಬಗ್ಗೆಯೂ ಮಾಹಿತಿ ಸಂಗ್ರಹಿಸಲಾಗುತ್ತಿದೆ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮೊಹಮ್ಮದ್ ಸುಜೀತಾ ಅವರು ತಿಳಿಸಿದರು.

ಕರ್ನಾಟಕ ಸರ್ಕಾರ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ, ಹಳಿಯಾಳ ವಿಭಾಗ (ಉ.ಕ)
ಇ–ಮೇಲ್: midhly@yahoo.co.in ಫೋ.ನಂ: 08284–220113
ನಂ:ಕಾನಿಅ/ಸನೀವಿಹ/ತಾವಿ/ಟೆಂಡರ್/4702 ಪಶ್ಚಿಮವಾಹಿನಿ/2023–24/1329 ದಿನಾಂಕ: 27/12/2023

ಟೆಂಡರ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್) – ಕೆ.ಡಬ್ಲ್ಯೂ–4

ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿಸಿ ನವೀಕರಿಸಿಕೊಂಡಿರುವ ಅರ್ಹ ಗುತ್ತಿಗೆದಾರರಿಂದ ಐಟಂ ದರದಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ–2000 ಮತ್ತು ಇತ್ತೀಚಿನ ತಿದ್ದುಪಡಿಗಳಂತೆ ಕರಾವಳಿ ಪ್ರದೇಶದಲ್ಲಿ ಹರಿಯುವ ನದಿಗಳಿಗೆ ಸ್ವೆಡ್/ತಡೆಗೋಡೆ ನಿರ್ಮಾಣ ಅಭಿವೃದ್ಧಿ ಯೋಜನೆಗಾಗಿ ಭಟ್ಕಳ ತಾಲೂಕಿನಲ್ಲಿನ ಈ ಕೆಳಗಿನ ಕಾಮಗಾರಿಗಾಗಿ **KW-4** (ದ್ವಿ–ಲಕೋಟೆ) ಪದ್ಧತಿಯಲ್ಲಿ "ಇ–ಪ್ರೊಕ್ಯುರಮೆಂಟ್" ಮುಖಾಂತರ ಟೆಂಡರ ಕರೆಯಲಾಗಿದೆ.

ಕಾಮಗಾರಿಯ ಹೆಸರು: 4702–00–101–05–02–139 ಪಶ್ಚಿಮ ವಾಹಿನಿ ಯೋಜನೆ.
(1 ಕಾಮಗಾರಿ)

ಖಾಲಿ ಟೆಂಡರ ಫಾರಂಗಳನ್ನು ಇ–ಪ್ರೊಕ್ಯೂಮೆಂಟ್ ವೆಬಸೈಟ್ ವಿಳಾಸ: **https://kppp.karnataka.gov.in** ದಲ್ಲಿ ಡೌನಲೋಡ್ ಮಾಡಿಕೊಳ್ಳುವುದು. ಟೆಂಡರ್ ಕುರಿತಂತೆ **ದಿನಾಂಕ: 31–01–2024** ರೊಳಗಾಗಿ ಅನುಮಾನಗಳಿದ್ದರೆ ಕಚೇರಿ ಅಥವಾ ಇ–ಪ್ರೊಕ್ಯೂಮೆಂಟ್‌ನಲ್ಲಿ ಸಂಪರ್ಕಿಸಿ ಪರಿಹರಿಸಿಕೊಳ್ಳಬಹುದಾಗಿದೆ. ಟೆಂಡರಗಳನ್ನು **ದಿನಾಂಕ: 01–02–2024 ರ ಸಾಯಂಕಾಲ 17.30 ಗಂಟೆಯವರೆಗೆ** ಸ್ವೀಕರಿಸಲಾಗುವುದು. ಕಾಮಗಾರಿಗಳ ತಾಂತ್ರಿಕ ಬಿಡ್‌ನ್ನು **ದಿನಾಂಕ: 03–02–2024 ಸಾಯಂಕಾಲ 17.30 ಗಂಟೆಗೆ** ತೆರೆಯಲಾಗುವುದು ಹಾಗೂ ಕಾಮಗಾರಿಯ ಆರ್ಥಿಕ ಬಿಡ್‌ನ್ನು ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ದೊರೆತ ನಂತರ ತೆರೆಯಲಾಗುವುದು.

ಕಾಮಗಾರಿಗಳ ಟೆಂಡರನ್ನು ಒಪ್ಪಿಕೊಳ್ಳುವ ಕನಿಷ್ಠ ಅರ್ಹತಾ ಮಾನದಂಡಗಳನ್ನು **ಕೆಡ್ಬ್ಲ್ಯೂ–4 ಬಿಡ್ ಡಾಕ್ಯುಮೆಂಟ್** ರಲ್ಲಿರುವಂತೆ ಪರಿಗಣಿಸಲಾಗುವುದು. ಈ ಬಗ್ಗೆ ಟೆಂಡರದಾರರು ಟೆಂಡರ ಸಲ್ಲಿಸುವ ಮುನ್ನ ಮನದಟ್ಟು ಮಾಡಿಕೊಳ್ಳುವುದು. ಟೆಂಡರ ಸಂಬಂಧಿಸಿದಂತೆ ಸಂಪೂರ್ಣ ವಿವರಗಳನ್ನು ಮೇಲಿನ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ನಿಗದಿ ಪಡಿಸಿದ ದಿನಾಂಕಗಳಂದು ಪಡೆದುಕೊಳ್ಳಬಹುದು. ಹಾಗೂ ವೆಬ್‌ಸೈಟನಲ್ಲಿರುವ ವಿವರಗಳೇ ಅಂತಿಮ.

ವಿ.ಸೂ: ಸದರಿ ಟೆಂಡರ್ ಪ್ರಕಟಣೆಗೆ ಸಂಬಂಧಿಸಿದಂತೆ ಯಾವುದೇ ತಿದ್ದುಪಡಿಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.

ಸಹಿ/– (ಅವಿನಾಶ ಆರ್. ಆಲೂರು)
ಕಾರ್ಯನಿರ್ವಾಹಕ ಅಭಿಯಂತರರು
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ,
ಹಳಿಯಾಳ ವಿಭಾಗ (ಉ.ಕ)
DIPR/ADK/KSMCA/507/23-24 Dt.03.01.24

ಕರ್ನಾಟಕ ಸರ್ಕಾರ
ಜಿಲ್ಲಾಧಿಕಾರಿಗಳ ಕಾರ್ಯಾಲಯ, ಚಿತ್ರದುರ್ಗ ಜಿಲ್ಲೆ,
(ಜಿಲ್ಲಾ ನಗರಾಭಿವೃದ್ಧಿ ಕೋಶ, ಚಿತ್ರದುರ್ಗ–577501)
ಇ–ಮೇಲ್ :E-Mail-ka.chitradurga.dudc@gmail.com
ನಂ. ಜಿನಕೋ(2)ಘವನಿ/ಸಿ.ಆರ್ 358/2022–23 ದಿನಾಂಕ: 02.01.2024

ಟೆಂಡರ್ ಪ್ರಕಟಣೆ

ಸ್ವಚ್ಛ ಭಾರತ್ ಮಿಷನ್ 2.0 ರಡಿಯಲ್ಲಿ ಚಿತ್ರದುರ್ಗ ನಗರಸಭೆ, ಚಳ್ಳಕೆರೆ ನಗರಸಭೆ ಮತ್ತು ಹಿರಿಯೂರು ನಗರಸಭೆಗಳ ವ್ಯಾಪ್ತಿಯಲ್ಲಿ ಘನತ್ಯಾಜ್ಯ ವಿಲೇವಾರಿ ಪ್ರದೇಶದಲ್ಲಿ ಸಂಗ್ರಹವಾಗಿರುವ ಪಾರಂಪರಿಕ ತ್ಯಾಜ್ಯ ವಿಲೇವಾರಿ ಕಾಮಗಾರಿಯ ಅನುಷ್ಠಾನಕ್ಕೆ, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಕಾಯ್ದೆ 1999 ಮತ್ತು ನಿಯಮಗಳು–2000 ರಂತೆ ನೊಂದಾಯಿತ ಅರ್ಹ ಸಿವಿಲ್ ಮೊದಲನೆ ದರ್ಜೆ ಅರ್ಹ ಗುತ್ತಿಗೆದಾರರುಗಳಿಂದ ತ್ರಿ–ಲಕೋಟೆ ಪದ್ಧತಿಯಡಿ ಕೆ.ಡಬ್ಲ್ಯೂ–4 ಮತ್ತು ಕೆ.ಡಬ್ಲ್ಯೂ–6 ರ ಟೆಂಡರ್ ದಾಸ್ತಾವೇಜು ಮೂಲಕ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಟೆಂಡರ್ ಆಹ್ವಾನಿಸಲಾಗಿದೆ. (ವಿವರ ಕೆಳಗಿನಂತಿದೆ).

ಕಾಮಗಾರಿಗಳ ವಿವರ:– ಪ್ಯಾಕೇಜ್ ನಂ. 01:– ಚಿತ್ರದುರ್ಗ ನಗರಸಭೆಯ ಹಳೇ ದ್ಯಾಮವ್ವನಹಳ್ಳಿ, ಚಳ್ಳಕೆರೆ ನಗರಸಭೆಯ ಬಳ್ಳಾರಿ ರಸ್ತೆಯ ಮತ್ತು ಹಿರಿಯೂರು ನಗರಸಭೆಯ ಹೇಮದಳದಲ್ಲಿರುವ ಘನತ್ಯಾಜ್ಯ ವಿಲೇವಾರಿ ಪ್ರದೇಶದಲ್ಲಿ ಸಂಗ್ರಹವಾಗಿರುವ ಪಾರಂಪರಿಕ ತ್ಯಾಜ್ಯವನ್ನು ಕೇಂದ್ರ ಪರಿಸರ ಮತ್ತು ಮಾಲಿನ್ಯ ನಿಯಂತ್ರಣ ಮಂಡಳಿ ಹಾಗೂ ರಾಷ್ಟ್ರೀಯ ಹಸಿರು ನ್ಯಾಯಮಂಡಳಿಯ ಮಾರ್ಗಸೂಚಿ ಪ್ರಕಾರ ವೈಜ್ಞಾನಿಕವಾಗಿ ಸಂಸ್ಕರಿಸಿ ವಿಲೇವಾರಿ ಮಾಡುವ ಕಾಮಗಾರಿ. ಇಂಡೆಂಟ್ ಸಂ. DMA/2023-24/OW/ WORK_INDENT7729 ಟೆಂಡರ್ ಮೊತ್ತ (ಜಿ.ಎಸ್.ಟಿ. ಹೊರತುಪಡಿಸಿ) (ರೂ.ಲಕ್ಷಗಳಲ್ಲಿ) 1075.42 ಇ.ಎಂ.ಡಿ ಮೊತ್ತ (ರೂ.ಲಕ್ಷಗಳಲ್ಲಿ):– 15.00

ಕಾಮಗಾರಿ ಪೂರ್ಣಗೊಳಿಸಬೇಕಾದ ಅವಧಿ:– 9.14 ತಿಂಗಳು (ಮಳೆಗಾಲ ಹೊರತುಪಡಿಸಿ) ಆಸಕ್ತ ಗುತ್ತಿಗೆದಾರರು ಟೆಂಡರ್‌ನಲ್ಲಿ ಭಾಗವಹಿಸಲು ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೊಂದಾಯಿಸಿಕೊಳ್ಳುವುದು. ಗುತ್ತಿಗೆದಾರರು ಟೆಂಡರ್ ದಾಸ್ತಾವೇಜುಗಳನ್ನು ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಪಡೆಯಬಹುದಾಗಿದೆ. (www.kppp.karnataka.gov.in) ಟೆಂಡರ್‌ಗಳನ್ನು ವಿದ್ಯುನ್ಮಾನ ಸಂಗ್ರಹಣೆ ಮೂಲಕ www.kppp.karnataka.gov.in ಪೋರ್ಟಲ್‌ನಲ್ಲಿ ಸಲ್ಲಿಸಬಹುದಾಗಿದೆ. ಇ.ಎಂ.ಡಿ. ಮೊತ್ತ ಹಾಗೂ ಟೆಂಡರ್ ಶುಲ್ಕವನ್ನು ವಿದ್ಯುನ್ಮಾನ ಸಂಗ್ರಹಣೆ ಪೋರ್ಟಲ್‌ನಲ್ಲಿ ಪಾವತಿಸುವುದು. ಟೆಂಡರ್‌ನ ವೇಳಾಪಟ್ಟಿ ಮತ್ತು ಇತರೆ ಮಾಹಿತಿಗಳ ವಿವರ ಈ ಕೆಳಂಡಂತಿದೆ.

ಟೆಂಡರ್ ವೇಳಾಪಟ್ಟಿ :– (1) ಪೂರ್ವಭಾವಿ ಸಭೆ ದಿನಾಂಕ: 08–01–2024 11.40 ಬೆಳಿಗ್ಗೆ (2) ಪ್ರಶ್ನೆ / ಮಾಹಿತಿಗಾಗಿ ಸಲ್ಲಿಸುವ ಕೊನೆಯ ದಿನಾಂಕ 22–01–2024 4.00 ಸಂಜೆ (3) ಟೆಂಡರ್ ದಾಖಲೆಯನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ 02–02–2024 5.00 ಸಂಜೆ (4) ಪೂರ್ವಾಹತೆ ಬಿಡ್ ತೆರೆಯುವ ದಿನಾಂಕ 03–02–2024 5.30 ಸಂಜೆ (5) ತಾಂತ್ರಿಕ ಬಿಡ್ ತೆರೆಯುವ ದಿ:– 05–02–2024 5.15 ಸಂಜೆ (6) ಹಣಕಾಸು ಬಿಡ್ ತೆರೆಯುವ ದಿನಾಂಕ ತಾಂತ್ರಿಕ ಬಿಡ್ ಅನುಮೋದನೆ ನಂತರ ಆರ್ಥಿಕ ಬಿಡ್‌ನ್ನು ತೆರೆಯಲಾಗುವುದು.

ಟೆಂಡರ್‌ನ ನಿಬಂಧನೆಗಳಲ್ಲಿ ಹಾಗೂ ಟೆಂಡರ್ ಸಲ್ಲಿಸುವ ಅವಧಿಯ ಮುಂದೂಡಿಕೆಯಲ್ಲಿ ಯಾವುದಾದರೂ ಬದಲಾವಣೆಗಳಿದ್ದಲ್ಲಿ, ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಪ್ರಚುರಪಡಿಸಲಾಗುವುದು ಮತ್ತು ಈ ಬಗ್ಗೆ ಯಾವುದೇ ಪತ್ರಿಕಾ ಪ್ರಕಟಣೆಯನ್ನು ನೀಡಲಾಗುವುದಿಲ್ಲ.

DIPR/CTA/KSMCA/451/2023-24
ಸಹಿ/– ಯೋಜನಾ ನಿರ್ದೇಶಕರು
ಜಿಲ್ಲಾ ನಗರಾಭಿವೃದ್ಧಿ ಕೋಶ, ಚಿತ್ರದುರ್ಗ

ಗೌರಿಶಂಕರ್, ಧನಂಜಯ, ದಿನಕರ್, ಪವನ್ ಒಡೆಯರ್

ನೋ ಆಡಿಷನ್ ನೇರ ಆ್ಯಕ್ಷನ್

ಕಿರುತೆರೆಯಿಂದ ಬೆಳ್ಳಿತೆರೆಗೆ ಹೆಜ್ಜೆ ಇಟ್ಟ ನಟಿ ಅಂಕಿತಾ ಅಮರ್ ಕೈಯಲ್ಲಿ ಒಟ್ಟು ನಾಲ್ಕು ಪ್ರಾಜೆಕ್ಟ್‌ಗಳಿವೆ. ಈ ಪೈಕಿ ಮೂರು ಸಿನಿಮಾಗಳು ಈ ವರ್ಷ ತೆರೆಕಾಣುತ್ತಿವೆ. ವಿಶೇಷ ಏನಂದರೆ, ಅಂಕಿತಾ ಇಲ್ಲಿಯವರೆಗೂ ಯಾವ ಸಿನಿಮಾಗೂ ಆಡಿಷನ್ ನೀಡಿಲ್ಲ. ಈ ಬಗ್ಗೆ ಅವರಿಗೆ ಆತಂಕವೂ ಇದೆಯಂತೆ...

ಪ್ರಜಾವಾಣಿ ನೋಡಿಯೊ — ಸಿನಿಮಾತು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಸಂದರ್ಶನ: ಅಭಿಲಾಷ್ ಪಿ.ಎಸ್.

- **ಎರಡು ವರ್ಷಗಳ ಸಿನಿಮಾ ಅನುಭವ ಹೇಗಿತ್ತು?**

ಧಾರಾವಾಹಿಗಳಲ್ಲಿ ನಟಿಸುವುದು ಒಂದು ರೀತಿ 9–5ರ ಕಚೇರಿ ಕೆಲಸದಂತೆ. ಸಿನಿಮಾದಲ್ಲಿ ಎಷ್ಟು ದಿನ ಶೂಟಿಂಗ್‌ಗೆ ಹೋಗಿದ್ದೆ ಎನ್ನುವುದಕ್ಕಿಂತ, ಆ ಪಾತ್ರಕ್ಕೆ ಬೇಕಿರುವ ತಯಾರಿ ಮುಖ್ಯವಾಗುತ್ತದೆ. ಆ ಪಯಣವನ್ನು ನಾನು ಇನ್ನೂ ಕಲಿಯುತ್ತಿದ್ದೇನೆ. ಪಾತ್ರಗಳನ್ನು ಅರ್ಥ ಮಾಡಿಕೊಂಡು ಜೀವಿಸುವ ಪ್ರಯತ್ನವಿದು. ಧಾರಾವಾಹಿಗಳಲ್ಲಿ ತಿಂಗಳುಗಳ ಕಾಲ ನೀವು ಜನರೆದುರಿಗೆ ಇರುತ್ತೀರಿ. ಆದರೆ ಸಿನಿಮಾಗಳಲ್ಲಿ ಕೇವಲ ಐದಾರು ದೃಶ್ಯಗಳಲ್ಲಿ ನೀವು ಏನು ಎನ್ನುವುದನ್ನು ಪ್ರೇಕ್ಷಕರ ಎದುರಿಗೆ ಇಡಬೇಕು. ಇದನ್ನು ಕಲಿಯುತ್ತಿದ್ದೇನೆ. ಪ್ರತಿಭಾವಂತ ತಂತ್ರಜ್ಞರು, ಸಿನಿಮಾವನ್ನೇ ಉಸಿರಾಡುವ ಜನರೊಂದಿಗೆ ಬೆರೆತಿದ್ದೇನೆ. ಇಂತಹ ಪಯಣ ಬಹಳ ಖುಷಿ ನೀಡಿದೆ.

- **ನಿಮ್ಮ ಮೊದಲ ಚಿತ್ರ ಇನ್ನೂ ಬಿಡುಗಡೆಯಾಗಿಲ್ಲ. ಆಗಲೇ ನಾಲ್ಕೈದು ಸಿನಿಮಾಗಳು ಕೈಯಲ್ಲಿವೆ ಅಲ್ಲವೇ?**

ಹೌದು. 2024ರಲ್ಲಿ ನನ್ನ ಮೂರು ಸಿನಿಮಾಗಳು ತೆರೆಗೆ ಬರಲಿವೆ. ನನ್ನ ಮೊದಲ ಸಿನಿಮಾ, ಪೃಥ್ವಿ ಅಂಬಾರ್ ಜೊತೆಗಿನ 'ಅಬಜಬದಬ'. ಅದರ ಹಾಗೂ ಚಂದ್ರಜಿತ್ ಬೆಳ್ಳಿಯಪ್ಪ ನಿರ್ದೇಶನದ 'ಇಬ್ಬನಿ ತಬ್ಬಿದ ಇಳೆಯಲಿ' ಸಿನಿಮಾಗಳ ಚಿತ್ರೀಕರಣ ಪೂರ್ಣಗೊಂಡಿದೆ. ಇವೆರಡರಲ್ಲಿ 'ಇಬ್ಬನಿ ತಬ್ಬಿದ..' ನನ್ನ ಚೊಚ್ಚಲ ಚಿತ್ರವಾಗಿ ಬಿಡುಗಡೆಯಾಗಲಿದೆ. ಸಿ.ಆರ್. ಬಾಬಿ ನಿರ್ದೇಶನದ, ರೂಪೇಶ್ ಶೆಟ್ಟಿ ನಟನೆಯ 'ಜಸ್ಟ್ ಮ್ಯಾರೀಡ್' ಚಿತ್ರದ ಚಿತ್ರೀಕರಣ ನಡೆಯುತ್ತಿದೆ. ಸಚಿನ್ ವಾಲಿ ಆ್ಯಕ್ಷನ್, ಕಟ್ ಹೇಳುತ್ತಿರುವ, ನಿರೂಪ್ ಭಂಡಾರಿ ನಟನೆಯ ಹೊಸ ಸಿನಿಮಾದಲ್ಲಿ ನಾನು ನಟಿಸುತ್ತಿದ್ದು, ಇದರ ಚಿತ್ರೀಕರಣ ಆರಂಭವಾಗಿದೆ. ಹೀಗೆ ಎರಡು ಹೊಸ ಸಿನಿಮಾಗಳಲ್ಲಿ ತೊಡಗಿಸಿಕೊಂಡಿದ್ದೇನೆ.

ನಾನು ಇಲ್ಲಿಯವರೆಗೂ ಒಂದೂ ಸಿನಿಮಾಗೂ ಆಡಿಷನ್ ನೀಡಿಲ್ಲ. ಎಲ್ಲವೂ ನೇರವಾಗಿ ಬಂದ ಅವಕಾಶಗಳೇ. ಹಲವು ಅವಕಾಶಗಳು ಬಂದರೂ ನಾನು ಎಲ್ಲವನ್ನೂ ಒಪ್ಪಿಲ್ಲ. ಬಂದಂತಹ ಪಾತ್ರಕ್ಕೆ ನ್ಯಾಯ ನೀಡಬಲ್ಲನೇ ಎನ್ನುವ ಪ್ರಶ್ನೆಯನ್ನು ಹಾಕಿಕೊಂಡು, ಸಿನಿಮಾಗಳನ್ನು ಆಯ್ಕೆ ಮಾಡಿಕೊಂಡಿದ್ದೇನೆ. ಕೆಲವೊಮ್ಮೆ ಜೀವನ ಎಲ್ಲಿಗೆ ಕರೆದುಕೊಂಡು ಹೋಗುತ್ತಿದೆ ಎನ್ನುವ ಯೋಚನೆ ಬರುತ್ತದೆ. ಯಾವುದೇ ಫಲಿತಾಂಶಗಳು ಇಲ್ಲದೆ ನಾಲ್ಕು ಸಿನಿಮಾಗಳಲ್ಲಿ ನಟಿಸಿದ್ದೇನೆ. ಹೀಗಾಗಿ ಎರಡು ವಿಷಯಗಳಲ್ಲಿ ನನಗೆ ಆತಂಕವಿದೆ– ಸಿನಿಮಾಗಳ ಸಂಖ್ಯೆ ಮತ್ತು ಪಾತ್ರದ ಗುಣಮಟ್ಟ. ಒಂದು ಗುಂಪು, ಇಂಡಸ್ಟ್ರಿಯಲ್ಲಿ ಎಷ್ಟು ಕಾಲ ಇರುತ್ತೀಯೋ ಅಷ್ಟೂ ಸಿನಿಮಾಗಳು ಬರುತ್ತವೆ ಎನ್ನುತ್ತದೆ. ಇನ್ನೊಂದು ಗುಂಪು, ಎಷ್ಟು ವರ್ಷಗಳಾದರೂ ತೊಂದರೆ ಇಲ್ಲ, ಆಯ್ಕೆ ಮಾಡಿಕೊಳ್ಳುವಾಗ ಒಳ್ಳೆಯ ಪಾತ್ರಗಳನ್ನೇ ಆಯ್ಕೆ ಮಾಡಿಕೋ ಎನ್ನುತ್ತದೆ. ಇದು ಒಂದು ರೀತಿಯ ಗೊಂದಲ ಮೂಡಿಸುತ್ತದೆ.

- **'ಇಬ್ಬನಿ ತಬ್ಬಿದ..' ಸಿನಿಮಾದ ಅನುಭವ...**

ಈ ಸಿನಿಮಾ ಬಗ್ಗೆ ನನಗೆ ಹೆಚ್ಚಿನ ನಿರೀಕ್ಷೆ ಇದೆ. 'ಅಬಜಬದಬ' ನಾನು ನಟಿಸಿದ ಮೊದಲ ಸಿನಿಮಾವಾದರೂ, 'ಇಬ್ಬನಿ ತಬ್ಬಿದ..' ತಂಡದೊಂದಿಗೆ ನಾನು ಕಲಿತ ಪಾಠ ಅನೇಕ. ಹೊಸ ಮಗು ಶಾಲೆಗೆ ಸೇರಿದ ಅನುಭವ. ನಟನೆಯ ಭಿನ್ನ ಆಯಾಮಗಳನ್ನು ಇಲ್ಲಿ ಕಲಿತೆ. ಇಲ್ಲಿ ಕಲಿತ ಪಾಠವನ್ನು ನಾನು ನನ್ನ ಮುಂದಿನ ಸಿನಿಮಾಗಳಿಗೆ ಅಳವಡಿಸಿಕೊಳ್ಳುತ್ತಾ ಬಂದಿದ್ದೇನೆ. ಈ ಸಿನಿಮಾದಲ್ಲಿ ಒಬ್ಬರ ಕನಸಿಗೆ ಇನ್ನೊಬ್ಬರ ಕನಸು ಹೆಗಲಾಗಿದೆ. ನಿರ್ದೇಶಕರಾದ ಚಂದ್ರಜಿತ್, ನನಗೆ, ಚಿತ್ರದ ತಾಂತ್ರಿಕ ವರ್ಗದ ಹಲವರಿಗೆ ಇದು ಚೊಚ್ಚಲ ಸಿನಿಮಾ. ಎಲ್ಲರೂ ಸೇರಿ ಒಂದೊಳ್ಳೆ ಸಿನಿಮಾವನ್ನು ತಯಾರಿಸಿದ್ದೇವೆ.

- **'ಜಸ್ಟ್ ಮ್ಯಾರೀಡ್' ಎಲ್ಲಿಯವರೆಗೆ ಬಂತು? ಹೊಸ ಪ್ರಾಜೆಕ್ಟ್..?**

ಈ ಸಿನಿಮಾದ ಶೇ 60ರಷ್ಟು ಚಿತ್ರೀಕರಣ ಪೂರ್ಣಗೊಂಡಿದೆ. ಇದೊಂದು ಪಕ್ಕಾ ಫ್ಯಾಮಿಲಿ ಎಂಟರ್‌ಟೈನರ್. ನನ್ನ ಪಾತ್ರದ ಹೆಸರು 'ಸಹನ'. ಒಂದು ರೀತಿ 'ಇಬ್ಬನಿ ತಬ್ಬಿದ..' ಸಿನಿಮಾದ 'ಅನಾಹಿತ' ಪಾತ್ರಕ್ಕೆ ತದ್ವಿರುದ್ಧವಾದ ಪಾತ್ರ. 'ಅನಾಹಿತ'ಗೆ ಸಂಯಮ ಹೆಚ್ಚು. ಜೀವನದಲ್ಲಿ ತಾನು ಏನು ಅಂದುಕೊಳ್ಳುತ್ತಾಳೋ ಅದನ್ನು ಸಾಧಿಸಲು ಯಾವ ಆಪತ್ತನ್ನೂ ಎದುರು ಹಾಕಿಕೊಳ್ಳಲು ಸಿದ್ಧವಿರುವಾಕೆ 'ಸಹನ'.

ಇದರ ಜೊತೆಗೆ ನಿರೂಪ್ ಭಂಡಾರಿ ಅವರ ಜೊತೆಗಿನ ಸಿನಿಮಾದ ಚಿತ್ರೀಕರಣವೂ ನಡೆಯುತ್ತಿದೆ. ಹೊಸ ಪ್ರಾಜೆಕ್ಟ್‌ಗಳನ್ನು ಒಪ್ಪಿಕೊಂಡಿಲ್ಲ. ❖

'ಕೆರೆಬೇಟೆ'ಯಲ್ಲಿ ಮಲೆನಾಡಿನ ಮೀನು!

ನಟ ಡಾಲಿ ಧನಂಜಯ, ನಿರ್ದೇಶಕ ದಿನಕರ್ ತೂಗುದೀಪ ಸೇರಿದಂತೆ ಅಲ್ಲಿದ್ದ ಗಣ್ಯರೆಲ್ಲ ಕೈಯ್ಯಲ್ಲಿ ದೊಡ್ಡ ಮೀನುಗಳನ್ನು ಹಿಡಿದುಕೊಂಡಿದ್ದರು. ಬಲೆ, ಬುಟ್ಟಿ, ಜಾಗಟೆ, ಒರಳುಕಲ್ಲು... ಬೆಂಗಳೂರಿನ ಮಲ್ಲತ್ತಳ್ಳಿ ಕೆರೆ ದಂಡೆ ಒಂದು ರೀತಿ ಮಲೆನಾಡಿನ ಒಂದು ಸಂಸ್ಕೃತಿಯ ಪ್ರತಿರೂಪದಂತಿತ್ತು. ಇದಕ್ಕೆಲ್ಲ ಕಾರಣವಾಗಿದ್ದು 'ಕೆರೆಬೇಟೆ' ಚಿತ್ರದ ಟೀಸರ್ ಬಿಡುಗಡೆ ಸಮಾರಂಭ.

ಮಲೆನಾಡಿನ ರೈತಾಪಿ ಜನರೆಲ್ಲ ವರ್ಷದಲ್ಲೊಮ್ಮೆ ಊರಿನ ಕೆರೆಗೆ ಹೋಗಿ ಮೀನು ಹಿಡಿಯುವ ವಾಡಿಕೆಗೆ 'ಕೆರೆಬೇಟೆ' ಎನ್ನುತ್ತಾರೆ. ವಿಶಿಷ್ಟ ಆಚರಣೆಯನ್ನೇ ತೆರೆಯ ಮೇಲೆ ತರಲು ಹೊರಟಿದ್ದಾರೆ ನಟ, ನಿರ್ಮಾಪಕ ಗೌರಿಶಂಕರ್.

'ನಮ್ಮಲ್ಲಿ ಈ ರೀತಿ ಆಚರಣೆ ಇದೆ ಎಂದು ಬಯಲುನಾಡಿನಲ್ಲಿ ಬೆಳೆದ ನನಗೆ ಗೊತ್ತಿರಲಿಲ್ಲ. ನಮ್ಮ ನಾಡಿನ ಇಂಥ ವೈಶಿಷ್ಟ್ಯಗಳನ್ನು ಪರಿಚಯಿಸುವ ಸಿನಿಮಾಗಳು ರಾಜ್ಯದ ಎಲ್ಲ ಭಾಗಗಳಿಂದ ಬರಬೇಕು. ಟೀಸರ್ ತುಂಬ ಭರವಸೆ ಮೂಡಿಸುತ್ತಿದೆ' ಎಂದು ತಂಡಕ್ಕೆ ಶುಭ ಹಾರೈಸಿದರು ನಟ ಡಾಲಿ ಧನಂಜಯ.

ಈ ಹಿಂದೆ 'ರಾಜಹಂಸ' ಸಿನಿಮಾ ಮಾಡಿದ್ದ ಗೌರಿಶಂಕರ್ ಚಿತ್ರದ ನಾಯಕ. ಬಿಂದು ಶಿವರಾಂ ಚಿತ್ರದ ನಾಯಕಿ. 'ಜೆಸ್ಸಿ' ಸೇರಿದಂತೆ ಸಾಕಷ್ಟು ಸಿನಿಮಾಗಳ ನಿರ್ದೇಶನ ಮಾಡಿದವರ ತಂಡದಲ್ಲಿ ಕೆಲಸ ಮಾಡಿರುವ ರಾಜ್‌ಗುರು ಈ ಚಿತ್ರಕ್ಕೆ ಆ್ಯಕ್ಷನ್ ಕಟ್ ಹೇಳಿದ್ದಾರೆ. ಗಗನ್ ಬದೆರಿಯಾ ಸಂಗೀತ, ಕೀರ್ತನ್ ಪೂಜಾರಿ ಛಾಯಾಗ್ರಹಣ ಚಿತ್ರಕ್ಕಿದೆ.

'ಸಾಗರ, ಸೊರಬ, ತೀರ್ಥಹಳ್ಳಿ ಸುತ್ತಮುತ್ತ 70 ದಿನಗಳ ಕಾಲ ಚಿತ್ರೀಕರಣ ನಡೆಸಿದ್ದೇವೆ. ನಾನು ಮಲೆನಾಡಿನವನು. ಹೀಗಾಗಿ ನಮ್ಮೂರಿನ ಸೊಬಗನ್ನು ತೆರೆಯ ಮೇಲೆ ತರುವ ಕನಸು ಬಹಳ ಕಾಲದಿಂದ ಇತ್ತು. ನಿರ್ಮಾಪಕರಾದ ಗೌರಿಶಂಕರ್ ಹಾಗೂ ಜೈಶಂಕರ್ ಪಟೇಲ್ ನನ್ನ ಈ ಕನಸಿಗೆ ಸಾಥ್ ನೀಡಿದ್ದಾರೆ. ಚಿತ್ರದ ಪೋಸ್ಟ್ ಪ್ರೊಡಕ್ಷನ್ ಕೆಲಸಗಳು ನಡೆಯುತ್ತಿವೆ' ಎಂದರು ನಿರ್ದೇಶಕ ರಾಜ್‌ಗುರು. ❖

ಆನ್‌ಲೈನ್ ಮದುವೆಯೂ ಬಂಟಿ ಲವ್‌ಸ್ಟೋರಿಯೂ...

ಇಂದು ತೆರೆಗೆ

ಈ ವರ್ಷದ ಮೊದಲ ಶುಕ್ರವಾರ(ಜ.5) ಹೊಸಬರ ಚಿತ್ರಗಳಷ್ಟೇ ಚಂದನವನದ ತೆರೆಗಳಲ್ಲಿ ಬಿಡುಗಡೆಯಾಗುತ್ತಿವೆ.

'ಆನ್‌ಲೈನ್ ಮದುವೆ, ಆಫ್‌ಲೈನ್ ಶೋಭನ': ಅಪ್ಸರ ಮೂವೀಸ್ ಲಾಂಛನದಲ್ಲಿ ವೇಂಪಲ್ಲಿ ಬಾವಾಜಿ ನಿರ್ದೇಶನದ ಹಾಸ್ಯಪ್ರಧಾನ ಸಿನಿಮಾ ಇದಾಗಿದೆ. ಚಿತ್ರದ ಕಥೆ, ಚಿತ್ರಕಥೆ ಹಾಗೂ ಸಂಭಾಷಣೆಗಳನ್ನು ನಿರ್ದೇಶಕ ಬಾವಾಜಿ ಅವರೇ ಬರೆದಿದ್ದಾರೆ. ಹಾಸ್ಯ ಕಥಾಹಂದರದ ಈ ಸಿನಿಮಾದಲ್ಲಿ ಜಗ್ಗಪ್ಪ, ಸುಶ್ಮಿತ, ಸೀರುಂಡೆ ರಘು, ಗಜೇಂದ್ರ, ರಾಘವಿ ಸೇರಿದಂತೆ ಗಿಚ್ಚಿ ಗಿಲಿ ಗಿಲಿ, ಮಜಾಭಾರತ, ಕಾಮಿಡಿ ಕಿಲಾಡಿಗಳು ಕಾರ್ಯಕ್ರಮದ ಅನೇಕ ಕಲಾವಿದರು ನಟಿಸಿದ್ದಾರೆ. ಯಶಸ್ವಿನಿ, ಚಂದನ, ಶರಣ್ಯರೆಡ್ಡಿ ಮುಂತಾದವರು ಈ ಚಿತ್ರದ ಪ್ರಮುಖ ಪಾತ್ರಗಳಲ್ಲಿ ಅಭಿನಯಿಸಿದ್ದಾರೆ. ಬಾಲು ಛಾಯಾಚಿತ್ರಗ್ರಹಣ, ಅಲೆಕ್ಸ್ ಕಲಾವಿದರ ಸಂಗೀತ, ಅರುಣ ಪ್ರಸಾದ್, ವೇಂಪಲ್ಲಿ ಬಾಲಾಜಿ ಸಾಹಿತ್ಯ, ಗಣೇಶ್, ಸದಾಶಿವ ಅವರ ನೃತ್ಯ ನಿರ್ದೇಶನ ಈ ಚಿತ್ರಕ್ಕಿದೆ.

'ಒಂಟಿ ಬಂಟಿ ಲವ್‌ಸ್ಟೋರಿ': ಯತೀಶ್ ಪನ್ನಸಮುದ್ರ ನಿರ್ದೇಶಿಸಿ, ನಾಯಕನಾಗಿಯೂ ನಟಿಸಿರುವ ಸಿನಿಮಾ ಇದಾಗಿದೆ. ಹಾಸನ ಜಿಲ್ಲೆ ಅರಸೀಕೆರೆಯ ಯತೀಶ್, ಎಂಜಿನಿಯರಿಂಗ್ ಪದವೀಧರ. ಸಾಫ್ಟ್‌ವೇರ್ ಕಂಪನಿಯಲ್ಲಿ ದುಡಿದು ಇದೀಗ ಬೆಳ್ಳಿತೆರೆಗೆ ಬರುತ್ತಿದ್ದಾರೆ. ಜೀವನದಲ್ಲಿ ಯಾವುದು ಮುಖ್ಯ ಎಂದು ತಿಳಿಯದೆ ಪರದಾಡುವ ಯುವಜನರ ಮಾನಸಿಕ ತೊಳಲಾಟವನ್ನೇ ಕಥೆಯಾಗಿಟ್ಟುಕೊಂಡು ಯತೀಶ್ ಈ ಕಥೆ ಹೆಣೆದಿದ್ದಾರೆ. ಚಿತ್ರದಲ್ಲಿ ಶ್ವೇತಾ ಭಟ್ ಮತ್ತು ಶ್ರುತಿ ಚಂದ್ರಶೇಖರ್ ನಾಯಕಿಯಾಗಿದ್ದಾರೆ. ❖

'ಆನ್‌ಲೈನ್ ಮದುವೆ..' ಪೋಸ್ಟರ್

ಸುಭಾಷಿತ

ನಮಗೆ ತಿಳಿದಿರುವುದು ಒಂದು ಹನಿಯಷ್ಟು ಮಾತ್ರ;
ತಿಳಿಯದಿರುವುದು ಸಮುದ್ರದಷ್ಟು.

-ಐಸಾಕ್ ನ್ಯೂಟನ್

ಜಿಎಸ್‌ಟಿ ಸಂಗ್ರಹ ಏರಿಕೆ ಮಾರುಕಟ್ಟೆ ಮೇಲಿನ ವಿಶ್ವಾಸಕ್ಕೆ ಬಲ

ಡಿಸೆಂಬರ್ ತಿಂಗಳಲ್ಲಿ ದೇಶದಲ್ಲಿ ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಮೂಲಕ ಆಗಿರುವ ವರಮಾನ ಸಂಗ್ರಹವು ₹1.65 ಲಕ್ಷ ಕೋಟಿ. ಅಂದರೆ 2023–24ನೇ ಹಣಕಾಸು ವರ್ಷದಲ್ಲಿ ಸತತ ಏಳನೆಯ ತಿಂಗಳಿನಲ್ಲಿಯೂ ಜಿಎಸ್‌ಟಿ ವರಮಾನ ಸಂಗ್ರಹವು ₹1.60 ಲಕ್ಷ ಕೋಟಿಗಿಂತ ಹೆಚ್ಚಿನ ಮಟ್ಟದಲ್ಲಿ ಉಳಿದುಕೊಂಡಂತೆ ಆಗಿದೆ. 2023ರ ಡಿಸೆಂಬರ್‌ನಲ್ಲಿ ಆಗಿರುವ ಜಿಎಸ್‌ಟಿ ವರಮಾನ ಸಂಗ್ರಹವು 2022ರ ಡಿಸೆಂಬರ್‌ನಲ್ಲಿ ಆಗಿದ್ದ ವರಮಾನ ಸಂಗ್ರಹದ ಮೊತ್ತಕ್ಕೆ ಹೋಲಿಸಿದರೆ ಶೇಕಡ 10.3ರಷ್ಟು ಹೆಚ್ಚು. ಅಲ್ಲದೆ, ಇಲ್ಲಿ ಗಮನಿಸಬೇಕಾದ ಇನ್ನೂ ಒಂದು ಅಂಶ ಇದೆ. ಸೇವೆಗಳ ಆಮದು ಸೇರಿದಂತೆ ದೇಶಿ ವಹಿವಾಟಿನಿಂದ 2023ರ ಡಿಸೆಂಬರ್‌ನಲ್ಲಿ ಬಂದಿರುವ ವರಮಾನದ ಮೊತ್ತವು 2022ರ ಡಿಸೆಂಬರ್‌ನಲ್ಲಿ ಇದೇ ವಹಿವಾಟುಗಳಿಂದ ಬಂದ ವರಮಾನದ ಮೊತ್ತಕ್ಕಿಂತ ಶೇಕಡ 13ರಷ್ಟು ಹೆಚ್ಚಾಗಿದೆ. ದೇಶದ ಅತ್ಯಂತ ಮಹತ್ವದ ತೆರಿಗೆ ವ್ಯವಸ್ಥೆಯಾಗಿರುವ ಜಿಎಸ್‌ಟಿ ಮೂಲಕ ಸರ್ಕಾರಗಳ ಬೊಕ್ಕಸಕ್ಕೆ ಬರುತ್ತಿರುವ ವರಮಾನವು ಜಾಗತಿಕ ಅರ್ಥವ್ಯವಸ್ಥೆಯಲ್ಲಿನ ಸವಾಲುಗಳು ಹಾಗೂ ಮಧ್ಯಪ್ರಾಚ್ಯ ಸೇರಿದಂತೆ ಜಗತ್ತಿನ ಕೆಲವು ಮಾರುಕಟ್ಟೆಗಳಲ್ಲಿನ ಬಿಕ್ಕಟ್ಟಿನ ಪರಿಸ್ಥಿತಿಯ ನಡುವೆಯೂ ನಿರಂತರವಾಗಿ ಹೆಚ್ಚಾಗುತ್ತ ಸಾಗಿರುವುದು ದೇಶಿ ಮಾರುಕಟ್ಟೆಯ ಶಕ್ತಿಯ ಬಗ್ಗೆ ವಿಶ್ವಾಸ ಹೆಚ್ಚು ಮಾಡುವಂಥದ್ದು ಎಂಬುದರಲ್ಲಿ ಎರಡು ಮಾತಿಲ್ಲ. ಆದರೆ, ಡಿಸೆಂಬರ್‌ನಲ್ಲಿ ಸಂಗ್ರಹ ಆಗಿರುವ ವರಮಾನವು ಅಕ್ಟೋಬರ್ ಹಾಗೂ ನವೆಂಬರ್ ತಿಂಗಳ ವರಮಾನ ಸಂಗ್ರಹಕ್ಕೆ ಹೋಲಿಸಿದರೆ ಕಡಿಮೆ. ಜಿಎಸ್‌ಟಿ ವ್ಯವಸ್ಥೆಯ ಅಡಿಯಲ್ಲಿ ಅಕ್ಟೋಬರ್ ತಿಂಗಳಲ್ಲಿ ₹1.72 ಲಕ್ಷ ಕೋಟಿ ಹಾಗೂ ನವೆಂಬರ್ ತಿಂಗಳಲ್ಲಿ ₹1.67 ಲಕ್ಷ ಕೋಟಿ ವರಮಾನ ಸಂಗ್ರಹ ಆಗಿತ್ತು.



ಜಿಎಸ್‌ಟಿ ವರಮಾನ ಸಂಗ್ರಹ ಸ್ಥಿರವಾಗಿರುವುದು ನೀತಿ ನಿರೂಪಕರಿಗೆ ವರಮಾನ ನಿರೀಕ್ಷೆ ಹಾಗೂ ಬಂಡವಾಳ ವೆಚ್ಚದ ಅಂದಾಜನ್ನು ಹೆಚ್ಚಿಸಲು ಅನುವು ಮಾಡಿಕೊಡಲಿದೆ

ದೇಶದಲ್ಲಿ ಅಕ್ಟೋಬರ್ ಮತ್ತು ನವೆಂಬರ್ ತಿಂಗಳಿಗೆ ಮಾರುಕಟ್ಟೆ ಚಟುವಟಿಕೆಗಳ ದೃಷ್ಟಿಯಿಂದ ಬಹಳ ಮಹತ್ವ ಇದೆ. ಏಕೆಂದರೆ ಈ ಎರಡು ತಿಂಗಳುಗಳಲ್ಲಿ ಹಬ್ಬಗಳ ಸಾಲು ಇರುತ್ತದೆ. ವಾಹನ, ಬಟ್ಟೆ, ಚಿನ್ನ, ಮನೆ ಖರೀದಿ ಚಟುವಟಿಕೆಗಳು ಈ ತಿಂಗಳುಗಳಲ್ಲಿ ಸಹಜವಾಗಿಯೇ ಹೆಚ್ಚಿರುತ್ತವೆ. ಈ ಕಾರಣದಿಂದಾಗಿಯೂ ಅಕ್ಟೋಬರ್ ಮತ್ತು ನವೆಂಬರ್‌ನಲ್ಲಿ ಜಿಎಸ್‌ಟಿ ವರಮಾನ ಸಂಗ್ರಹವು ಹೆಚ್ಚಾಗಿದ್ದಿರಬಹುದು. ನವೆಂಬರ್ ಕೊನೆಯ ವಾರದಲ್ಲಿ ಹಾಗೂ ಕ್ರಿಸ್ಮಸ್‌ವರೆಗೆ ಡಿಸೆಂಬರ್ ತಿಂಗಳಲ್ಲಿ ಪ್ರಮುಖ ಹಬ್ಬಗಳು ಯಾವುವೂ ಇಲ್ಲವಾಗಿದ್ದ ಕಾರಣದಿಂದಾಗಿ, ಡಿಸೆಂಬರ್ ತಿಂಗಳ ಜಿಎಸ್‌ಟಿ ವರಮಾನ ಸಂಗ್ರಹದಲ್ಲಿ ತುಸುಮಟ್ಟಿಗೆ ಇಳಿಕೆ ದಾಖಲಾಗಿರಬಹುದು. 2023ರ ಏಪ್ರಿಲ್‌ನಿಂದ ಡಿಸೆಂಬರ್‌ವರೆಗಿನ ಅವಧಿಯಲ್ಲಿ ಒಟ್ಟು ಜಿಎಸ್‌ಟಿ ವರಮಾನ ಸಂಗ್ರಹವು ಶೇಕಡ 12ರಷ್ಟು ಹೆಚ್ಚಳ ಕಂಡಿದೆ. ಈ ಅವಧಿಯಲ್ಲಿ ಜಿಎಸ್‌ಟಿ ಮೂಲಕ ಒಟ್ಟು ₹14.97 ಲಕ್ಷ ಕೋಟಿ ವರಮಾನ ಸಂಗ್ರಹ ಆಗಿದೆ. ಹಿಂದಿನ ಆರ್ಥಿಕ ವರ್ಷದ ಮೊದಲ ಒಂಬತ್ತು ತಿಂಗಳ ಅವಧಿಯಲ್ಲಿ (2022ರ ಏಪ್ರಿಲ್‌ನಿಂದ ಡಿಸೆಂಬರ್‌ವರೆಗೆ) ಆಗಿದ್ದ ವರಮಾನ ಸಂಗ್ರಹದ ಮೊತ್ತ ₹13.40 ಲಕ್ಷ ಕೋಟಿ. ಈ ಹೆಚ್ಚಳವು ಜಿಎಸ್‌ಟಿ ವ್ಯವಸ್ಥೆಯು ಒಟ್ಟಾರೆಯಾಗಿ ವರ್ಷದಿಂದ ವರ್ಷಕ್ಕೆ ಹೆಚ್ಚು ಪಕ್ವವಾಗುತ್ತಿರುವುದನ್ನು ಸೂಚಿಸುತ್ತಿದೆ ಎನ್ನುವ ವಾದ ಇದೆ. ಆದರೆ, ಜಿಡಿಪಿ ಬೆಳವಣಿಗೆ ದರವು ಶೇಕಡ 6.5ರಷ್ಟು ಇರುವಾಗ, ಚಿಲ್ಲರೆ ಹಣದುಬ್ಬರ ಪ್ರಮಾಣವು ಸರಾಸರಿ ಶೇ 5ರಷ್ಟು ಇರುವಾಗ ವರಮಾನ ಸಂಗ್ರಹದಲ್ಲಿ ಶೇ 12ರಷ್ಟು ಏರಿಕೆಯು ಭಾರಿ ಪ್ರಮಾಣದ್ದು ಎನ್ನಲಾಗದು ಎಂಬ ಇನ್ನೊಂದು ವಾದವೂ ಇದೆ.

ಅದೇನೇ ಇರಲಿ, ಕೇಂದ್ರ ಸರ್ಕಾರವು ತಿಂಗಳಿಗೆ ₹1.59 ಲಕ್ಷ ಕೋಟಿ ವರಮಾನವು ಜಿಎಸ್‌ಟಿ ಮೂಲಕ ಸಿಗಬಹುದು ಎಂಬ ಅಂದಾಜನ್ನು ಬಜೆಟ್‌ನಲ್ಲಿ ಮಾಡಿತ್ತು. ಈಗಿನ ವರಮಾನ ಸಂಗ್ರಹವು ಆ ಅಂದಾಜನ್ನು ಮೀರಿ ನಿಂತಿದೆ ಎಂಬುದಂತೂ ನಿಜ. ಲೋಕಸಭಾ ಚುನಾವಣೆಯು ಹತ್ತಿರವಾಗುತ್ತಿರುವ ಈ ಹೊತ್ತಿನಲ್ಲಿ, ಜಿಎಸ್‌ಟಿ ವರಮಾನ ಸಂಗ್ರಹದಲ್ಲಿನ ಆಶಾದಾಯಕ ಹೆಚ್ಚಳವು ಕೇಂದ್ರ ಸರ್ಕಾರಕ್ಕೆ ಬಜೆಟ್ ಮಂಡನೆ ಸಂದರ್ಭದಲ್ಲಿ ತುಸು ಹೆಚ್ಚಿನ ಪ್ರಮಾಣದಲ್ಲಿ ವೆಚ್ಚ ಮಾಡಲು ಹಣಕಾಸಿನ ಆಯ್ಕೆಗಳನ್ನು ಮುಕ್ತವಾಗಿಸಲಿದೆ ಎಂಬ ನಿರೀಕ್ಷೆ ಹೊಂದಲು ಅಡ್ಡಿಯಿಲ್ಲ. ಜಿಎಸ್‌ಟಿ ವರಮಾನ ಸಂಗ್ರಹವು ತಿಂಗಳಿಗೆ ಸರಾಸರಿ ₹1.60 ಲಕ್ಷ ಕೋಟಿಗಿಂತ ಹೆಚ್ಚಿನ ಮಟ್ಟದಲ್ಲಿ ಸ್ಥಿರವಾಗಿರುವುದು ನೀತಿ ನಿರೂಪಕರಿಗೆ ವರಮಾನ ನಿರೀಕ್ಷೆ ಹಾಗೂ ಬಂಡವಾಳ ವೆಚ್ಚದ ಅಂದಾಜನ್ನು ಹೆಚ್ಚಿಸಲು ಅನುವು ಮಾಡಿಕೊಡುವುದು ಖಚಿತ.

ದಿನದ ಟ್ವೀಟ್

ಲಕ್ಷ್ಯ ಹರಿಯಲಿ

ಲಕ್ಷದ್ವೀಪವು ಬಹುಶಃ ದೇಶದಲ್ಲಿ ಅತ್ಯಂತ ಕಡಿಮೆ ಗಮನ ಸೆಳೆದಿರುವ ಪ್ರವಾಸಿ ತಾಣ. ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳದ್ದೂ ಇದೇ ಕತೆ. ಪ್ರವಾಸೋದ್ಯಮವನ್ನು ಸೂಕ್ತ ರೀತಿಯಲ್ಲಿ ಅಭಿವೃದ್ಧಿಪಡಿಸಿದರೆ- ಬಹುಶಃ ಮಾಲ್ದೀವ್ಸ್ ಮಾದರಿಯಲ್ಲಿ- ಎರಡಕ್ಕೂ ಅದ್ಭುತ ತಾಣಗಳಾಗುವ ಸಾಮರ್ಥ್ಯ ಇದೆ.

ವಿಕ್ರಮ್ ಚಂದ್ರ, ಪತ್ರಕರ್ತ

ಕಿಡಿನುಡಿ

ಪೊಲೀಸರು ಕೇಳಿದರಷ್ಟೇ ಮಾಹಿತಿ ನೀಡುವುದಾಗಿ ಹೇಳಿದರೆ, ಅವರು ಯಾರನ್ನು ರಕ್ಷಿಸಲು ಪ್ರಯತ್ನಿಸುತ್ತಿದ್ದಾರೆ ಎಂಬ ಪ್ರಶ್ನೆ ಉದ್ಭವಿಸುತ್ತದೆ. ಪ್ರಜೆಗಳ ರಕ್ಷಣೆ ಮುಖ್ಯವೇ ಅಥವಾ ವಿಧ್ವಂಸಕ ಕೃತ್ಯ ನಡೆಸುವವರ ರಕ್ಷಣೆಗೆ ಆದ್ಯತೆಯೇ ಎಂಬ ಅನುಮಾನ ಕಾಡುತ್ತದೆ.

(ಗೋಧ್ರಾ ಮಾದರಿ ಘಟನೆ ಸಂಭವಿಸಬಹುದು ಎಂಬ, ವಿಧಾನ ಪರಿಷತ್ ಸದಸ್ಯ ಬಿ.ಕೆ. ಹರಿಪ್ರಸಾದ್ ಅವರ ಹೇಳಿಕೆಗೆ ಪ್ರತಿಕ್ರಿಯೆ)

ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ, ಪೇಜಾವರ ಮಠ, ಉಡುಪಿ

25 ವರ್ಷಗಳ ಹಿಂದೆ

ಮಂಗಳವಾರ, 5-1-1999

• ಮಾಮೂಲು ಸ್ಥಿತಿಗೆ ಮಂಗಳೂರು, ಸುರತ್ಕಲ್

ಮಂಗಳೂರು, ಜ. 4– ಕಳೆದ ಆರು ದಿನಗಳಿಂದ ಗಲಭೆಪೀಡಿತವಾಗಿರುವ ಸುರತ್ಕಲ್ ಮತ್ತು ಮಂಗಳೂರು ನಗರದಲ್ಲಿ ಇಂದು ಯಾವುದೇ ಅಹಿತಕರ ಘಟನೆ ನಡೆದಿಲ್ಲ. ಬಂಟ್ವಾಳ ಪರಿಸರದಲ್ಲಿ ಕೆಲವು ಕಡೆ ಹಿಂಸಾಚಾರ ನಡೆದಿರುವುದು ಬಿಟ್ಟರೆ ಒಟ್ಟಾರೆ ಪರಿಸ್ಥಿತಿ ನಿಯಂತ್ರಣದಲ್ಲಿದೆ. ಎಲ್ಲ ಕಡೆಗಳಲ್ಲಿ ಪೊಲೀಸ್ ಬಂದೋಬಸ್ತನ್ನು ಬಿಗಿಗೊಳಿಸಲಾಗಿದೆ.

ಸುರತ್ಕಲ್ ಪ್ರದೇಶದ ಕಾಟಿಪಳ್ಳ, ಕೃಷ್ಣಾಪುರದಲ್ಲಿ ನಿನ್ನೆ ಕರ್ಫ್ಯೂ ಸಡಿಲಿಸಿದಾಗ ಗುಂಪು ಘರ್ಷಣೆಗಳಾಗಿ ಇರಿತದ ಪ್ರಕರಣ ನಡೆದಿರುವುದರಿಂದ, ಇಂದು ಬೆಳಿಗ್ಗೆ ಅವೆರಡೂ ಸ್ಥಳಗಳಲ್ಲಿ ಕರ್ಫ್ಯೂ ಸಡಿಲಿಸಲಿಲ್ಲ. ಆದರೆ ಸುರತ್ಕಲ್‌ನ ಉಳಿದ ಕಡೆಗಳಲ್ಲಿ ನಾಲ್ಕು ಗಂಟೆಗಳ ಕಾಲ ಮಾತ್ರ ಕರ್ಫ್ಯೂ ಸಡಿಲಿಸಲಾಗಿದ್ದು ಯಾವುದೇ ಘಟನೆ ನಡೆದಿಲ್ಲ.

• ಸರ್ಕಾರ: ಬಿಜೆಪಿ ನಿಯಂತ್ರಣ ಇಲ್ಲ ಕುಶಭಾವು ಠಾಕ್ರೆ

ಬೆಂಗಳೂರು, ಜ. 4– ಬಿಜೆಪಿ ನೇತೃತ್ವದ ಸರ್ಕಾರದ ಕಾರ್ಯವೈಖರಿಯನ್ನು 'ಹಿಂದಿನ ಸೀಟಿನಲ್ಲಿ ಕುಳಿತು ನಿಯಂತ್ರಿಸುವ ಕೆಲಸವನ್ನು' ತಮ್ಮ ಪಕ್ಷ ಮಾಡುತ್ತಿಲ್ಲವೆಂದು ಬಿಜೆಪಿ ಅಧ್ಯಕ್ಷ ಕುಶಭಾವು ಠಾಕ್ರೆ ಇಂದು ಇಲ್ಲಿ ಸ್ಪಷ್ಟಪಡಿಸಿದರು.

ಅದೇ ವೇಳೆ, ಅಟಲ್ ಬಿಹಾರಿ ವಾಜಪೇಯಿ ಅವರ ನೇತೃತ್ವದ ಕೇಂದ್ರ ಸರ್ಕಾರ ಹಾಗೂ ಪಕ್ಷದ ನಡುವೆ ಯಾವುದೇ ರೀತಿಯ ಭಿನ್ನಾಭಿಪ್ರಾಯವಿಲ್ಲ ಎಂದೂ ಅವರು ಹೇಳಿದರು.

ಇಲ್ಲಿ ಮುಕ್ತಾಯಗೊಂಡ ಎರಡು ದಿನಗಳ ಪಕ್ಷದ ರಾಷ್ಟ್ರೀಯ ಕಾರ್ಯಕಾರಿಣಿಯ ಸಮಾವೇಶದ ನಂತರ ಇಂದು ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿದರು.

50 ವರ್ಷಗಳ ಹಿಂದೆ

ಶನಿವಾರ, 5-1-1974

• ಒಡೆದ ನಂತರವೂ ಕಾಂಗ್ರೆಸ್ ಜಡತ್ವ ಹೋಗಲಿಲ್ಲ

ನವದೆಹಲಿ, ಜ. 4– ಕಾಂಗ್ರೆಸ್ 1969ರಲ್ಲಿ ಒಡೆದು ಎರಡು ಹೋಳಾಯಿತು. ಆನಂತರ ಕಾಂಗ್ರೆಸ್ ಪಕ್ಷದ ಕಾರ್ಯನಿರ್ವಹಣೆ ಪ್ರಧಾನಮಂತ್ರಿ ಇಂದಿರಾ ಗಾಂಧಿಯವರಿಗೆ ನಿರಾಶೆಯುಂಟು ಮಾಡಿದೆ.

ಉಮಾ ವಾಸುದೇವ್ ಅವರಿಗೆ ಕಳೆದ ವರ್ಷ ಸೆ. 25ರಂದು ನೀಡಿದ ಸಂದರ್ಶನದಲ್ಲಿ ಇಂದಿರಾ ಗಾಂಧಿಯವರು ಈ ನಿರಾಶೆಯನ್ನು ವ್ಯಕ್ತಪಡಿಸಿದ್ದಾರೆ. ಈ ಸಂದರ್ಶನವನ್ನು ಉಮಾ ವಾಸುದೇವ್ ಅವರು ರಚಿಸಿರುವ ಇಂದಿರಾ ಗಾಂಧಿಯವರ ಜೀವನಚರಿತ್ರೆ ಪುಸ್ತಕದ ಕೊನೆಯ ಅಧ್ಯಾಯವಾಗಿ ಪ್ರಕಟಿಸಲಾಗಿದೆ.

ಕಾಂಗ್ರೆಸ್ ಪಕ್ಷ ಇನ್ನೂ ಸತ್ವರಹಿತವಾಗಿಯೇ ಕಾರ್ಯನಿರ್ವಹಿಸುತ್ತಿದೆ, ಅದರ ಜಡತ್ವ ಹೋಗಿಲ್ಲ ಎಂದು ಅವರು ತಿಳಿಸಿದ್ದಾರೆ.

• ಸಣ್ಣ ಪ್ರಮಾಣದ ಉದ್ಯಮಕ್ಕೆ ಪರಿಣಾಮಕಾರಿ ನೆರವು ನೀಡುವ ಕ್ರಮಕ್ಕೆ ಹೊಸ ಸ್ವರೂಪ

ಬೆಂಗಳೂರು, ಜ. 4– ರಾಜ್ಯದ ಸಣ್ಣ ಪ್ರಮಾಣದ ಉದ್ಯಮಗಳಿಗೆ ಹೆಚ್ಚು ಪರಿಣಾಮಕಾರಿಯಾಗಿ ನೆರವಾಗುವ ರೀತಿಯಲ್ಲಿ ಕರ್ನಾಟಕ ಸಣ್ಣ ಕೈಗಾರಿಕೆಗಳ ಕಾರ್ಪೊರೇಷನ್ನಿನ ಹೊಣೆಗಾರಿಕೆ ಮತ್ತು ಕಾರ್ಯಕ್ರಮಗಳನ್ನು ಪುನರ್ ರೂಪಿಸಲಾಗುತ್ತಿದೆ.

ಈ ಬಣ್ಣಗಳ ನಡುವೆ ಹರಡಿರುವ ಛಾಯೆಗಳನ್ನು ನೋಡುವ ಕಣ್ಣು ಬೇಕಾಗಿದೆ

ಕಪ್ಪು– ಬಿಳುಪಿನ ನಡುವೆ...

ವಿಶ್ಲೇಷಣೆ

ಚಿದಾನಂದ ಸಾಲಿ

'ನೀನೊಂದು ಜಿರಲೆಯನ್ನು ಕೊಂದರೆ ಹೀರೊ, ಚಿಟ್ಟೆಯನ್ನು ಕೊಂದಾಗ ವಿಲನ್! ಏಕೆಂದರೆ, ಕೊಲೆಗೂ ಒಂದು ಸೌಂದರ್ಯಮೀಮಾಂಸೆಯ ಮಾನದಂಡವಿದೆ' ಎಂದರು ಫ್ರೆಡರಿಕ್ ನೀಶೆ. ಹೀಗೆ ಸ್ಪಷ್ಟವಾಗಿ ಎಲ್ಲವನ್ನೂ ಕಪ್ಪು ಮತ್ತು ಬಿಳುಪಿನ ವರ್ಗೀಕರಣದ ಮೂಲಕ ನೋಡುವ ದೃಷ್ಟಿಕೋನದಲ್ಲೂ ಒಂದು ಮಿತಿಯಿದೆ.

'ನಾಯಕ'ನಲ್ಲಿ ಇರಬಹುದಾದ 'ಪ್ರತಿನಾಯಕ'ನ ಗುಣಗಳನ್ನು ಮತ್ತು 'ಪ್ರತಿನಾಯಕ'ನಲ್ಲಿ ಇರಬಹುದಾದ 'ನಾಯಕ'ನ ಗುಣಗಳನ್ನು ಇದು ನಿರಾಕರಿಸುತ್ತದೆ. ಅದಕ್ಕಿಂತ ಮುಖ್ಯವಾಗಿ ಹೀರೊ-ವಿಲನ್‌ಗಳ ನಡುವೆ ಇರುವ ಹಲವಾರು ಪೋಷಕ ಪಾತ್ರಗಳನ್ನೂ ಜಿರಲೆ-ಚಿಟ್ಟೆಯ ನಡುವೆ ಇರುವ ಅಸಂಖ್ಯ ಜೀವಿಗಳ ಪ್ರಾಣದ ಮಹತ್ವವನ್ನೂ ಇದು ಗೌಣವಾಗಿಸುತ್ತದೆ. ಕಪ್ಪು-ಬಿಳುಪಿನ ನಡುವೆ ಹರಡಿರುವ ಹಲವು ಛಾಯೆಗಳನ್ನು ನೋಡುವ ಕಣ್ಣು ನಮಗಿಂದು ಅಗತ್ಯವಾಗಿದೆ.

ಎಡ-ಬಲದ ಹೆಸರಿನಲ್ಲಿ ದೇಶವು ಸಾಂಸ್ಕೃತಿಕ ಧ್ರುವೀಕರಣಕ್ಕೆ ಒಳಗಾದ ಸನ್ನಿವೇಶವನ್ನು ಕೂಡ ಈ ಹಿನ್ನೆಲೆಯಲ್ಲಿಯೇ ಪರಿಶೀಲಿಸಬಹುದು. 'ಜನಸಮುದಾಯದ ಬಾಯಿ'ಯಾಗಿರುವ ಲೇಖಕರು ಹೀಗೆ ಸಿದ್ಧಾಂತಗಳ ಹೆಸರಲ್ಲಿ ಎರಡು ಹೋಳಾದರೆ, ಮಧ್ಯದಲ್ಲಿ ಹರಡಿಕೊಂಡಿರುವ ಅಲಿಪ್ತರಾದ ಅಗಣಿತ ಜನರಿಗೆ ಯಾರು ದನಿಯಾಗಬೇಕು ಎಂಬ ಪ್ರಶ್ನೆ ಉದ್ಭವಿಸುತ್ತದೆ. ಭಾರತದ 'ಅಲಿಪ್ತ' ನೀತಿಯನ್ನು, 'ಮಾನವ ಜಾತಿ ತಾನೊಂದೇ ವಲಂ' ಎಂಬ ಪಂಪನ ಧ್ಯೇಯವನ್ನು ಅಭಿಮಾನದಿಂದ ನಮ್ಮದೆಂದು ಹೇಳಿಕೊಳ್ಳುವ ನಾವು, ಈ 'ಸಾಂಸ್ಕೃತಿಕ ಅಲಿಪ್ತತೆ'ಯನ್ನು ಮಾತ್ರ ಅವಕಾಶವಾದಿತನ ಎಂದು ಸರಳವಾಗಿ ತೇಲಿಸಿ, ಲೇಬಲ್ ಕಟ್ಟಿ ಅಪಮಾನಿಸುತ್ತೇವೆ.

ಬಹುಪಾಲು ಸಂದರ್ಭಗಳಲ್ಲಿ ಸತ್ಯವನ್ನು ಆವಿಷ್ಕರಿಸುವ ವಿಜ್ಞಾನ ಮತ್ತು ಅದನ್ನು ಕಲಾತ್ಮಕವಾಗಿಸಿ ಜನರಿಗೆ ತಲುಪಿಸುವ ಸಾಹಿತ್ಯವನ್ನು ಕೂಡ ಹೀಗೇ ವಿರುದ್ಧ ಧ್ರುವಗಳಲ್ಲಿ ನಿಲ್ಲಿಸಿ ನೋಡಲಾಗುತ್ತದೆ. ವಿಜ್ಞಾನಿಯ ಮಾತು ಒತ್ತಟ್ಟಿಗಿರಲಿ, ವೈಜ್ಞಾನಿಕ ಸಾಹಿತ್ಯ ಬರೆಯುವವರನ್ನೂ ನಮ್ಮ ಮನಸ್ಸು ಸಾಹಿತಿ ಎಂದು ಒಪ್ಪಿಕೊಳ್ಳದಂತಾಗಿದೆ. ಸಾಹಿತಿಯೊಳಗಿರುವ ವಿಜ್ಞಾನಿಯನ್ನು ಅಂತೆಯೇ ವಿಜ್ಞಾನಿಯೊಳಗಿರುವ ಸಾಹಿತಿಯನ್ನು ನೋಡದಂತೆ ಒಂದು ಮುಸುಕನ್ನು ಇಂಥ ಸ್ಪಷ್ಟವಾದ ಕಪ್ಪು-ಬಿಳುಪು ವರ್ಗೀಕರಣಗಳು ನಮ್ಮ ಬುದ್ಧಿಗೆ ಹೊದೆಸುತ್ತಿರುತ್ತವೆ. ಈ ವೈರುಧ್ಯಗಳ ಫಲವಾಗಿ, ಅತ್ತ ವಿಜ್ಞಾನವೂ ಅಲ್ಲದ, ಇತ್ತ ಸಾಹಿತ್ಯವೂ ಅಲ್ಲದ ಸಮಾಜ ವಿಜ್ಞಾನದ ಸಾವಿರಾರು ಜ್ಞಾನಶಿಸ್ತುಗಳ ಮೇಲೆ ಬೆಳಕೇ ಬೀಳದಂತಾಗಿ, ಅವುಗಳ ಪಾತ್ರ ಸಮಾಜದಲ್ಲಿ ನಗಣ್ಯ ಆಗಿರಬಹುದು ಎಂಬ ಭಾವನೆ ಬಲಗೊಳ್ಳುತ್ತದೆ.

ಅದರಂತೆಯೇ ಅಲಕ್ಷಿತ ಪ್ರದೇಶ ಮತ್ತು ಅಭಿವೃದ್ಧಿ ಹೊಂದಿದ ಪ್ರದೇಶದ ನಡುವಿನ ವ್ಯತ್ಯಾಸವನ್ನು ಗಮನಿಸಬಹುದು. ಶಕ್ತಿ ಕೇಂದ್ರಕ್ಕೆ ಹತ್ತಿರವಿರುವ ಮುಂದುವರಿದ ನಾಲ್ಕಾರು ಜಿಲ್ಲೆಗಳಿಗೇ ಹೆಚ್ಚಿನ ಪ್ರಾತಿನಿಧ್ಯ ದೊರೆತಿರುವುದನ್ನು ಸರಿದೂಗಿಸುವ ಭರದಲ್ಲಿ, ದೂರದ ಅತಿ ಅಲಕ್ಷಿತ ಪ್ರದೇಶಕ್ಕೆ ಅವಕಾಶ ನೀಡುವ ಕ್ರಮವು ಮೇಲ್ನೋಟಕ್ಕೆ ಸರಿಯೆನಿಸಿದರೂ ಕಾಲಾನುಕ್ರಮದಲ್ಲಿ ಅಲ್ಲಿಯೂ ಮತ್ತೊಂದು ಶಕ್ತಿ ಕೇಂದ್ರ ಸೃಷ್ಟಿಯಾಗಿ ಯಾದಗಿರಿ-ಕೊಪ್ಪಳದಂಥ ಜಿಲ್ಲೆಗಳು ಮರೆಗೇ ಸರಿದು-ಬಿಡುತ್ತವೆ. ಈ ಅವಾಂತರದಲ್ಲಿ, ಇವೆರಡಕ್ಕೂ ಸೇರದ ಕರ್ನಾಟಕದ ಇತರ ಅಲಕ್ಷಿತ ಭೂಭಾಗಗಳು ಅವಕಾಶ ಇಲ್ಲದೆ, ಅಸ್ಮಿತೆಯಿಲ್ಲದೆ ನರಳುತ್ತವೆ. ಇನ್ನು ಶಕ್ತಿ ಕೇಂದ್ರದ ಹತ್ತಿರವಿದ್ದೂ ಅವಕಾಶವಂಚಿತವಾದ ಪ್ರದೇಶಗಳೂ ಇರುತ್ತವೆ.

ಜಾತಿಯ ಆಧಾರದಲ್ಲಿ ಕೂಡ ಪ್ರಬಲ ವರ್ಗಕ್ಕೆ ವಿರುದ್ಧವಾಗಿ ದಮನಿತರ ಸಂವೇದನೆಗಳನ್ನು ತರಲಾಗುತ್ತದೆ. ತುಂಬಾ ತೆಳುವಾದ ಈ ವರ್ಗೀಕರಣವು ಪ್ರಬಲ ವರ್ಗವನ್ನು ಪುರೋಹಿತಶಾಹಿಯೂ ದುರ್ಬಲ ವರ್ಗವನ್ನು ದಮನಿತರ ಲೋಕವೂ ಪ್ರತಿನಿಧಿಸುತ್ತವೆ ಎಂಬ ಗ್ರಹಿಕೆಗೆ ದಾರಿ ಮಾಡಿಕೊಡುತ್ತದೆ. ಹಾಗಾದಾಗ ಪ್ರಬಲ ವರ್ಗಗಳೊಳಗೂ ಇರುವ ಮೇಲು-ಕೀಳು ಆಚರಣೆ, ಬಡತನ ಮತ್ತು ಶೋಷಣೆಗಳ ಮೇಲೆ ಹಾಗೂ ದಮನಿತರ ಒಳಗೇ ಇರುವ ಪುರೋಹಿತಶಾಹಿ ವ್ಯವಸ್ಥೆ ಮತ್ತು ಸಮಾಜೋ-ಆರ್ಥಿಕವಾಗಿ ಪ್ರಬಲರಾದ ಇತರ ಶೋಷಕರ ಮೇಲೆ ಬೆಳಕೇ ಬೀಳದಂತಾಗುತ್ತದೆ. ಇವೆರಡಕ್ಕಿಂತ ಮುಖ್ಯವಾಗಿ, ಇತ್ತ ಪ್ರಬಲ ವರ್ಗವೂ ಅಲ್ಲದ, ಅತ್ತ ದಮನಕ್ಕೂ ಒಳಗಾಗಿರದ ಸಾವಿರಾರು ಸಣ್ಣಪುಟ್ಟ ಜಾತಿಗಳು ಎರಡು ಕಡೆಯಿಂದಲೂ ನಿರ್ಲಕ್ಷ್ಯಕ್ಕೆ ಒಳಗಾಗಿ ವಿಚಿತ್ರ ತಬ್ಬಲಿತನದಲ್ಲಿ ನರಳುವಂತೆ ಆಗುತ್ತದೆ.

ಈವರೆಗೆ ಹೀಗೆ, ಅದಲ್ಲದಿದ್ದರೆ ಇದು, ಇದಲ್ಲದಿದ್ದರೆ ಅದು ಎಂದು ಕಪ್ಪುಬಿಳುಪಾಗಿ ವಿಭಜಿಸಿ ನೋಡುತ್ತ ಬರಲಾಯಿತು. ಇವೆರಡರ ನಡುವೆ ಹರಡಿರುವ ಹಲವು ಛಾಯೆಗಳು ಕಾಣದೆ ಉಳಿದವು. ಶತಶತಮಾನಗಳಿಂದ ಇದ್ದ ಬಲಾಢ್ಯರ ಕುರಿತ ಮಾತು ಹೇಗೆ ಒಮ್ಮುಖವಾಗಿತ್ತೋ ಅದರಂತೆಯೇ ಅತ್ಯಂತ ದುರ್ಬಲರ ಸಬಲೀಕರಣಕ್ಕಾಗಿ ಮಾಡಿದ ಎಲ್ಲ ಪ್ರಯತ್ನಗಳು ಕೂಡ ಸೂಕ್ಷ್ಮಾರ್ಥದಲ್ಲಿ ಒಮ್ಮುಖವಾಗುತ್ತಾ ಹೋದವು.

ಶ್ರೇಷ್ಠವೋ ಕನಿಷ್ಠವೋ, ಕಪ್ಪೋ ಬಿಳುಪೋ ಅಂತೂ ನಾವು ಎರಡು ತುದಿಗಳ ಕಡೆಗೇ ನೋಡಿದೆವಾಗಲಿ, ಅವೆರಡರ ನಡುವಿನ ಕಡೆಗೆ ನೋಡಲಿಲ್ಲ. ಭೂಮಿಯ ಉತ್ತರ ಮತ್ತು ದಕ್ಷಿಣ ಧ್ರುವಗಳು ಕಂದಕವೊಂದರಿಂದ ಬೇರ್ಪಟ್ಟಿರದೆ, ನಡುವಿನ ಭೂಭಾಗವೊಂದರ ಮೂಲಕ ಕ್ರಮೇಣವಾಗಿ ಜೋಡಿಸಿಕೊಂಡಿವೆ. ಪಾಶ್ಚಾತ್ಯ ಮತ್ತು ಪೌರ್ವಾತ್ಯ ಸಂಸ್ಕೃತಿಗಳ ನಡುವೆಯೂ ಹಲವಾರು ಸಂಸ್ಕೃತಿಗಳು ಜೀವಂತವಾಗಿವೆ. ಎಡ-ಬಲಗಳತ್ತ ವಾಲದೆ, ತಮ್ಮಷ್ಟಕ್ಕೆ ಇರುವ ಸಾವಿರಾರು ದನಿಗಳಿವೆ. ಅತ್ತ ಪ್ರಬಲ ಜಾತಿಯೂ ಅಲ್ಲದ ಇತ್ತ ದಮನಿತ ಜಾತಿಯೂ ಅಲ್ಲದ ಲಕ್ಷಾಂತರ ಸಣ್ಣ ಸಣ್ಣ ಸಮುದಾಯಗಳಿವೆ. ಧ್ರುವೀಕರಣದ ಅಪಾಯವೆಂದರೆ, ಈ ಕಡೆಯವರೋ ಆ ಕಡೆಯವರೋ ಅಂತೂ ಮುಂಚೂಣಿ ನಾಯಕರೇ ಪರದೆ ಮೇಲಿರುತ್ತಾರೆ. ಇವೆರಡು ಧ್ರುವಗಳ 'ನಡುವೆ' ಹರಡಿಕೊಂಡಿರುವ ಹಲವಾರು ಜನ ನೇಪಥ್ಯದಲ್ಲೇ ಇರುತ್ತಾರೆ. ಹಾಗೆಯೇ ಇವೆರಡು ಧ್ರುವಗಳಲ್ಲೂ ಇದ್ದಿರಬಹುದಾದ ಕೆಲವಾರು ಜನ- ಕಾಲಾಳು ಯೋಧರು ಕೂಡ ಮರೆಯಲ್ಲೇ ಉಳಿದುಬಿಡುತ್ತಾರೆ. ಈ 'ನಡುವೆ' ಎಂಬ ಅಗೋಚರ ವಲಯದಲ್ಲಿ ಎಲೆಮರೆಯ ಕಾಯಿಯಂಥ ಲಕ್ಷಾಂತರ ಹೀರೊಗಳಿದ್ದಾರೆ. ಈ ನಿರ್ಲಕ್ಷಿತರ ಬಗ್ಗೆ ಯಾರೆಂದರೆ ಯಾರೂ ಹಾಡಿಲ್ಲ.

ಇದನ್ನು ಎಡ-ಬಲಗಳ ಚರ್ಚೆಯಾಗಲ್ಲದೆ, ಎರಡು 'ಅತಿ'ಗಳ ನಡುವೆ ಇರುವ 'ಅಲಕ್ಷಿತ'ದ ಕುರಿತ ಚರ್ಚೆಯಾಗಿ ನೋಡಬೇಕಿದೆ. ಆಯುರ್ವೇದದಲ್ಲಿ 'ಸರ್ವಧರ್ಮೇಷು ಮಧ್ಯಮಾಂ' ಎಂಬ ಮಾತು ಬರುತ್ತದೆ. 'ಯಾವುದರಲ್ಲೂ ಅತಿ ಬೇಡ; ಎಲ್ಲದರ ಒಳಿತು ಹೀರು, ಎಲ್ಲದರ ಕೆಡುಕು ಸರಿಸು. ಅತಿಯು ಅಪಾಯಕ್ಕೆ ದಾರಿ' ಎಂದು ಇದರ ಅರ್ಥ.

ಶಿಕ್ಷಣ ಕ್ಷೇತ್ರದಲ್ಲಿಯೂ 'ಡೆಮಾಕ್ರಟೈಸೇಷನ್ ಆಫ್ ದ ಕ್ಲಾಸ್‌ರೂಮ್' ಎಂಬ ಒಂದು ಪರಿಕಲ್ಪನೆ ಇದೆ. ತರಗತಿಯ ಮೊದಲ ವಿದ್ಯಾರ್ಥಿಯಿಂದ ಹಿಡಿದು ಕಟ್ಟಕಡೆಯ ವಿದ್ಯಾರ್ಥಿಯವರೆಗೆ ಎಲ್ಲರನ್ನೂ ಸಮಾನವಾಗಿ ನೋಡಿಕೊಳ್ಳುವುದೂ ಸೇರಿದಂತೆ ವಿಶಾಲವಾದ ಅರ್ಥವನ್ನು ಇದು ಹೊಂದಿದೆ. ಇದರಲ್ಲಿ ಮೊದಲ ವಿದ್ಯಾರ್ಥಿ ಮತ್ತು ಕಟ್ಟ ಕಡೆಯ ವಿದ್ಯಾರ್ಥಿಯಷ್ಟೇ ಅಲ್ಲದೆ, ಇವರಿಬ್ಬರ ಮಧ್ಯ ದಲ್ಲಿ ಇರುವ ಅತಿ ಹೆಚ್ಚು ಸಂಖ್ಯೆಯ 'ಸಾಧಾರಣ' ವಿದ್ಯಾರ್ಥಿಗಳೂ ಸೇರಿಕೊಂಡಿದ್ದಾರೆ. ಇದನ್ನು ಸರಿಯಾಗಿ ಅರ್ಥ ಮಾಡಿ-ಕೊಳ್ಳದಿದ್ದರೆ, ಬೋಧಕನು ಬರೀ ಮೊದಲ ಮತ್ತು ಕಟ್ಟಕಡೆಯ ವಿದ್ಯಾರ್ಥಿಗೆ ಪಾಠ ಮಾಡಿ, ಪ್ರಜಾತಂತ್ರದ ಮೌಲ್ಯಗಳನ್ನು ತರಗತಿಯಲ್ಲಿ ಸರಿಯಾಗಿ ಅಳವಡಿಸಿಕೊಂಡಿದ್ದೇನೆ ಎಂದು ಬೀಗಿದ ಹಾಗಾಗುತ್ತದೆ ಅಷ್ಟೇ.



ಲಿಂಗತ್ವ ಅಲ್ಪಸಂಖ್ಯಾತರನ್ನು ಒಪ್ಪಿಕೊಳ್ಳುವವರೆಗೂ ನಮ್ಮ ಸಾಂಪ್ರದಾಯಿಕ ಮನಸ್ಸು ಸಹ ಹೀಗೆ ಎರಡು ಲಿಂಗಸಂಬಂಧಿ ಧ್ರುವಗಳಲ್ಲೇ ವಿಭಾಗೀಕರಣಗೊಂಡಿತ್ತು ಅಲ್ಲವೇ? ಈಗ ಇನ್ನೂ ಸೂಕ್ಷ್ಮಕ್ಕಿಳಿದು, ಎಲ್‌ಜಿಬಿಟಿಕ್ಯು ಸಮುದಾಯಗಳನ್ನೂ ಸಹಾನುಭೂತಿಯಿಂದ ಕಾಣುವಂಥ ಸ್ವಸ್ಥ ಮನಃಸ್ಥಿತಿಗೆ ಸಮಾಜ ತಲುಪಿದೆ. ಹಾಗಿರುವಾಗ, ನಾವೇ ಎದುರು ಬದುರಾಗಿ ನಿಲ್ಲಿಸಿರುವ, ಪರಸ್ಪರ ವಿರುದ್ಧವೆಂದು ಬಿಂಬಿಸಿ ನಂಬಿಸಿರುವ ಪಾಶ್ಚಾತ್ಯ-ಪೌರ್ವಾತ್ಯ, ಉತ್ತರ-ದಕ್ಷಿಣ, ಮೇಲ್ವರ್ಗ-ಕೆಳವರ್ಗ, ಎಡ-ಬಲ, ವಿಜ್ಞಾನ-ಸಾಹಿತ್ಯದಂತಹ ಎರಡು ಧ್ರುವಗಳ ನಡುವಿರುವ ನಿರ್ಲಕ್ಷಿತ ದೇಶ, ಭಾಷೆ, ಸಂಸ್ಕೃತಿ, ಸಿದ್ಧಾಂತ ಮತ್ತು ಸಮುದಾಯಗಳಿಗೂ ವೇದಿಕೆ ಒದಗಿಸುವಂತೆ ಮನಸ್ಸನ್ನು ಸಜ್ಜುಗೊಳಿಸಿಕೊಳ್ಳಬೇಕಿದೆ. ಆಗಲೇ ಅಂಬೇಡ್ಕರ್ ಅವರ ಸಾಮಾಜಿಕ ನ್ಯಾಯ ಮತ್ತು ಕುವೆಂಪು ಅವರ ಪೂರ್ಣದೃಷ್ಟಿ ಪರಿಕಲ್ಪನೆಗಳಿಗೆ ನಿಜವಾದ ಅರ್ಥ ಬರುವುದು.

ಚುರುಮುರಿ

ಕ್ರಿಕೆಟ್ಟು, ವಿಕೆಟ್ಟು!

• ಬಿ.ಎನ್.ಮಲ್ಲೇಶ್

'ಗುರೂ... ಇಂಡಿಯಾ, ಸೌತ್ ಆಫ್ರಿಕಾದೋರು ಟೆಸ್ಟ್ ಮ್ಯಾಚ್ ಆಡ್ತಾದಾರೋ ಏನ್ ಟ್ವೆಂಟಿ ಟ್ವೆಂಟಿ ಆಡ್ತಾದಾರೋ? ಒಂದೇ ದಿನದಾಗೆ 23 ವಿಕೆಟ್ಟು, 55 ರನ್ನಿಗೆ ಆಲೌಟು!' ತೆಪರೇಸಿ ಕೇಳಿದ.

'ಇನ್ಮೇಲೆ ಟೆಸ್ಟ್ ಮ್ಯಾಚ್‌ನ ಎರಡು ದಿನಕ್ಕೆ ಇಳಿಸಬೋದು ಅನ್ಸುತ್ತಪ್ಪ' ದುಬ್ಬೀರ ನಕ್ಕ.

'ನೋಡ್ರಲೆ, ಈ ಕ್ರಿಕೆಟ್ಟೂ ಗುಂಡೂ ಒಂದೇ. ಕ್ರಿಕೆಟ್‌ನಲ್ಲಿ ವಿಕೆಟ್ ಬಿದ್ದ ಮೇಲೆ ಔಟಾಗ್ತಾರೆ. ನಾವು ಗುಂಡು ಹಾಕಿ ಔಟಾದ ಮೇಲೆ ನಮ್ ವಿಕೆಟ್ ಬೀಳ್ತತಿ' ಗುಡ್ಡೆ ಕಿಸಕ್ಕೆಂದ.

'ಅದ್ಸರಿ, ಈಗ ಗುಂಡಿನ ವಿಷ್ಯ ಯಾಕ್ ಬಂತು?' ಕೊಟ್ರೇಶಿ ಕೊಕ್ಕೆ.

'ವಿಷ್ಯ ಐತಿ, ಮೊನ್ನಿ ಈ ತೆಪರ ಟೈಟಾಗಿ, ಔಟಾದ ಬ್ಯಾಟ್ಸ್‌ಮನ್ ತರ ರಸ್ತೇಲಿ ಹೊಂಟಿದ್ನಂತೆ. ಎದುರಿಗೆ ಬಂದ ಪೊಲೀಸ್ ಜೀಪ್ ನಿಲ್ಲಿ, ಮನೆಗೆ ಡ್ರಾಪ್ ಕೊಡಿ ಅಂದ್ನಂತೆ'.

'ಅಲೆ ಇವ್ನ, ಹೌದಾ?'

'ನಮ್ಮಿಂದಾನೇ ಸರ್ಕಾರ ನಡೀತಿರೋದು ಅಂತ ರೋಫ್ ಬೇರೆ ಹೊಡೆದ್ನಂತೆ'.

'ಪೊಲೀಸ್ನೋರು ಸುಮ್ನಿದ್ರಾ?'

'ತೆಗೆದು ಬಿಟ್ಟಾ ಅಂದ್ರೆ ಬಾಲು ಸಿಕ್ಸರ್ ತರ ಹೋದಂಗೆ ಹೋಗ್ತೀಯ, ಕುಡುಕನ್ ತಂದು ಅಂದ್ರಂತೆ. ಅದ್ಕೆ ಇವ್ನು 'ರೀ ಸ್ವಾಮಿ, ನಾವು ಕುಡುಕರಲ್ಲ, ಮದ್ಯಪಾನ ಪ್ರಿಯರು. ನಮ್ದೂ ಸಂಘ ಐತೆ' ಅಂತ ಹೆದರಿಸಿದ್ನಂತೆ'.

'ಬಪ್ಪರೆ ಮಗನೆ, ಆಮೇಲೆ?'

'ಮೊನ್ನಿ ಹೊಸ ವರ್ಷದಾಗೆ ಒಂದೇ ದಿನ ₹193 ಕೋಟಿಯಷ್ಟು ಕುಡಿದಿದೀವಿ. ಮರ್ಯಾದೆ ಕೊಟ್ಟು ಮಾತಾಡಿ ಅಂದ್ನಂತೆ. ಪೊಲೀಸ್ರು ಗಾಯಗೊಂಡ ಬ್ಯಾಟ್ಸ್‌ಮನ್‌ನ ಎತ್ಕಳೋ ತರ ಇವನನ್ನ ಜೀಪ್‌ಗೆ ಎತ್ತಾಕ್ಕಂಡು ಮನಿ ಬಾಗಿಲಲ್ಲಿ ಮಲಗಿಸಿ ಹೋದ್ರಂತೆ'.

'ಒಳ್ಳೆ ಪೊಲೀಸ್ರು... ಮುಂದೆ?'

'ಮುಂದೆ ಮಳೆ ಬಂದು ಮ್ಯಾಚ್ ನಿಂತೋತಂತೆ'.

'ಮಳೆನಾ? ಮ್ಯಾಚಾ?'

'ಹ್ಞಂ, ತೆಪರನ ಹೆಂಡ್ತಿ ಬಾಗಿಲು ತೆಗೆದು ಇವ್ನ ತಲಿ ಮ್ಯಾಲ ಒಂದು ಬಕೆಟ್ ನೀರು ಸುರಿದ್ಲಂತೆ. ಪಿಚ್ ಒದ್ದೆಯಾದ ಮೇಲೆ ಮ್ಯಾಚ್ ಹೆಂಗ್ ನಡೀತತಿ?'

ಗುಡ್ಡೆ ಮಾತಿಗೆ ಎಲ್ಲರೂ ಗೊಳ್ಳಂತ ನಕ್ಕರು. ತೆಪರೇಸಿ ಪಿಟಿಕ್ಕನ್ನಲಿಲ್ಲ.

ಸಂಗತ

ಹಾರಿಹೋಗಿದೆ 'ಪುಸ್ತಕದ ಹಕ್ಕಿ'

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅಸ್ತಿತ್ವಕ್ಕೆ ಬಂದ 'ಪುಸ್ತಕದ ಗೂಡು' ಯೋಜನೆ ತಲುಪಿರುವ ಶೋಚನೀಯ ಸ್ಥಿತಿ, ಅಧಿಕಾರಿಗಳು ಮತ್ತು ಓದುಗರ ನಿರ್ಲಕ್ಷ್ಯಕ್ಕೆ ನಿದರ್ಶನವಾಗಿದೆ

• ಪ.ರಾಮಕೃಷ್ಣ ಶಾಸ್ತ್ರಿ

ಒಂದು ಅತ್ಯುತ್ತಮ ಯೋಜನೆಯು ಸಾರ್ವಜನಿಕರ ಅಲಕ್ಷ್ಯ ಮತ್ತು ಗ್ರಾಮ ಪಂಚಾಯಿತಿ ಆಡಳಿತ ವರ್ಗದ ಬೇಜವಾಬ್ದಾರಿಯಿಂದ ಹೇಗೆ ಶೋಚನೀಯ ಸ್ಥಿತಿ ತಲುಪಬಹುದು ಎಂಬುದಕ್ಕೆ 'ಪುಸ್ತಕದ ಗೂಡು' ಇಂದು ತಲುಪಿರುವ ದುಃಸ್ಥಿತಿಯು ಉದಾಹರಣೆಯಾಗಿ ನಿಲ್ಲುತ್ತದೆ.

ಇಂತಹ ವಿಶಿಷ್ಟ ಯೋಜನೆ ಕಾರ್ಯರೂಪಕ್ಕೆ ಬಂದದ್ದು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ. ಬಹಳಷ್ಟು ಬರಹಗಾರರು, ಪುಸ್ತಕ ಅಭಿಮಾನಿಗಳು ತುಂಬಿರುವ ಜಿಲ್ಲೆಯಲ್ಲಿ ಇದು ಜನಮನದ ಅಂಗಳದಲ್ಲಿ ಚಿರಸ್ಥಾಯಿಯಾಗಿ ಉಳಿಯಬಹುದು ಎಂದು ಆಶಿಸಲಾಗಿತ್ತು. ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಆಗಿದ್ದ ಕುಮಾರ್ ಅವರ ಕನಸಿನ ಕೂಸು ಈ ಯೋಜನೆ. ಎರಡು ವರ್ಷಗಳ ಹಿಂದೆ ಈ ಸೌಲಭ್ಯಕ್ಕೆ ಅವರು ಚಾಲನೆ ನೀಡಿದಾಗ, ರಾಜ್ಯದಾದ್ಯಂತ ಇದು ವ್ಯಾಪಿಸಿ, ಜನಪ್ರಿಯವಾಗಬಹುದೆಂಬ ಕನಸು ಕಂಡಿದ್ದರು.

ಪುಸ್ತಕದ ಗೂಡಿನ ಹಿಂದೆ ಇದ್ದ ಆಕಾಂಕ್ಷೆಯೂ ಸಣ್ಣದಲ್ಲ. ಬಸ್ ನಿಲ್ದಾಣದಲ್ಲಿ ಪುಸ್ತಕ ತುಂಬಿದ ಒಂದು ಗೂಡು ಇದ್ದರೆ, ಬಸ್ಸಿಗಾಗಿ ಕಾಯುವ ವಿದ್ಯಾರ್ಥಿಗಳು, ಓದು- ಬರಹ ಬಲ್ಲ ಇತರರು ಮೊಬೈಲ್ ಫೋನ್ ಹಿಡಿಯುವ ಬದಲು ಓದಿನಲ್ಲಿ ತೊಡಗಬಹುದು, ಪುಸ್ತಕಪ್ರೀತಿ ಬೆಳೆಸಲು ಇದರಿಂದ ಸಹಾಯಕವಾಗಬಹುದು ಎಂಬ ಘನ ಉದ್ದೇಶ ಅದರ ಹಿಂದೆ ಇತ್ತು.

ಆರಂಭದಲ್ಲಿ ಜನರ ಪ್ರತಿಕ್ರಿಯೆ ಕೂಡ ನಿರೀಕ್ಷೆಗೂ ಮೀರಿ ಇತ್ತು. ಮೊದಲು ಪ್ರಾಯೋಗಿಕ ನೆಲೆಯಲ್ಲಿ ಇಂಥದ್ದೊಂದು ಗೂಡನ್ನಿಡಲು ಜಿಲ್ಲಾ ಪಂಚಾಯಿತಿ ಹೆಚ್ಚು ವೆಚ್ಚ ಮಾಡಿರಲಿಲ್ಲ. ದಾನಿಗಳು ಪುಸ್ತಕಗಳನ್ನಿಡಲು ಒಳ್ಳೆಯ ಗೂಡು ಕೊಟ್ಟಿದ್ದರು. ಓದಿದ ಪುಸ್ತಕಗಳು, ವಿಶೇಷಾಂಕಗಳನ್ನು ಸದುದ್ದೇಶದಿಂದ ನೀಡಿದ ಓದುಗರೂ ಇದ್ದರು. ಬಸ್ ನಿಲ್ದಾಣಗಳು, ಸರ್ಕಾರಿ ಕಚೇರಿಗಳು, ಉದ್ಯಾನಗಳು ಸೇರಿ ಏಳು ತಾಲ್ಲೂಕುಗಳ 232 ಗ್ರಾಮಗಳ 268 ಸ್ಥಳಗಳಲ್ಲಿ ಈ ವಿಶಿಷ್ಟ ಗೂಡುಗಳು ನೆಲೆಗೊಂಡವು.

ವೈವಿಧ್ಯಮಯ ವಿಷಯಗಳ ಪುಸ್ತಕಗಳನ್ನು ಓದುಗರು ಗೂಡಿನಿಂದ ಹೊರಗೆ ಯಾವಾಗ ಬೇಕಿದ್ದರೂ ತೆಗೆದುಕೊಳ್ಳಬಹುದು, ಬಸ್ ಬರುವವರೆಗೂ ಓದಬಹುದು, ಓದು ಕುತೂಹಲಕರವಾಗಿದ್ದರೆ ಮನೆಗೆ ತೆಗೆದುಕೊಂಡು ಹೋಗಿ, ಓದಿ, ಮರಳಿ ಅಲ್ಲೇ ತಂದಿಡಬಹುದು. ಪುಸ್ತಕದ ಗೂಡಿಗೆ ಬೀಗ ಹಾಕುವ ಕ್ರಮವಿರಲಿಲ್ಲ.

ಎರಡೇ ವರ್ಷಗಳಲ್ಲಿ ಬಹುತೇಕ ಗ್ರಾಮಗಳ ಪುಸ್ತಕದ ಗೂಡುಗಳು ಬರಿದಾಗಿವೆ. ಅದರ ಕನ್ನಡಿ ಬಾಗಿಲಿಗೆ ಒಂದಿಂಚು ದೂಳು ಮೆತ್ತಿಕೊಂಡಿದೆ. ಯಾರಿಗೂ ಬೇಡವಾದ ಸಹಕಾರಿ ಸಂಘಗಳ ಮಹಾಸಭೆಯ ಹಾಗೂ ಆಯವ್ಯಯದ ವಿವರಗಳಿರುವ ಪುಸ್ತಕಗಳನ್ನು ಬಿಟ್ಟರೆ ಬೇರೆ ಯಾವ ಮಹತ್ವದ ಕೃತಿಯೂ ನೋಡಲು ಸಿಗುವುದಿಲ್ಲ. ಇಂತಹ ಮಹತ್ವಾಕಾಂಕ್ಷೆಯ ಯೋಜನೆಗಳನ್ನು ಆರಂಭಿಸಿದ ಜಿಲ್ಲಾ ಪಂಚಾಯಿತಿಗೆ ಕೇಂದ್ರ ಪಂಚಾಯತ್ ರಾಜ್ ಸಚಿವಾಲಯದ ಮೆಚ್ಚುಗೆ ದೊರಕಿದೆ. ರಾಷ್ಟ್ರೀಯ ದೀನದಯಾಳ್ ಉಪಾಧ್ಯಾಯ ಪಂಚಾಯತ್ ಸಶಕ್ತೀಕರಣ ಪುರಸ್ಕಾರವೂ ಬಂದಿದೆ.

ದುಡಿಮೆಗೆ ಇಷ್ಟು ಸಿಕ್ಕಿದರೆ ಸಾಕೆಂಬ ಅಧಿಕಾರ ವರ್ಗದ ತೃಪ್ತಭಾವವು ಯೋಜನೆಗಳ ಸಾಫಲ್ಯದ ಬೆನ್ನು ಹಿಡಿಯುವ ಅಗತ್ಯವಿಲ್ಲ ಎಂದು ಭಾವಿಸಿದಂತಿದೆ. ರಾಜ್ಯವ್ಯಾಪಿಯಾಗಿ ದೇಶವಿಡೀ ಪಸರಿಸುವ ಎಲ್ಲ ಗುಣಲಕ್ಷಣಗಳನ್ನೂ ಹೊಂದಿದ್ದ, ಅಕ್ಷರ ಆರಾಧನೆಯ ಪ್ರತೀಕವಾಗಿದ್ದ ಪುಸ್ತಕದ ಗೂಡು ಈಗ ಹೇಗಾಗಿದೆ ನೋಡು ಎಂದು ಪುಸ್ತಕಪ್ರಿಯರು ಹಲುಬುವಂತಾಗಿದೆ.

ಹೀಗಾಗುವುದಕ್ಕೆ ಕಾರಣಗಳು ಹಲವಾರು. ಪುಸ್ತಕಗಳನ್ನು ಓದಲು ಮನೆಗೆ ಕೊಂಡುಹೋಗುವವರ ಬಗೆಗೆ ನಿಗಾ ಇಡುವ ವ್ಯವಸ್ಥೆ ಇರಲಿಲ್ಲ. ಒಮ್ಮೆ ಪುಸ್ತಕಗಳನ್ನು ಬೇಡಿ ತಂದಿಡುವಲ್ಲಿಗೆ ನಮ್ಮ ಹೊಣೆಗಾರಿಕೆ ಮುಗಿಯಿತು ಎಂದು ಗ್ರಾಮ ಪಂಚಾಯಿತಿ ನೌಕರರು ಸುಮ್ಮನೆ ಉಳಿಯಬಾರದಿತ್ತು. ಪ್ರತಿ ತಿಂಗಳೂ ಪುಸ್ತಕ ಸಂಗ್ರಹ ಅಭಿಯಾನ ಮಾಡಬಹುದಿತ್ತು. ಇನ್ನು ಬಹುತೇಕ ಪಂಚಾಯಿತಿ ಸದಸ್ಯರಂತೂ ತಮಗೂ ಈ ಗೂಡಿಗೂ ಯಾವುದೇ ಸಂಬಂಧವಿಲ್ಲ ಎಂಬಂತಹ ನಿರ್ಲಿಪ್ತ ಭಾವದಲ್ಲಿ ಇರದೇ ಹೋಗಿದ್ದರೆ ಉತ್ತಮ ಯೋಜನೆಯೊಂದು ಹೆಮ್ಮರವಾಗಿ ಬೆಳೆಯಬಹುದಿತ್ತು.

ಸರ್ಕಾರಿ ವಾಚನಾಲಯಗಳಿಗೆ ಹೊಸ ಪುಸ್ತಕಗಳು ಬಹಳಷ್ಟು ಪ್ರಮಾಣದಲ್ಲಿ ಬರುತ್ತಿದ್ದರೂ ಓದಿ ಜ್ಞಾನ ಪಡೆಯುವ ಪ್ರವೃತ್ತಿ ವಿರಳವಾಗುತ್ತಿರುವ ವಿಷಾದ ನಮ್ಮ ಕಣ್ಣ ಮುಂದಿದೆ. ಅಂಥದ್ದರಲ್ಲಿ ಗ್ರಾಮೀಣ ಭಾಗದ ಜನರಿಗೆ ಮನೆಯ ಬಳಿ ಪುಸ್ತಕಗಳು ಗೂಡಿಗೆ ಕೈ ಹಾಕಿದರೆ ಸಾಕು, ಥಟ್ ಎಂದು ಸಿಗುವಂತಹ ಅನುಪಮ ಯೋಜನೆಯು ಸದ್ಬಳಕೆಯಾಗದೇ ಹೋಗಿರುವುದು ಅಕ್ಷಮ್ಯವೇ ಹೌದು.

ಇಲ್ಲಿ ಪುಸ್ತಕಗಳನ್ನು ತಂದಿಡುವುದು, ಅವುಗಳ ಮೇಲೆ ಕಣ್ಣಿಡುವ ಜವಾಬ್ದಾರಿಯನ್ನು ಹೊರುವಲ್ಲಿ ಒಂದೆಡೆ ಪಂಚಾಯಿತಿ ನೌಕರರು ಎಷ್ಟು ಬಾಧ್ಯಸ್ಥರೋ ಅಷ್ಟೇ ಜವಾಬ್ದಾರರು ಚುನಾಯಿತ ಸದಸ್ಯರು. ಒಮ್ಮೆ ಎಚ್ಚರಿಸಿದರೆ ಗೂಡುಗಳ ದೂಳೊರೆಸಿ ಪುಸ್ತಕಗಳನ್ನು ಬೇಡಿ ತಂದಿಡುವ ಕ್ರಮವಿದೆಯಾದರೂ ಪುಸ್ತಕದ ಗೂಡು ಬರಿದಾಗದಂತಹ ಬದ್ಧತೆಗೆ ಅವರನ್ನು ಒಳಪಡಿಸುವುದು ಈ ಯೋಜನೆಗೆ ಬೀಜಾಂಕುರ ಮಾಡಿದವರ ಹೆಗಲ ಮೇಲೆ ಇರಬೇಕಾಗಿದೆ.

ಒಂದು ಗೂಡಿನ ಸ್ಥಾಪನೆಗಾಗಿ ಪಂಚಾಯಿತಿ ಏನಿಲ್ಲವೆಂದರೂ ಕನಿಷ್ಠ ಎರಡು ಸಾವಿರ ರೂಪಾಯಿಯನ್ನು ವ್ಯಯಿಸಿರಬಹುದು. 'ಪುಸ್ತಕದ ಹಕ್ಕಿ' ಇಲ್ಲದ ಗೂಡುಗಳನ್ನು ನೋಡಿದರೆ, ಎಲ್ಲ ಗೂಡುಗಳಿಗೂ ವೆಚ್ಚವಾದ ಸಾರ್ವಜನಿಕ ಹಣದ ಮೌಲ್ಯ ನಮ್ಮನ್ನು ಯೋಚನೆಗೀಡು ಮಾಡುವುದಂತೂ ನಿಜ.

ವಾಚಕರ ವಾಣಿ

ಪ್ರಾಂಶುಪಾಲರಿಂದ ಮುಚ್ಚಳಿಕೆ: ಅಮಾನವೀಯ ಕೃತ್ಯ

'ಪ್ರಸಕ್ತ ವರ್ಷದ ದ್ವಿತೀಯ ಪಿ.ಯು. ವಾರ್ಷಿಕ ಪರೀಕ್ಷೆಯಲ್ಲಿ ಶೇಕಡ 100ರಷ್ಟು ಫಲಿತಾಂಶ ನೀಡುತ್ತೇವೆ. ಕಳಪೆ ಫಲಿತಾಂಶ ಬಂದರೆ ಶಿಸ್ತುಕ್ರಮಕ್ಕೆ ಬದ್ಧರಾಗಿರುತ್ತೇವೆ' ಎಂಬ ಮುಚ್ಚಳಿಕೆಯನ್ನು ಪದವಿಪೂರ್ವ ಶಿಕ್ಷಣ ಇಲಾಖೆಯ ಕೆಲವು ಜಿಲ್ಲೆಗಳ ಉಪನಿರ್ದೇಶಕರು ಪಿ.ಯು. ಕಾಲೇಜುಗಳ ಪ್ರಾಂಶುಪಾಲರು ಮತ್ತು ವಿಷಯವಾರು ಉಪನ್ಯಾಸಕರಿಂದ ಬರೆಸಿಕೊಳ್ಳುತ್ತಿರುವುದು ಅಮಾನವೀಯ, ಅನಾಗರಿಕ ಕೃತ್ಯ ಎಂಬುದರಲ್ಲಿ ಎರಡು ಮಾತಿಲ್ಲ. ರಾಜ್ಯದ ಬಹುತೇಕ ಪಿ.ಯು. ಕಾಲೇಜು ಪರೀಕ್ಷಾ ಕೇಂದ್ರಗಳು ಪರೀಕ್ಷೆಯನ್ನು ಯಾವುದೇ ನಕಲು ಅಥವಾ ಅಡ್ಡದಾರಿಗೆ ಅವಕಾಶವಿಲ್ಲದಂತೆ ವ್ಯವಸ್ಥಿತವಾಗಿ ನಡೆಸುವುದರ ಮೂಲಕ ಸರ್ಕಾರಕ್ಕೆ ಒಳ್ಳೆಯ ಹೆಸರು ತಂದಿವೆ. ಈ ರೀತಿಯ ಆದೇಶ ನೀಡಿರುವ ಉಪನಿರ್ದೇಶಕರು ಸಹ ಹಿಂದೆ ಪ್ರಾಂಶುಪಾಲರಾಗಿ ಕೆಲಸ ನಿರ್ವಹಿಸಿದವರೇ ಆಗಿರುತ್ತಾರೆ. ಆಗ ಅವರ ಕಾಲೇಜಿನಲ್ಲಿ ಶೇಕಡ ನೂರು ಫಲಿತಾಂಶ ಬಂದಿತ್ತೇ ಎಂಬುದನ್ನು ಪರಿಶೀಲಿಸ-ಬೇಕಾಗುತ್ತದೆ.

ಉಳ್ಳವರ ಮಕ್ಕಳು ನಗರದ ಪ್ರತಿಷ್ಠಿತ ಕಾಲೇಜುಗಳಿಗೆ ಸೇರುತ್ತಾರೆ. ಸರ್ಕಾರಿ ಪಿ.ಯು. ಕಾಲೇಜುಗಳಿಗೆ ಸೇರುವವರಲ್ಲಿ ಬಹುತೇಕರು ಬಡವರ ಮಕ್ಕಳು ಮತ್ತು ಶಿಕ್ಷಣದಲ್ಲಿ ಹಿಂದುಳಿದವರು ಆಗಿರುತ್ತಾರೆ. ಇಂತಹ ಮಕ್ಕಳಿಗೆ ಪ್ರಾಮಾಣಿಕವಾಗಿ ಬೋಧಿಸಿ ಅವರನ್ನು ಕನಿಷ್ಠ ಅಂಕಗಳೊಂದಿಗೆ ಪಾಸಾಗುವಂತೆ ಮಾಡುವುದು ಎಂತಹ ಕಷ್ಟದ ಕೆಲಸ ಎಂಬುದು ಈ ಆದೇಶ ನೀಡಿರುವ ಉಪನಿರ್ದೇಶಕರಿಗೆ ತಿಳಿದಿಲ್ಲ ಎನ್ನಿಸುತ್ತದೆ. ಗ್ರಾಮೀಣ ಕಾಲೇಜುಗಳ ಕೆಲ ವಿದ್ಯಾರ್ಥಿಗಳು ಕಾಲೇಜಿಗೆ ಹಾಜರಾಗದೆ ಕೂಲಿ ಕೆಲಸಕ್ಕೆ ಹೋಗುವುದೂ ಉಂಟು. ಇಂತಹ ಸ್ಥಿತಿಯಲ್ಲಿ ಶೇಕಡ ನೂರು ಫಲಿತಾಂಶ ಕನಸಿನ ಮಾತಾಗಿ ಉಳಿಯುತ್ತದೆ.

ಈ ಆದೇಶವೇನಾದರೂ ಅಧಿಕೃತವಾಗಿ ಜಾರಿಯಾಗಿ, ಪ್ರಾಂಶುಪಾಲರು ಮತ್ತು ಉಪನ್ಯಾಸಕರು ಶಿಕ್ಷೆ ಅನುಭವಿಸುವಂತಾದರೆ, ದ್ವಿತೀಯ ಪಿ.ಯು. ವಾರ್ಷಿಕ ಪರೀಕ್ಷೆಗಳು ಅಧೋಗತಿಗೆ ಇಳಿಯುತ್ತವೆ. ಪರೀಕ್ಷಾ ಕೇಂದ್ರಗಳು ನಕಲು ಕೇಂದ್ರಗಳಾಗುವ ಮೂಲಕ ಬಿಹಾರ ಮತ್ತು ಜಾರ್ಖಂಡ್‌ನಂತಹ ರಾಜ್ಯಗಳಲ್ಲಿ ನಡೆಯುವ ಪರೀಕ್ಷೆಗಳಂತೆ ಆಗುತ್ತವೆ. ಉಪನ್ಯಾಸಕರ ಮನಃಸ್ಥಿತಿಯ ಮೇಲೆ ಕೆಟ್ಟ ಪರಿಣಾಮ ಉಂಟಾಗುತ್ತದೆ. ಹೀಗಾಗಿ, ಈ ರೀತಿಯ ಆದೇಶ ನೀಡಿ ದಬ್ಬಾಳಿಕೆ ನಡೆಸಿರುವ ಉಪನಿರ್ದೇಶಕರನ್ನು ಶಿಕ್ಷಿಸುವ ಮೂಲಕ, ಪಿ.ಯು. ಕಾಲೇಜುಗಳು ಎಂದಿನಂತೆ ಮೌಲ್ಯಗಳ ಆಧಾರದ ಮೇಲೆ ಕಾರ್ಯನಿರ್ವಹಿಸಲು ಸರ್ಕಾರ ಅನುವು ಮಾಡಿಕೊಡಬೇಕು.

ಮೋದೂರು ಮಹೇಶಾರಾಧ್ಯ, ಹುಣಸೂರು

ಗೌರವಸೂಚಕವೇ?

ದಕ್ಷಿಣ ಆಫ್ರಿಕಾದ ಕೇಪ್‌ಟೌನ್‌ನ
ದ್ವಿತೀಯ ಕ್ರಿಕೆಟ್ ಟೆಸ್ಟ್‌ನಲ್ಲಿ
ಪ್ರಥಮ ಇನಿಂಗ್ಸ್ ಬ್ಯಾಟಿಂಗ್‌ನಲ್ಲಿ
ನಮ್ಮ ಆರು (ಅರ್ಧಕ್ಕೂ ಹೆಚ್ಚು!)
ಆಟಗಾರರು (ಬ್ಯಾಟ್ಸ್‌ಮನ್)
ಯಾವುದೇ ರನ್ ಗಳಿಸದೆ
ಸೊನ್ನೆಗೆ ಔಟ್ ಆಗಿದ್ದಾರೆ.
ಬಹುಶಃ ಸೊನ್ನೆ (ಶೂನ್ಯ)
ಕಂಡುಹಿಡಿದ
ಆರ್ಯಭಟನಿಗೆ ಗೌರವ
ಸಲ್ಲಿಸಲೂ ಇರಬಹುದು!

ನಗರ ಗುರುದೇವ್ ಭಂಡಾರ್ಕರ್
ಹೊಸನಗರ

ಲೋಕಾಯುಕ್ತರಿಗೆ ಸಿಗಲಿ ಪೂರ್ಣ ಅಧಿಕಾರ

ಒಡವೆ ಕದ್ದನೆಂದು ಬಂಧಿಸಿದ್ದ ಕಳ್ಳನೊಬ್ಬನನ್ನು ಸೂಕ್ತ ಸಾಕ್ಷ್ಯಾಧಾರಗಳಿಲ್ಲದ ಕಾರಣ ಬಿಡುಗಡೆ ಮಾಡುವಂತೆ ನ್ಯಾಯಾಧೀಶರು ತೀರ್ಪು ನೀಡಿದರಂತೆ. ಆಗ ಆ ಕಳ್ಳನು 'ಹಾಗಾದರೆ ಆ ಒಡವೆಗಳನ್ನು ನಾನೇ ಇಟ್ಟುಕೊಳ್ಳಬಹುದೇ ಸ್ವಾಮಿ?' ಎಂದು ನ್ಯಾಯಾಧೀಶರನ್ನು ಕೇಳಿದನಂತೆ! ಅಕ್ರಮ ಆಸ್ತಿ ಗಳಿಕೆ, ಭ್ರಷ್ಟಾಚಾರ, ಲಂಚ ಪ್ರಕರಣಗಳ ಆರೋಪ ಹೊತ್ತಿರುವ ಅಧಿಕಾರಿಗಳ ವಿಚಾರಣೆಗೆ ಅನುಮತಿ ನೀಡದ ಸಂಬಂಧಪಟ್ಟ ಪ್ರಾಧಿಕಾರಗಳ ಅಧಿಕಾರಿಗಳಿಗೆ ಈ ಸಂಬಂಧ ನಿರ್ದೇಶನ ನೀಡುವಂತೆ ಮುಖ್ಯ ಕಾರ್ಯದರ್ಶಿಗೆ ಲೋಕಾಯುಕ್ತ ರಿಜಿಸ್ಟ್ರಾರ್ ಅವರು ಪತ್ರ ಬರೆದಿರುವ ಸುದ್ದಿಯನ್ನು (ಪ್ರ.ವಾ., ಡಿ. 25) ಓದಿದಾಗ ಈ ಕಥೆ ನೆನಪಿಗೆ ಬಂತು!

ಲೋಕಾಯುಕ್ತ ದಾಳಿ ನಡೆದು ಕಂತೆ ಕಂತೆ ಕರೆನ್ಸಿ ನೋಟುಗಳು, ಪೆಟ್ಟಿಗೆ ತುಂಬಾ ಒಡವೆಗಳು, ಆಸ್ತಿಪಾಸ್ತಿ ದಾಖಲೆಗಳು ಜಪ್ತಿಯಾದ ಮೇಲೂ ಅಂತಹವರ ವಿರುದ್ಧ ಮೊಕದ್ದಮೆ ಹೂಡಲು ಸಕ್ಷಮ ಪ್ರಾಧಿಕಾರದ ಅನುಮತಿ ಬೇಕೆಂಬ ನಿಯಮವೇ ತಪ್ಪಲ್ಲವೆ? ಸರ್ಕಾರಕ್ಕೆ ನಿಜವಾಗಿಯೂ ಭ್ರಷ್ಟಾಚಾರವನ್ನು ನಿಗ್ರಹಿಸುವ ಆಸಕ್ತಿಯಿದ್ದರೆ ಕೂಡಲೇ ಈ ನಿಯಮವನ್ನು ತೆಗೆದುಹಾಕಬೇಕು. ಲೋಕಾಯುಕ್ತ ಅಧಿಕಾರಿಗಳೇ ನೇರವಾಗಿ ಮೊಕದ್ದಮೆ ಹೂಡುವಂತೆ ನಿಯಮ ಜಾರಿಗೊಳಿಸಬೇಕು. ಆಗ ಅಂತಹ ಭ್ರಷ್ಟ ಅಧಿಕಾರಿಗಳಿಗೆ ಅವರ ಜೀವಿತಾವಧಿಯಲ್ಲಿಯೇ ಶಿಕ್ಷೆ ದೊರೆತೀತು.

ಎಚ್.ಎಸ್.ಮಂಜಪ್ಪ, ಸೊರಬ

ಕೆ–ಸೆಟ್: ರಜೆ ದಿನ ನಡೆಯಲಿ

ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ಇದೇ 13ರ ಎರಡನೇ ಶನಿವಾರದಂದು ಕೆ-ಸೆಟ್ ಪರೀಕ್ಷೆ (ಉಪನ್ಯಾಸಕರ ಅರ್ಹತಾ ಪರೀಕ್ಷೆ) ನಡೆಸಲಿದೆ. ಎರಡನೇ ಶನಿವಾರವು ವಿಶ್ವವಿದ್ಯಾಲಯ ಸೇರಿದಂತೆ ಕೆಲವು ಸರ್ಕಾರಿ ಸಂಸ್ಥೆಗಳಿಗೆ ರಜೆಯ ದಿನವಾಗಿರುತ್ತದೆ. ಆದರೆ ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ಕರ್ತವ್ಯದ ದಿನವಾಗಿರುತ್ತದೆ. ಈ ಪರೀಕ್ಷಾರ್ಥಿಗಳಲ್ಲಿ ಬಹುತೇಕರು ಖಾಸಗಿ ಶಿಕ್ಷಣ ಸಂಸ್ಥೆಗಳ ಅತಿಥಿ ಶಿಕ್ಷಕರು ಅಥವಾ ಅತಿಥಿ ಉಪನ್ಯಾಸಕರಾಗಿರುತ್ತಾರೆ. ಅಂತಹವರು ಪರೀಕ್ಷೆ ಬರೆಯುವ ಸಲುವಾಗಿ ಒಂದು ದಿನದ ರಜೆ ಹಾಕಬೇಕಾಗುತ್ತದೆ. ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ಮಾಸಿಕ ಒಂದು ದಿನ ಮಾತ್ರ ವೇತನಸಹಿತ ರಜೆ ಲಭ್ಯವಿರುತ್ತದೆ.

ಈವರೆಗೆ ಕೆ-ಸೆಟ್ ಪರೀಕ್ಷೆ ಭಾನುವಾರದಂದೇ ನಡೆಯುತ್ತಿತ್ತು. ಆದರೆ ಇದೇ ಮೊದಲ ಬಾರಿಗೆ ಪ್ರಾಧಿಕಾರವು ಕರ್ತವ್ಯದ ದಿನದಂದು ಪರೀಕ್ಷೆ ನಡೆಸುತ್ತಿದೆ. ಪರೀಕ್ಷಾ ಶುಲ್ಕವೆಂದು ಈಗಾಗಲೇ ಸಾವಿರ ರೂಪಾಯಿಯನ್ನು ಪಾವತಿಸಿರುವ ಅಭ್ಯರ್ಥಿಗಳು ಪರೀಕ್ಷಾ ಕೇಂದ್ರಕ್ಕೆ ಹಾಜರಾಗಲು ಸಾರಿಗೆ ವೆಚ್ಚ, ಊಟೋಪಚಾರ ಸೇರಿದಂತೆ ನೂರಾರು ರೂಪಾಯಿ ಖರ್ಚು ಮಾಡಬೇಕಾಗುತ್ತದೆ. ಇದರ ಮೇಲೆ ಪರೀಕ್ಷೆಗೆ ಹಾಜರಾಗಲು ರಜೆ ಹಾಕಿದರೆ ವೇತನ ಕಡಿತದ ಭಾರವನ್ನೂ ಹೊರಬೇಕಾಗುತ್ತದೆ. ಆದ್ದರಿಂದ ಪ್ರಾಧಿಕಾರವು ಪರೀಕ್ಷೆಯನ್ನು ಭಾನುವಾರದಂದು ನಡೆಸಿ ಪರೀಕ್ಷಾರ್ಥಿಗಳಿಗೆ ಅನುಕೂಲ ಮಾಡಿಕೊಡಬೇಕು ಅಥವಾ ಪರೀಕ್ಷೆಗೆ ಹಾಜರಾಗಲಿರುವ ಖಾಸಗಿ ಶಿಕ್ಷಣ ಸಂಸ್ಥೆಯ ಉದ್ಯೋಗಿಗಳಿಗೆ ಕರ್ತವ್ಯದ ರಜೆ (ಒ.ಡಿ.) ನೀಡುವಂತೆ ಸರ್ಕಾರವು ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ನಿರ್ದೇಶಿಸಬೇಕು.

ಅಶೋಕ ಓಜಿನಹಳ್ಳಿ, ಕೊಪ್ಪಳ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಕಾರ್ಪೊರೇಟ್ ತೆರಿಗೆ ಕಡಿತ
ಎರಡೇ ವರ್ಷದಲ್ಲಿ ಸರ್ಕಾರಕ್ಕೆ ₹2.28 ಲಕ್ಷ ಕೋಟಿ ನಷ್ಟ

ಕಾರ್ಪೊರೇಟ್ ಕಂಪನಿಗಳ ಗಳಿಕೆಯ ಮೇಲಿನ ತೆರಿಗೆ ಪ್ರಮಾಣವನ್ನು 2019–20ನೇ ಸಾಲಿನಿಂದ ಅನ್ವಯವಾಗುವಂತೆ ಕೇಂದ್ರ ಸರ್ಕಾರವು ಕಡಿತ ಮಾಡಿತ್ತು. ತೆರಿಗೆ ಕಡಿತ ಮಾಡಿದ ನಂತರದ ಎರಡು ವರ್ಷಗಳಲ್ಲಿ ಕೇಂದ್ರ ಸರ್ಕಾರಕ್ಕೆ ₹2 ಲಕ್ಷ ಕೋಟಿಗೂ ಹೆಚ್ಚು ಮೊತ್ತದ ಆದಾಯ ನಷ್ಟವಾಗಿದೆ. ಕಾರ್ಪೊರೇಟ್ ಕಂಪನಿಗಳಿಗೆ ತೆರಿಗೆ ಕಡಿತ ಮಾಡಿದ್ದರಿಂದ ಆದ ಲಾಭವೇನು ಎಂಬುದಕ್ಕೆ ಕೇಂದ್ರ ಸರ್ಕಾರದ ಬಳಿ ಉತ್ತರವಿಲ್ಲ. ತೆರಿಗೆ ಇಳಿಕೆ ಮಾಡಿದ್ದರಿಂದ ಆದ ಲಾಭದ ಬಗ್ಗೆ ತಾನು ಅಧ್ಯಯನ ನಡೆಸಿಲ್ಲ ಎನ್ನುತ್ತಿದೆ ಕೇಂದ್ರ ಹಣಕಾಸು ಸಚಿವಾಲಯ. ತೆರಿಗೆ ಕಡಿತ ಮಾಡಿದ್ದರಿಂದ ಹೂಡಿಕೆಯಲ್ಲಿ ಗಣನೀಯ ಪ್ರಮಾಣದ ಏರಿಕೆಯೂ ಆಗಿಲ್ಲ

ಪ್ರಜಾವಾಣಿ ವಾರ್ತೆ



ಕಾರ್ಪೊರೇಟ್ ವಲಯದಲ್ಲಿ ಹೂಡಿಕೆಯನ್ನು ಉತ್ತೇಜಿಸಲು ಕೇಂದ್ರ ಸರ್ಕಾರವು 2019–20ನೇ ಆರ್ಥಿಕ ವರ್ಷದಿಂದ ಅನ್ವಯವಾಗುವಂತೆ ಕಾರ್ಪೊರೇಟ್ ತೆರಿಗೆಯನ್ನು ಶೇ 25ರಿಂದ ಶೇ 22ಕ್ಕೆ ಮತ್ತು ಶೇ 22ರಿಂದ ಶೇ 15ಕ್ಕೆ ಇಳಿಕೆ ಮಾಡಿತ್ತು. ತೆರಿಗೆ ಕಡಿತ ಮಾಡುವುದರಿಂದ ಕಂಪನಿಗಳಿಗೆ ಉಳಿತಾಯವಾಗುತ್ತವೆ. ಅವನ್ನು ಹೂಡಿಕೆ ಮಾಡಲು ಕಂಪನಿಗಳು ಬಳಸಿಕೊಳ್ಳುತ್ತವೆ. ಇದರಿಂದ ದೇಶದಲ್ಲಿ ಕಾರ್ಪೊರೇಟ್ ವಲಯದಲ್ಲಿ ಹೂಡಿಕೆ ಹೆಚ್ಚಾಗುತ್ತದೆ ಎಂದು ಕೇಂದ್ರ ಸರ್ಕಾರವು ಹೇಳಿತ್ತು. ತೆರಿಗೆ ಕಡಿತ ಮಾಡಿದಾಗ ಅದಕ್ಕೆ ವಿರೋಧ ಪಕ್ಷಗಳಿಂದ ಭಾರಿ ಆಕ್ಷೇಪ ವ್ಯಕ್ತವಾಗಿತ್ತು. ಇದರಿಂದ ಸರ್ಕಾರಕ್ಕೆ ತೆರಿಗೆ ನಷ್ಟವಾಗುತ್ತದೆ. ಅದನ್ನು ಭರಿಸಿಕೊಳ್ಳಲು ಬೇರೆ ತೆರಿಗೆಗಳನ್ನು ಹೆಚ್ಚಿಸಬೇಕಾಗುತ್ತದೆ. ಅದರಿಂದ ಸಾಮಾನ್ಯ ಜನರಿಗೆ ಹೊರೆಯಾಗುತ್ತದೆ ಎಂಬುದು ವಿರೋಧ ಪಕ್ಷಗಳ ಕಳವಳವಾಗಿತ್ತು. ಸರ್ಕಾರದ ಲೆಕ್ಕಪತ್ರಗಳು ಇದನ್ನೇ ಪುಷ್ಟೀಕರಿಸುತ್ತವೆ. ಕಾರ್ಪೊರೇಟ್ ಕಂಪನಿಗಳಿಗೆ ತೆರಿಗೆ ವಿನಾಯಿತಿ ನೀಡಿದ್ದರಿಂದ 2019–20 ಮತ್ತು 2020–21ರಲ್ಲಿ ಕೇಂದ್ರ ಸರ್ಕಾರಕ್ಕೆ ಒಟ್ಟು ₹2.28 ಲಕ್ಷ ಕೋಟಿ ನಷ್ಟವಾಗಿದೆ.

ನಂತರದ ಆರ್ಥಿಕ ವರ್ಷಗಳಲ್ಲಿ ಎಷ್ಟು ಆದಾಯ ನಷ್ಟವಾಗಿದೆ ಎಂದು ರಾಜ್ಯಸಭೆಯಲ್ಲಿ ಕೇಳಲಾದ ಪ್ರಶ್ನೆಗೆ, 'ಆ ಬಗ್ಗೆ ಇನ್ನೂ ಲೆಕ್ಕಾಚಾರ ಮಾಡಿಲ್ಲ' ಎಂದು ಹಣಕಾಸು ಸಚಿವಾಲಯ ಉತ್ತರಿಸಿದೆ. ಈ ಅವಧಿಯಲ್ಲಿ ಕಾರ್ಪೊರೇಟ್ ವಲಯದಿಂದ ಹೂಡಿಕೆ ಹೆಚ್ಚಾಗಿದೆ ಎಂದು ಹಣಕಾಸು ಸಚಿವಾಲಯ ಹೇಳಿದೆ. ಆದರೆ ಸಚಿವಾಲಯವೇ ನೀಡುವ ದತ್ತಾಂಶಗಳು ಅದರ ಹೇಳಿಕೆಯನ್ನು ಸಮರ್ಥಿಸುವುದಿಲ್ಲ. ಬದಲಿಗೆ ಕಾರ್ಪೊರೇಟ್ ವಲಯದಿಂದ ಪ್ರತಿ ವರ್ಷ ಆಗುತ್ತಿದ್ದ ಹೂಡಿಕೆ ಪ್ರಮಾಣದಲ್ಲಿನ ಏರಿಕೆ ಈಚಿನ ವರ್ಷಗಳಲ್ಲಿ ಇಳಿಕೆಯಾಗಿದೆ.

2017–18ನೇ ಸಾಲಿನಲ್ಲಿ ಕಾರ್ಪೊರೇಟ್ ವಲಯವು ₹17.18 ಲಕ್ಷ ಕೋಟಿಯಷ್ಟು ಹೂಡಿಕೆ ಮಾಡಿತ್ತು. 2018–19ರಲ್ಲಿ ಇದು ₹19.01 ಲಕ್ಷ ಕೋಟಿಗೆ ಏರಿಕೆಯಾಗಿತ್ತು. ಇದು ಶೇ 10.64ರಷ್ಟು ಏರಿಕೆ. ಕಾರ್ಪೊರೇಟ್ ತೆರಿಗೆ ಕಡಿತ ಮಾಡಿದ ವರ್ಷದಲ್ಲಿ ಹೂಡಿಕೆ ಪ್ರಮಾಣದ ಏರಿಕೆಯು ಶೇ 11.5ರಷ್ಟು ದಾಖಲಾಗಿತ್ತು. ಆನಂತರ ಅದು ಇಳಿಕೆಯತ್ತಲೇ ಸಾಗಿದೆ. 2020–21ರಲ್ಲಿ ಹೂಡಿಕೆ ಪ್ರಮಾಣವು ಶೇ 9.49ರಷ್ಟು ಇಳಿಕೆಯಾಗಿತ್ತು. ಅದು ಕೋವಿಡ್ ಇದ್ದ ವರ್ಷವಾದ ಕಾರಣ ಬೆಳವಣಿಗೆಯನ್ನು ಹಿಂದಿನ ಅಥವಾ ಮುಂದಿನ ಆರ್ಥಿಕ ವರ್ಷಕ್ಕೆ ಹೋಲಿಕೆ ಮಾಡಿದರೆ, ನೈಜವಾದ ಬೆಳವಣಿಗೆಯ ಚಿತ್ರಣ ದೊರೆಯುವುದಿಲ್ಲ. ಆದರೆ 2019–20ನೇ ಸಾಲು ಮತ್ತು 2021–22ನೇ ಸಾಲಿನ ಹೂಡಿಕೆಯನ್ನು ಗಮನಿಸಿದರೆ, ಏರಿಕೆ ಪ್ರಮಾಣ ಶೇ 9.26ರಷ್ಟು ಮಾತ್ರ. ಇದು ತೆರಿಗೆ ಕಡಿತ ಮಾಡುವುದಕ್ಕೂ ಮೊದಲು ಇದ್ದ ಹೂಡಿಕೆ ಬೆಳವಣಿಗೆ ದರಕ್ಕಿಂತ (ಶೇ 10.64) ಕಡಿಮೆ. ತೆರಿಗೆ ಕಡಿತದ ವಿನಾಯಿತಿ ನಿರೀಕ್ಷಿತ ಪ್ರಮಾಣದ ಲಾಭವನ್ನು ನೀಡಿಲ್ಲ ಎಂಬುದನ್ನು ಇದು ಸೂಚಿಸುತ್ತದೆ.

2022–23 ಮತ್ತು 2023–24ನೇ ಸಾಲಿನಲ್ಲಿ (ಈವರೆಗೆ) ಆಗಿರುವ ಹೂಡಿಕೆ ಎಷ್ಟು ಎಂಬುದನ್ನು ಸರ್ಕಾರ ಇನ್ನೂ ಲೆಕ್ಕಾಚಾರ ಮಾಡಿಲ್ಲ. ಹೀಗಾಗಿ ಕಾರ್ಪೊರೇಟ್ ತೆರಿಗೆ ಕಡಿತ ಮಾಡಿದ್ದರಿಂದ ದೇಶದ ಆರ್ಥಿಕತೆಗೆ ಈವರೆಗೆ ಆದ ಲಾಭವೇನು ಎಂಬುದನ್ನು ಜನರ ಮುಂದೆ ಇಡಲು ಸರ್ಕಾರದ ಬಳಿ ಉತ್ತರವಿಲ್ಲ.

ಏರಿಕೆ ದರ ಇಳಿಕೆ

ಕಾರ್ಪೊರೇಟ್ ತೆರಿಗೆ ಏರಿಕೆ ಪ್ರಮಾಣವು ಇಳಿಕೆಯಾಗಿದೆ. ತೆರಿಗೆ ಕಡಿತದ ಮೊದಲ ವರ್ಷಗಳಲ್ಲಿ ಹೂಡಿಕೆ ಚಟುವಟಿಕೆಗಳು ಏರಿಕೆಯಾದ ಕಾರಣ ತೆರಿಗೆ ಸಂಗ್ರಹವೂ ಏರಿಕೆಯಾಗಿತ್ತು. ಆದರೆ ನಂತರದ ವರ್ಷಗಳಲ್ಲಿ ಅದೇ ಪ್ರಮಾಣದ ಬೆಳವಣಿಗೆ ಕಾಯ್ದುಕೊಳ್ಳುವಲ್ಲಿ ಕಾರ್ಪೊರೇಟ್ ವಲಯ ವಿಫಲವಾಗಿದೆ. ತೆರಿಗೆ ಕಡಿತದ ಕ್ರಮವು ನಿರೀಕ್ಷಿತ ಲಾಭ ನೀಡಿಲ್ಲ ಎಂಬುದನ್ನು ಇದೂ ಸೂಚಿಸುತ್ತದೆ.

- 2018–19ನೇ ಸಾಲಿಗೆ ಹೋಲಿಸಿದರೆ, 2019–20ನೇ ಸಾಲಿನಲ್ಲಿ ಸಂಗ್ರಹವಾದ ಕಾರ್ಪೊರೇಟ್ ತೆರಿಗೆಯಲ್ಲಿ ಶೇ 16ರಷ್ಟು ಏರಿಕೆ ದಾಖಲಾಗಿತ್ತು
- 2019–20ನೇ ಸಾಲಿಗೆ ಹೋಲಿಸಿದರೆ, 2020–21ನೇ ಸಾಲಿನಲ್ಲಿ ಸಂಗ್ರಹವಾದ ಕಾರ್ಪೊರೇಟ್ ತೆರಿಗೆಯಲ್ಲಿ ಶೇ 17ರಷ್ಟು ಇಳಿಕೆ ದಾಖಲಾಗಿತ್ತು. ಕೋವಿಡ್‌ನ ಕಾರಣದಿಂದ ಆರ್ಥಿಕ ಚಟುವಟಿಕೆಗಳು ಕುಂಠಿತವಾಗಿದ್ದರಿಂದ ಈ ಇಳಿಕೆ ದಾಖಲಾಗಿತ್ತು
- 2022–23ರಲ್ಲಿ ತೆರಿಗೆ ಸಂಗ್ರಹದಲ್ಲಿ ಏರಿಕೆ ಪ್ರಮಾಣವು ಶೇ 17.26ರಷ್ಟು ಇದ್ದದ್ದು, 2023–24ರಲ್ಲಿ ಶೇ 10.5ಕ್ಕೆ ಕುಸಿದಿದೆ. ಇದು 2018–19ನೇ ಸಾಲಿನಲ್ಲಿ ಇದ್ದ ಬೆಳವಣಿಗೆಯ ದರಕ್ಕಿಂತಲೂ ಕಡಿಮೆ

ಸೃಷ್ಟಿಯಾದ ಉದ್ಯೋಗಗಳು ಸರ್ಕಾರಕ್ಕಿಲ್ಲ ಮಾಹಿತಿ

ಕಾರ್ಪೊರೇಟ್ ತೆರಿಗೆ ಕಡಿತ ಮಾಡುವುದರಿಂದ ಉದ್ಯೋಗಾವಕಾಶ ಏರಿಕೆಯಾಗುತ್ತದೆ ಎಂದು ಹಣಕಾಸು ಸಚಿವಾಲಯ ಹೇಳಿತ್ತು. ಸರ್ಕಾರದ ಈ ಕ್ರಮದಿಂದ ಎಷ್ಟು ಉದ್ಯೋಗಗಳು ಸೃಷ್ಟಿಯಾಗಿವೆ ಎಂದು ಕೇಳಲಾದ ಪ್ರಶ್ನೆಗೂ ಸರ್ಕಾರದ ಬಳಿ ಉತ್ತರವಿಲ್ಲ.

'ಈ ಬಗ್ಗೆ ಹಣಕಾಸು ಸಚಿವಾಲಯವು ಯಾವುದೇ ದತ್ತಾಂಶಗಳನ್ನು ನಿರ್ವಹಿಸಿಲ್ಲ' ಎಂದಷ್ಟೇ ಉತ್ತರಿಸಿದೆ.

ಎರಡು ವರ್ಷದಲ್ಲಿ ₹2.28 ಲಕ್ಷ ಕೋಟಿಯಷ್ಟು ತೆರಿಗೆ ಆದಾಯ ನಷ್ಟವಾಗುವಂತಹ ಕ್ರಮ ತೆಗೆದುಕೊಂಡ ನಂತರವೂ ಸರ್ಕಾರವು, ಅದರ ಲಾಭ ಏನು ಎಂಬುದನ್ನು ಪರಿಶೀಲಿಸುವ ಗೋಜಿಗೆ ಹೋಗಿಲ್ಲ. ಇದು ಸರ್ಕಾರದ ಹೊಣೆಗೇಡಿತನಕ್ಕೆ ಹಿಡಿದ ಕನ್ನಡಿ ಎಂದು ಈ ಬಗ್ಗೆ ಪ್ರಶ್ನೆ ಕೇಳಿದ್ದ ಸಿಪಿಎಂ ಸಂಸದ ವಿ.ಶಿವದಾಸನ್ ಹೇಳಿದ್ದರು.

ವಿನಾಯಿತಿ: ₹7.10 ಲಕ್ಷ ಕೋಟಿ ನಷ್ಟ

ಕಾರ್ಪೊರೇಟ್ ತೆರಿಗೆ ಕಡಿತ ಮಾಡುವಾಗ ಹಣಕಾಸು ಸಚಿವಾಲಯವು ಹಲವು ಷರತ್ತುಗಳನ್ನು ವಿಧಿಸಿತ್ತು. ತೆರಿಗೆ ಕಡಿತದ ಲಾಭ ಆಯ್ಕೆ ಮಾಡಿಕೊಳ್ಳುವವರಿಗೆ, ತೆರಿಗೆಯ ಇತರ ವಿನಾಯಿತಿಗಳು ದೊರೆಯುವುದಿಲ್ಲ ಎಂದು ಹೇಳಿತ್ತು. ಹೊಸ ತೆರಿಗೆ ಪದ್ಧತಿಯ ಜತೆಗೆ, ವಿನಾಯಿತಿಗಳು ಇದ್ದ ಹಳೆಯ ತೆರಿಗೆ ಪದ್ಧತಿಯನ್ನೂ ಸರ್ಕಾರ ಉಳಿಸಿಕೊಂಡಿತ್ತು. ಹೆಚ್ಚಿನ ಕಂಪನಿಗಳು ಹಳೆಯ ತೆರಿಗೆ ಪದ್ಧತಿಯಲ್ಲೇ ಉಳಿದವು.

ಇದರಿಂದ ಸರ್ಕಾರಕ್ಕೆ ವಿನಾಯಿತಿ ರೂಪದಲ್ಲೂ ಆದಾಯ ನಷ್ಟವಾಯಿತು. ತೆರಿಗೆ ಕಡಿತದ ರೂಪದಲ್ಲೂ ಆದಾಯ ನಷ್ಟವಾಯಿತು. ಎರಡೂ ಕಡೆ ನಷ್ಟವಾದ ಕಾರಣ, ಒಟ್ಟು ನಷ್ಟದ ಮೊತ್ತ ಭಾರಿ ಪ್ರಮಾಣದಲ್ಲೇ ಏರಿಕೆಯಾಗಿದೆ. 2018–19ರಿಂದ 2022–23ರ ಮಧ್ಯೆ ತೆರಿಗೆಯ ಇತರೆ ವಿನಾಯಿತಿಗಳ ಕಾರಣಕ್ಕೆ ಸರ್ಕಾರಕ್ಕೆ ₹7.10 ಲಕ್ಷ ಕೋಟಿಯಷ್ಟು ನಷ್ಟವಾಗಿದೆ. ತೆರಿಗೆ ಕಡಿತದಿಂದ ಆದ ₹2.28 ಲಕ್ಷ ಕೋಟಿಯನ್ನೂ ಸೇರಿಸಿದರೆ ನಷ್ಟದ ಮೊತ್ತವು ₹9.38 ಲಕ್ಷದಷ್ಟಾಗುತ್ತದೆ.

ತೆರಿಗೆಯ ಇತರ ವಿನಾಯಿತಿಗಳಿಂದ ಆದ ನಷ್ಟ

ವರ್ಷ	ನಷ್ಟ	ತೆರಿಗೆ ಕಡಿತದಿಂದಾದ ನಷ್ಟವನ್ನೂ ಸೇರಿಸಿದಾಗ ಆಗುವ ಒಟ್ಟು ನಷ್ಟ
2018-19	₹1.45 ಲಕ್ಷ ಕೋಟಿ	
2019-20	₹1.63 ಲಕ್ಷ ಕೋಟಿ	₹2.91 ಲಕ್ಷ ಕೋಟಿ (ತೆರಿಗೆ ಕಡಿತದಿಂದಾದ ನಷ್ಟವನ್ನೂ (₹1.28 ಲಕ್ಷ ಕೋಟಿ) ಸೇರಿಸಿದಾಗ ಆಗುವ ಒಟ್ಟು ನಷ್ಟ)
2020-21	₹1.57 ಲಕ್ಷ ಕೋಟಿ	₹2.57 ಲಕ್ಷ ಕೋಟಿ (ತೆರಿಗೆ ಕಡಿತದಿಂದಾದ ನಷ್ಟವನ್ನೂ (₹1 ಲಕ್ಷ ಕೋಟಿ) ಸೇರಿಸಿದಾಗ ಆಗುವ ಒಟ್ಟು ನಷ್ಟ)
2021-22	₹79,526 ಕೋಟಿ	
2022-23	₹1.64 ಲಕ್ಷ ಕೋಟಿ	

ಆಧಾರ: ರಾಜ್ಯಸಭೆಗೆ ಕೇಂದ್ರ ಹಣಕಾಸು ಸಚಿವಾಲಯವು ನೀಡಿದ ಲಿಖಿತ ಉತ್ತರಗಳು, ಕೇಂದ್ರ ಬಜೆಟ್, ಪಿಟಿಐ. ಪ್ರಜಾವಾಣಿ ಗ್ರಾಫಿಕ್ಸ್

ಸಿನಿ ಬಿಟ್ಸ್

ಜಸ್ಟ್ ಪಾಸ್ ಆದವರಿಗೆ ರಘು ಪಾಠ



ರಂಗಾಯಣ ರಘು

ಅಲ್ಲೊಂದು ಕಾಲೇಜು. ಇದರ ವಿಶೇಷ ಏನೆಂದರೆ, ಅದು ಇರುವುದು 'ಜಸ್ಟ್ ಪಾಸ್' ಆದವರಿಗೆ ಮಾತ್ರ! ಕೂದಲೆಳೆ ಅಂತರದಲ್ಲಿ ತೇರ್ಗಡೆಯಾದ ವಿದ್ಯಾರ್ಥಿಗಳಿಗೆಂದೇ ತೆರೆಯಲಾದ ಕಾಲೇಜಿನ ಕಥೆ ಹೊತ್ತು ಬಂದಿದೆ 'ಜಸ್ಟ್ ಪಾಸ್' ಸಿನಿಮಾ.

ಈ ಹಿಂದೆ 'ದೊಡ್ಡಹಟ್ಟಿ ಬೋರೇಗೌಡ' ಎಂಬ ಸಿನಿಮಾ ಮಾಡಿ ಚಂದನವನದಲ್ಲಿ ಗುರುತಿಸಿಕೊಂಡಿರುವ ನಿರ್ದೇಶಕ ಕೆ.ಎಂ.ರಘು ಇದೀಗ ವಿಭಿನ್ನವಾದ ಕಥಾಹಂದರದ ಸಿನಿಮಾಗೆ ಆ್ಯಕ್ಷನ್ ಕಟ್ ಹೇಳಿದ್ದಾರೆ. ಈ ಕಾಲೇಜಿಗೆ ರಂಗಾಯಣ ರಘು ಪ್ರಾಂಶುಪಾಲರಾಗಿದ್ದಾರೆ. ಜೀವಮಾನದ ಸಂಪಾದನೆಯಿಂದ ಕಾಲೇಜು ಆರಂಭಿಸಿ, ವಿದ್ಯಾರ್ಥಿಗಳ ಬಾಳಿಗೆ ಬೆಳಕಾಗುವ ಗುರುವಾಗಿ ಅವರಿಲ್ಲಿ ನಟಿಸಿದ್ದಾರೆ. ಜಸ್ಟ್ ಪಾಸ್ ಆದವರಲ್ಲಿ ಒಬ್ಬೊಬ್ಬರಿಗೆ ಒಂದೊಂದು ಪ್ರತಿಭೆ ಇರುತ್ತದೆ. ಒಂದಷ್ಟು ತಲೆಹರಟೆ ವಿದ್ಯಾರ್ಥಿಗಳೂ ಇರುತ್ತಾರೆ. ಇವರನ್ನೆಲ್ಲ ಪ್ರಾಂಶುಪಾಲರು ಹೇಗೆ ನಿಭಾಯಿಸುತ್ತಾರೆ ಎನ್ನುವುದೇ ಚಿತ್ರದ ಒನ್‌ಲೈನರ್.

ಕೆ.ಎಂ.ರಘು

ಶ್ರೀ ಈ ಚಿತ್ರದ ನಾಯಕ. ಪ್ರಣತಿ ನಾಯಕಿಯಾಗಿ ಬಣ್ಣಹಚ್ಚಿದ್ದಾರೆ. ರಂಗಾಯಣ ರಘು, ಸಾಧುಕೋಕಿಲ, ಪ್ರಕಾಶ್ ತುಮಿನಾಡು, ದೀಪಕ್ ರೈ, ದಾನಪ್ಪ, ಗೋವಿಂದೇ ಗೌಡ ಸೇರಿದಂತೆ ದೊಡ್ಡ ತಾರಾಬಳಗವೇ ಈ ಚಿತ್ರದಲ್ಲಿದೆ. 'ಈ ಚಿತ್ರದಲ್ಲಿ ಕಥೆ ಹಾಗೂ ರಂಗಾಯಣ ರಘು ಅವರ ಪಾತ್ರಕ್ಕೆ ಅದರದೇ ಆದ ತೂಕವಿದೆ. ಅವರಿಗೆ ಕಥೆ ಹೇಳಿದಾಕ್ಷಣ, ಅವರ ಧಿರಿಸು ಹೇಗಿರಬೇಕು ಎಂದು ಅವರೇ ಡಿಸೈನ್ ಮಾಡಿಕೊಂಡರು. ಮೂರು ಪಂಚೆ, ಮೂರು ಶರ್ಟು, ಕೋಟು ಮತ್ತು 2 ಪೇಟ ಇಟ್ಟುಕೊಂಡಿರುವ ಸಾದಾಸೀದಾ ಮನುಷ್ಯ. ಇಡೀ ಸಿನಿಮಾದಲ್ಲಿ ಒಂದೇ ಚಪ್ಪಲಿ ಬಳಸಿದ್ದಾರೆ. ಅವರ ಪಾತ್ರದ ಬಗ್ಗೆ ಮತ್ತಷ್ಟು ವಿಶೇಷತೆಗಳಿವೆ' ಎನ್ನುತ್ತಾರೆ ರಘು.

ರಾಯ್ಸ್ ಎಂಟರ್‌ಟೈನ್‌ಮೆಂಟ್ ಲಾಂಛನದಲ್ಲಿ ಕೆ.ವಿ.ಶಶಿಧರ್ ನಿರ್ಮಿಸುತ್ತಿರುವ ಈ ಚಿತ್ರಕ್ಕೆ ಹರ್ಷವರ್ಧನ್ ರಾಜ್ ಸಂಗೀತ, ಸುಜಯ್ ಕುಮಾರ್ ಛಾಯಾಚಿತ್ರಗ್ರಹಣವಿದೆ. ಫೆಬ್ರುವರಿಯಲ್ಲಿ ಸಿನಿಮಾ ಬಿಡುಗಡೆಗೆ ಚಿತ್ರತಂಡ ನಿರ್ಧರಿಸಿದೆ.

ವಿದೇಶದಲ್ಲಿ 'ಸಂಜು ವೆಡ್ಸ್ ಗೀತಾ–2'

ರಚಿತಾ ರಾಮ್, ಶ್ರೀನಗರ ಕಿಟ್ಟಿ

ಶ್ರೀನಗರ ಕಿಟ್ಟಿ, ರಚಿತಾ ರಾಮ್ ಜೋಡಿಯ 'ಸಂಜು ವೆಡ್ಸ್ ಗೀತಾ–2' ಚಿತ್ರದ ಎರಡು ಹಾಡುಗಳನ್ನು ಸ್ವಿಟ್ಜರ್ಲೆಂಡ್‌ನಲ್ಲಿ ಚಿತ್ರೀಕರಣ ಮಾಡಲಾಗಿದೆ.

'ನಾಲ್ಕು ತಿಂಗಳ ಹಿಂದೆ ಪ್ರಾರಂಭವಾಗಿದ್ದ ಚಿತ್ರದ ಚಿತ್ರೀಕರಣ ಪ್ರಮುಖ ಘಟ್ಟಕ್ಕೆ ಬಂದಿದೆ. ಈ ಚಿತ್ರ ಮೊದಲ ಭಾಗಕ್ಕಿಂತ ಚೆನ್ನಾಗಿ, ವೈಭವಯುತವಾಗಿ ಮೂಡಿಬರುತ್ತಿದೆ. ಚಿತ್ರದಲ್ಲಿ ಐದು ಹಾಡುಗಳಿದ್ದು, ಉಳಿದ ಹಾಡುಗಳನ್ನು ಮುಂಬೈ, ಹೈದರಾಬಾದ್‌ನಲ್ಲಿ ಚಿತ್ರೀಕರಿಸಿ 2024ರ ಏಪ್ರಿಲ್ 1ರಂದು ಚಿತ್ರವನ್ನು ತೆರೆಗೆ ತರುವ ಆಲೋಚನೆ ಇದೆ' ಎಂದರು ನಿರ್ದೇಶಕ ನಾಗಶೇಖರ್.

ಮಹಾನಂದಿ ಕ್ರಿಯೇಶನ್ಸ್ ಚಿತ್ರಕ್ಕೆ ಬಂಡವಾಳ ಹೂಡುತ್ತಿದೆ. ರಂಗಾಯಣ ರಘು, ಸಾಧು ಕೋಕಿಲ ವಿಶೇಷ ಪಾತ್ರಗಳಲ್ಲಿದ್ದಾರೆ. ಶ್ರೀಧರ್ ವಿ. ಸಂಭ್ರಮ್ ಸಂಗೀತ, ಸತ್ಯ ಹೆಗಡೆ ಛಾಯಾಗ್ರಹಣ ಚಿತ್ರಕ್ಕಿದೆ.

'ಸ್ವಿಟ್ಜರ್ಲೆಂಡ್‌ನ ಕೊರೆಯುವ ಚಳಿಯಲ್ಲಿ ಚಿತ್ರೀಕರಿಸಿದ್ದು ಒಂದು ಅನನ್ಯ ಅನುಭವ. ಮೊದಲ ಭಾಗದಲ್ಲಿ ಹಾಡುಗಳು ಹಿಟ್ ಆಗಿದ್ದವು. ಅದೇ ರೀತಿ ಈ ಚಿತ್ರದಲ್ಲಿಯೂ ಹಾಡುಗಳು ಅದ್ಭುತವಾಗಿವೆ. ಚಿತ್ರೀಕರಣ ಕೂಡ ದೃಶ್ಯ ವೈಭವ' ಎಂದರು ನಾಯಕ ಶ್ರೀನಗರ ಕಿಟ್ಟಿ.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ರಾಮನ ಕುರಿತ ಭಜನೆಯೊಂದು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ.

ರಾಮ–ಲಕ್ಷ್ಮಣ ಸೀತೆ, ಹನುಮಂತರ ಚಿತ್ರವೂ ಈ ವಿಡಿಯೊದಲ್ಲಿ ಇದೆ. 'ಈ ರಾಮ ಭಜನೆಯನ್ನು ಯಾರು ಹಾಡುತ್ತಿದ್ದಾರೆಂದು ತಿಳಿದರೆ ನೀವು ಆಶ್ಚರ್ಯಚಕಿತರಾಗುತ್ತೀರಿ! ಅದು ಬೇರೆ ಯಾರೂ ಅಲ್ಲ, ನಮ್ಮ ದೇಶದ ಪ್ರಧಾನ ಮಂತ್ರಿಯವರಾದ ಸನ್ಮಾನ್ಯ ಶ್ರೀ ನರೇಂದ್ರ ಮೋದಿ ಜಿ. ಅಂತಹ ಧಾರ್ಮಿಕ ನಂಬಿಕೆ ಮತ್ತು ಸಂಸ್ಕೃತಿಯನ್ನು ತಿಳಿದಿರುವ ಮತ್ತು ಅರ್ಥಮಾಡಿಕೊಳ್ಳುವ ಪ್ರಧಾನಿ ಇರುವ ದೇಶವು ಧನ್ಯವಾಗಿದೆ....ಇದು ಅತ್ಯಂತ ಹೆಮ್ಮೆಯ ವಿಷಯ. ವೃತ್ತಿಪರ ಗಾಯಕರಂತೆ ಹಾಡಿದ್ದಾರೆ...' ಎನ್ನುವ ವಿವಿಧ ಭಾಷೆಗಳ ಬರಹವೂ ಇರುವ ವಿಡಿಯೊವನ್ನು ಹಂಚಿಕೊಳ್ಳಲಾಗುತ್ತಿದೆ. ಆದರೆ, ಇದು ಸುಳ್ಳು ಸುದ್ದಿ.

ವಿಡಿಯೊದಲ್ಲಿ ದೊರೆತ ಕೆಲವು ಪದಗಳನ್ನು ಗೂಗಲ್‌ನಲ್ಲಿ ಹುಡುಕಾಡಿದಾಗ, ಯೂಟ್ಯೂಬ್‌ನಲ್ಲಿ ಇದೇ ಧ್ವನಿಯ ವಿಡಿಯೊವೊಂದು ದೊರೆಯಿತು. ಈ ವಿಡಿಯೊವು 'ಪೂಜ್ಯ ಪ್ರೇಮ್‌ಭೂಷಣ್‌ಜಿ ಮಹಾರಾಜ್' ಎನ್ನುವ ಖಾತೆಯಿಂದ ಯೂಟ್ಯೂಬ್‌ನಲ್ಲಿ ಮಾರ್ಚ್ 18, 2021ರಂದು ಅಪ್‌ಲೋಡ್ ಆಗಿದೆ. ಜೊತೆಗೆ, ಈ ಹಾಡನ್ನು ದೊಡ್ಡ ಸಂಖ್ಯೆಯ ಭಕ್ತರ ಎದುರು ಪ್ರವಚನದ ಸಂದರ್ಭದಲ್ಲಿ ಹಾಡಿದ್ದಾಗಿದೆ. 'ಪೂಜ್ಯ ಪ್ರೇಮ್‌ಭೂಷಣ್‌ಜಿ ಮಹಾರಾಜ್ ಅವರ ಭಜನೆ, 'ರಾಮ್ ನಾಮ್ ಕೆ ಸಾಬೂನ್ ಸೆ ಜೋ' ಎನ್ನುವ ಕ್ಯಾಪ್ಷನ್ ಕೂಡ ಈ ವಿಡಿಯೊಗೆ ಇದೆ. 'ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿರುವ ವಿಡಿಯೊದ ಧ್ವನಿಯು ಪ್ರೇಮ್‌ಭೂಷಣ್‌ಜಿ ಅವರದ್ದಾಗಿದೆ' ಎಂದು ಈ ಖಾತೆಯನ್ನು ನಿರ್ವಹಿಸುವವರು ತಿಳಿಸಿದ್ದಾರೆ . ಇದೇ ಮಾತನ್ನು ಪ್ರೇಮ್‌ಭೂಷಣ್‌ಜಿ ಅವರ ಕಚೇರಿಯವರೂ ಖಚಿತಪಡಿಸಿದ್ದಾರೆ ಎಂದು ಬೂಮ್‌ಲೈವ್ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ.

ಗುಂಡಣ್ಣ

ನುಡಿ ಬೆಳಗು

ಗೊತ್ತಿಲ್ಲ ಎಂಬುದು ಗೊತ್ತಿರಲಿ

ಪ್ರೊ.ಎಂ. ಕೃಷ್ಣೇಗೌಡ

ಎರಡೂವರೆ ಸಾವಿರ ವರ್ಷಗಳ ಹಿಂದೆ ಪ್ರಾಚೀನ ಗ್ರೀಸ್ ದೇಶದ ಅಥೆನ್ಸ್ ನಗರದಲ್ಲಿದ್ದವನು ಮಹಾಜ್ಞಾನಿ ಸಾಕ್ರಟೀಸ್. ಅವರಿವರು ಹೇಳುವುದಿರಲಿ, ಸ್ವತಃ ಅಥೆನ್ಸ್‌ನ ನಗರದೇವತೆ ಡೆಲ್ಫಿಯೇ ಪ್ರತ್ಯಕ್ಷಳಾಗಿ ಸಾಕ್ರಟೀಸ್ ಈ ಕಾಲದ ಮಹಾಜ್ಞಾನಿ ಎಂದು ಘೋಷಿಸಿಬಿಟ್ಟಿದ್ದಳಂತೆ.

ಒಂದು ದಿನ ಸಾಕ್ರಟೀಸ್ ನನ್ನು ಯಾರೋ ಕೇಳಿದರು- 'ಸಾಕ್ರಟೀಸ್ ನೀನು ಮಹಾಜ್ಞಾನಿ ಅಂತಾರಲ್ಲ, ನಿಜವೆ? ಅದಕ್ಕೆ ಸಾಕ್ರಟೀಸ್ ಹೇಳಿದ- 'ಹೌದು ಹೌದು, ನಾನು ಜ್ಞಾನಿ'. ಕೇಳಿದವರಿಗೆ ಇದ್ಯಾಕೋ ಅಹಂಕಾರದ ಮಾತು ಅನ್ನಿಸಿತು. ಅಲ್ಲ, ಜ್ಞಾನಿಗೆ ಈ ಅಹಂಕಾರ ಶೋಭೆಯೆ? ದೇಶಾವರಿ ಮಾತಿಗಾದರೂ 'ಇಲ್ಲ, ಇಲ್ಲ, ನಾನೇನು ಅಂಥ ಜ್ಞಾನಿಯಲ್ಲ' ಎಂದು ಹೇಳಬೇಕಿತ್ತಲ್ಲವೆ? ಅದಕ್ಕೆ ಅವರು ಮತ್ತೆ ಕೇಳಿದರು- 'ಹೌದಾ? ಹಾಗಾದರೆ ಹೇಳು ಸಾಕ್ರಟೀಸ್, ನೀನು ಹೇಗೆ ಜ್ಞಾನಿ?' ಸಾಕ್ರಟೀಸ್ ಮುಗುಳ್ನಕ್ಕು ಹೇಳಿದ- 'ನಾನು ಹೇಗೆ ಜ್ಞಾನಿ ಅಂದರೆ, ಜಗತ್ತಿನ ಎಷ್ಟೋ ವಿಷಯಗಳಲ್ಲಿ ನನಗೆ ಯಾವ ಜ್ಞಾನವೂ ಇಲ್ಲ ಎಂಬ ಜ್ಞಾನ ಇದೆ'.

ನಮ್ಮಲ್ಲಿ ಎಷ್ಟೋ ಮಂದಿ ಆಗಾಗ ನನಗೆ ಎಲ್ಲಾ ಗೊತ್ತು, ಪ್ರತೀ ಒಂದೂ ಗೊತ್ತು ಎನ್ನುತ್ತಿರುತ್ತಾರೆ. ಮತ್ತು ಹಾಗೆ ಹೇಳುವುದು ಸಭ್ಯತೆಯಲ್ಲ ಎನ್ನುವುದು ಕೂಡಾ ಅವರಿಗೆ ಗೊತ್ತಿರುವುದಿಲ್ಲ.

ಬುದ್ಧ ಹೇಳಿದ್ದು ನೆನಪಾಗುತ್ತಿದೆ- 'ಮಕರಂದದ ಮಳೆ ಸುರಿಯುತ್ತಿದೆ. ಅದು ಸತತವಾಗಿ ಸುರಿಯುತ್ತಲೇ ಇರುತ್ತದೆ. ಆದರೆ ಬಹಳ ಮಂದಿ ಅವರ ಪಾತ್ರೆಗಳನ್ನು ಬೋರಲಿಟ್ಟಿದ್ದಾರೆ. ಪಾತ್ರೆ ಇದ್ದರೂ ಇಲ್ಲದಿದ್ದರೂ ಮಕರಂದದ ಮಳೆ ಮಾತ್ರ ನಿರಂತರ, ಧಾರಾಕಾರ ಸುರಿಯುತ್ತಲೇ ಇರುತ್ತದೆ. ಬೋರಲಿಟ್ಟ ಪಾತ್ರೆಗೆ ಸುರಿಯುತ್ತಿರುವ ಮಕರಂದದ ಒಂದು ಹನಿಯೂ ಸಿಗುವುದಿಲ್ಲ. ಪಾತ್ರೆಯನ್ನು ಬೋರಲಿಡುವುದೆಂದರೆ ಏನು? ತಮ್ಮ ಖಾಲಿತನವನ್ನು ಮುಚ್ಚಿಕೊಳ್ಳುವುದು ಎಂದು ತಾನೆ? ಆದ್ದರಿಂದ ಆ ಮಕರಂದವನ್ನು ಹಿಡಿದುಕೊಳ್ಳಬೇಕೆಂಬವರು ತಮ್ಮ ಪಾತ್ರೆಯನ್ನು ನೇರ ಇಡಬೇಕು, ತಮ್ಮ ಖಾಲಿತನವನ್ನು ಒಪ್ಪಿಕೊಳ್ಳಬೇಕು. ಖಾಲಿ ಪಾತ್ರೆಗೆ, ತುಂಬಿಕೊಳ್ಳುವುದನ್ನು ಬಿಟ್ಟು ಬೇರೇನು ಮಾಡುವುದಿದೆ? ಆದರೆ ನಮ್ಮ ಅಹಂಕಾರ ನಮ್ಮ ಖಾಲಿತನವನ್ನು ಒಪ್ಪಿಕೊಳ್ಳಲು ನಿರಾಕರಿಸುತ್ತದೆ. ಬೋರಲಾಗಿ ಬಿದ್ದುಕೊಂಡು ಖಾಲಿಯಾಗಿಯೇ ಉಳಿಯುತ್ತದೆ'.

ಇಲ್ಲಿ ಬುದ್ಧ ಹೇಳಿದುದನ್ನು ಓದಿದ ಮೇಲೆ ಸಾಕ್ರಟೀಸ್ ಹೇಳಿದುದನ್ನು ಮತ್ತೊಮ್ಮೆ ಓದಿ ನೋಡಿ. ನನಗೆ ಗೊತ್ತಿಲ್ಲ ಎಂಬುದು ಗೊತ್ತಿದೆ ಎಂಬ ಅವನ ಮಾತು ವಿಶದವಾಗುತ್ತದೆ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ | ಶುಕ್ರವಾರ ಜನವರಿ 5, 2024

ಶ್ರೀ ಶೋಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಹೇಮಂತ ಋತು ತಿಥಿ: ಮಾರ್ಗಶಿರ ಕೃಷ್ಣ ನವಮಿ ಗಂ. 23-47 ನಕ್ಷತ್ರ: ಚಿತ್ತಾ ಗಂ. 19-50 ಯೋಗ: ಅತಿಗಂಡ ಗಂ. 06-49 ಕರಣ: ತೈತಿಲ ಗಂ. 11-01, ಧನು ಮಾಸದ 20 ನೇ ದಿನ, ಮಳೆನಕ್ಷತ್ರ: ಪೂರ್ವಾಷಾಢ 3.

ರಾಹುಕಾಲ: ಬೆಳಿಗ್ಗೆ 10-30 – 12-00

ಸೂರ್ಯೋದಯ: 06-58 ಸೂರ್ಯಾಸ್ತ : 06-13

ಮುಸ್ಲಿಂ ದಿನಾಂಕ : 22 ಜುಮಾದುಸ್ಸಾನಿ

ಅದೃಷ್ಟ ಸಂಖ್ಯೆ: 2, 1

ಮೇಷ: ವೃಥಾ ಕಾಲಹರಣ ಮಾಡಿದರೆ ನಷ್ಟ ಅನುಭವಿಸುವಿರಿ. ವೃತ್ತಿಯಲ್ಲಿ ನಾಯಕತ್ವದ ಗುಣಗಳನ್ನು ಪ್ರದರ್ಶಿಸಲು ವೇದಿಕೆ ಸಿಗಲಿದೆ. ವಿದ್ಯಾರ್ಥಿಗಳಿಗೆ ಸಾಧನೆಗಾಗಿ ಹೆಚ್ಚಿನ ಅವಕಾಶ ಸಿಗುವುದು.

ವೃಷಭ: ದೈವಾನುಗ್ರಹದಿಂದ ಸಾಹಸ ಕಾರ್ಯಗಳು ಕೈಗೂಡಿ ನಿರೀಕ್ಷಿತ ಫಲ ಲಭಿಸಲಿದೆ. ಮಾರ್ಗದರ್ಶಕರ ವಾಕ್ಯ ಅನುಸರಿಸಿದರೆ ಜೀವನ ರೂಪಿಸಿಕೊಳ್ಳಲು ಸುಲಭವಾಗುತ್ತದೆ. ಶೀತ ಸಂಬಂಧಿತ ರೋಗ ಕಾಡಬಹುದು.

ಮಿಥುನ: ಧನ ಆದಾಯಕ್ಕೆ ಯಾವುದೇ ಅಡ್ಡಿಗಳು ಇರುವುದಿಲ್ಲ. ಹಾಗೆ ಹಿರಿಯರ ಆರೋಗ್ಯದ ವಿಚಾರದಲ್ಲಿ ವ್ಯಯ ಅನಿವಾರ್ಯವಾಗುವುದು. ಬಂಧನದ ಭೀತಿ ಅಥವಾ ಮಾನ ಹಾನಿಯಾಗುವ ಲಕ್ಷಣಗಳಿದೆ. ಜಾಗ್ರತರಾಗಿರಿ.

ಕರ್ಕಾಟಕ: ದೊಡ್ಡ ವ್ಯವಹಾರವನ್ನು ಗಮನದಲ್ಲಿಟ್ಟುಕೊಂಡು ಈ ದಿನ ಸಾಲ ಮಾಡುವುದು ಸರಿಯಲ್ಲ. ದೊಡ್ಡ ಸಮಾರಂಭವೊಂದರಲ್ಲಿ ಪಾಲ್ಗೊಳ್ಳುವ ಉತ್ತಮ ಅವಕಾಶ ಲಭಿಸುವುದು. ಕೆಲಸ ಹೊಸ ಪ್ರಯತ್ನ ಇರಲಿ.

ಸಿಂಹ: ಯೋಜನೆಯ ಬೆಳವಣಿಗೆಗೆ ಸಂಬಂಧಿಸಿದವರ ಜತೆ ಚರ್ಚೆಯನ್ನು ನಡೆಸಿ ಬಾಕಿ ಇದ್ದ ಯೋಜನೆಯನ್ನು ಪೂರ್ಣಗೊಳಿಸುವ ಬಗ್ಗೆ ಗಮನಹರಿಸಿ. ಪೋಷಕರಲ್ಲಿ ವೈವಾಹಿಕ ಮಾತುಕತೆಗೆ ಸೂಕ್ತ ವಾತಾವರಣ ಪಡೆಯುವಿರಿ.

ಕನ್ಯಾ: ಹೂವಿನ ಬೆಳೆಗಾರರಿಗೆ, ಹೈನು ಉದ್ಯಮಿಗಳಿಗೆ ಲಾಭವಿದ್ದರೂ ಮಧ್ಯವರ್ತಿಗಳ ಕಿರಿಕಿರಿ ಇರಲಿದೆ. ಕೌಟುಂಬಿಕ ವಿಷಯಗಳತ್ತ, ಅದರಲ್ಲೂ ಮಡದಿಯ ಆರೋಗ್ಯದ ವಿಚಾರದಲ್ಲಿ ಗಮನಹರಿಸಿ.

ತುಲಾ: ನಿರುದ್ಯೋಗಿಗಳಿಗೆ ಹಂಗಾಮಿ ನೌಕರಿಯನ್ನು ಒಪ್ಪಿಕೊಳ್ಳುವುದು ಅನಿವಾರ್ಯ. ಸುತ್ತಲಿನ ಆಗು-ಹೋಗುಗಳನ್ನು ಅರಿತು ವ್ಯವಹಾರದಲ್ಲಿ ಮುಂದುವರಿಯಿರಿ. ಭೂ ವ್ಯವಹಾರಗಳಿಂದ ಲಾಭ ಗಳಿಸಬಹುದು.

ವೃಶ್ಚಿಕ: ಆಸ್ತಿಗೆ ಸಂಬಂಧಪಟ್ಟ ನಿರ್ಧಾರಗಳನ್ನು ಮನೆಯವರೊಂದಿಗೆ ಚರ್ಚಿಸಿ ಕೈಗೊಳ್ಳುವುದು ಉತ್ತಮ. ವಕೀಲರು, ನ್ಯಾಯಾಂಗ ಇಲಾಖಾ ಅಧಿಕಾರಿಗಳು ಪ್ರಗತಿ ಕಾಣುವರು. ಸುಖ ಭೋಜನ ಪ್ರಾಪ್ತಿಯಾಗಲಿದೆ.

ಧನು: ಮಾನಸಿಕವಾಗಿ ಕುಗ್ಗದೇ ಧೈರ್ಯದಿಂದ ಇರುವುದು ಈ ದಿನದ ಮೂಲ ಮಂತ್ರವಾಗಿದೆ. ಶುದ್ಧಹಸ್ತದ ಗುಣದಿಂದ ಹಿರಿಯ ವ್ಯಕ್ತಿಯೊಬ್ಬರ ಜತೆ ಕೆಲಸ ಮಾಡುವ ಅವಕಾಶ ಸಿಗುತ್ತದೆ.

ಮಕರ: ಗುರು-ಹಿರಿಯರ ಮಾತುಗಳನ್ನು ಅಲ್ಲಗಳೆಯುವುದು ಅಥವಾ ಅವರಲ್ಲಿ ವಾದ-ವಿವಾದವನ್ನು ಬೆಳೆಸುವುದು ಸರಿಯಲ್ಲ. ಷೇರು ಬಂಡವಾಳ ವ್ಯವಹಾರಗಳಿಂದ ನಿರೀಕ್ಷೆಗೆ ಮೀರಿದ ಲಾಭ ಪಡೆಯುವಿರಿ.

ಕುಂಭ: ಈ ದಿನ ನೀವು ಕೈ ಹಾಕಿದ ಎಲ್ಲಾ ನೂತನ ಕಾರ್ಯಗಳಲ್ಲಿಯೂ ಅಡೆತಡೆ ಉಂಟಾಗುತ್ತದೆ. ಆದರೆ ಹೆದರಬೇಡಿ. ಬಿಡುವಿಲ್ಲದ ಕೆಲಸದಲ್ಲೂ ಮನಸ್ಸಿಗೆ ಒಂದು ತರಹದ ನೆಮ್ಮದಿ ಇರುವುದು ಆಶ್ಚರ್ಯವೆನಿಸಲಿದೆ.

ಮೀನ: ಧಾರ್ಮಿಕತೆಯ ಫಲವಾಗಿ ಮನಸ್ಸು ನಕಾರಾತ್ಮಕ ಭಾವನೆಯಿಂದ ಹೊರಬರಲಿದೆ. ನಟನೆ ವೃತ್ತಿಯವರಿಗೆ ಹೆಚ್ಚಿನ ಜನಪ್ರಿಯತೆ ಮತ್ತು ಅವಕಾಶವಿರುವುದು. ಅವಿವಾಹಿತರಿಗೆ ವಿವಾಹ ಯೋಗವಿರುವುದು.

ಪದಬಂಧ 5551

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಸಮತೂಕವಿಲ್ಲದಿರುವಿಕೆ (4)
3.ಈಕೆ ನಿರ್ಭಾಗ್ಯಳಾದ ಹೆಂಗಸು (4)
5.ಕ್ರೂರವಾದ ಕೊಲೆಯಿದು (3)
6.ಆಕರದಲ್ಲಿರುವ ಕೈ ಕಾಣುತ್ತಿದೆಯೇ? (2)
8.ಉರಗದ ಎದೆ (2)
9.ಸಭೆಯನ್ನು ವರ್ಜಿಸುವುದು (4)
11.ಶಾಕಾಹಾರವನ್ನು ಹೀಗೂ ಹೇಳುವರು (4)
12.ನಾರಿಕೇಳದಲ್ಲಿರಿಸಿದ ಕೊಳವೆ (2)
13.ಉಲ್ಟಾಪಲ್ಟಾ ಬಿದ್ದಿರುವ ಶರ (2)
15.ಲಿಖಿತ ಮೂಲಕ ಮಾಡಿಕೊಳ್ಳುವ ಅರ್ಜಿ (3)
17.ಅಕ್ಕಿ ತೊಳೆದ ನೀರು (4)
18.ಕನ್ನ ಹಾಕಿದವನ ಚಾಳೀಸು! (4)

ಮೇಲಿಂದ ಕೆಳಕ್ಕೆ

1.ಒಂದೇ ಒಂದು ಎಂದು ಹೀಗೆ ಹೇಳಿ (3)
2.ಹಸುವಿನ ಮರಿಯಿಲ್ಲಿ ಉಲ್ಟಾ ನಿಂತಿದೆಯಲ್ಲಾ? (2)
3.ಅಬಲೆಗೆ ಕಾಣಿಸಿದ ತರಂಗ! (2)
4.ಅತಿಶಯವಾದುದು ಅಥವಾ ವಿಶೇಷವಾದುದು! (3)
7.ರುಚಿಕರವಾದ ಭೋಜನ (5)
8.ಕೆಲಸಕ್ಕೆ ಬೇಕಾದ ಸಾಧನ (5)
10.ಗಂಡಾನೆ ತಿರುಗಿ ನಿಂತಿದೆ (3)
12.ನಾವೆಯನ್ನು ನಡೆಸುವವನು (3)
14.ಬಾಲ ಹಚ್ಚಿಕೊಂಡಿರುವ ಹುಡುಗ! (3)
15.ಕಡಿಗತ್ತಿಯನ್ನು ಹೀಗೂ ಹೇಳುವರು (2)
16.ಕವಿತೆ ಬರೆಯುವವನು ಏಕೋ ತಿರುಗಿದ್ದಾನಲ್ಲಾ? (2)



5550ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
2.ಜಯಂತ 4.ಮಥನ
5.ಜಬರ್ದಸ್ತಿ 6.ನಾಮಧೇಯ
7.ಕರ 9.ರೀನಾ
13.ಹಾದಿಹೋಕ 14.ಉಪಕಾರಿ
15.ರಥಜ 16.ಚರ್ವಣ

ಮೇಲಿಂದ ಕೆಳಕ್ಕೆ:
1.ಗ್ರಾಮದೇವತೆ 2.ಜನನಾಯಕ
3.ಮರ್ದನ 5.ಜಯಭೇರಿ
8.ರಹದಾರಿ 10.ನಾಮಕರಣ
11.ದಂತಮಂಜನ 12.ವಿಪತ್ತು

ಸುಡೊಕು 5936

	8			9		5		3
6		5						
	9		1		5		7	6
		4					5	
	5					1		9
2				5	9		6	
1			9					
	3					6	4	1
8		6		3			9	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5935 ಸುಡೊಕು

4	9	3	7	2	8	6	5	1
8	6	2	1	4	5	7	9	3
5	7	1	9	3	6	2	4	8
2	4	6	3	5	1	8	7	9
1	3	7	2	8	9	4	6	5
9	8	5	4	6	7	3	1	2
7	2	8	5	1	4	9	3	6
6	1	9	8	7	3	5	2	4
3	5	4	6	9	2	1	8	7

ಷೇರುಪೇಟೆ ವಹಿವಾಟು 490



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	21,517
ಇಂದಿನ ಅಂತ್ಯ	21,658
▲	141
ದಿನದ ಗರಿಷ್ಠ	21,685

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹615
12 ಮೊಟ್ಟೆಗೆ	₹80
ಮೈಸೂರು	
100 ಮೊಟ್ಟೆಗೆ	₹615

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1610 (1610)
ಸೋಯಾ (ರಿಫೈನ್ಡ್)	₹875 (870)
ಸೂರ್ಯಕಾಂತಿ (ರಿಫೈನ್ಡ್)	₹885 (885)
ಪಾಮೋಲಿನ್	₹824 (819)

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹175-486
ದ್ವಿತಳಿ (ಬಿ.ವಿ)	₹321-577

ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹152.50
ಆರ್‌ಎಸ್‌ಎಸ್-5	₹148.50
ಗುಡ್ ಲಾಟ್	₹131.50

ವಿನಿಮಯ ದರ

$ ಡಾಲರ್	83.24
£ ಪೌಂಡ್	105.58
€ ಯುರೊ	91.04
¥ ಯೆನ್ (100ಕ್ಕೆ)	58

ಕೊಬ್ಬರಿ ಧಾರಣೆ

(ಕ್ವಿಂಟಲ್‌ಗೆ)

ಅರಸೀಕೆರೆ	₹9700-9700
ಕೆ.ಆರ್.ಪೇಟೆ	₹8209-8209
ತಿಪಟೂರು	₹8000-10500
ತುಮಕೂರು	₹3850-4400

ಎರಡು ದಿನದ ನಂತರ ಜಿಗಿದ ಷೇರುಪೇಟೆ • ಸೆನ್ಸೆಕ್ಸ್ 490, ನಿಫ್ಟಿ 141 ಅಂಶ ಏರಿಕೆ

₹3.24 ಲಕ್ಷ ಕೋಟಿ ಸಂಪತ್ತು ಗಳಿಕೆ

ನವದೆಹಲಿ (ಪಿಟಿಐ): ವರ್ಷದ ಮೊದಲ ದಿನ ಮಾತ್ರ ಅಲ್ಪ ಏರಿಕೆ ಕಂಡು, ಸತತ ಎರಡು ದಿನಗಳಿಂದ ಇಳಿಕೆ ಕಂಡಿದ್ದ ಷೇರುಪೇಟೆ ಗುರುವಾರ ಏರಿಕೆ ಕಂಡಿದೆ. ಇದರಿಂದ ಹೂಡಿಕೆದಾರರ ಸಂಪತ್ತು ಒಂದೇ ದಿನ ₹3.24 ಲಕ್ಷ ಕೋಟಿಯಷ್ಟು ಹೆಚ್ಚಳವಾಗಿದೆ.

ಮುಂಬೈ ಷೇರುಪೇಟೆ ಸೂಚ್ಯಂಕ (ಬಿಎಸ್‌ಇ) ಸೆನ್ಸೆಕ್ಸ್ 490 ಅಂಶ ಏರಿಕೆ ಕಂಡು 71,847ರಲ್ಲಿ ಸ್ಥಿರಗೊಂಡಿತು. ವಹಿವಾಟಿನ ವೇಳೆ 598 ಅಂಶಕ್ಕೇರಿ, 71,954 ಅನ್ನು ಮುಟ್ಟಿತ್ತು. ಬಿಎಸ್‌ಇ ನೋಂದಾಯಿತ ಕಂಪನಿಗಳ ಮಾರುಕಟ್ಟೆ ಬಂಡವಾಳ ₹3.24 ಲಕ್ಷ ಕೋಟಿಯಷ್ಟು ಏರಿಕೆ ಆಗಿದೆ. ನೋಂದಾಯಿತ ಕಂಪನಿಗಳ ಒಟ್ಟು ಮಾರುಕಟ್ಟೆ ಮೌಲ್ಯವು ₹368 ಲಕ್ಷ ಕೋಟಿಗೆ ಏರಿಕೆಯಾಗಿದೆ.

ಇದು ಈ ವರೆಗಿನ ಗರಿಷ್ಠ ಮೌಲ್ಯವಾಗಿದೆ.

ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ (ಎನ್‌ಎಸ್‌ಇ) ನಿಫ್ಟಿ 141 ಅಂಶ ಏರಿಕೆಯಾಗಿ 21,658ಕ್ಕೆ ತಲುಪಿತು.

ಎರಡು ಋಣಾತ್ಮಕ ವಹಿವಾಟಿನ ದಿನಗಳ ನಂತರ, ಪ್ರಮುಖ ಬ್ಯಾಂಕ್‌ಗಳ ಮಾಸಿಕ ವಹಿವಾಟು ವರದಿಗಳಲ್ಲಿ ಕಂಡು ಬಂದ ವಹಿವಾಟು ಬೆಳವಣಿಗೆಯು ಮಾರುಕಟ್ಟೆ ಪುಟಿದೇಳಲು ಕಾರಣವಾಯಿತು. ಸಾಲ ಹೆಚ್ಚಳ, ಮನೆಗಳ ಮಾರಾಟದಲ್ಲಿ ಏರಿಕೆಯ ನಿರೀಕ್ಷೆಯಿಂದಾಗಿ ಬ್ಯಾಂಕು ಮತ್ತು ರಿಯಲ್ ಎಸ್ಟೇಟ್ ವಲಯದ ಷೇರುಗಳು ಲಾಭ ಗಳಿಸಿದವು ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

ಬಜಾಜ್ ಫೈನಾನ್ಸ್, ಎನ್‌ಟಿಪಿಸಿ, ಇಂಡಸ್‌ಇಂಡ್ ಬ್ಯಾಂಕ್, ಆಕ್ಸಿಸ್ ಬ್ಯಾಂಕ್, ಟಾಟಾ ಮೋಟರ್ಸ್, ನೆಸ್ಲೆ, ಪವರ್ ಗ್ರಿಡ್, ಇನ್ಫೊಸಿಸ್, ಬಜಾಜ್ ಫಿನ್‌ಸರ್ವ್ ಮತ್ತು ಎಚ್‌ಡಿಎಫ್‌ಸಿ ಬ್ಯಾಂಕ್ ಗಳಿಕೆ ಕಂಡಿವೆ. ಎಚ್‌ಸಿಎಲ್ ಟೆಕ್, ಮಹೀಂದ್ರ ಆ್ಯಂಡ್ ಮಹೀಂದ್ರ, ಟಾಟಾ ಸ್ಟೀಲ್ ಮತ್ತು ಹಿಂದೂಸ್ತಾನ್ ಯೂನಿಲಿವರ್ ಇಳಿಕೆ ಕಂಡಿವೆ.

ಬಿಎಸ್‌ಇ ಮಿಡ್‌ಕ್ಯಾಪ್ ಮತ್ತು ಸ್ಮಾಲ್‌ಕ್ಯಾಪ್ ಸೂಚ್ಯಂಕಗಳು ಏರಿಕೆ ಕಂಡಿವೆ. ರಿಯಾಲ್ಟಿ, ಯುಟಿಲಿಟಿ, ದೂರಸಂಪರ್ಕ, ಸೇವೆಗಳು, ಹಣಕಾಸು ಸೇವೆಗಳು ಗಳಿಕೆ ಕಂಡಿದ್ದರೆ, ಆಟೊ ಮತ್ತು ಲೋಹ ಇಳಿಕೆಯಾಗಿವೆ.

ಚಿನ್ನದ ದರ ₹420, ಬೆಳ್ಳಿ ₹1,900 ಇಳಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಗುರುವಾರ ಚಿನ್ನ ಮತ್ತು ಬೆಳ್ಳಿ ದರ ಇಳಿಕೆ ಆಗಿದೆ. ಚಿನ್ನದ ದರ 10 ಗ್ರಾಂ.ಗೆ ₹420 ಇಳಿಕೆಯಾಗಿ, ₹63,550ರಂತೆ ಮಾರಾಟವಾಯಿತು.

ಬೆಳ್ಳಿ ಧಾರಣೆ ಕೆ.ಜಿಗೆ ₹1,900 ಕಡಿಮೆಯಾಗಿ, ₹76,900ಕ್ಕೆ ತಲುಪಿದೆ. ಜಾಗತಿಕ ಮಾರುಕಟ್ಟೆಯಲ್ಲಿ ಚಿನ್ನದ ದರ ಇಳಿಕೆ ಆಗಿದ್ದು, ದೇಶೀಯ ಮಾರುಕಟ್ಟೆಯ ಮೇಲೂ ಪರಿಣಾಮ ಬೀರಿತು ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್‌ನ ಹಿರಿಯ ವಿಶ್ಲೇಷಕ ಸೌಮಿಲ್ ಗಾಂಧಿ ಹೇಳಿದ್ದಾರೆ.

ಜಾಗತಿಕ ಮಾರುಕಟ್ಟೆಯಲ್ಲಿ ಚಿನ್ನ ಮತ್ತು ಬೆಳ್ಳಿ ಒಂದು ಔನ್ಸ್‌ಗೆ (28.34 ಗ್ರಾಂ) ಕ್ರಮವಾಗಿ 2,042 ಡಾಲರ್ ಮತ್ತು 23.05 ಡಾಲರ್‌ನಂತೆ ಮಾರಾಟವಾಗಿದೆ.

ಸುಧಾ, ಮಯೂರ ಓದಿ

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಭಾವಪೂರ್ಣ ಶ್ರದ್ಧಾಂಜಲಿ

ಶ್ರೀ ಹಿರೋಳ್ಳಿ ರೇವಣಸಿದ್ದಪ್ಪ

ಉಪ ಔಷಧ ನಿಯಂತ್ರಕರು, ಬಳ್ಳಾರಿ ವಿಭಾಗ, ಬಳ್ಳಾರಿ ಇವರು ದಿನಾಂಕ 04-01-2024 ರಂದು ಗುರುವಾರ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರ ಆತ್ಮಕ್ಕೆ ಶಾಂತಿ ಲಭಿಸಲಿ ಎಂದು ಪ್ರಾರ್ಥಿಸುತ್ತೇವೆ.

ಕರ್ನಾಟಕ ಔಷಧ ನಿಯಂತ್ರಣ ಇಲಾಖೆ ಅಮಲುಜಾರಿ ಅಧಿಕಾರಿಗಳ ಸಂಘ (ನೊಂ)

ಸವಿನೆನಪು



ಶ್ರೀ ಕೆ. ಬಿ. ಮಲ್ಲಪ್ಪ

ನಿಧನ: 05-01-2013

ಮಾಜಿ ಸಚಿವರು, ಕರ್ನಾಟಕ ಸರ್ಕಾರ
ಅರಕಲಗೂಡು ತಾ॥ ಹಾಸನ ಜಿಲ್ಲೆ

ಸದಾ ನಿಮ್ಮ ನೆನಪಿನಲ್ಲಿರುವ...
ಪತ್ನಿ-ಶಾರದಮ್ಮ ಮತ್ತು ಕುಟುಂಬದವರು ಹಾಗೂ ಅಪಾರ ಬಂಧುಮಿತ್ರರು
ಫೋ: 9448134242

ಚಿರಸ್ಮರಣೆ

ಸಿ. ಅಪ್ಪಾಜಿ

(ಮಾಜಿ ಶಾಸಕರು, ಕನಕಪುರ)

ನಿಮ್ಮ ಆದರ್ಶ ಜೀವನ ನಮ್ಮ ಇಂದಿನ ಜೀವನದ ಮಾರ್ಗದೀಪವಾಗಿದೆ ನೀವು ಇಂದಿಗೂ ನಮ್ಮ ಮನದಲ್ಲಿ ನಮ್ಮೊಡನೆ ಹಚ್ಚ ಹಸಿರಾಗಿ ನಮ್ಮ ಬಾಳಿಗೆ ನಂದಾದೀಪವಾಗಿ ಪ್ರಜ್ವಲಿಸುತ್ತಿದ್ದೀರಿ.

ಮಗ, ಸೊಸೆ, ಮೊಮ್ಮಕ್ಕಳು ಮತ್ತು ಬಂಧು ಮಿತ್ರರು.

For Online Classified Booking
Name Change / Education / Property / Job / Services & many more
Log on to :
dhclassifieds.com

21ನೇ ವರ್ಷದ ಚಿರಸ್ಮರಣೆ



ಎನ್. ಗೋವಿಂದಯ್ಯ
ಜನನ: 18-09-1936
ಮರಣ: 05-01-2003

ನಿಮ್ಮ ಸನ್ಮಾರ್ಗದಲ್ಲಿ ಮುನ್ನಡೆಯುತ್ತಿರುವ ಶ್ರೀಮತಿ ಅಮ್ಮಯ್ಯಮ್ಮ ಮತ್ತು ಕುಟುಂಬವರ್ಗ

1) ಬನಶಂಕರಿ ಕೆಮಿಕಲ್ಸ್ ಪ್ರೈ. ಲಿ., ಮಾಲೂರು
2) ಬನಶಂಕರಿ ಇಂಡಸ್ಟ್ರೀಸ್ ಪ್ರೈ. ಲಿ.
3) ಬನಶಂಕರಿ ಕೆಮಿಕಲ್ಸ್ ಪ್ರೈ. ಲಿ. (SEZ ಹಾಸನ)
4) ಎಲ್. ಎನ್. ಸಾಲ್ವೆಂಟ್ಸ್ ಪ್ರೈ. ಲಿ., ಹೊಸಕೋಟೆ
5) ಇಂಡ್ ಪ್ಯೂರ್ ಕೆಮ್
6) ಬಿ.ಎಸ್.ಕೆ. ಪ್ಯೂರ್ ಕೆಮ್, ಬೊಮ್ಮಸಂದ್ರ
7) ಆದಿತ್ಯ ಕೆಮ್ ಫಾರ್ಮಾ
8) ಎಲ್. ಎನ್. ಬ್ರಿವರೀಸ್ ಪ್ರೈ. ಲಿ., ಚಾಮರಾಜನಗರ
9) ಭವಾನಿ ಎಂಟರ್‌ಪ್ರೈಸಸ್, ಪೀಣ್ಯ
10) ಶ್ರೀ ಸಾಯಿ ಇಂಡಸ್ಟ್ರೀಸ್, ಮದ್ದೂರು
11) ಬಿ.ಎಸ್.ಕೆ. ಸಾಲ್ವೆಂಟ್ಸ್ ಅಂಡ್ ಕೆಮಿಕಲ್ಸ್ ಪ್ರೈ.ಲಿ.

– ಸಿಬ್ಬಂದಿ ವರ್ಗ

45 ಕೋಟಿ ದಾಟಿದ ಜಿಯೊ ಬಳಕೆದಾರರು

ನವದೆಹಲಿ (ಪಿಟಿಐ): ದೇಶದ ಅತಿ ದೊಡ್ಡ ದೂರಸಂಪರ್ಕ ಕಂಪನಿಯಾದ ರಿಲಯನ್ಸ್ ಜಿಯೊ 2023ರ ಅಕ್ಟೋಬರ್‌ನಲ್ಲಿ ಹೊಸದಾಗಿ 31.59 ಲಕ್ಷ ಮತ್ತು ಭಾರ್ತಿ ಏರ್‌ಟೆಲ್ 3.52 ಲಕ್ಷದಷ್ಟು ಮೊಬೈಲ್ ಚಂದಾದಾರರನ್ನು ಸೇರ್ಪಡೆ ಮಾಡಿಕೊಂಡಿವೆ ಎಂದು ಭಾರತೀಯ ದೂರಸಂಪರ್ಕ ನಿಯಂತ್ರಣ ಪ್ರಾಧಿಕಾರದ (ಟ್ರಾಯ್) ಮಾಸಿಕ ಚಂದಾದಾರರ ಅಂಕಿ ಅಂಶಗಳು ತಿಳಿಸಿವೆ.

ವೋಡಾಫೋನ್ ಐಡಿಯಾ ಅಕ್ಟೋಬರ್‌ನಲ್ಲಿ 20.44 ಲಕ್ಷ ಚಂದಾದಾರರನ್ನು ಕಳೆದುಕೊಂಡಿದೆ. 31.59 ಲಕ್ಷ ಬಳಕೆದಾರರ ಸೇರ್ಪಡೆಯೊಂದಿಗೆ ಜಿಯೊ ಚಂದಾದಾರರ ಸಂಖ್ಯೆ ಸೆಪ್ಟೆಂಬರ್‌ನಲ್ಲಿದ್ದ 44.92 ಕೋಟಿಯಿಂದ 45.23 ಕೋಟಿಗೆ ಏರಿಕೆ ಆಗಿದೆ. 3.52 ಲಕ್ಷ ಚಂದಾದಾರರ ಸೇರ್ಪಡೆಯಿಂದ, ಏರ್‌ಟೆಲ್ ಬಳಕೆದಾರರ ಸಂಖ್ಯೆಯು ಅಕ್ಟೋಬರ್‌ನಲ್ಲಿ 37.82 ಕೋಟಿಗೆ ಹೆಚ್ಚಳವಾಗಿದೆ.

ವೋಡಾಫೋನ್ ಐಡಿಯಾ ಲಿಮಿಟೆಡ್‌ನ (ವಿಐಎಲ್) ಚಂದಾದಾರರ ಸಂಖ್ಯೆಯು 22.54 ಕೋಟಿ ಆಗಿದೆ ಎಂದು ಟ್ರಾಯ್ ಅಂಕಿ–ಅಂಶಗಳು ತಿಳಿಸಿವೆ. ವಿಐಎಲ್ ತೀವ್ರ ಹಣಕಾಸು ಮುಗ್ಗಟ್ಟು ಎದುರಿಸುತ್ತಿದೆ. ಜೊತೆಗೆ, ಚಂದಾದಾರರ ಸಂಖ್ಯೆ ಇಳಿಯುತ್ತಲೇ ಸಾಗಿದೆ.

ಇಂಧನ ಶುಲ್ಕ ಹಿಂಪಡೆದ ಇಂಡಿಗೋ

ನವದೆಹಲಿ (ಪಿಟಿಐ): ದೇಶದ ಅತಿದೊಡ್ಡ ವಿಮಾನಯಾನ ಸಂಸ್ಥೆ ಇಂಡಿಗೋ ಪ್ರಯಾಣಿಕರಿಂದ ಸಂಗ್ರಹಿಸುತ್ತಿದ್ದ ಇಂಧನ ಶುಲ್ಕವನ್ನು ನಿಲ್ಲಿಸುವುದಾಗಿ ಗುರುವಾರ ತಿಳಿಸಿದೆ. ಈ ಕ್ರಮದಿಂದಾಗಿ, ಕೆಲವು ಹೆಚ್ಚು ದೂರದ ಮಾರ್ಗಗಳಲ್ಲಿ ₹1,000 ವರೆಗೆ ವಿಮಾನ ದರವು ಕಡಿಮೆ ಆಗಲಿದೆ.

ಜೆಟ್ ಇಂಧನದ ಬೆಲೆಯಲ್ಲಿ ಏರಿಕೆಯಿಂದಾಗಿ, ವಿಮಾನಯಾನ ಸಂಸ್ಥೆಯು 2023ರ ಅಕ್ಟೋಬರ್ 6ರಿಂದ ದೇಶೀಯ ಹಾಗೂ ಅಂತರರಾಷ್ಟ್ರೀಯ ಮಾರ್ಗಗಳಲ್ಲಿನ ಟಿಕೆಟ್‌ಗೆ ಇಂಧನ ಶುಲ್ಕವನ್ನು ವಿಧಿಸಲು ಆರಂಭಿಸಿತ್ತು.

ಈ ಶುಲ್ಕದ ಪ್ರಮಾಣವು ದೂರವನ್ನು ಅವಲಂಬಿಸಿದ್ದು, ₹300ರಿಂದ ₹1,000ವರೆಗೆ ಇತ್ತು. ತನ್ನ ಕಾರ್ಯಾಚರಣೆಯನ್ನು ವಿಸ್ತರಿಸುತ್ತಿರುವ ವಿಮಾನಯಾನ ಸಂಸ್ಥೆಯು, ವಿಮಾನ ಇಂಧನದ (ಎಟಿಎಫ್) ದರದಲ್ಲಿ ಇತ್ತೀಚಿನ ಇಳಿಕೆಯಿಂದಾಗಿ ಜನವರಿ 4ರಿಂದ ಜಾರಿಗೆ ಬರುವಂತೆ ಇಂಧನ ಶುಲ್ಕವನ್ನು ನಿಲ್ಲಿಸುವುದಾಗಿ ವಿಮಾನಯಾನ ಸಂಸ್ಥೆ ಇಂಡಿಗೋ ಹೇಳಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಅಡಿಕೆ	
ಬಂಟ್ವಾಳ	
ಕೋಕ	15000-27500
ಹೊಸತು	27500-37000
ಹಳತು	42000-43000
ಕಾರ್ಕಳ	
ಹೊಸತು	25000-37000
ಹಳತು	30000-44000
ಕುಮಟ	
ಹಳೆಚಾಲಿ	36000-39069
ಹೊಸಚಾಲಿ	32269-35799
ಚಿಪ್ಪು	23199-34269
ಕೋಕ	16510-33609
ಪುತ್ತೂರು	
ಹೊಸತು	27000-36500
ಸಾಗರ	
ಬಿಳಿಗೋಟು	20280-32499
ಚಾಲಿ	31599-38099
ಕೋಕ	18499-33499
ಕೆಂಪುಗೋಟು	25280-38299
ರಾಶಿ	31929-48499
ಸಿಪ್ಪೆಗೋಟು	11280-20599
ಶಿವಮೊಗ್ಗ	
ಬೆಟ್ಟೆ	46099-54239
ಗೊರಬಲು	15110-40009
ರಾಶಿ	35399-48569
ಸರಕು	45100-84007
ಸಿದ್ದಾಪುರ	
ಬಿಳಿಗೋಟು	31899-33799
ಚಾಲಿ	37389-38650
ಕೋಕ	29669-32809
ಹೊಸಚಾಲಿ	31769-33489
ಕೆಂಪುಗೋಟು	32000-33100
ರಾಶಿ	43599-47999
ತಟ್ಟಿಬೆಟ್ಟೆ	40089-45599
ಶಿರಸಿ	
ಬೆಟ್ಟೆ	39499-45199
ಬಿಳಿಗೋಟು	28029-34992
ಚಾಲಿ	37210-39899
ಕೆಂಪುಗೋಟು	30369-34625
ರಾಶಿ	44299-47899
ಯಲ್ಲಾಪುರ	
ಅಪಿ	59795-65000
ಬಿಳಿಗೋಟು	25301-33619
ಚಾಲಿ	34299-39239
ಕೋಕ	18109-30169
ಕೆಂಪುಗೋಟು	24899-36215
ರಾಶಿ	46009-54620
ತಟ್ಟಿಬೆಟ್ಟೆ	36899-45699

ಮುಂಬೈ ಧಾರಣೆ

ಶೇಂಗಾ

04-01-2024

ಜಾವಾ 70/80(ಹೊಸ)	12200-12300
ಜಾವಾ 80/90(ಹೊಸ)	10900-11000
ದಪ್ಪ ಮಧ್ಯಪ್ರದೇಶ(ಹೊಸ)	9900-10000
ದಪ್ಪ ಗುಜರಾತ್(ಹೊಸ)	10800-10900

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1620 (1620)
ಒಂದು ವಾರದ ಡೆಲಿವರಿ	1615 (1615)
ಸೋಯಾ ಕಚ್ಚಾ	830 (820)
ಪಾಮ್ ವಾರದ ಡೆಲಿವರಿ	822 (821)
ಸೂರ್ಯಕಾಂತಿ ಎಣ್ಣೆ ಕಚ್ಚಾ	815 (810)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ	62,450 (62,750)
ಬೆಳ್ಳಿ ಕೆ.ಜಿ	71,700 (72,650)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಮುದ್ರೆಮನೆ ಕಾಫಿ

(50 ಕೆಜಿಗೆ)

ಎಪಿ	₹13900
ಎಸಿ	₹7840
ಆರ್‌ಪಿ	₹10800
ಆರ್‌ಸಿ	₹6725

ಈರುಳ್ಳಿ ಧಾರಣೆ

(ಕ್ವಿಂಟಲ್‌ಗೆ)

ದಪ್ಪ	₹2000-2400
ಮಧ್ಯಮ	₹1500-2000
ಸಣ್ಣ	₹1000-1500

ಬರದಿಂದಾಗಿ ವಿಯೆಟ್ನಾಂನಲ್ಲಿ ಉತ್ಪಾದನೆ ಕುಸಿತ

ರೊಬಸ್ಟಾ ಕಾಫಿಗೆ ಗರಿಷ್ಠ ಬೆಲೆ

• ರವಿ ಕೆಳಂಗಡಿ

ಕಳಸ (ಚಿಕ್ಕಮಗಳೂರು ಜಿಲ್ಲೆ): ವಿಯೆಟ್ನಾಂ ದೇಶದಲ್ಲಿ ಕಾಫಿ ಉತ್ಪಾದನೆಯ ಕುಸಿತದ ಸುದ್ದಿ ಮುಟ್ಟಿದ ಬೆನ್ನಲ್ಲೇ ರೊಬಸ್ಟಾ ಕಾಫಿ ಧಾರಣೆ ಏರುತ್ತಿದೆ. ಇದರಿಂದ ಸ್ಥಳೀಯ ಬೆಳೆಗಾರರು ಸಂತಸಗೊಂಡಿದ್ದಾರೆ.

ವಿಯೆಟ್ನಾಂನಲ್ಲಿ ಸದ್ಯ ಬರ ಪರಿಸ್ಥಿತಿ ತಲೆದೋರಿದೆ. ಇದರಿಂದ ಕಾಫಿ ಉತ್ಪಾದನೆಯು ಶೇ 10ರಷ್ಟು ಕಡಿಮೆ ಆಗಬಹುದು ಎಂದು ಅಲ್ಲಿನ ಕೃಷಿ ಇಲಾಖೆಯು ಅಂದಾಜಿಸಿದೆ. ಹಾಗಾಗಿ, ಅಂತರರಾಷ್ಟ್ರೀಯ ರೊಬಸ್ಟಾ ಮಾರುಕಟ್ಟೆಯಲ್ಲಿ ಕಳೆದ 15 ದಿನಗಳಿಂದ ಧಾರಣೆಯು ಏರುಗತಿಯಲ್ಲಿ ಸಾಗಿದೆ.

ಮಂಗಳವಾರ ಲಂಡನ್ ಮಾರುಕಟೆಯಲ್ಲಿ ರೊಬಸ್ಟಾ ಕಾಫಿ ಬೀಜದ ದರ ಒಂದು ಟನ್‌ಗೆ 3,021 ಪೌಂಡ್ (ಅಂದಾಜು ₹3.17 ಲಕ್ಷ) ಇತ್ತು.

ಇದರ ಪರಿಣಾಮ ದೇಶದಲ್ಲಿ ಕಾಫಿ ಬೀಜದ ದರ ಕೆ.ಜಿಗೆ ₹255 ಆಸುಪಾಸಿನಲ್ಲಿದೆ. ಇದರಿಂದ ಬೆಳೆಗಾರರಿಗೆ ಗುಣಮಟ್ಟದ ಆಧಾರದ ಮೇಲೆ 50 ಕೆ.ಜಿ ಚೆರಿಗೆ ₹6,800ರಿಂದ ₹7,000ರ ವರೆಗೆ ಬೆಲೆ ಸಿಗುತ್ತಿದೆ.

ಕಳಸದಲ್ಲಿ ರೊಬಸ್ಟಾ ಕಾಫಿ ಕೊಯ್ಲಿನ ನಂತರ ಒಣಗಲು ಹರಡಿರುವುದು

> **ವಿಯೆಟ್ನಾಂನಲ್ಲಿ ಮಳೆ ಕೊರತೆಯಾಗಿದೆ. ಬ್ರೆಜಿಲ್‌ನಲ್ಲಿ ಮಳೆ ಸುರಿಯುವ ವಾತಾವರಣ ಇದೆ ಎಂದು ವರದಿಗಳು ಹೇಳುತ್ತಿವೆ. ಅಲ್ಲಿ ಮಳೆ ಬಂದರೆ ದರ ಕಡಿಮೆಯಾಗುವ ಸಾಧ್ಯತೆ ಇದೆ**
> **ದಿನೇಶ್ ದೇವರುಂದ,**
> ಕಾಫಿ ಮಂಡಳಿ ಅಧ್ಯಕ್ಷ

ಬ್ರೆಜಿಲ್‌ನ ಕೆಲವು ಪ್ರಾಂತ್ಯಗಳಲ್ಲಿಯೂ ಮಳೆ ಕೊರತೆಯಿಂದ ಅರೇಬಿಕಾ ಕಾಫಿ ಉತ್ಪಾದನೆಯ ಮೇಲೆ ವ್ಯತಿರಿಕ್ತ ಪರಿಣಾಮ ಬೀರುವ ಸಾಧ್ಯತೆ ಇದೆ. ಇದರಿಂದ ಅರೇಬಿಕಾ ಧಾರಣೆಯೂ ಏರಿಕೆಯಾಗುವ ನಿರೀಕ್ಷೆಯಿದೆ ಎಂದು ಹೇಳಲಾಗಿದೆ.

'ಜಾಗತಿಕ ಮಟ್ಟದಲ್ಲಿ ರೊಬಸ್ಟಾ ಕಾಫಿ ಧಾರಣೆ ಯಾವ ಮಟ್ಟಕ್ಕೆ ಮುಟ್ಟಬಹುದು ಎಂಬ ಬಗ್ಗೆ ಸ್ಪಷ್ಟತೆ ಇಲ್ಲ. ಸದ್ಯದಲ್ಲೇ ₹8 ಸಾವಿರ ತಲುಪಬಹುದು ಅಥವಾ ₹6 ಸಾವಿರಕ್ಕೂ ಕುಸಿಯಬಹುದು' ಎಂದು ಕಳಸದ ಕಾಫಿ ವ್ಯಾಪಾರಿ ಜಾಫರ್ ಮೊಹಮ್ಮದ್ ಮಾರುಕಟ್ಟೆಯ ಅನಿಶ್ಚಿತತೆ ಬಗ್ಗೆ ವಿವರಿಸಿದರು.

ವಿದ್ಯುತ್: ಭಾರತ–ನೇಪಾಳ ಒಪ್ಪಂದ

ಕಠ್ಮಂಡು (ರಾಯಿಟರ್ಸ್): ಮುಂದಿನ 10 ವರ್ಷಗಳಲ್ಲಿ ನೇಪಾಳದಿಂದ 10 ಸಾವಿರ ಮೆಗಾವಾಟ್ ವಿದ್ಯುತ್ ಆಮದು ಮಾಡಿಕೊಳ್ಳುವ ಕುರಿತು ಭಾರತ ಗುರುವಾರ ಒಪ್ಪಂದ ಮಾಡಿಕೊಂಡಿತು. ಈ ಒಪ್ಪಂದ ಹೆಚ್ಚಿನ ಹೂಡಿಕೆ ಸೆಳೆಯಲು ನೇಪಾಳಕ್ಕೆ ನೆರವಾಗಲಿದೆ ಎಂದು ಹೇಳಲಾಗಿದೆ.

ನೇಪಾಳದಲ್ಲಿನ ನದಿಗಳಿಂದಾಗಿ ವಾರ್ಷಿಕ 42 ಸಾವಿರ ಮೆಗಾವಾಟ್ ಜಲವಿದ್ಯುತ್ ಉತ್ಪಾದಿಸುವ ಸಾಮರ್ಥ್ಯವಿದೆ. ಆದರೆ, ತಾಂತ್ರಿಕತೆ ನೆರವು, ಹಣಕಾಸು ಸಂಪನ್ಮೂಲ ಕೊರತೆಯಿಂದಾಗಿ ಇದು ಸಾಧ್ಯವಾಗಿಲ್ಲ. ಪ್ರಸ್ತುತ ವಾರ್ಷಿಕ 3000 ಮೆಗಾವಾಟ್ ಉತ್ಪಾದನೆಯಾಗುತ್ತಿದೆ. ಪ್ರಸ್ತುತ ನೇಪಾಳದ ಜೊತೆಗೆ ಅಲ್ಪಾವಧಿಯ ವಿದ್ಯುತ್ ಖರೀದಿ ಒಡಂಬಡಿಕೆ ಹೊಂದಿರುವ ಭಾರತ, ನೇಪಾಳದಲ್ಲಿ ಜಲವಿದ್ಯುತ್ ಸ್ಥಾವರಗಳ ಸ್ಥಾಪನೆಗೆ ಕೋಟ್ಯಂತರ ರೂಪಾಯಿ ಹೂಡಿಕೆ ಮಾಡುತ್ತಿದೆ. ನೆರೆ ರಾಷ್ಟ್ರದಲ್ಲಿ ತನ್ನ ಪ್ರಭಾವ ಉತ್ತಮಪಡಿಸಿಕೊಳ್ಳುವ ಉದ್ದೇಶವು ಇದೆ.

ನೆರೆ ರಾಷ್ಟ್ರ ಚೀನಾ ಗಡಿಯಲ್ಲಿ ಹೆಚ್ಚು ಸಕ್ರಿಯವಾಗಿರುವ ಹಿನ್ನೆಲೆಯಲ್ಲಿ ಈ ಒಡಂಬಡಿಕೆಯು ಮಹತ್ವದ್ದಾಗಿದೆ. ಪ್ರಧಾನಿ ನರೇಂದ್ರ ಮೋದಿ, ನೇಪಾಳದ ಪ್ರಧಾನಿ ಪುಷ್ಪಕಮಲ್ ದಹಲ್ ಅವರು ವಿದ್ಯುತ್ ಕ್ಷೇತ್ರದಲ್ಲಿ ದೀರ್ಘಾವಧಿ ಒಪ್ಪಂದ ಹೊಂದಲು ಕಳೆದ ವರ್ಷ ಸಮ್ಮತಿಸಿದ್ದರು.

ಈ ಕುರಿತು ಪ್ರತಿಕ್ರಿಯಿಸಿದ ನೇಪಾಳದ ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರ ಪ್ರೇಮ್ ರಾಯ್ ಅವರು, ವಿದ್ಯುತ್ ಖರೀದಿ ಸೇರಿದಂತೆ ಒಟ್ಟು ನಾಲ್ಕು ಒಪ್ಪಂದಗಳನ್ನು ನೇಪಾಳ–ಭಾರತ ಜಂಟಿ ಆಯೋಗದ ಸಭೆಯಲ್ಲಿ ಗುರುವಾರ ಅಂತಿಮಗೊಳಿಸಲಾಗಿದೆ ಎಂದರು.

ಜೈಶಂಕರ್ ಚರ್ಚೆ: ವಿದೇಶಾಂಗ ಸಚಿವ ಎಸ್. ಜೈಶಂಕರ್ ಅವರು ಗುರುವಾರ ನಡೆದ 7ನೇ ಭಾರತ –ನೇಪಾಳ ಜಂಟಿ ಆಯೋಗದ ಸಭೆಯಲ್ಲಿ ಪಾಲ್ಗೊಂಡಿದ್ದು, ನೇಪಾಳದ ಸಚಿವ ಎನ್.ಪಿ.ಸೌದ್ ಅವರೊಂದಿಗೆ ವಿಸ್ತೃತವಾಗಿ ಚರ್ಚಿಸಿದರು.

ವ್ಯಾಪಾರ, ಸಂಪರ್ಕ, ಸಹಕಾರ, ಭದ್ರತೆ, ವಿದ್ಯುತ್ ಮತ್ತು ಜಲಸಂಪನ್ಮೂಲ ಕ್ಷೇತ್ರಗಳಿಗೆ ಸಂಬಂಧಿಸಿ ದ್ವಿಪಕ್ಷೀಯ ಬಾಂಧವ್ಯ ಕುರಿತಂತೆ ನೇಪಾಳ ಸಚಿವರ ಜೊತೆಗೆ ವಿಸ್ತೃತ ಚರ್ಚೆ ನಡೆಯಿತು ಎಂದು ಜೈಶಂಕರ್, ಎಕ್ಸ್‌ನಲ್ಲಿ ಸಂದೇಶ ಹಂಚಿಕೊಂಡಿದ್ದಾರೆ.

ಮರುಬಳಕೆ ಇಂಧನ ಅಭಿವೃದ್ಧಿ ಕ್ಷೇತ್ರದಲ್ಲಿ ಸಹಕಾರ, ನೇಪಾಳ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ ಅಭಿವೃದ್ಧಿಪಡಿಸಿರುವ ಮುನಲ್ ಉಪಗ್ರಹ ಉಡಾವಣೆ ಕುರಿತು ಒಪ್ಪಂದ ಏರ್ಪಟ್ಟಿತು. ಅಲ್ಲದೆ, ನವೆಂಬರ್ ತಿಂಗಳಲ್ಲಿ ಸಂಭವಿಸಿದ್ದ ಭೂಕಂಪದ ಪರಿಹಾರ ಕಾರ್ಯಗಳಿಗಾಗಿ ಐದನೇ ಕಂತಿನ ನೆರವನ್ನು ಜೈಶಂಕರ್ ಇದೇ ಸಂದರ್ಭದಲ್ಲಿ ಹಸ್ತಾಂತರಿಸಿದರು.

ಸಂಕ್ಷಿಪ್ತ ಸುದ್ದಿ

'ಸರಿಯಾಗಿ ಹಿಜಾಬ್ ಧರಿಸದ' ಮಹಿಳೆಯರ ಬಂಧನ

ಕಾಬೂಲ್(ಅಫ್ಗಾನಿಸ್ತಾನ)(ಎಪಿ): ಅಫ್ಗಾನಿಸ್ತಾನ ಆಡಳಿತ ಚುಕ್ಕಾಣಿ ಹಿಡಿದ ನಂತರ ಕಠಿಣ ಕ್ರಮಗಳನ್ನು ಜಾರಿಗೊಳಿಸಿರುವ ತಾಲಿಬಾನ್, 'ಸರಿಯಾಗಿ ಹಿಜಾಬ್ ಧರಿಸಿಲ್ಲ' ಎಂಬ ಕಾರಣಕ್ಕೆ ರಾಜಧಾನಿ ಕಾಬೂಲ್‌ನಲ್ಲಿ ಮಹಿಳೆಯರನ್ನು ಬಂಧಿಸಿದೆ.

ಈ ಕುರಿತು ದುರಾಚಾರ ಸದಾಚಾರ ಸಚಿವಾಲಯ ವಕ್ತಾರ ಅಬ್ದುಲ್ ಗಫಾರ್ ಫಾರೂಕ್ ಅವರು ಗುರುವಾರ ಹೇಳಿಕೆ ಬಿಡುಗಡೆ ಮಾಡಿದ್ದು, ಹಿಜಾಬ್ ಧರಿಸುವುದು ಸೇರಿದಂತೆ ವಸ್ತ್ರಸಂಹಿತೆ ಪಾಲನೆ ಮಾಡದ ಮಹಿಳೆಯರನ್ನು ಬಂಧಿಸಲಾಗಿದೆ ಎಂದು ತಿಳಿಸಿದ್ದಾರೆ.

ಮೂರು ದಿನಗಳ ಹಿಂದೆ ಮಹಿಳೆಯರನ್ನು ಬಂಧಿಸಲಾಗಿದೆ ಎಂದು ತಿಳಿಸಿರುವ ಅವರು, ಎಷ್ಟು ಜನರನ್ನು ಬಂಧಿಸಲಾಗಿದೆ ಹಾಗೂ ಯಾವ ರೀತಿ ಹಿಜಾಬ್ ಧರಿಸಬಾರದು ಎಂಬ ಬಗ್ಗೆ ವಿವರಗಳನ್ನು ನೀಡಿಲ್ಲ.

'ಕೆಲ ಮಹಿಳೆಯರು ಸಮರ್ಪಕವಾಗಿ ಹಿಜಾಬ್ ಧರಿಸುತ್ತಿಲ್ಲ. ಆ ಮೂಲಕ ಅವರು ಇಸ್ಲಾಮಿಕ್ ಮೌಲ್ಯಗಳು ಹಾಗೂ ಆಚರಣೆಗಳನ್ನು ಉಲ್ಲಂಘಿಸಿದ್ದಾರೆ. ಇದನ್ನೇ ಅನುಸರಿಸುವಂತೆ ಇತರರಿಗೆ ಈ ಮಹಿಳೆಯರು ಉತ್ತೇಜನ ನೀಡಿದಂತಾಗಿದೆ' ಎಂದು ಹೇಳಿದ್ದಾರೆ.

'ಈ ವಿಷಯವನ್ನು ಪೊಲೀಸರು ನ್ಯಾಯಾಂಗ ಅಧಿಕಾರಿಗಳ ಗಮನಕ್ಕೆ ತರಲಿದ್ದು, ಕಠಿಣ ಷರತ್ತುಗಳನ್ನು ವಿಧಿಸಿ ಮಹಿಳೆಯರನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಲಾಗುವುದು' ಎಂದೂ ಅವರು ಹೇಳಿದ್ದಾರೆ.

ಬಾಂಗ್ಲಾದೇಶ: 48 ಗಂಟೆಗಳ ಮುಷ್ಕರಕ್ಕೆ ಬಿಎನ್‌ಪಿ ಕರೆ

ಢಾಕಾ (ಪಿಟಿಐ): ಬಾಂಗ್ಲಾದೇಶದ ಪ್ರಮುಖ ವಿರೋಧ ಪಕ್ಷವಾದ ಬಾಂಗ್ಲಾದೇಶ ರಾಷ್ಟ್ರೀಯ ಪಕ್ಷ (ಬಿಎನ್‌ಪಿ) ದೇಶದಾದ್ಯಂತ ಶನಿವಾರದಿಂದ ಎರಡು ದಿನಗಳ (48 ಗಂಟೆ) ಸಾರ್ವತ್ರಿಕ ಮುಷ್ಕರಕ್ಕೆ ಗುರುವಾರ ಕರೆ ನೀಡಿದೆ.

ಇದೇ 6ರಂದು ಬೆಳಿಗ್ಗೆ 6 ಗಂಟೆಯಿಂದ 8ನೇ ತಾರೀಕಿನ ಬೆಳಿಗ್ಗೆ 6 ಗಂಟೆಯವರೆಗೆ ಮುಷ್ಕರ ನಡೆಸಲಾಗುತ್ತದೆ ಎಂದು ಪಕ್ಷದ ಜಂಟಿ ಹಿರಿಯ ಪ್ರಧಾನ ಕಾರ್ಯದರ್ಶಿ ರುಹುಲ್ ಕಬೀರ್ ರಿಜ್ವಿ ತಿಳಿಸಿದ್ದಾರೆ.

ಇದೇ 7ರಂದು ನಡೆಯಲಿರುವ ಚುನಾವಣೆಯನ್ನು ಮಾಜಿ ಪ್ರಧಾನಿ ಖಲೀದಾ ಜಿಯಾ ನೇತೃತ್ವದ ಬಿಎನ್‌ಪಿ ಬಹಿಷ್ಕರಿಸಿದೆ. ಮಧ್ಯಂತರವಾಗಿ ಪಕ್ಷರಹಿತ ತಟಸ್ಥ ಸರ್ಕಾರವನ್ನು ರಚಿಸಿ, ಅದರ ಮೇಲ್ವಿಚಾರಣೆಯಲ್ಲಿ ನ್ಯಾಯಸಮ್ಮತ ಚುನಾವಣೆ ನಡೆಸಬೇಕು ಎಂಬುದು ಬಿಎನ್‌ಪಿ ಆಗ್ರಹ.

ಬಿಲಾವಲ್ ಭುಟ್ಟೊ ಪಿಪಿಪಿ ಪ್ರಧಾನಿ ಅಭ್ಯರ್ಥಿ

ಲಾಹೋರ್ (ಪಿಟಿಐ): ಬಿಲಾವಲ್ ಭುಟ್ಟೊ ಜರ್ದಾರಿ ಅವರನ್ನು ಪಾಕಿಸ್ತಾನ ಪೀಪಲ್ಸ್ ಪಾರ್ಟಿಯು (ಪಿಪಿಪಿ) ತನ್ನ ಪ್ರಧಾನಿ ಅಭ್ಯರ್ಥಿಯಾಗಿ ಗುರುವಾರ ಘೋಷಿಸಿದೆ.

ಪಾಕಿಸ್ತಾನದಲ್ಲಿ ಫೆ.8ರಂದು ಸಾರ್ವತ್ರಿಕ ಚುನಾವಣೆ ನಡೆಯಲಿದೆ. ಹೀಗಾಗಿ, ಬುಧವಾರ ಸಭೆ ಸೇರಿದ ಪಿಪಿಪಿಯ ಕೇಂದ್ರೀಯ ಕಾರ್ಯಕಾರಿ ಸಮಿತಿ (ಸಿಇಸಿ), ಪ್ರಚಾರದ ಕುರಿತು ವಿಸ್ತೃತ ಚರ್ಚೆ ನಡೆಸಿತು. ಪ್ರಣಾಳಿಕೆ ಬಗ್ಗೆಯೂ ಸಮಾಲೋಚನೆ ನಡೆಯಿತು. ಪಕ್ಷದ ವರಿಷ್ಠರಾದ ಆಸಿಫ್ ಅಲಿ ಜರ್ದಾರಿ ಮತ್ತು ಬಿಲಾವಲ್ ಭುಟ್ಟೊ ಜರ್ದಾರಿ ಅವರ ನಾಯಕತ್ವದಲ್ಲಿ ವಿಶ್ವಾಸವಿಟ್ಟಿರುವುದಾಗಿ ಸಿಇಸಿ ಸದಸ್ಯರು ಸಭೆಯಲ್ಲಿ ಹೇಳಿದರು ಎಂದು ಪಕ್ಷದ 'ಎಕ್ಸ್' ಖಾತೆಯಲ್ಲಿ ಪೋಸ್ಟ್ ಪ್ರಕಟಿಸಲಾಗಿದೆ.

'ಪಿಪಿಪಿಯ ಪ್ರಧಾನಿ ಅಭ್ಯರ್ಥಿಯಾಗಿ ಬಿಲಾವಲ್ ಭುಟ್ಟೊ ಜರ್ದಾರಿ ಅವರ ಹೆಸರನ್ನು ಆಸಿಫ್ ಅಲಿ ಜರ್ದಾರಿ ಅವರು ಪ್ರಸ್ತಾಪಿಸಿದರು. ಈ ಪ್ರಸ್ತಾವನೆಯನ್ನು ಸಿಇಸಿಯು ಅನುಮೋದಿಸಿತು ಎಂದು 'ಎಕ್ಸ್'ನಲ್ಲಿ ತಿಳಿಸಲಾಗಿದೆ. ಬಿಲಾವಲ್ ಭುಟ್ಟೊ ಅವರು ಪಾಕ್ ಮಾಜಿ ಪ್ರಧಾನಿ ಬೆನಜೀರ್ ಭುಟ್ಟೊ ಅವರ ಪುತ್ರ.

ಅಬಕಾರಿ ಹಗರಣವೇ ನಕಲಿ: ಕೇಜ್ರಿವಾಲ್

ನವದೆಹಲಿ (ಪಿಟಿಐ): 'ಕಳೆದ ಎರಡು ವರ್ಷಗಳಿಂದ ಚರ್ಚೆಯಲ್ಲಿರುವ ಅಬಕಾರಿ ಹಗರಣ ಎನ್ನುವುದೇ ನಕಲಿ. ಈ ಪ್ರಕರಣದಲ್ಲಿ ಭ್ರಷ್ಟಾಚಾರಕ್ಕೆ ಸಂಬಂಧಿಸಿದಂತೆ ಯಾವುದೇ ಸಾಕ್ಷ್ಯವನ್ನು ಪ್ರಸ್ತುತಪಡಿಸುವಲ್ಲಿ ತನಿಖಾ ಸಂಸ್ಥೆಗಳು ವಿಫಲವಾಗಿವೆ' ಎಂದು ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಗುರುವಾರ ಇಲ್ಲಿ ದೂರಿದರು.

'ಕೇಂದ್ರ ಸರ್ಕಾರವು ನನ್ನನ್ನು ಬಂಧಿಸಲು ಬಯಸುತ್ತಿದ್ದು, ಲೋಕಸಭಾ ಚುನಾವಣೆಯಲ್ಲಿ ಪ್ರಚಾರ ಮಾಡದಂತೆ ತಡೆಯಲು ಯತ್ನಿಸುತ್ತಿದೆ' ಎಂದು ಆನ್‌ಲೈನ್ ಪತ್ರಿಕಾಗೋಷ್ಠಿಯಲ್ಲಿ ಹೇಳಿದರು. 'ಎಂಟು ತಿಂಗಳ ಹಿಂದೆ ಸಿಬಿಐ ಮುಂದೆ ನಾನು ಹಾಜರಾಗಿದ್ದೆ. ಇದೀಗ ಲೋಕಸಭಾ ಚುನಾವಣೆಗೂ ಮುನ್ನ ನನ್ನನ್ನು ಏಕೆ ಕರೆಸಿಕೊಳ್ಳಬೇಕು? ಬಿಜೆಪಿಯು ನನ್ನನ್ನು ವಿಚಾರಣೆಗೆ ಒಳಪಡಿಸಲು ಬಯಸುವುದಿಲ್ಲ. ಆದರೆ ಇ.ಡಿ ಮೂಲಕ ಬಂಧಿಸಲಿದೆ' ಎಂದರು.

'ಇ.ಡಿ ಜಾರಿಗೊಳಿಸಿರುವ ಸಮನ್ಸ್ ಕಾನೂನುಬಾಹಿರ ಎಂದು ನನ್ನ ವಕೀಲರು ತಿಳಿಸಿದ್ದಾರೆ. ಸಮನ್ಸ್ ಅವರಿಗೆ ದೊಡ್ಡ ಆಸ್ತಿಯಾಗಿದ್ದು, ನನ್ನ ಪ್ರಾಮಾಣಿಕತೆಗೆ ನೋವುಂಟು ಮಾಡುವ ಮತ್ತು ಮಾನಹಾನಿಗೊಳಿಸುವ ಗುರಿಯನ್ನು ಹೊಂದಿದೆ. ಕಾನೂನುಬದ್ಧವಾಗಿ ಸಮನ್ಸ್ ಜಾರಿಗೊಳಿಸಿದರೆ, ತನಿಖಾ ಸಂಸ್ಥೆಯೊಂದಿಗೆ ಸಹಕರಿಸುತ್ತೇನೆ' ಎಂದು ತಿಳಿಸಿದರು.

'ಪ್ರಾಮಾಣಿಕತೆ ನನ್ನ ದೊಡ್ಡ ಆಸ್ತಿ. ಬಿಜೆಪಿ ಇದನ್ನು ನೋಯಿಸಲು ಬಯಸುತ್ತಿದೆ. ನಾನು ಯಾವಾಗಲೂ ದೇಶಕ್ಕಾಗಿ ಹೋರಾಡಿದ್ದೇನೆ. ನನ್ನ ಉಸಿರು, ರಕ್ತದ ಪ್ರತಿ ಹನಿಯನ್ನು ರಾಷ್ಟ್ರಕ್ಕಾಗಿ ಸಮರ್ಪಿಸಿರುವೆ' ಎಂದು ಹೇಳಿದ ದೆಹಲಿ ಮುಖ್ಯಮಂತ್ರಿ, 'ಈ ಬಿಕ್ಕಟ್ಟಿನ ಸಮಯದಲ್ಲಿ ಜನರು ಬೆಂಬಲ ನೀಡಬೇಕು' ಎಂದು ಕೋರಿದರು.

ಸಿ.ಎಂಗೆ ಮತ್ತೆ ಸಮನ್ಸ್?

ನವದೆಹಲಿ (ಪಿಟಿಐ): ಅಬಕಾರಿ ನೀತಿ ಪ್ರಕರಣದ ತನಿಖೆಗೆ ಹಾಜರಾಗುವಂತೆ ಅರವಿಂದ ಕೇಜ್ರಿವಾಲ್ ಅವರಿಗೆ ನಾಲ್ಕನೇ ಬಾರಿ ಇ.ಡಿ. ಸಮನ್ಸ್ ಜಾರಿಗೊಳಿಸುವ ಸಾಧ್ಯತೆಯಿದೆ ಎಂದು ಮೂಲಗಳು ತಿಳಿಸಿವೆ.

ಕೇಜ್ರಿವಾಲ್ ಬುಧವಾರ ಇ.ಡಿ ವಿಚಾರಣೆಗೆ ಹಾಜರಾಗದೆ ಪತ್ರ ಬರೆದಿದ್ದರು. ಪ್ರಕರಣದ ತನಿಖಾಧಿಕಾರಿಗೆ ಕೇಜ್ರಿವಾಲ್ ಅವರು ಐದು ಪುಟಗಳ ಉತ್ತರವನ್ನು ಕಳುಹಿಸಿದ್ದು, ಇ.ಡಿ ಅದನ್ನು ಪರಿಶೀಲಿಸುತ್ತಿದೆ. ಸಮನ್ಸ್ ಅನ್ನು ಕಾನೂನುಬಾಹಿರ ಎಂದು ಕರೆದು ಆರೋಪಗಳನ್ನು ತಿರಸ್ಕರಿಸಬಹುದು' ಎಂದು ಮೂಲಗಳು ಹೇಳಿವೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

General

ಕರ್ನಾಟಕದಾದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟು 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80,000. 7760014526, 7795199673

ವಿಕೇರ್ ಹೋಮ್ ನರ್ಸಿಂಗ್ ಮೈಸೂರು: ಮೈಸೂರಿನಲ್ಲಿ ರೋಗಿಯ ಆರೈಕೆಯ ಕೆಲಸಕ್ಕೆ ಮಹಿಳಾ ಹೋಮ್ ನರ್ಸ್ ಬೇಕಾಗಿದ್ದಾರೆ. ವೇತನ 16,000–23,000. ಸಂಪರ್ಕಿಸಿ: 9380043696, 6364481333

Part-Time Jobs

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ ತಿಂಗಳಿಗೆ 15,000 20,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ: 9663563555/ 9035492999

ಉಚಿತ 50ಕೆ.ಜಿ. ಬೆಳೆಯುವ ಅಣಬೆ ಬೀಜವನ್ನು ಪಡೆದು ಮನೆಯಿಂದಲೇ ತಿಂಗಳಿಗೆ 20,000ಕ್ಕೂ ಹೆಚ್ಚು ಸಂಪಾದಿಸಿ ಜಾಗದವಶ್ಯಕತೆಯಿಲ್ಲ. ತರಬೇತಿಗಾಗಿ 9036900002/ 8095555516

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರವಾಸ

Travel

19.02.2024 A/C_ಬಸ್ಸಿನಲ್ಲಿ 6ದಿನಗಳು ವಿಮಾನದಲ್ಲಿ ಕಾಶಿ,ಗಯಾ ಅಯೋಧ್ಯೆ_ನೂತನ ರಾಮಮಂದಿರ,ಅಲಹಬಾದ್ (ಕೆಲವೇ ಸೀಟುಗಳಿವೆ).ಪ್ರತಿತಿಂಗಳು ಹಡಗು/ವಿಮಾನದಲ್ಲಿ ಅಂಡಮಾನ್,ಹವಳದ್ವೀಪ. ''ಶ್ರೀಸಾಯಿ ರಾಘವೇಂದ್ರ ಟ್ರಾವೆಲ್ಸ್''.9845560219/ 9739847429

Pilgrimage Tours

★ವಿಮಾನದಲ್ಲಿ★ 14.02.2024, 10.03.2024 6ದಿನಗಳು ಕಾಶಿ,ಪ್ರಯಾಗ, ಗಯಾ ಅಯೋಧ್ಯೆ. 10.04.2024 16ದಿನಗಳು ನೇಪಾಳ, ಮುಕ್ತಿನಾಥ,ಜನಕಪುರಿ. ಆರ್.ಗಾಂಧಿ ಟೂರ್ಸ್. 9945445809/ 9902433500

ವ್ಯಾಪಾರ

Business to Business

Business

ದೀಪಶ್ರೀ ಸಿಲ್ಕ್ ಮತ್ತು ಸ್ಯಾರೀಸ್, ಒಂದು ಸೀರೆ ತೆಗೆದುಕೊಂಡಲ್ಲಿ, ಒಂದು ಸೀರೆ ಉಚಿತ, ಸಾಲ ಸೌಲಭ್ಯವು ದೊರೆಯುತ್ತದೆ: 8892501007/ 9606701007

ಮಹಿಳಾ ಸಂಘ ಸಂಸ್ಥೆಗಳಿಗೆ ರೇಷ್ಮೆ, ಸಿಲ್ಕ್, ಕಾಟನ್, ಎಲ್ಲಾ ತರಹದ ಸೀರೆಗಳು, ದೊರೆಯುತ್ತದೆ. ಆಕರ್ಷಕ ಆದಾಯ ಸಿಗುತ್ತದೆ: 8892501007/ 9606701007

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ
ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಡ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
Vishal: +91 9845114560 | Jerry: +91 9731810277 |
Tanveer: +91 9886213331 | Ravichandra: +91 9901641752 |
Anitha: +91 9900428036

ಖಂಡನೆ ಬಳಿಕ ಕ್ಷಮೆ ಯಾಚಿಸಿದ ಶಾಸಕ ಜಿತೇಂದ್ರ ಆವ್ಹಾಡ್ • ಎಫ್‌ಐಆರ್ ದಾಖಲಿಸಲು ಒತ್ತಾಯ

ರಾಮ ಮಾಂಸಾಹಾರಿ: ಹೇಳಿಕೆಗೆ ಕಿಡಿ

ಪ್ರಜಾವಾಣಿ ವಾರ್ತೆ

ಮುಂಬೈ: ರಾಮ ಮೂರ್ತಿ ಪ್ರತಿಷ್ಠಾಪನೆಗೆ ಕೆಲವೇ ದಿನಗಳು ಬಾಕಿ ಇರುವಂತೆ, ಎನ್‌ಸಿಪಿ (ಶರದ್ ಪವಾರ್ ಬಣ) ಶಾಸಕ ಜಿತೇಂದ್ರ ಆವ್ಹಾಡ್ ಅವರು 'ಶ್ರೀರಾಮನು ಮಾಂಸಾಹಾರಿ ಆಗಿದ್ದನು' ಎಂದು ಹೇಳಿಕೆ ನೀಡಿದ್ದಾರೆ. ಇದು ಮಹಾರಾಷ್ಟ್ರದಲ್ಲಿ ವಿವಾದದ ಕಿಡಿ ಹೊತ್ತಿಸಿದೆ.

ಈ ಹೇಳಿಕೆಗೆ ಆಕ್ರೋಶ ವ್ಯಕ್ತಪಡಿಸಿರುವ ಬಿಜೆಪಿ ಮತ್ತು ಎನ್‌ಸಿಪಿ (ಅಜಿತ್ ಪವಾರ್ ಬಣ), ಆವ್ಹಾಡ್ ವಿರುದ್ಧ ಎಫ್‌ಐಆರ್ ದಾಖಲಿಸುವಂತೆ ಆಗ್ರಹಿಸಿವೆ.

ಶಿರಡಿಯಲ್ಲಿ ಬುಧವಾರ ನಡೆದ ಪಕ್ಷದ ಸಭೆಯಲ್ಲಿ ಅವರು ಮಾತನಾಡಿದರು. 'ಶ್ರೀರಾಮನು ಕ್ಷತ್ರಿಯ ಸಮುದಾಯಕ್ಕೆ ಸೇರಿದವನು. ಬೇಟೆಯಾಡಿ ಮಾಂಸ ತಿನ್ನುತ್ತಿದ್ದ. 14 ವರ್ಷ ಕಾಡಿನಲ್ಲಿದ್ದ ವ್ಯಕ್ತಿಯು ಸಸ್ಯಾಹಾರವನ್ನೇ ತಿನ್ನುತ್ತಿದ್ದ ಎಂದು ಹೇಗೆ ನಿರೀಕ್ಷಿಸಲು ಸಾಧ್ಯ. ನಾವು ಸಸ್ಯಾಹಾರಿಗಳಾಗಿ ಬದಲಾಗಬೇಕು ಎಂದು ಕೆಲವರು ಬಯಸುತ್ತಾರೆ. ಆದರೆ ಶ್ರೀರಾಮನೇ ಮಾಂಸಾಹಾರಿ' ಎಂದು ಹೇಳಿದ್ದಾರೆ. ಸಭೆಯಲ್ಲಿ ಎನ್‌ಸಿಪಿ ಮುಖ್ಯಸ್ಥ ಶರದ್ ಪವಾರ್ ಕೂಡಾ ಹಾಜರಿದ್ದರು.

ಆವ್ಹಾಡ್ ಅವರಿಗೆ ಪವಿತ್ರಗ್ರಂಥಗಳ ಕುರಿತು ಅರಿವಿಲ್ಲ. ರಾಮನು ವನವಾಸದಲ್ಲಿದ್ದಾಗ ಕೂಡಾ ಹಣ್ಣುಗಳನ್ನೇ ಸೇವಿಸುತ್ತಿದ್ದ

ಆಚಾರ್ಯ ಸತ್ಯೇಂದ್ರ ದಾಸ್, ರಾಮಜನ್ಮಭೂಮಿ ದೇವಾಲಯದ ಪ್ರಧಾನ ಅರ್ಚಕ

ಅವರ ಹೇಳಿಕೆಯಿದ್ದ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದೆ. ಆ ಬಳಿಕ, ಆವ್ಹಾಡ್ ಜೊತೆ ಶರದ್ ಪವಾರ್ ಅವರ ವಿರುದ್ಧವೂ ಬಿಜೆಪಿ ಮತ್ತು ಬಲಪಂಥೀಯ ಸಂಘಟನೆಗಳು ಆಕ್ರೋಶ ವ್ಯಕ್ತಪಡಿಸಿವೆ.

ಈ ಎಲ್ಲಾ ಬೆಳವಣಿಗೆಗಳ ಬಳಿಕ ಆವ್ಹಾಡ್ ಅವರು ಗುರುವಾರ ಕ್ಷಮೆ ಯಾಚಿಸಿದ್ದಾರೆ. 'ನನ್ನ ಹೇಳಿಕೆಯಿಂದ ಭಾವನೆಗಳಿಗೆ ಧಕ್ಕೆ ಆಗಿದ್ದರೆ ಕ್ಷಮೆ ಯಾಚಿಸುತ್ತೇನೆ. ಮಾತಿನ ಭರದಲ್ಲಿ ಹೀಗೆ ಹೇಳಿದೆ' ಎಂದಿದ್ದಾರೆ.

ಜೊತೆಗೆ ತಮ್ಮ ಹೇಳಿಕೆಯನ್ನು ಸಮರ್ಥಿಸಿಕೊಂಡಿದ್ದಾರೆ. 'ನಾನು ಅಧ್ಯಯನ ನಡೆಸದೇ ಮಾತನಾಡುವುದಿಲ್ಲ. ಕೇವಲ ಭಾವನೆಗಳ ಆಧಾರದಲ್ಲಿ ತೀರ್ಮಾನಕ್ಕೆ ಬರಲಾಗುವುದಿಲ್ಲ. ಯಾವ ವಿಚಾರದ ಕುರಿತಾದರೂ ಅಧ್ಯಯನ ನಡೆಸುವುದು ಬಹಳ ಮುಖ್ಯ. ತರ್ಕವಿಲ್ಲದೇ ಚರ್ಚೆ ನಡೆಸಬಾರದು' ಎಂದಿದ್ದಾರೆ.

ತಮ್ಮ ವಾದಕ್ಕೆ ಸಮರ್ಥನೆಯಾಗಿ ವಾಲ್ಮೀಕಿ ರಾಮಾಯಣ ಮತ್ತು ಇತರ ಇತಿಹಾಸ ಪುಸ್ತಕಗಳ ಪಠ್ಯದ ಪ್ರತಿಗಳನ್ನು ಒದಗಿಸಿದ್ದಾರೆ. 'ನಾನು ಈ ಪಠ್ಯಗಳ ಕುರಿತು ಮಾತನಾಡುವುದಿಲ್ಲ. ಆದರೆ ಇವನ್ನು ಓದಿ ಎಂದು ಸಲಹೆ ನೀಡುತ್ತೇನೆ' ಎಂದಿದ್ದಾರೆ.

ಬಿಜೆಪಿ ಖಂಡನೆ: 'ಶಿವಸೇನಾ ಸಂಸ್ಥಾಪಕ ಬಾಳಾ ಸಾಹೇಬ್ ಠಾಕ್ರೆ ಅವರು ಇಂದು ನಮ್ಮೊಂದಿಗೆ ಇದ್ದಿದ್ದರೆ, ರಾಮನನ್ನು ಮಾಂಸಾಹಾರಿ ಎಂದು ಕರೆದ ರಾಜಕೀಯ ನಾಯಕನನ್ನು ಸಾಮ್ನಾ ಪತ್ರಿಕೆಯಲ್ಲಿ ಕಟು ಪದಗಳಿಂದ ಖಂಡಿಸುತ್ತಿದ್ದರು' ಎಂದು ಬಿಜೆಪಿ ಶಾಸಕ ರಾಮ್ ಕದಮ್ ಹೇಳಿದ್ದಾರೆ. ಆವ್ಹಾಡ್ ವಿರುದ್ಧ ಎಫ್‌ಐಆರ್ ದಾಖಲಿಸುವಂತೆ ಅವರು ಮುಂಬೈನ ಘಾಟ್ಕೊಪರ್ ಪೊಲೀಸ್ ಠಾಣೆಗೆ ಅರ್ಜಿ ಸಲ್ಲಿಸಿದ್ದಾರೆ.

ಆವ್ಹಾಡ್ ವಿರುದ್ಧ ಮಹಾರಾಷ್ಟ್ರದ ಹಲವೆಡೆ ಪ್ರತಿಭಟನೆಗಳು ನಡೆದಿವೆ ಮತ್ತು ಪೊಲೀಸ್ ಠಾಣೆಗಳಲ್ಲಿ ದೂರುಗಳನ್ನು ದಾಖಲಿಸಲಾಗಿದೆ.

ಸಂತನಿಂದ ಆವ್ಹಾಡ್‌ಗೆ ಕೊಲೆ ಬೆದರಿಕೆ

ಲಖನೌ: ರಾಮನು ಮಾಂಸಾಹಾರಿ ಎಂದಿರುವ ಎನ್‌ಸಿಪಿ (ಪವಾರ್ ಬಣ) ಶಾಸಕ ಜಿತೇಂದ್ರ ಆವ್ಹಾಡ್ ಅವರ ಹೇಳಿಕೆಯು ಅಯೋಧ್ಯೆಯ ಸಂತರಲ್ಲಿ ಆಕ್ರೋಶ ಮೂಡಿಸಿದೆ. ಶಾಸಕರ ವಿರುದ್ಧ ಕ್ರಮ ತೆಗೆದುಕೊಳ್ಳದಿದ್ದಲ್ಲಿ ಅವರನ್ನು ಕೊಲ್ಲುವುದಾಗಿಯೂ ಸಂತರೊಬ್ಬರು ಬೆದರಿಕೆ ಒಡ್ಡಿದ್ದಾರೆ.

'ಆವ್ಹಾಡ್ ಹೇಳಿಕೆಯು ರಾಮಭಕ್ತರ ಭಾವನೆಗಳಿಗೆ ನೋವುಂಟು ಮಾಡಿದೆ. ರಾಮನ ವಿರುದ್ಧ ಅವಹೇಳನಕಾರಿಯಾಗಿ ಮಾತನಾಡುವವರ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು. ಇಲ್ಲದಿದ್ದರೆ ನಾನೇ ಅವರನ್ನು ಕೊಲ್ಲುತ್ತೇನೆ' ಎಂದು ಅಯೋಧ್ಯೆಯ ಪ್ರಮುಖ ಸಂತ ಮತ್ತು ತಪಸ್ವಿ ಚಾವನಿಯ ಮಹಂತ್ ಪರಮಹಂಸ ಆಚಾರ್ಯ ಹೇಳಿದ್ದಾರೆ.

ಇತರ ಯಾವುದೇ ಧರ್ಮಕ್ಕೆ ಕಳಂಕ ತರುವಂತೆ ಮಾತನಾಡಿದ್ದರೆ ಅವರು ಜೀವಂತವಾಗಿ ಉಳಿಯುತ್ತಿರಲಿಲ್ಲ ಎಂದಿರುವ ಅವರು, 'ಭಗವಾನ್ ರಾಮನ ಬಗ್ಗೆ ಇಂತಹ ಹೇಳಿಕೆಗಳನ್ನು ದೇಶ ಸಹಿಸುವುದಿಲ್ಲ' ಎಂದು ಹೇಳಿದ್ದಾರೆ.

ರಾಮಜನ್ಮಭೂಮಿ ದೇವಾಲಯದ ಪ್ರಧಾನ ಅರ್ಚಕ ಆಚಾರ್ಯ ಸತ್ಯೇಂದ್ರ ದಾಸ್ ಕೂಡ ಶಾಸಕರ ಹೇಳಿಕೆಯನ್ನು ಖಂಡಿಸಿದ್ದು, 'ರಾಮನು ಎಂದಿಗೂ ಮಾಂಸಾಹಾರ ಸೇವಿಸಿಲ್ಲ. ಪವಿತ್ರಗ್ರಂಥಗಳಲ್ಲಿ ಕೂಡ ಮಾಂಸಾಹಾರ ಸೇವಿಸಿದ ಬಗ್ಗೆ ಮಾಹಿತಿ ಇಲ್ಲ' ಎಂದು ಹೇಳಿದ್ದಾರೆ.

ಅಯೋಧ್ಯೆ: ಪ್ರಾಣ ಪ್ರತಿಷ್ಠಾಪನೆ ಆಮಂತ್ರಣಕ್ಕೆ ಕಲಾತ್ಮಕ ವಿನ್ಯಾಸ

ಅಯೋಧ್ಯೆ (ಪಿಟಿಐ): ಜನವರಿ 22ರಂದು ನಡೆಯಲಿರುವ ರಾಮಮಂದಿರ ಮೂರ್ತಿ ಪ್ರತಿಷ್ಠಾಪನೆ ಕಾರ್ಯಕ್ರಮದ ಆಮಂತ್ರಣ ಪತ್ರವನ್ನು ಕಲಾತ್ಮಕವಾಗಿ ವಿನ್ಯಾಸಗೊಳಿಸಲಾಗಿದ್ದು, ಅದರಲ್ಲಿ ಮಂದಿರ ಮತ್ತು ಬಾಲರಾಮನ ಚಿತ್ರಗಳನ್ನು ಮುಖ್ಯವಾಗಿ ಅಚ್ಚುಮಾಡಲಾಗಿದೆ. ಮಂದಿರ ನಿರ್ಮಾಣ ಪ್ರಕ್ರಿಯೆ ಕುರಿತ ಮಾಹಿತಿಯನ್ನೂ ಪತ್ರದಲ್ಲಿ ಒದಗಿಸಲಾಗಿದೆ.

ಆಮಂತ್ರಣದಲ್ಲಿ ಒಟ್ಟು ಎರಡು ಪತ್ರಗಳು ಮತ್ತು ಒಂದು ಕಿರುಹೊತ್ತಗೆ ಇದೆ. ಕೆಂಪು ಬಣ್ಣದ ಪತ್ರಗಳ ಮೇಲೆ ಚಿನ್ನದ ಬಣ್ಣದಿಂದ ಅಕ್ಷರಗಳನ್ನು ಮೂಡಿಸಲಾಗಿದೆ. ಹಿಂದಿ ಮತ್ತು ಇಂಗ್ಲಿಷ್ ಭಾಷೆ ಬಳಸಲಾಗಿದೆ. ರಾಮ ಜನ್ಮಭೂಮಿ ಹೋರಾಟದಲ್ಲಿ ಪಾಲ್ಗೊಂಡಿದ್ದ ಪ್ರಮುಖ ವ್ಯಕ್ತಿಗಳ ಕಿರುಪರಿಚಯವನ್ನು ಕಿರುಹೊತ್ತಿಗೆಯಲ್ಲಿ ನೀಡಲಾಗಿದೆ.

ಮೊದಲ ಪತ್ರಕ್ಕೆ 'ಕಾರ್ಯಕ್ರಮ ವಿಶೇಷ' (ಸೆರೆಮನಿ ಸ್ಪೆಷಲ್) ಎಂದು ಹೆಸರು ನೀಡಲಾಗಿದೆ. ಇದರಲ್ಲಿ ರಾಮಮಂದಿರದ ಚಿತ್ರವಿದೆ. ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿರುವ ಗಣ್ಯರ ಮತ್ತು ಕಾರ್ಯಕ್ರಮದ ವಿವರವನ್ನು ನಮೂದಿಸಲಾಗಿದೆ. ಎರಡನೇ ಪತ್ರಕ್ಕೆ 'ಅಪೂರ್ವ ಅನಾಧಿಕ್ ನಿಮಂತ್ರಣ್' ಎಂಬ ಶೀರ್ಷಿಕೆ ನೀಡಲಾಗಿದೆ. ಅದರಲ್ಲಿ ಬಾಲರಾಮ ಮತ್ತು ಮಂದಿರದ ಛಾಯಾರೂಪ ಚಿತ್ರಿಸಲಾಗಿದೆ. ಇದರ ಮತ್ತೊಂದು ಭಾಗದಲ್ಲಿ ಸಮಾರಂಭದ ದಿನಾಂಕ ಮತ್ತು ಇತರ ವಿವರಗಳನ್ನು ನೀಡಲಾಗಿದೆ.



ಮೋದಿ ಜಲ ಸಾಹಸ...

ಲಕ್ಷದ್ವೀಪಕ್ಕೆ ಇತ್ತೀಚೆಗೆ ಭೇಟಿ ನೀಡಿದ್ದ ಸಂದರ್ಭದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಸಮುದ್ರದೊಳಗಿರುವ ಜೀವ ವೈವಿಧ್ಯ ವೀಕ್ಷಿಸಲು 'ಸ್ನಾರ್ಕೆಲಿಂಗ್' ಮಾಡಿದರು. ಅರಬ್ಬಿ ಸಮುದ್ರದಲ್ಲಿನ ದ್ವೀಪಗಳಲ್ಲಿನ ತಮ್ಮ ಉಲ್ಲಾಸದಾಯಕ ಅನುಭವ ಕುರಿತ ಚಿತ್ರಗಳನ್ನು ಅವರು 'ಎಕ್ಸ್'ನಲ್ಲಿ ಗುರುವಾರ ಪೋಸ್ಟ್ ಮಾಡಿದ್ದಾರೆ – ಪಿಟಿಐ ಚಿತ್ರ

ಒಗ್ಗಟ್ಟಿನ ಹೋರಾಟಕ್ಕೆ ಖರ್ಗೆ ಕರೆ

ವೈಫಲ್ಯ ಮುಚ್ಚಿಹಾಕಲು ಭಾವನಾತ್ಮಕ ವಿಚಾರ ಎತ್ತುತ್ತಿರುವ ಬಿಜೆಪಿ: ಎಐಸಿಸಿ ಅಧ್ಯಕ್ಷರ ಟೀಕೆ

ನವದೆಹಲಿ (ಪಿಟಿಐ): ಬಿಜೆಪಿಯು ಆಡಳಿತದ ವೈಫಲ್ಯಗಳನ್ನು ಮರೆಮಾಚಲು ಭಾವನಾತ್ಮಕ ವಿಚಾರಗಳನ್ನು ಎತ್ತುತ್ತಿದೆ ಎಂದು ಟೀಕಿಸಿರುವ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಲೋಕಸಭಾ ಚುನಾವಣೆಯಲ್ಲಿ ಗೆಲುವು ಖಚಿತಪಡಿಸಿಕೊಳ್ಳಲು ಒಗ್ಗಟ್ಟಾಗಿ ಕೆಲಸ ಮಾಡುವಂತೆ ಪಕ್ಷದ ಮುಖಂಡರಿಗೆ ಕರೆ ನೀಡಿದರು.

'ಲೋಕಸಭೆ ಚುನಾವಣೆ ಸಮೀಪಿಸುತ್ತಿರುವಂತೆ ಬಿಜೆಪಿಯು ಭಾವನಾತ್ಮಕ ವಿಷಯಗಳನ್ನು ಮುನ್ನೆಲೆಗೆ ತರುತ್ತಿದೆ. ಪ್ರತಿ ವಿಷಯದಲ್ಲೂ ಕಾಂಗ್ರೆಸ್ ಪಕ್ಷವನ್ನು ಉದ್ದೇಶಪೂರ್ವಕವಾಗಿ ಎಳೆದು ತರುತ್ತಿದೆ' ಎಂದು ಗುರುವಾರ ನಡೆದ ಪಕ್ಷದ ಮುಖಂಡರ ಸಭೆಯಲ್ಲಿ ತಿಳಿಸಿದರು.

2004ರಲ್ಲಿ ಸೋನಿಯಾ ಗಾಂಧಿ ಅವರು ಪಕ್ಷವನ್ನು ಗೆಲುವಿನತ್ತ ಮುನ್ನಡೆಸಿದ್ದನ್ನು ನೆನಪಿಸಿಕೊಂಡ ಖರ್ಗೆ, 'ಅಂದು ಪ್ರತಿಯೊಂದು ಗ್ರಾಮ, ಪಟ್ಟಣ ಮತ್ತು ನಗರಗಳಲ್ಲಿ ಪಕ್ಷದ ಕಾರ್ಯಕರ್ತರು ಹಾಗೂ ಮುಖಂಡರು ಒಗ್ಗಟ್ಟಿನಿಂದ ಕೆಲಸ ಮಾಡಿದ್ದರು. ಅದೇ ರೀತಿಯ ಸಮರ್ಪಣೆ ಮತ್ತು ಕಠಿಣ ಪರಿಶ್ರಮ ತೋರುವ ಕಾಲ ಸನ್ನಿಹಿತವಾಗಿದೆ' ಎಂದು ಕಿವಿಮಾತು ಹೇಳಿದರು.

'ನಿಮ್ಮ ನಡುವಿನ ಭಿನ್ನಾಭಿಪ್ರಾಯಗಳನ್ನು ಬದಿಗಿರಿಸಿರಿ. ಪಕ್ಷದ ಆಂತರಿಕ ವಿಚಾರಗಳನ್ನು ಮಾಧ್ಯಮಗಳ ಮುಂದೆ ಬಹಿರಂಗಪಡಿಸಬೇಡಿ. ಕೇಂದ್ರ ಸರ್ಕಾರದ ಸುಳ್ಳು, ಮೋಸ ಮತ್ತು ತಪ್ಪುಗಳನ್ನು ಜನರ ಮುಂದಿಟ್ಟು ಬಿಜೆಪಿಗೆ ತಕ್ಕ ಪ್ರತ್ಯುತ್ತರ ಕೊಡಲು ಸಿದ್ಧರಾಗಿ' ಎಂದು ಕರೆಕೊಟ್ಟರು.

ದೇಶದ ಅಭಿವೃದ್ಧಿಗೆ ಕಾಂಗ್ರೆಸ್ ನೀಡಿದ ಕೊಡುಗೆಗಳನ್ನು ನರೇಂದ್ರ ಮೋದಿ ಸರ್ಕಾರ ನಿರಂತರ ಕಡೆಗಣಿಸುತ್ತಾ ಬಂದಿದೆ ಎಂದು ಅವರು ಆರೋಪಿಸಿದರು. 'ಪ್ರಜಾಪ್ರಭುತ್ವ ವ್ಯವಸ್ಥೆಯ ಜಾರಿ ಮತ್ತು ಆಧುನಿಕ ಭಾರತದ ನಿರ್ಮಾಣದಲ್ಲಿ ಪಕ್ಷದ ಕೊಡುಗೆ ಏನೆಂಬುದು ಪ್ರತಿಯೊಬ್ಬರೂ ತಿಳಿದಿರಬೇಕು. ಇತಿಹಾಸವನ್ನು ಮರೆತವರಿಂದ ಇತಿಹಾಸ ಸೃಷ್ಟಿಸಲು ಸಾಧ್ಯವಿಲ್ಲ' ಎಂದು ಸಲಹೆ ನೀಡಿದರು.

ಸಭೆಯಲ್ಲಿ ಪಕ್ಷದ ಪ್ರಧಾನ ಕಾರ್ಯದರ್ಶಿಗಳು, ರಾಜ್ಯ ಉಸ್ತುವಾರಿಗಳು, ರಾಜ್ಯ ಘಟಕಗಳ ಅಧ್ಯಕ್ಷರು ಮತ್ತು ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕರು ಪಾಲ್ಗೊಂಡರು.

'ಮತದಾರರ ಪಟ್ಟಿ ಮೇಲೆ ಗಮನವಿಡಿ'

'ಎಸ್‌ಸಿ, ಎಸ್‌ಟಿ, ಒಬಿಸಿ ಮತ್ತು ಅಲ್ಪಸಂಖ್ಯಾತ ಸಮುದಾಯಗಳ ಮತದಾರರ ಹೆಸರು ಮತದಾರರ ಪಟ್ಟಿಯಿಂದ ಕೈಬಿಟ್ಟು ಹೋಗದಂತೆ ಜಾಗರೂಕರಾಗಿರಬೇಕು. ಜಿಲ್ಲಾ ಮತ್ತು ಬ್ಲಾಕ್ ಕಾಂಗ್ರೆಸ್ ಸಮಿತಿ ಅಧ್ಯಕ್ಷರು ಈ ಬಗ್ಗೆ ಗಮನವಿಡಬೇಕು. ಈ ವಿಚಾರದಲ್ಲಿ ಜಿಲ್ಲಾ ಚುನಾವಣಾ ಅಧಿಕಾರಿಗಳ ಜತೆ ನಿರಂತರ ಸಂಪರ್ಕದಲ್ಲಿರಬೇಕು' ಎಂದು ಖರ್ಗೆ ಅವರು ಪಕ್ಷದ ಮುಖಂಡರಿಗೆ ಸೂಚಿಸಿದರು.

ಎಲ್ಲ ಭಿನ್ನಾಭಿಪ್ರಾಯಗಳನ್ನು ಬದಿಗಿರಿಸಿ, ಹಗಲು–ರಾತ್ರಿಯೆನ್ನದೆ ದುಡಿದರೆ ನಮಗೆ ಮುಂಬರುವ ಲೋಕಸಭಾ ಚುನಾವಣೆ ಬಳಿಕ ಪರ್ಯಾಯ ಸರ್ಕಾರವೊಂದನ್ನು ಜನರಿಗೆ ನೀಡಲು ಸಾಧ್ಯ

ಮಲ್ಲಿಕಾರ್ಜುನ ಖರ್ಗೆ, ಎಐಸಿಸಿ ಅಧ್ಯಕ್ಷ

'ಭಾರತ್ ನ್ಯಾಯ ಯಾತ್ರೆ'ಗೆ 'ಜೋಡೊ' ಸೇರ್ಪಡೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಕಾಂಗ್ರೆಸ್ ಪಕ್ಷವು 'ಭಾರತ್ ನ್ಯಾಯ ಯಾತ್ರೆ'ಯನ್ನು 'ಭಾರತ್ ಜೋಡೊ ನ್ಯಾಯ ಯಾತ್ರೆ' ಎಂದು ಗುರುವಾರ ಮರುನಾಮಕರಣ ಮಾಡಿದೆ.

ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಜ.14ರಿಂದ ಮಣಿಪುರದ ಇಂಫಾಲ್‌ನಿಂದ ಮುಂಬೈವರೆಗೆ ಈ ಯಾತ್ರೆ ಕೈಗೊಳ್ಳಲಿದ್ದಾರೆ. ಈ ಯಾತ್ರೆಯು ಅರುಣಾಚಲ ಪ್ರದೇಶ ಸೇರಿದಂತೆ 15 ರಾಜ್ಯಗಳಲ್ಲಿ ಸಂಚರಿಸಲಿದೆ.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅಧ್ಯಕ್ಷತೆಯಲ್ಲಿ ಪಕ್ಷದ ಕೇಂದ್ರ ಕಚೇರಿಯಲ್ಲಿ ನಡೆದ ಸಭೆಯ ನಂತರ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ (ಸಂವಹನ) ಜೈರಾಮ್ ರಮೇಶ್ ಅವರು ಈ ವಿಷಯ ತಿಳಿಸಿದರು.

ಯಾತ್ರೆಯಲ್ಲಿ ಭಾಗವಹಿಸಲು 'ಇಂಡಿಯಾ' ಒಕ್ಕೂಟದ ಎಲ್ಲ ನಾಯಕರನ್ನು ಪಕ್ಷ ಆಹ್ವಾನಿಸುತ್ತದೆ ಹಾಗೂ ಅವರಿಗೆ ಆಹ್ವಾನಗಳನ್ನು ಕಳುಹಿಸಲಾಗುತ್ತದೆ ಎಂದು ಅವರು ತಿಳಿಸಿದರು. 'ಭಾರತ್ ಜೋಡೊ ಯಾತ್ರೆಯು ಜನರ ಮನಸ್ಸಿನಲ್ಲಿ ಆಳವಾಗಿ ಬೇರೂರಿದ್ದು, ಅದೊಂದು ಬ್ರ್ಯಾಂಡ್ ಆಗಿದೆ ಎಂಬುದಾಗಿ ಸಭೆಯಲ್ಲಿ ಚರ್ಚೆಯಾಯಿತು. ಹಾಗಾಗಿ, ಯಾತ್ರೆಯ ಹೆಸರನ್ನು ಮರುನಾಮಕರಣ ಮಾಡಲು ನಿರ್ಧರಿಸಲಾಯಿತು. ಈ ಯಾತ್ರೆಯಿಂದ ರಾಜಕೀಯ ಪರಿವರ್ತನೆ ಆಗಲಿದೆ' ಎಂದು ಜೈರಾಮ್ ರಮೇಶ್ ಹೇಳಿದರು.

ಕಾಂಗ್ರೆಸ್ ಸೇರಿದ ವೈ. ಎಸ್. ಶರ್ಮಿಳಾ

ನವದೆಹಲಿ (ಪಿಟಿಐ): ಆಂಧ್ರ ಪ್ರದೇಶದ ಮಾಜಿ ಮುಖ್ಯಮಂತ್ರಿ ವೈ.ಎಸ್.ರಾಜಶೇಖರ ರೆಡ್ಡಿ ಅವರ ಪುತ್ರಿ, ವೈಎಸ್‌ಆರ್ ತೆಲಂಗಾಣ ಪಕ್ಷ ಸ್ಥಾಪಕಿ ವೈ.ಎಸ್. ಶರ್ಮಿಳಾ ಅವರು ಗುರುವಾರ ಕಾಂಗ್ರೆಸ್ ಪಕ್ಷಕ್ಕೆ ಸೇರಿದರು.

ಕಾಂಗ್ರೆಸ್ ಜತೆಗೆ ವೈಎಸ್‌ಆರ್ ಕಾಂಗ್ರೆಸ್ ತೆಲಂಗಾಣ ಪಕ್ಷದ ವಿಲೀನವನ್ನು ಪ್ರಕಟಿಸಿದ ಅವರು, 'ರಾಹುಲ್‌ಗಾಂಧಿ ಅವರನ್ನು ಪ್ರಧಾನಿಯಾಗಿ ನೋಡುವುದು ನಮ್ಮ ತಂದೆ ವೈ.ಎಸ್ ರಾಜಶೇಖರ ರೆಡ್ಡಿ ಅವರ ಕನಸೂ ಆಗಿತ್ತು' ಎಂದು ಹೇಳಿದರು. 'ದೇಶದಲ್ಲಿಯೇ ಕಾಂಗ್ರೆಸ್ ಅತ್ಯಂತ ಜಾತ್ಯತೀತ ಪಕ್ಷ. ಎಲ್ಲ ಸಮುದಾಯಗಳಿಗೂ ಪಕ್ಷವು ಸೇವೆ ಸಲ್ಲಿಸುತ್ತಿದ್ದು, ಜನರನ್ನು ಒಗ್ಗೂಡಿಸುತ್ತಿದೆ' ಎಂದು ಶ್ಲಾಘಿಸಿದರು.

ದೆಹಲಿಯಲ್ಲಿ ಗುರುವಾರ ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಯಾದ ವೈಎಸ್‌ಆರ್ ಕಾಂಗ್ರೆಸ್ ತೆಲಂಗಾಣ ಪಕ್ಷದ ಸ್ಥಾಪಕಿ ವೈ.ಎಸ್. ಶರ್ಮಿಳಾ ಅವರನ್ನು ಪಕ್ಷದ ಮುಖಂಡ ರಾಹುಲ್ ಗಾಂಧಿ ಸ್ವಾಗತಿಸಿದರು. ಪಕ್ಷದ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಹಾಜರಿದ್ದರು –ಪಿಟಿಐ ಚಿತ್ರ

ಪ್ರಧಾನಿ ಮೋದಿ ಕಲಿತ ಶಾಲೆಗೆ ಶೈಕ್ಷಣಿಕ ಪ್ರವಾಸ

ನವದೆಹಲಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರು ಕಲಿತ, ಗುಜರಾತ್‌ನ ವಡ್‌ನಗರದಲ್ಲಿರುವ ಶಾಲೆಗೆ ವಿದ್ಯಾರ್ಥಿಗಳನ್ನು ಶೈಕ್ಷಣಿಕ ಪ್ರವಾಸಕ್ಕೆ ಕರೆದುಕೊಂಡು ಹೋಗುವ ವಿಶಿಷ್ಟ ಕಾರ್ಯಕ್ರಮ ರೂಪಿಸಿರುವ ಶಿಕ್ಷಣ ಸಚಿವಾಲಯ, ಆನ್‌ಲೈನ್ ನೋಂದಣಿಗಾಗಿ ಪೋರ್ಟಲ್‌ಗೆ ಗುರುವಾರ ಚಾಲನೆ ನೀಡಿದೆ.

ಒಟ್ಟು 7 ದಿನಗಳ ಶೈಕ್ಷಣಿಕ ಪ್ರವಾಸ ಇರಲಿದ್ದು, 9ರಿಂದ 12ನೇ ತರಗತಿಯ ಆಸಕ್ತ ವಿದ್ಯಾರ್ಥಿಗಳು ನೋಂದಾಯಿಸಿಕೊಳ್ಳಬಹುದು. ಮೂರು ಹಂತಗಳಲ್ಲಿ ವಿದ್ಯಾರ್ಥಿಗಳ ಆಯ್ಕೆ ಪ್ರಕ್ರಿಯೆ ನಡೆಯಲಿದ್ದು, 10 ಬಾಲಕಿಯರು ಹಾಗೂ 10 ಬಾಲಕರನ್ನು ಒಳಗೊಂಡ ತಂಡ ಪ್ರತಿ ವಾರ ಈ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಬಹುದಾಗಿದೆ. ಈ ಕಾರ್ಯಕ್ರಮ ವರ್ಷಪೂರ್ತಿ ಇರಲಿದೆ ಎಂದು ಶಿಕ್ಷಣ ಸಚಿವಾಲಯ ತಿಳಿಸಿದೆ.

'ಪ್ರೇರಣಾ: ಭವನಾತ್ಮಕ ಕಲಿಕಾ ಕಾರ್ಯಕ್ರಮ' ಹೆಸರಿನ ಉಪಕ್ರಮವು ಮಕ್ಕಳಲ್ಲಿ ನಾಯಕತ್ವ ಗುಣ ಬೆಳೆಸುವುದು, ವಿಶಿಷ್ಟ ಹಾಗೂ ಅರ್ಥಪೂರ್ಣ ಅನುಭವ ಕಟ್ಟಿಕೊಡುವ ಉದ್ದೇಶ ಹೊಂದಿದೆ ಎಂದು ಸಚಿವಾಲಯ ತಿಳಿಸಿದೆ. ಪ್ರಧಾನಿ ಮೋದಿ ಅವರು ಕಲಿತ ವಡ್‌ನಗರದ ಶಾಲೆಯು ಈ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುವುದು.

'ನೂತನ ರಾಷ್ಟ್ರೀಯ ಶಿಕ್ಷಣ ನೀತಿ (ಎನ್‌ಇಪಿ), 2020ರಲ್ಲಿ ಅಡಕವಾಗಿರುವ ಮೌಲ್ಯಾಧಾರಿತ ಶಿಕ್ಷಣ ತತ್ವ ಹಾಗೂ ಭಾರತೀಯ ಶಿಕ್ಷಣ ಪದ್ಧತಿಯನ್ನು ಇದು ಒಳಗೊಂಡಿದೆ ಎಂದು ಸಚಿವಾಲಯದ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಈ ಕಾರ್ಯಕ್ರಮದ ಪಠ್ಯಕ್ರಮವನ್ನು ಐಐಟಿ ಗಾಂಧಿನಗರ ರೂಪಿಸಿದೆ. ವಿದ್ಯಾರ್ಥಿಗಳ ಆಯ್ಕೆ 3 ಹಂತಗಳಲ್ಲಿ ನಡೆಯಲಿದೆ. 'ಪ್ರೇರಣಾ ಕಾರ್ಯಕ್ರಮಕ್ಕೆ ನನ್ನನ್ನು ಏಕೆ ಆಯ್ಕೆ ಮಾಡಬೇಕು' ಅಥವಾ '2047ರಲ್ಲಿ ನನ್ನ ಕಲ್ಪನೆಯ ಭಾರತ' ಎಂಬ ವಿಷಯ ಕುರಿತು ಕಿರು ವಿಡಿಯೊ, ಪ್ರಬಂಧ/ಕವನ/ಕಥೆ ರಚನೆ ಸೇರಿದಂತೆ ಪ್ರತಿಭಾ ಪ್ರದರ್ಶನ, ವೈಯಕ್ತಿಕ ಸಂದರ್ಶನದ ಮೂಲಕ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಲಾಗುತ್ತದೆ.

ವೈಶಿಷ್ಟ್ಯಗಳು

- ಈ ಶೈಕ್ಷಣಿಕ ಪ್ರವಾಸ ಕಾರ್ಯಕ್ರಮವು 7 ದಿನಗಳದ್ದಾಗಿದ್ದು, ಪ್ರತಿ ದಿನ ವೈವಿಧ್ಯಮಯ ಚಟುವಟಿಕೆಗಳನ್ನು ಒಳಗೊಂಡಿದೆ
- ಯೋಗ, ಧ್ಯಾನ, ಅನುಭವಾತ್ಮಕ ಕಲಿಕೆ, ವಿದ್ಯಾರ್ಥಿಗಳೇ ಚಟುವಟಿಕೆಗಳನ್ನು ಮಾಡುವ ಮೂಲಕ ಕಲಿಯುವುದು
- ಪ್ರಾಚೀನ ಹಾಗೂ ಪಾರಂಪರಿಕ ತಾಣಗಳಿಗೆ ಭೇಟಿ, ಪ್ರೇರಣಾದಾಯಕ ಚಲನಚಿತ್ರಗಳ ವೀಕ್ಷಣೆ, ಪ್ರತಿಭಾ ಪ್ರದರ್ಶನ
- ದೇಸೀಯ ಹಾಗೂ ಆಧುನಿಕ ತಂತ್ರಜ್ಞಾನಗಳ ಕುರಿತು ಮಾಹಿತಿ, ಪ್ರೇರಣಾದಾಯಕ ವ್ಯಕ್ತಿಗಳ ಜೊತೆ ಸಂವಾದ

ಸೀಟು ಹಂಚಿಕೆ: ಕಾಂಗ್ರೆಸ್–ತೃಣಮೂಲ ಕಾಂಗ್ರೆಸ್ ನಡುವೆ ವಾಕ್ಸಮರ

ಕೋಲ್ಕತ್ತ (ಪಿಟಿಐ): ಲೋಕಸಭೆ ಚುನಾವಣೆಗೆ ಸೀಟು ಹಂಚಿಕೆ ಕುರಿತಂತೆ ಪಶ್ಚಿಮ ಬಂಗಾಳದಲ್ಲಿ ಕಾಂಗ್ರೆಸ್ ಮತ್ತು ತೃಣಮೂಲ ಕಾಂಗ್ರೆಸ್ (ಟಿಎಂಸಿ) ಪಕ್ಷಗಳ ನಡುವೆ ಇರುವ ಭಿನ್ನಮತ, 'ಇಂಡಿಯಾ' ಮೈತ್ರಿಕೂಟದಲ್ಲಿ ಭಿನ್ನಾಭಿಪ್ರಾಯಕ್ಕೆ ಕಾರಣವಾಗಿದೆ.

ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಅಧಿರ್ ರಂಜನ್ ಚೌಧರಿ, 'ಅತ್ಯಂತ ಹಿರಿಯ ಪಕ್ಷವಾಗಿರುವ ಕಾಂಗ್ರೆಸ್ ಈಗ ಸೀಟುಗಳಿಗಾಗಿ ಟಿಎಂಸಿ ಎದುರು ಅಂಗಲಾಚುವುದಿಲ್ಲ' ಎಂದು ಟೀಕಿಸಿದ್ದಾರೆ. ಇದಕ್ಕೆ ಕಟುವಾಗಿಯೇ ಪ್ರತಿಕ್ರಿಯಿಸಿರುವ ಟಿಎಂಸಿಯು, 'ಒಡಕುಬಾಯಿಯ ಮೈತ್ರಿ ಪಾಲುದಾರರು ಹಾಗೂ ಸೀಟು ಹಂಚಿಕೆ ಪ್ರಕ್ರಿಯೆ ಒಟ್ಟಿಗೆ ಸಾಗುವುದು ಸಾಧ್ಯವಿಲ್ಲ' ಎಂದು ಹೇಳಿದೆ.

'ಮೈತ್ರಿಕೂಟ ಬಲಪಡಿಸುವ ಬದಲು ಪ್ರಧಾನಿಯವರ ಸೇವೆಯಲ್ಲೇ ಟಿಎಂಸಿ ಹೆಚ್ಚು ನಿರತವಾಗಿದೆ' ಎಂದೂ ಚೌಧರಿ ಟೀಕಿಸಿದ್ದರು. 'ಚೌಧರಿ ನಿರ್ದಯವಾಗಿ ಹೇಳಿಕೆ ನೀಡುತ್ತಿದ್ದು, ನಿಯಂತ್ರಿಸಬೇಕು' ಎಂದು ಟಿಎಂಸಿ, ಕಾಂಗ್ರೆಸ್ ಹೈಕಮಾಂಡ್‌ಗೆ ಆಗ್ರಹಪಡಿಸಿತ್ತು.

ಕಾಂಗ್ರೆಸ್‌ಗೆ ಎರಡು ಕ್ಷೇತ್ರ ಬಿಡುತ್ತೇವೆ ಅಥವಾ ಕಾಂಗ್ರೆಸ್ ಎಷ್ಟು ಕ್ಷೇತ್ರಗಳಲ್ಲಿ ಸ್ಪರ್ಧಿಸಬೇಕು ಎಂದು ನಿರ್ಧರಿಸಲು ಅವರು ಯಾರು? ಅಗತ್ಯಬಿದ್ದರೆ ನಾವು ಪ್ರತ್ಯೇಕವಾಗೇ ಸ್ಪರ್ಧಿಸುತ್ತೇವೆ. ಪಕ್ಷದ ಹೈಕಮಾಂಡ್ ಈ ಬಗ್ಗೆ ನಿರ್ಧರಿಸಲಿದೆ ಎಂದು ಚೌಧರಿ ಹೇಳಿದರು.

ಉಭಯ ಪಕ್ಷಗಳ ನಡುವೆ ಕೆಲ ದಿನಗಳಿಂದ ವಾಕ್ಸಮರ ನಡೆದಿದ್ದು, ಚೌಧರಿ ಕಟುಟೀಕೆಯೊಂದಿಗೆ ಗುರುವಾರ ತಾರಕ್ಕೇರಿದೆ.

ಕಾಂಗ್ರೆಸ್‌ಗೆ ನಾಲ್ಕು ಕ್ಷೇತ್ರ ಬಿಟ್ಟುಕೊಡಲು ಟಿಎಂಸಿ ತೀರ್ಮಾನಿಸಿದೆ ಎನ್ನಲಾಗಿದೆ. ಡಿ.19ರ 'ಇಂಡಿಯಾ' ಮೈತ್ರಿಕೂಟದ ಸಭೆಯಲ್ಲಿ, ಸೀಟು ಹಂಚಿಕೆ ಒಪ್ಪಂದ ಅಂತಿಮಗೊಳಿಸಲು ಡಿ.31ರ ಗಡುವನ್ನು ಟಿಎಂಸಿ ನಿಗದಿಪಡಿಸಿತ್ತು. ಆದರೆ, ಇನ್ನೂ ಅಂತಿಮಗೊಂಡಿಲ್ಲ.

ನ್ಯಾಯಮೂರ್ತಿಗಳಿಂದ ನೀತಿಬೋಧನೆ ಬೇಡ: ಸುಪ್ರೀಂ ಕೋರ್ಟ್

ಹೈಕೋರ್ಟ್ ಆದೇಶಕ್ಕೆ ಅಸಮಾಧಾನ

ಪ್ರಜಾವಾಣಿ ವಾರ್ತೆ

ನವದೆಹಲಿ: ಹೆಣ್ಣುಮಕ್ಕಳು 'ಲೈಂಗಿಕ ಬಯಕೆಗಳನ್ನು ನಿಯಂತ್ರಣದಲ್ಲಿ ಇಟ್ಟುಕೊಳ್ಳಬೇಕು', ಮಹಿಳೆಯರಿಗೆ ಗೌರವ ನೀಡುವ ತರಬೇತಿಯನ್ನು ಯುವಕರು ತಮಗೆ ಕೊಟ್ಟುಕೊಳ್ಳಬೇಕು ಎಂದು ಹೇಳಿದ್ದ ಕಲ್ಕತ್ತಾ ಹೈಕೋರ್ಟ್‌ನ ಆದೇಶವನ್ನು ಸುಪ್ರೀಂ ಕೋರ್ಟ್ ಗುರುವಾರ ಪ್ರಶ್ನಿಸಿದೆ.

ಹೈಕೋರ್ಟ್ ನೀಡಿದ್ದ ಆದೇಶದ ವಿಚಾರವಾಗಿ ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಂಡಿದ್ದ ಸುಪ್ರೀಂ ಕೋರ್ಟ್, ಪೋಕ್ಸೊ ಕಾಯ್ದೆ ಅಡಿ ಆರೋಪಿಯಾಗಿದ್ದ ವ್ಯಕ್ತಿ 14 ವರ್ಷ ವಯಸ್ಸಿನ ಸಂತ್ರಸ್ತ ಬಾಲಕಿಯನ್ನು ಮದುವೆಯಾದ ನಂತರ, ಆತನನ್ನು ದೋಷಮುಕ್ತಗೊಳಿಸಿದ ಕ್ರಮವನ್ನೂ ಪ್ರಶ್ನಿಸಿದೆ.

'ಹೈಕೋರ್ಟ್ ಮಾತುಗಳು ಮಾತ್ರವೇ ಇಲ್ಲಿನ ಪ್ರಶ್ನೆ ಅಲ್ಲ. ಅಲ್ಲಿ ಹೇಳಿರುವ ಅಂಶಗಳನ್ನು ಗಮನಿಸಿ. ಇಂತಹ ಪರಿಕಲ್ಪನೆಗಳು ಅವೆಲ್ಲಿಂದ ಬರುತ್ತವೆಯೋ ಗೊತ್ತಾಗುತ್ತಿಲ್ಲ. ಆದರೆ ಎಲ್ಲ ಮಾತುಗಳನ್ನೂ ನಾವು ಪರಿಶೀಲಿಸುತ್ತೇವೆ' ಎಂದು ವಿಭಾಗೀಯ ಪೀಠವು ಹೇಳಿದೆ. ಇಂತಹ ಆದೇಶ ಬರೆಯುವುದು ಸಂಪೂರ್ಣವಾಗಿ ತಪ್ಪು ಎಂದು ಪೀಠವು ಮೌಖಿಕವಾಗಿ ಹೇಳಿದೆ. ಪ್ರಕರಣದ ವಿಚಾರಣೆ ವೇಳೆ ನ್ಯಾಯಮೂರ್ತಿಗಳು ನೀತಿ ಬೋಧನೆ ಮಾಡದಿರುವುದು, ತಮ್ಮ ವೈಯಕ್ತಿಕ ದೃಷ್ಟಿಕೋನಗಳನ್ನು ಹೇಳದಿರುವುದು ಅಪೇಕ್ಷಣೀಯ ಎಂದು ಸುಪ್ರೀಂ ಕೋರ್ಟ್ ಡಿ. 8ರಂದು ಹೇಳಿತ್ತು.

ನಿಖಿಲ್ ಗುಪ್ತಾಗೆ ರಾಯಭಾರ ನೆರವು: ಅರ್ಜಿ ವಜಾ

ನವದೆಹಲಿ (ಪಿಟಿಐ): ಸಿಖ್ ಪ್ರತ್ಯೇಕತಾವಾದಿ ಗುರುಪತ್ವಂತ್ ಸಿಂಗ್ ಪನ್ನೂ ಹತ್ಯೆ ಯತ್ನದ ಆರೋಪದ ಅಡಿಯಲ್ಲಿ ಜೆಕ್ ಗಣರಾಜ್ಯದ ಜೈಲಿನಲ್ಲಿ ಇರುವ ಭಾರತೀಯ ಪ್ರಜೆ ನಿಖಿಲ್ ಗುಪ್ತಾ ಅವರಿಗೆ ರಾಯಭಾರ ನೆರವು ಒದಗಿಸಲು ಆದೇಶಿಸಬೇಕು ಎಂದು ಅವರ ಕುಟುಂಬದ ಸದಸ್ಯರೊಬ್ಬರು ಸಲ್ಲಿಸಿದ್ದ ಅರ್ಜಿಯನ್ನು ಸುಪ್ರೀಂ ಕೋರ್ಟ್ ಗುರುವಾರ ವಜಾಗೊಳಿಸಿದೆ.

ನ್ಯಾಯಮೂರ್ತಿಗಳಾದ ಸಂಜೀವ್ ಖನ್ನಾ ಮತ್ತು ದೀಪಾಂಕರ್ ದತ್ತ ಅವರಿದ್ದ ವಿಭಾಗೀಯ ಪೀಠವು ಅರ್ಜಿಯ ವಿಚಾರಣೆ ನಡೆಸಿ, 'ನಾವು ಇಲ್ಲಿ ಮಾಡಬಹುದಾದದ್ದು ಹೆಚ್ಚೇನೂ ಇಲ್ಲ. ವಿಯೆನ್ನಾ ಒಪ್ಪಂದಕ್ಕೆ ಅನುಗುಣವಾಗಿ ರಾಯಭಾರ ನೆರವು ಪಡೆಯಲು ನೀವು ಅರ್ಹರಿದ್ದೀರಿ, ಅದು ನಿಮಗೆ ಈಗಾಗಲೇ ಸಿಕ್ಕಿದೆ' ಎಂದು ಹೇಳಿತು. ಗುಪ್ತಾ ಅವರಿಗೆ ಸೆಪ್ಟೆಂಬರ್ 17ರಂದು ರಾಯಭಾರ ಕಚೇರಿಯ ನೆರವು ಸಿಕ್ಕಿದೆ ಎಂಬ ಅಂಶವನ್ನು ನ್ಯಾಯಪೀಠವು ದಾಖಲಿಸಿಕೊಂಡಿತು. ಗುಪ್ತಾ ಅವರನ್ನು ಜೂನ್ 30ರಂದು ಬಂಧಿಸಲಾಗಿದೆ. ಅಲ್ಲಿ ತಮ್ಮ ಮಾನವ ಹಕ್ಕುಗಳ ಉಲ್ಲಂಘನೆ ಆಗುತ್ತಿದೆ ಎಂದು ದೂರಿದ್ದಾರೆ. ತಮ್ಮನ್ನು ಜೈಲಿನಲ್ಲಿ ಏಕಾಂತದಲ್ಲಿ ಇರಿಸಲಾಗಿದೆ, ಗೋಮಾಂಸ, ಹಂದಿಮಾಂಸವನ್ನು ಒತ್ತಾಯದಿಂದ ತಿನ್ನಿಸಲಾಗುತ್ತಿದೆ ಎಂದು ಆರೋಪಿಸಿದ್ದಾರೆ.

ಖೇರಾ ವಿರುದ್ಧದ ಕ್ರಿಮಿನಲ್ ಪ್ರಕರಣ ರದ್ದತಿಗೆ 'ಸುಪ್ರೀಂ' ನಕಾರ

ನವದೆಹಲಿ: ಪ್ರಧಾನಿ ನರೇಂದ್ರ ಮೋದಿ ವಿರುದ್ಧ ಆಕ್ಷೇಪಾರ್ಹ ಹೇಳಿಕೆ ನೀಡಿದ ಆರೋಪದ ಕುರಿತು ತಮ್ಮ ವಿರುದ್ಧ ದಾಖಲಾಗಿರುವ ಕ್ರಿಮಿನಲ್ ಪ್ರಕರಣಗಳನ್ನು ರದ್ದುಗೊಳಿಸುವಂತೆ ಕೋರಿ ಕಾಂಗ್ರೆಸ್ ನಾಯಕ ಪವನ್ ಖೇರಾ ಸಲ್ಲಿಸಿದ್ದ ಅರ್ಜಿಯನ್ನು ಸುಪ್ರೀಂ ಕೋರ್ಟ್ ಗುರುವಾರ ವಜಾಗೊಳಿಸಿದೆ.

ನ್ಯಾಯಮೂರ್ತಿಗಳಾದ ಬಿ.ಆರ್. ಗವಾಯಿ ಮತ್ತು ಪ್ರಶಾಂತ್ ಕುಮಾರ್ ಮಿಶ್ರಾ ಅವರಿದ್ದ ಪೀಠವು ಅರ್ಜಿಯ ವಿಚಾರಣೆ ನಡೆಸಿತು. ಪ್ರಧಾನಿ ಹೆಸರನ್ನು 'ನರೇಂದ್ರ ಗೌತಮ್ ದಾಸ್ ಮೋದಿ' ಎಂದು ಉಲ್ಲೇಖಿಸಿರುವುದಕ್ಕೆ ಸಂಬಂಧಿಸಿದಂತೆ ಕೈಗೊಳ್ಳಲಾಗಿರುವ ಕ್ರಮದ ವಿರುದ್ಧ ಸಲ್ಲಿಸಿರುವ ಅರ್ಜಿಯನ್ನು ಪರಿಗಣಿಸಲು ನ್ಯಾಯಾಲಯ ಒಲವು ಹೊಂದಿಲ್ಲ ಎಂದು ತಿಳಿಸಿತು.

ಖೇರಾ ಅವರು ಕಳೆದ ಫೆಬ್ರುವರಿಯಲ್ಲಿ ಪತ್ರಿಕಾಗೋಷ್ಠಿಯೊಂದರಲ್ಲಿ ಪ್ರಧಾನಿ ಹೆಸರಿನ ಜತೆ 'ಗೌತಮ್ ದಾಸ್' ಹೆಸರನ್ನೂ ಸೇರಿಸಿ ಹೇಳಿದ್ದರು. ಆ ಬಳಿಕ ತಮ್ಮ ಮಾತು ವಾಪಸ್ ಪಡೆದಿದ್ದರು. ಪ್ರಧಾನಿ ಅವರ ತಂದೆಯ ಹೆಸರನ್ನು ತಪ್ಪಾಗಿ ಹೇಳಿ ಅವಹೇಳನ ಮಾಡಿದ್ದಾರೆ ಎಂಬ ಆರೋಪವನ್ನು ಖೇರಾ ಎದುರಿಸುತ್ತಿದ್ದಾರೆ.

ತಮ್ಮ ವಿರುದ್ಧದ ಪ್ರಕರಣಗಳನ್ನು ರದ್ದುಪಡಿಸಲು ಅಲಹಾಬಾದ್ ಹೈಕೋರ್ಟ್ ನಿರಾಕರಿಸಿದ್ದರಿಂದ 'ಸುಪ್ರೀಂ' ಮೊರೆಹೋಗಿದ್ದರು.

ಗೌರವಾನ್ವಿತ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ
#16ಸಿ–1, ಮಿಲ್ಲರ್ ಟ್ಯಾಂಕ್ ಬೆಡ್ ಏರಿಯ,
ವಸಂತನಗರ, ಬೆಂಗಳೂರು–560052 ಇವರ ಮುಂದೆ

ಕೆಳಕಂಡ ವಿಷಯದಲ್ಲಿ, ವಿದ್ಯುತ್ ಕಾಯಿದೆ 2003 ರ ಪ್ರಕರಣ 62 ಮತ್ತು 64ರ ಜೊತೆಗೆ ಓದಿಕೊಳ್ಳಲಾದ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ದರ) ನಿಯಮಾವಳಿಗಳು 2000ರ ಮತ್ತು ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ಪ್ರಸರಣ ದರ ನಿಗದಿಪಡಿಸುವ ನಿಬಂಧನೆ ಹಾಗೂ ಷರತ್ತುಗಳು) ನಿಯಮಾವಳಿಗಳು 2006 ಮತ್ತು ತಿದ್ದುಪಡಿಗಳ ಪ್ರಕಾರ ಆರ್ಥಿಕ ವರ್ಷ 2022–23ರ ವಾರ್ಷಿಕ ಕಾರ್ಯಸಾಧನೆ ಪರಿಶೀಲನೆಯ(ಎ.ಪಿ.ಆರ್) ಅನುಮೋದನೆಗಾಗಿ ನಿಯಂತ್ರಣ ಆಯೋಗದ ಮುಂದೆ ಸಲ್ಲಿಸಿರುವ ಅರ್ಜಿ ಬಗ್ಗೆ.

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ,
ಕಾವೇರಿ ಭವನ, ಬೆಂಗಳೂರು–560009. .... **ಅರ್ಜಿದಾರರು**

ಅಧಿಸೂಚನೆ

ಆರ್ಥಿಕ ವರ್ಷ 2022–23ರ ವಾರ್ಷಿಕ ಕಾರ್ಯಸಾಧನೆ ಪರಿಶೀಲನೆಯ(ಎ.ಪಿ.ಆರ್) ಅಧಿಸೂಚನೆ.

1.0 ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ಪ್ರಸರಣ ದರ ನಿಗದಿಪಡಿಸುವ ನಿಬಂಧನೆ ಹಾಗೂ ಷರತ್ತುಗಳು) ನಿಯಮಾವಳಿಗಳು 2006ರ ಮತ್ತು ಕಾಲಕಾಲಕ್ಕೆ ಆದ ಅದರ ತಿದ್ದುಪಡಿಗಳ ಪ್ರಕಾರ, ಕವಿಪ್ರನಿನಿಯ ಆರ್ಥಿಕ ವರ್ಷ 2022–23ರ ವಾರ್ಷಿಕ ಕಾರ್ಯಸಾಧನೆ ಪರಿಶೀಲನೆ ಹಾಗೂ ತತ್ಸಂಬಂಧಿ ವಾರ್ಷಿಕ ಪ್ರಸರಣ ದರದ ಪರಿಷ್ಕರಣೆಯ ಅನುಮೋದನೆಗಾಗಿ ಪ್ರಸ್ತಾವನೆ ಸಲ್ಲಿಸಿರುತ್ತದೆ. ಕವಿಪ್ರನಿನಿಯ ಅರ್ಜಿಯು ಗೌರವಾನ್ವಿತ ಆಯೋಗದ ಪರಿಗಣನೆಯಲ್ಲಿರುತ್ತದೆ.

2.0 ಆರ್ಥಿಕ ವರ್ಷ 2022–23ರ ವಾರ್ಷಿಕ ಕಾರ್ಯಸಾಧನೆ ಪರಿಶೀಲನೆ ಅರ್ಜಿಯಲ್ಲಿ, ಕವಿಪ್ರನಿನಿಯ ಪರಿಷ್ಕೃತ ವಾರ್ಷಿಕ ಆದಾಯದ ಅವಶ್ಯಕತೆ **ರೂ. 5146.18** ಕೋಟಿ ಕೋರಿರುತ್ತದೆ. ಆದಾಯದ ಕೊರತೆಯು **ರೂ. 1701.05** ಕೋಟಿಗಳಾಗಿರುತ್ತದೆ. ಈ ಕೊರತೆಯನ್ನು ಆರ್ಥಿಕ ವರ್ಷ 2024–25 ರ ಅವಧಿಯಲ್ಲಿ ವಸೂಲಾತಿ ಮಾಡಲು ಅನುಮೋದನೆ ನೀಡಬೇಕಾಗಿ ಕೋರಲಾಗಿದೆ.

3.0 ವಿದ್ಯುಚ್ಛಕ್ತಿ ಕಾಯ್ದೆ 2003ರ ನಿಬಂಧನೆಗಳಿಗೆ ಅನುಸಾರವಾಗಿ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ದರ) ನಿಯಮಾವಳಿಗಳು 2000ರ ಮತ್ತು ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ಪ್ರಸರಣ ದರ ನಿಗದಿಪಡಿಸುವ ನಿಬಂಧನೆ ಹಾಗೂ ಷರತ್ತುಗಳು) ನಿಯಮಾವಳಿಗಳು 2006 ರ ಮತ್ತು ಕಾಲಕಾಲಕ್ಕೆ ಆದ ಅದರ ತಿದ್ದುಪಡಿಗಳ ಪ್ರಕಾರ, ಮೇಲಿನ ಅರ್ಜಿಗೆ ತಮ್ಮ ಆಕ್ಷೇಪಣೆಗಳನ್ನು ಸಲ್ಲಿಸಲು ಆಸಕ್ತಿ ಹೊಂದಿರುವ ವ್ಯಕ್ತಿಗಳು ತಮ್ಮ ಆಕ್ಷೇಪಣೆಗಳನ್ನು ತಾವು ಆಧರಿಸುವ ದಾಖಲೆಗಳ ಆರು ಸೆಟ್‌ಗಳೊಂದಿಗೆ ಪ್ರಮಾಣ ಪತ್ರದ (ಅಫಿಡವಿಟ್) ಜೊತೆಗೆ ಈ ಪ್ರಕಟಣೆ ಪ್ರಥಮವಾಗಿ ಪ್ರಕಟವಾದ ದಿನಾಂಕದಿಂದ **ಮೂವತ್ತು ದಿನಗಳ ಒಳಗಾಗಿ ಸ್ವೀಕರಣಾಧಿಕಾರಿ, ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ, #16ಸಿ–1, ಮಿಲ್ಲರ್ ಟ್ಯಾಂಕ್ ಬೆಡ್ ಏರಿಯ, ವಸಂತನಗರ, ಬೆಂಗಳೂರು–560052** ಅವರಿಗೆ ಸಲ್ಲಿಸಬಹುದು.

4.0 ಆಸಕ್ತಿಯುಳ್ಳವರು ಕವಿಪ್ರನಿನಿಯ ಎಪಿಆರ್ ಅರ್ಜಿಯ ಪ್ರತಿಗಳನ್ನು ಪರಾಮರ್ಶಿಸಲು ಅಥವಾ ಖರೀದಿಸಲು ಇಚ್ಛಿಸಿದಲ್ಲಿ ಈ ಕೆಳಗೆ ತಿಳಿಸಿದ ಕಚೇರಿಗಳಲ್ಲಿ ಲಭ್ಯವಿರುತ್ತದೆ.
1. **ಎಲ್ಲಾ ಮುಖ್ಯ ಇಂಜಿನಿಯರ್ (ವಿದ್ಯುಚ್ಛಕ್ತಿ), ಪ್ರಸರಣ ವಲಯ, ಕವಿಪ್ರನಿನಿ, ಬೆಂಗಳೂರು, ತುಮಕೂರು, ಹಾಸನ, ಮೈಸೂರು, ಬಾಗಲಕೋಟೆ ಮತ್ತು ಕಲಬುರಗಿ.**
2. **ಲೆಕ್ಕಾಧಿಕಾರಿ (ಸಾರ್ವಜನಿಕ ಸಂಪರ್ಕ), ನಿಗಮ ಕಾರ್ಯಾಲಯ, ಕವಿಪ್ರನಿನಿ, ನೆಲಮಹಡಿ, ಕಾವೇರಿ ಭವನ, ಬೆಂಗಳೂರು.**
3. **ವಿದ್ಯುತ್ ಸರಬರಾಜು ಕಂಪನಿಗಳ ಕಂಪನಿ ಕಾರ್ಯಾಲಯಗಳು, ಬೆಂಗಳೂರು, ಮಂಗಳೂರು, ಮೈಸೂರು, ಹುಬ್ಬಳ್ಳಿ ಮತ್ತು ಕಲಬುರಗಿ.**

5.0 ಎಪಿಆರ್ ಪ್ರತಿಗಳನ್ನು ಕೊಳ್ಳಲು ಇಚ್ಛಿಸುವವರು ಎಪಿಆರ್ ನ ಕನ್ನಡ ಮತ್ತು ಆಂಗ್ಲ ಭಾಷೆಯ ಪ್ರತಿ ಪುಸ್ತಕಕ್ಕೆ **ರೂ. 114/–** ರಂತೆ ನಗದು / ಡಿಡಿ ಮೂಲಕ ಪಾವತಿಸಿ ಪೂರ್ಣ ಪ್ರತಿಯನ್ನು ಅಥವಾ ಪ್ರತಿ ಪುಟಕ್ಕೆ **ರೂ.1/–** ರಂತೆ ಜೆರಾಕ್ಸ್ ವೆಚ್ಚಗಳನ್ನು ಪಾವತಿ ಮಾಡಿ ಪುಸ್ತಕಗಳ ಅಪೇಕ್ಷಿತ ಭಾಗಗಳ ಪ್ರತಿಗಳನ್ನು ಪ್ರಥಮ ಪ್ರಕಟಣೆಯ ದಿನಾಂಕದ **ಹತ್ತು ಕೆಲಸದ ದಿನಗಳೊಳಗಾಗಿ** ಪಡೆಯಲು ಅವಕಾಶವಿರುತ್ತದೆ. ಈ ದಾಖಲೆಗಳು ಕವಿಪ್ರನಿನಿ ವೆಬ್‌ಸೈಟ್: **https://kptcl.karnataka.gov.in** ನಲ್ಲಿ ಸಹ ಲಭ್ಯವಿರುತ್ತದೆ.

6.0 ಆಕ್ಷೇಪಣೆಗಳನ್ನು ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗಕ್ಕೆ ಮಾತ್ರ ಸಲ್ಲಿಸಬೇಕು. ಆದರೆ ಕವಿನಿ ಆಯೋಗದ ನಿರ್ದೇಶನದಂತೆ, ಆಕ್ಷೇಪಣೆ ಸಲ್ಲಿಕೆ ಮತ್ತು ಅದಕ್ಕೆ ಪ್ರತ್ಯುತ್ತರ ಸಲ್ಲಿಸುವ ಪ್ರಕ್ರಿಯೆಯನ್ನು ತ್ವರಿತಗೊಳಿಸಲು, ಆಕ್ಷೇಪಣೆದಾರರು ಏಕಕಾಲದಲ್ಲಿ ತಮ್ಮ ಆಕ್ಷೇಪಣೆಯ ಪ್ರತಿಯನ್ನು ನೇರವಾಗಿ **ವ್ಯವಸ್ಥಾಪಕ ನಿರ್ದೇಶಕರು, ನಿಗಮ ಕಾರ್ಯಾಲಯ, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು–560009** ಇವರಿಗೂ ಕಳುಹಿಸಲು ಕೋರಲಾಗಿದೆ. ಸಾರ್ವಜನಿಕ ಆಕ್ಷೇಪಣೆಗಳನ್ನು ಮೊದಲ ಪ್ರಕಟಣೆಯನ್ನು ಹೊರಡಿಸಿದ ದಿನಾಂಕದಿಂದ **30 ದಿನಗಳೊಳಗೆ** ಸ್ವೀಕರಿಸಲಾಗುವುದು.

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ ಪರವಾಗಿ
ಸಹಿ/-
ವ್ಯವಸ್ಥಾಪಕ ನಿರ್ದೇಶಕರು
ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು–560 009.

18 ನ್ಯೂಲ್ಯಾಂಡ್ಸ್‌ನಲ್ಲಿ ಜಸ್‌ಪ್ರೀತ್ ಬೂಮ್ರಾ ಪಡೆದ ವಿಕೆಟ್‌ಗಳು. ಇಲ್ಲಿ ಅತಿ ಹೆಚ್ಚು ವಿಕೆಟ್ ಪಡೆದವರ ಪಟ್ಟಿಯಲ್ಲಿ ಅವರಿಗೆ ಎರಡನೇ ಸ್ಥಾನ ಲಭಿಸಿದೆ. ಬೂಮ್ರಾ ಅವರು ಶೇನ್ ವಾರ್ನ್ (17) ದಾಖಲೆಯನ್ನು ಮೀರಿದರು. ಇಂಗ್ಲೆಂಡ್‌ನ ಕಾಲಿನ್ ಬ್ಲೈತ್ 25 ವಿಕೆಟ್ ಗಳಿಸಿದ್ದಾರೆ.

3 ದಕ್ಷಿಣ ಆಫ್ರಿಕಾದಲ್ಲಿ ಜಸ್‌ಪ್ರೀತ್ ಬೂಮ್ರಾ ಗಳಿಸಿದ ಐದು ವಿಕೆಟ್ ಗೊಂಚಲುಗಳು. ಜಾವಗಲ್ ಶ್ರೀನಾಥ್ ದಾಖಲೆಯನ್ನು ಅವರು ಸಮ ಮಾಡಿದರು.

38 ದಕ್ಷಿಣ ಆಫ್ರಿಕಾದಲ್ಲಿ ಅತಿ ಹೆಚ್ಚು ವಿಕೆಟ್ ಗಳಿಸಿದ ಭಾರತದ ಬೌಲರ್‌ಗಳ ಪಟ್ಟಿಯಲ್ಲಿ ಜಸ್‌ಪ್ರೀತ್ ಬೂಮ್ರಾ ಮೂರನೇ ಸ್ಥಾನದಲ್ಲಿದ್ದಾರೆ. ಅವರು ಮೊಹಮ್ಮದ್ ಶಮಿ (35) ದಾಖಲೆ ಮೀರಿದರು. ಅನಿಲ್ ಕುಂಬ್ಳೆ (45) ಮತ್ತು ಜಾವಗಲ್ ಶ್ರೀನಾಥ್ (43) ಕ್ರಮವಾಗಿ ಮೊದಲೆರಡು ಸ್ಥಾನಗಳಲ್ಲಿದ್ದಾರೆ.

ಟೆಸ್ಟ್ ಸರಣಿಯಲ್ಲಿ 1–1ರಿಂದ ಸಮಬಲ ಸಾಧಿಸಿ ಪ್ರಶಸ್ತಿ ಹಂಚಿಕೊಂಡ ದಕ್ಷಿಣ ಆಫ್ರಿಕಾ ಮತ್ತು ಭಾರತ ತಂಡದ ಆಟಗಾರರು –ಎಎಫ್‌ಪಿ ಚಿತ್ರ

ALVA'S SCHOOLS
Moodubidire - 574 227

APPOINTMENTS

ENGLISH MEDIUM HIGH SCHOOL
SCIENCE | ENGLISH | HINDI | MATHS | SOCIAL SCIENCE
Qualification : Post Graduation with B.Ed

PRIMARY & HIGHER PRIMARY SCHOOL
SCIENCE | MATHS | ENGLISH | KANNADA | HINDI | DRAWING | PHYSICAL EDUCATION | SOCIAL SCIENCE
Qualification : Graduation with B.Ed in respective Subjects

Eligible candidates mail your application with updated Bio-data to ao-schools@alvas.org within 7 days

+91 6366377824

ALVA'S CENTRAL SCHOOL
Affiliated to CBSE Board, New Delhi
Puttige. Moodubidire 574 227

REQUIRED
PRTs & TGTs
Science | Maths | Social Science | English | Hindi
Sanskrit | Drawing | IT | Physical Education

- Graduates/Post Graduates with B.Ed.
- Excellent English Communication with IT Skills,
- Teaching Experience in CBSE School.

Eligible candidates mail your application with updated Bio-data to ao-schools@alvas.org within 7 days

+91 7026530843, 6366377824

ಹೊಸ ವರ್ಷಕ್ಕೆ ರೋಹಿತ್ ಪಡೆಗೆ ಸಿಹಿ • ಬೂಮ್ರಾ ದಾಳಿಗೆ ಕುಸಿದ ಆತಿಥೇಯರು • ಏಡನ್ ಮಾರ್ಕರಂ ಶತಕ

ವೇಗಿಗಳ 'ಸ್ವರ್ಗ'ದಲ್ಲಿ ಭಾರತ ಜಯಭೇರಿ

• ರೋಷನ್ ತ್ಯಾಗರಾಜನ್

ಕೇಪ್‌ಟೌನ್: 554 ನಿಮಿಷಗಳು, 642 ಎಸೆತಗಳು, 33 ವಿಕೆಟ್‌ಗಳು ಮತ್ತು 464 ರನ್‌ಗಳು.

ಗುರುವಾರ ನ್ಯೂಲ್ಯಾಂಡ್ಸ್ ಕ್ರೀಡಾಂಗಣದಲ್ಲಿ ಮುಕ್ತಾಯವಾದ ಭಾರತ ಮತ್ತು ದಕ್ಷಿಣ ಆಫ್ರಿಕಾ ನಡುವಣ ಎರಡನೇ ಟೆಸ್ಟ್‌ನ ಮುಖ್ಯಾಂಶಗಳು ಇವು. ಟೆಸ್ಟ್ ಇತಿಹಾಸದಲ್ಲಿಯೇ ಅತ್ಯಂತ ಕಡಿಮೆ ಸಮಯದಲ್ಲಿ ಮುಗಿದ ಈ ಪಂದ್ಯದಲ್ಲಿ ಭಾರತ 7 ವಿಕೆಟ್‌ಗಳ ಜಯ ದಾಖಲಿಸಿತು. ಸರಣಿ ಸೋಲು ತಪ್ಪಿಸಿಕೊಂಡ ರೋಹಿತ್ ಶರ್ಮಾ ಬಳಗವು 1–1ರಿಂದ ಸಮಬಲ ಸಾಧಿಸಿತು.

ವೇಗಿ ಜಸ್‌ಪ್ರೀತ್ ಬೂಮ್ರಾ (61ಕ್ಕೆ6) ಅವರ ಅಮೋಘ ಬೌಲಿಂಗ್‌ನಿಂದಾಗಿ ಆತಿಥೇಯ ತಂಡವು ಎರಡನೇ ಇನಿಂಗ್ಸ್‌ನಲ್ಲಿ 36.5 ಓವರ್‌ಗಳಲ್ಲಿ 176 ರನ್ ಗಳಿಸಿ ಆಲೌಟ್ ಆಯಿತು. ಆರಂಭಿಕ ಬ್ಯಾಟರ್ ಏಡನ್ ಮಾರ್ಕರಂ (106; 103ಎ, 4X17, 6X2) ಗಳಿಸಿದ ಶತಕದಿಂದಾಗಿ ದಕ್ಷಿಣ ಆಫ್ರಿಕಾ ಇನಿಂಗ್ಸ್ ಸೋಲು ತಪ್ಪಿಸಿಕೊಂಡಿತು. 79 ರನ್‌ಗಳ ಗುರಿಯೊಡ್ಡುವಲ್ಲಿ ಯಶಸ್ವಿಯಾಯಿತು.

ಅನಿರೀಕ್ಷಿತ ಬೌನ್ಸರ್‌ಗಳು ಮತ್ತು ಸ್ವಿಂಗ್ ಎಸೆತಗಳ 'ಆಪ್ತಮಿತ್ರ' ನಂತಿದ್ದ ಪಿಚ್‌ನಲ್ಲಿ ಈ ಗುರಿಯೂ ತುಸು ಸವಾಲಿನದ್ದೇ ಆಗಿತ್ತು. ಮೊದಲ ಇನಿಂಗ್ಸ್‌ನಲ್ಲಿ ದಕ್ಷಿಣ ಆಫ್ರಿಕಾ 55 ರನ್‌ಗಳಿಗೆ ಆಲೌಟ್ ಆಗಿತ್ತು.

ಆದರೆ ಈ ಆತಂಕವನ್ನು ಆರಂಭಿಕ ಜೋಡಿ ಯಶಸ್ವಿ ಜೈಸ್ವಾಲ್ (28; 23ಎ) ಮತ್ತು ರೋಹಿತ್ (ಅಜೇಯ 17) ದೂರ ಮಾಡಿದರು.

ಆರು ಬೌಂಡರಿ ಚಚ್ಚಿದ ಯಶಸ್ವಿ ಜಯದ ಹಾದಿಯನ್ನು ಸರಳಗೊಳಿಸಿದರು. ಭಾರತ 12 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 80 ರನ್ ಗಳಿಸಿ ಜಯಿಸಿತು.

ಭಾರತದ ವೇಗಿಗಳು ದಕ್ಷಿಣ ಆಫ್ರಿಕಾದ ಎಲ್ಲ 20 ವಿಕೆಟ್‌ಗಳನ್ನು (ಎರಡೂ ಇನಿಂಗ್ಸ್ ಸೇರಿ) ತಮ್ಮ ಬುಟ್ಟಿಗೆ ಹಾಕಿಕೊಂಡರು. ಭಾರತೀಯ ಬೌಲರ್‌ಗಳು ಒಟ್ಟಾರೆ ಮೂರನೇ ಮತ್ತು ದಕ್ಷಿಣ ಆಫ್ರಿಕಾದ ಎದುರು ಎರಡನೇ ಬಾರಿ ಈ ದಾಖಲೆ ಬರೆದರು. 2018ರಲ್ಲಿ ಜೋಹಾನೆಸ್‌ಬರ್ಗ್‌ನಲ್ಲಿ ಇಂತಹ ವಿಕ್ರಮ ಸಾಧಿಸಿದ್ದರು.

ಟೆಸ್ಟ್ ಕ್ರಿಕೆಟ್‌ಗೆ ವಿದಾಯ ಹೇಳಿದ ದಕ್ಷಿಣ ಆಫ್ರಿಕಾ ತಂಡದ ನಾಯಕ ಡೀನ್ ಎಲ್ಗರ್ ಅವರಿಗೆ ಭಾರತ ತಂಡದ ಆಟಗಾರರು ಹಸ್ತಾಕ್ಷರ ನೀಡಿದ ಜರ್ಸಿಯನ್ನು ನಾಯಕ ರೋಹಿತ್ ಶರ್ಮಾ ನೀಡಿದರು –ಪಿಟಿಐ ಚಿತ್ರ

ಟೆಸ್ಟ್ ಕ್ರಿಕೆಟ್ ಇತಿಹಾಸದಲ್ಲಿ ಎರಡನೇ ದಿನವೇ ಮುಕ್ತಾಯವಾದ 25ನೇ ಪಂದ್ಯ ಇದಾಗಿದೆ. ಅದರಲ್ಲಿ ಭಾರತ ಮೂರು ಪಂದ್ಯಗಳಲ್ಲಿ ಆಡಿತ್ತು.

ಪಿಚ್ ಪರಿಸ್ಥಿತಿ: ಆದರೆ ಇಷ್ಟೆಲ್ಲದರ ನಡುವೆ ಕ್ರಿಕೆಟ್ ಜಯಿಸಿತೇ ಎಂಬ ಪ್ರಶ್ನೆ ಕಾಡಿತು. ಕೆಲವರು ಟಿ20 ಕ್ರಿಕೆಟ್‌ನಿಂದಾಗಿ ಹೀಗಾಗಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಪಿಚ್ ಪರಿಸ್ಥಿತಿಯಿಂದಾಗಿ ಈ ಫಲಿತಾಂಶ ಬಂದಿದೆ.

ಅಸಹಜವಾದ ಬೌನ್ಸ್, ಲೇಟ್ ಸ್ವಿಂಗ್ ಮತ್ತು ಕ್ರಾಸ್ ವಿಂಡ್ ಪರಿಣಾಮದಿಂದಾಗಿ ಚೆಂಡಿನ ಚಲನೆಯನ್ನು ಗುರುತಿಸುವಲ್ಲಿ ಉಭಯ ತಂಡಗಳ ಬ್ಯಾಟರ್‌ಗಳು ಪ್ರತಿಕ್ಷಣವೂ ಹರಸಾಹಸ ಪಟ್ಟಿದ್ದು ಸುಳ್ಳಲ್ಲ.

ಐದು ದಿನಗಳ ಮಾದರಿಯ ಕ್ರಿಕೆಟ್ ಬಗ್ಗೆ ಕಾಳಜಿ ವ್ಯಕ್ತಪಡಿಸುವವರು ಹುಬ್ಬೇರಿಸಿದ್ದಾರೆ. ಈ ರೀತಿ ಅತಿ ಕಡಿಮೆ ಸಮಯದಲ್ಲಿ ಫಲಿತಾಂಶ ಬಂದರೆ ಈ ದೀರ್ಘ ಮಾದರಿಯ ಕ್ರಿಕೆಟ್ ಭವಿಷ್ಯವೇನು ಎಂಬ ಚರ್ಚೆಯೂ ನಡೆಯುತ್ತಿದೆ.

ಭಾರತ ಎರಡೇ ದಿನದಲ್ಲಿ ಗೆದ್ದ ಟೆಸ್ಟ್‌ಗಳು

ಎದುರಾಳಿ	ಸ್ಥಳ	ವರ್ಷ
ಅಫ್ಗಾನಿಸ್ತಾನ	ಬೆಂಗಳೂರು	2018
ಇಂಗ್ಲೆಂಡ್	ಅಹಮದಾಬಾದ್	2021
ದಕ್ಷಿಣ ಆಫ್ರಿಕಾ	ಕೇಪ್‌ಟೌನ್	2024

ಅತಿ ಕಡಿಮೆ ಸಮಯದಲ್ಲಿ ಮುಗಿದ ಟೆಸ್ಟ್‌ಗಳು (ಎಸೆತಗಳ ಲೆಕ್ಕದಲ್ಲಿ)

ಒಟ್ಟು ಎಸೆತ	ಪಂದ್ಯ	ಸ್ಥಳ	ವರ್ಷ
642	ದ.ಆಫ್ರಿಕಾ–ಭಾರತ	ಕೇಪ್‌ಟೌನ್	2024
656	ಆಸ್ಟ್ರೇಲಿಯಾ–ದ.ಆಫ್ರಿಕಾ	ಮೆಲ್ಬರ್ನ್	1932
672	ವೆಸ್ಟ್ ಇಂಡೀಸ್–ಇಂಗ್ಲೆಂಡ್	ಬ್ರಿಜ್‌ಟೌನ್	1935
788	ಇಂಗ್ಲೆಂಡ್–ಆಸ್ಟ್ರೇಲಿಯಾ	ಮ್ಯಾಂಚೆಸ್ಟರ್	1888
792	ಇಂಗ್ಲೆಂಡ್–ಆಸ್ಟ್ರೇಲಿಯಾ	ಲಾರ್ಡ್ಸ್	1888

ದಕ್ಷಿಣ ಆಫ್ರಿಕಾದಲ್ಲಿ ಭಾರತದ ಟೆಸ್ಟ್ ವಿಜಯ

ಅಂತರ	ಸ್ಥಳ	ವರ್ಷ
123 ರನ್	ಜೋಹಾನೆಸ್‌ಬರ್ಗ್	2006
87 ರನ್	ಡರ್ಬನ್	2010
63 ರನ್	ಜೋಹಾನೆಸ್‌ಬರ್ಗ್	2018
113 ರನ್	ಸೆಂಚುರಿಯನ್	2021
7 ವಿಕೆಟ್	ಕೇಪ್‌ಟೌನ್	2024

*ನ್ಯೂಲ್ಯಾಂಡ್ಸ್ ಕ್ರೀಡಾಂಗಣದಲ್ಲಿ ಟೆಸ್ಟ್ ಗೆದ್ದ ಏಷ್ಯಾದ ಮೊದಲ ತಂಡ ಭಾರತ



ಸ್ಕೋರ್ ಕಾರ್ಡ್

ಮೊದಲ ಇನ್ನಿಂಗ್ಸ್: ದಕ್ಷಿಣ ಆಫ್ರಿಕಾ 55 (23.2 ಓವರ್‌ಗಳಲ್ಲಿ). ಭಾರತ 153 (34.5 ಓವರ್‌ಗಳಲ್ಲಿ). 2ನೇ ಇನ್ನಿಂಗ್ಸ್: ದಕ್ಷಿಣ ಆಫ್ರಿಕಾ 176 (36.5 ಓವರ್‌ಗಳಲ್ಲಿ) (ಬುಧವಾರ 3 ವಿಕೆಟ್‌ಗೆ 62)

ಮಾರ್ಕರಂ ಸಿ ರೋಹಿತ್ ಬಿ ಸಿರಾಜ್ 106 (103ಎ, 4X17, 6X2)
ಬೆಡಿಂಗ್‌ಹ್ಯಾಮ್ ಸಿ ರಾಹುಲ್ ಬಿ ಬೂಮ್ರಾ 11 (12ಎ, 4X2)
ವೆರೆಯನ್ ಸಿ ಸಿರಾಜ್ ಬಿ ಬೂಮ್ರಾ 9 (7ಎ, 4X1)
ಮಾರ್ಕೊ ಸಿ & ಬಿ ಬೂಮ್ರಾ 11 (9ಎ, 4X2)
ಕೇಶವ್ ಸಿ ಅಯ್ಯರ್ ಬಿ ಬೂಮ್ರಾ 3 (4ಎ)
ರಬಾಡ ಸಿ ರೋಹಿತ್ ಬಿ ಪ್ರಸಿದ್ಧ 2 (12ಎ)
ಬರ್ಗರ್ ಔಟಾಗದೆ 6 (20ಎ, 4X1)
ಲುಂಗಿ ಗಿಡಿ ಬಿ ಜೈಸ್ವಾಲ್ ಬಿ ಬೂಮ್ರಾ 8 (10ಎ)

ಇತರೆ: 6 (ಲೆಗ್‌ಬೈ 1, ನೋಬಾಲ್ 5)

ವಿಕೆಟ್ ಪತನ: 4-66 (ಡೇವಿಡ್ ಬೆಡಿಂಗ್‌ಹ್ಯಾಮ್; 17.6), 5-85 (ಕೈಲ್ ವೆರೆಯನ್; 21.1), 6-103 (ಮಾರ್ಕೊ ಯಾನ್ಸೆನ್; 23.5), 7-111 (ಕೇಶವ್ ಮಹಾರಾಜ್; 25.2), 8-162 (ಏಡನ್ ಮಾರ್ಕರಂ; 31.4), 9-162 (ಕಗಿಸೊ ರಬಾಡ; 32.1), 10-176 (ಲುಂಗಿ ಗಿಡಿ; 36.5)

ಬೌಲಿಂಗ್: ಜಸ್‌ಪ್ರೀತ್ ಬೂಮ್ರಾ 13.5-0-61-6, ಮೊಹಮ್ಮದ್ ಸಿರಾಜ್ 9-3-31-1, ಮುಕೇಶ್ ಕುಮಾರ್ 10-2-56-2, ಪ್ರಸಿದ್ಧ ಕೃಷ್ಣ 4-1-27-1

ಭಾರತ: 3 ವಿಕೆಟ್‌ಗೆ 80 (12 ಓವರ್‌ಗಳಲ್ಲಿ)

ಯಶಸ್ವಿ ಸಿ ಟ್ರಿಸ್ಟನ್ ಬಿ ಬರ್ಗರ್ 28 (23ಎ, 4X6)
ರೋಹಿತ್ ಔಟಾಗದೆ 16 (22ಎ, 4X2)
ಶುಭಮನ್ ಬಿ ರಬಾಡ 10 (11ಎ, 4X2)
ವಿರಾಟ್ ಸಿ ವೆರೆಯನ್ ಬಿ ಯಾನ್ಸೆನ್ 12 (11ಎ, 4X2)
ಶ್ರೇಯಸ್ ಔಟಾಗದೆ 4 (6ಎ, 4X1)

ಇತರೆ: 10 (ಬೈ 1, ಲೆಗ್‌ಬೈ 2, ನೋಬಾಲ್ 1, ವೈಡ್ 6)

ವಿಕೆಟ್ ಪತನ: 1-44 (ಯಶಸ್ವಿ ಜೈಸ್ವಾಲ್; 5.4), 2-57 (ಶುಭಮನ್ ಗಿಲ್; 8.3), 3-75 (ವಿರಾಟ್ ಕೊಹ್ಲಿ; 11.1)

ಬೌಲಿಂಗ್: ಕಗಿಸೊ ರಬಾಡ 6-0-33-1, ನಾಂದ್ರೆ ಬರ್ಗರ್ 4-0-29-1, ಮಾರ್ಕೊ ಯಾನ್ಸೆನ್ 2-0-15-1

ಪಂದ್ಯದ ಆಟಗಾರ: ಮೊಹಮ್ಮದ್ ಸಿರಾಜ್

ಸರಣಿಯ ಆಟಗಾರರು: ಜಸ್‌ಪ್ರೀತ್ ಬೂಮ್ರಾ, ಡೀನ್ ಎಲ್ಗರ್

ಫಲಿತಾಂಶ: ಭಾರತಕ್ಕೆ ಏಳು ವಿಕೆಟ್ ಜಯ

'ನ್ಯೂಲ್ಯಾಂಡ್ಸ್‌ಗೆ ನನ್ನ ಹೃದಯದಲ್ಲಿ ವಿಶೇಷ ಸ್ಥಾನ'

ಕೇಪ್‌ಟೌನ್ (ಪಿಟಿಐ): ಆರು ವರ್ಷಗಳ ಹಿಂದೆ ಇಲ್ಲಿಯೇ ಟೆಸ್ಟ್ ಪಯಣ ಆರಂಭಿಸಿದ್ದ ಜಸ್‌ಪ್ರೀತ್ ಬೂಮ್ರಾ ಅವರಿಗೆ ನ್ಯೂಲ್ಯಾಂಡ್ಸ್ ಕ್ರೀಡಾಂಗಣದ ಜೊತೆ ಭಾವನಾತ್ಮಕ ಸಂಬಂಧ. ಇದಕ್ಕೆ ಪೂರಕ ಎಂಬಂತೆ ಅವರು ಎರಡನೇ ಟೆಸ್ಟ್‌ನಲ್ಲಿ ತೋರಿದ ನಿರ್ವಹಣೆಗೆ ಅವರು ಗುರುವಾರ 'ಸರಣಿಯ ಸರ್ವೋತ್ತಮ' ಆಟಗಾರ ಗೌರವಕ್ಕೆ ಪಾತ್ರರಾದರು.

ಬೂಮ್ರಾ 2018ರಲ್ಲಿ ಇಲ್ಲಿಯೇ ಪದಾರ್ಪಣೆ ಮಾಡಿದ್ದು, ಹರಿಣಗಳ ನಾಡಿನಲ್ಲಿ ಮೂರನೇ ಬಾರಿ ಐದು ವಿಕೆಟ್ ಗೊಂಚಲು ಪಡೆದರು.

'ನನ್ನ ಹೃದಯದಲ್ಲಿ ಈ ಕ್ರೀಡಾಂಗಣಕ್ಕೆ ವಿಶೇಷ ಸ್ಥಾನವಿದೆ' ಎಂದು ಎರಡು ಟೆಸ್ಟ್‌ಗಳ ಸರಣಿಯಲ್ಲಿ 12 ವಿಕೆಟ್ ಪಡೆದ ಬೂಮ್ರಾ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಹೇಳಿದರು. 'ಆ ಪಯಣ 2018ರಲ್ಲಿ ಆರಂಭವಾಯಿತು. ಈಗ ನಮ್ಮ ಬೌಲಿಂಗ್ ಪಡೆ ಅನುಭವಿಯಾಗಿದ್ದು, ಇಲ್ಲಿ ಪರಿಣಾಮಕಾರಿಯಾಗಬೇಕೆಂಬ ಆಸೆಯಿತ್ತು. ಆದರೆ ಇಷ್ಟು ತ್ವರಿತವಾಗಿ ಪಂದ್ಯ ಮುಗಿಯುವುದೆಂದು ನಿರೀಕ್ಷಿಸಿಯೇ ಇರಲಿಲ್ಲ' ಎಂದರು ಬೂಮ್ರಾ.

'ನಮ್ಮ ತಂಡ ಪರಿವರ್ತನೆಯ ಹಾದಿಯಲ್ಲಿದೆ. ಆದರೆ ಸಂದೇಶ ಒಂದೇ– ಹೋರಾಟ ಮಾಡುವುದು. ಸಾಕಷ್ಟು ಬೌಲರ್‌ಗಳು ಬದಲಾಗಿದ್ದಾರೆ. ಆದರೆ ತಂಡದ ಸಂದೇಶ ಬದಲಾಗಿಲ್ಲ' ಎಂದರು.

ಡಬ್ಲ್ಯುಟಿಸಿ: ಮತ್ತೆ ಅಗ್ರಸ್ಥಾನಕ್ಕೆ ಭಾರತ

ಕೇಪ್‌ಟೌನ್: ಈ ಪಂದ್ಯದಲ್ಲಿ ಗೆಲುವಿನ ನಂತರ ಭಾರತ ತಂಡವು ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್‌ನ ಅಂಕಪಟ್ಟಿಯಲ್ಲಿ ಮತ್ತೆ ಅಗ್ರಸ್ಥಾನಕ್ಕೇರಿದೆ. ಮೊದಲ ಸ್ಥಾನದಲ್ಲಿದ್ದ ದಕ್ಷಿಣ ಆಫ್ರಿಕಾ ತಂಡ ಇದೀಗ ಎರಡನೇ ಸ್ಥಾನದಲ್ಲಿದೆ. ದಕ್ಷಿಣ ಆಫ್ರಿಕಾ ವಿರುದ್ಧ ಮೊದಲ ಟೆಸ್ಟ್ ನಲ್ಲಿ ಸೋತು ಭಾರತ ಆರನೇ ಸ್ಥಾನಕ್ಕೆ ಕುಸಿದಿತ್ತು.

'ಹಲವು ವರ್ಷಗಳ ಶ್ರಮ ಫಲ ನೀಡಿದೆ..'

ಮೈಸೂರು: 'ಎರಡು ವರ್ಷಗಳಿಂದ ದೇಶದಲ್ಲಿ ಮತ್ತು ಹೊರದೇಶಗಳಲ್ಲಿ ಐಟಿಎಫ್ ಟೂರ್ನಿಗಳಲ್ಲಿ ಸ್ಥಿರ ಪ್ರದರ್ಶನ ನೀಡುತ್ತಿದ್ದೆ. ಹೀಗಾಗಿ ಡೇವಿಸ್ ಕಪ್ ತಂಡದಲ್ಲಿ ಅವಕಾಶ ಸಿಕ್ಕಿದೆ' ಎಂದು ಎಸ್.ಡಿ. ಪ್ರಜ್ವಲ್ ದೇವ್ ಹೇಳಿದರು.



ಎಸ್‌.ಡಿ.ಪ್ರಜ್ವಲ್ ದೇವ್

'ಆರು ಮಂದಿಯ ತಂಡದಲ್ಲಿ ನಾನೂ ಇರುವುದನ್ನು ಕೇಳಿ ಪೋಷಕರು ಸಂತಸಗೊಂಡಿದ್ದಾರೆ. ಹಲವು ವರ್ಷಗಳ ಪ್ರಯತ್ನ ಫಲ ನೀಡಿದೆ. ಪಾಕಿಸ್ತಾನಕ್ಕೆ ತೆರಳುವ ಮುನ್ನ ದೆಹಲಿಯಲ್ಲಿ ಇದೇ 27ರಿಂದ ಅಭ್ಯಾಸ ಶಿಬಿರವಿದ್ದು, ಅಲ್ಲಿಗೆ ಹೋಗುತ್ತಿರುವೆ' ಎಂದು ಹೇಳಿದರು.

ಪ್ರಹ್ಲಾದ್ ಶ್ರೀನಾಥ್ ನಂತರ ಇದೇ ಮೊದಲ ಬಾರಿ ಮೈಸೂರಿನ ಆಟಗಾರ ಡೇವಿಸ್ ಕಪ್ ತಂಡದಲ್ಲಿ ಸ್ಥಾನ ಪಡೆದಿದ್ದಾರೆ.

ನಗರದ ಮಹಾರಾಜ ಕಾಲೇಜಿನ ಟೆನಿಸ್ ಕೋರ್ಟ್, ಮೈಸೂರು ಟೆನಿಸ್ ಕ್ಲಬ್ ಅಂಗಳದ ಅಭ್ಯಾಸ ನಡೆಸುತ್ತಿದ್ದನ್ನು, ತಂದೆ ಎಸ್.ಎನ್.ದೇವರಾಜು (ನಿವೃತ್ತ ಡಿಸಿಎಫ್), ತಾಯಿ ಡಾ.ಎಂ.ಎಸ್.ನಿರ್ಮಲಾ (ಪ್ರಸೂತಿ ತಜ್ಞೆ), ಕೋಚ್ ಅರ್ಜುನ್ ಗೌತಮ್ ಅವರ ಪ್ರೋತ್ಸಾಹವನ್ನು 27 ವರ್ಷದ ಪ್ರಜ್ವಲ್ ಸ್ಮರಿಸಿದರು.

'ನನಗೆ 9 ವರ್ಷವಿದ್ದಾಗ ತಾತ ಜತೆ ಟೆನಿಸ್ ಆಡಲು ಹೋಗುತ್ತಿದ್ದೆ. ಆಗ, ಆಡುವ ಖುಷಿಯಷ್ಟೇ ಇತ್ತು. ನಂತರ ಸಾಧನೆ ಮಾಡುವ ಕನಸನ್ನು ಪೋಷಕರು ಹಾಗೂ ಕೋಚ್‌ಗಳಾದ ನಾಗರಾಜ್, ರಘುವೀರ್ ತುಂಬಿದರು. ಬೆಂಗಳೂರಿನ ಪ್ರಹ್ಲಾದ ಶ್ರೀನಾಥ್ ಹಾಗೂ ರೋಹನ್ ಬೋಪಣ್ಣ ಅಕಾಡೆಮಿಗಳಲ್ಲಿ ತರಬೇತಿ ಪಡೆದೆ' ಎಂದರು.

ಡೇವಿಸ್ ಕಪ್ ತಂಡಕ್ಕೆ ಪ್ರಜ್ವಲ್

ಬೆಂಗಳೂರು (ಪಿಟಿಐ): ಕರ್ನಾಟಕದ ಎಸ್.ಡಿ. ಪ್ರಜ್ವಲ್ ದೇವ್ ಅವರನ್ನು, ಪಾಕಿಸ್ತಾನ ವಿರುದ್ಧ ಡೇವಿಸ್ ಕಪ್ ಪಂದ್ಯ ಆಡಲಿರುವ ಭಾರತ ತಂಡಕ್ಕೆ ಗುರುವಾರ ಸೇರ್ಪಡೆ ಮಾಡಲಾಯಿತು. ತಂಡದಿಂದ ಹಿಂದೆ ಸರಿದ ದಿಗ್ವಿಜಯ ಸಿಂಗ್ ಸ್ಥಾನಕ್ಕೆ ಪ್ರಜ್ವಲ್ ಆಯ್ಕೆಯಾಗಿದ್ದಾರೆ.

ಇಸ್ಲಾಮಾಬಾದಿನಲ್ಲಿ ಫೆಬ್ರುವರಿ 3 ಮತ್ತು 4ರಂದು ಈ ವಿಶ್ವಗುಂಪಿನ (1) ಪಂದ್ಯ ನಡೆಯಲಿದೆ. ಗೋವಾದಲ್ಲಿ ಕಳೆದ ವರ್ಷ ನಡೆದ ರಾಷ್ಟ್ರೀಯ ಕ್ರೀಡೆಗಳಲ್ಲಿ ಚಿನ್ನ ಗೆದ್ದ ಕರ್ನಾಟಕ ಟೆನಿಸ್ ತಂಡದ ನೇತೃತ್ವ ವಹಿಸಿದ್ದರು. ಎಟಿಪಿ ಕ್ರಮಾಂಕ ಪಟ್ಟಿಯಲ್ಲಿ ಪ್ರಜ್ವಲ್ ದೇವ್ 609ನೇ ಸ್ಥಾನದಲ್ಲಿದ್ದಾರೆ.

ಸ್ಟಪಿಂಗ್, ಕನ್‌ಕಷನ್ ನಿಯಮ ಪರಿಷ್ಕರಿಸಿದ ಐಸಿಸಿ

ದುಬೈ (ಪಿಟಿಐ): ಅಂತರರಾಷ್ಟ್ರೀಯ ಕ್ರಿಕೆಟ್ ಸಮಿತಿಯು (ಐಸಿಸಿ) ಆಟದ ನಿಯಮಗಳಲ್ಲಿ ಕೆಲವು ಪ್ರಮುಖ ಬದಲಾವಣೆಗಳನ್ನು ಮಾಡಿದೆ. ಇದರ ಪ್ರಕಾರ ಅಂಪೈರ್‌ಗಳು ಇನ್ನು ಮುಂದೆ ತೀರ್ಪು ಮರುಪರಿಶೀಲನೆ ವ್ಯವಸ್ಥೆ (ಡಿಆರ್‌ಎಸ್) ಸಮಯದಲ್ಲಿ ಸ್ಟಂಪಿಂಗ್ ಮನವಿ ಮಾಡಿದಲ್ಲಿ ಸೈಡ್-ಆನ್ ಕ್ಯಾಮೆರಾದ ರಿಪ್ಲೇಗಳನ್ನು ಮಾತ್ರ ನಿರ್ಣಯಿಸಿ ತೀರ್ಪು ನೀಡುತ್ತಾರೆ.

ಈ ಮಾರ್ಪಾಡು 2023ರ ಡಿಸೆಂಬರ್ 12 ರಿಂದ ಜಾರಿಗೆ ಬಂದಿದೆ. ಹೊಸ ನಿಯಮದ ಪ್ರಕಾರ ಸ್ಟಂಪಿಂಗ್‌ಗೆ ತಂಡ ಮನವಿ ಮಾಡಿದಲ್ಲಿ ಅಂಪೈರ್‌ಗಳು ಚೆಂಡು ಬ್ಯಾಟಿಗೆ ತಗುಲಿದೆಯೇ (ಸ್ನಿಕ್) ಎಂಬುದನ್ನು ಪರಿಶೀಲಿಸುವ ಗೋಜಿಗೆ ಹೋಗುವುದಿಲ್ಲ. ತಂಡವೊಂದು ವಿಕೆಟ್ ಕೀಪರ್‌ಗೆ ಕ್ಯಾಚ್ ಮನವಿ ಮಾಡಿದಲ್ಲಿ ಆಗ ಪ್ರತ್ಯೇಕವಾಗಿ ಡಿಆರ್‌ಎಸ್ ಆಯ್ಕೆ ಬಳಸಬೇಕಾಗುತ್ತದೆ.

ಕಳೆದ ವರ್ಷದ ಆರಂಭದಲ್ಲಿ ಭಾರತ ವಿರುದ್ಧ ಟೆಸ್ಟ್ ಸರಣಿಯಲ್ಲಿ, ಆಸ್ಟ್ರೇಲಿಯಾದ ವಿಕೆಟ್ ಕೀಪರ್ ಅಲೆಕ್ಸ್ ಕ್ಯಾರಿ ಸ್ಟಂಪಿಂಗ್ ನಂತರ ತೀರ್ಪು ಪರಿಶೀಲನೆಗೆ ಮನವಿ ಮಾಡಿ ಕಾಟ್ ಬಿಹೈಂಡ್ (ಕೀಪರ್‌ಗೆ ಕ್ಯಾಚ್) ಪರಿಶೀಲನೆ ಅವಕಾಶ ಪಡೆಯುತ್ತಿದ್ದರು. ಇದರಿಂದ (ಆಸ್ಟ್ರೇಲಿಯಾ) ತಂಡದ ಡಿಆರ್‌ಎಸ್ ಆಯ್ಕೆ ಉಳಿಯುತಿತ್ತು. ಡಿಆರ್‌ಎಸ್ ದುರ್ಲಾಭ ತಡೆಯುವುದು ನಿಯಮ ಬದಲಾವಣೆಯ ಉದ್ದೇಶವಾಗಿದೆ.

ಕಂಕಷನ್‌ಗೆ ವೇಳೆ, ಅದಕ್ಕೆ ಒಳಗಾದ ಆಟಗಾರ ಬೌಲಿಂಗ್ ಮಾಡಲಾಗದಿದ್ದರೆ, ಬದಲಿಯಾಗಿ ಬರುವ ಆಟಗಾರನಿಗೂ ಬೌಲಿಂಗ್ ಮಾಡಲು ಅವಕಾಶ ಇರುವುದಿಲ್ಲ.

ಮೈದಾನದಲ್ಲಿ ಗಾಯದ ತೀವ್ರತೆ ತಿಳಿಯಲು ಮತ್ತು ಚಿಕಿತ್ಸೆಗೆ ಇರುವ ಒಟ್ಟು ಅವಧಿಯನ್ನು ಐಸಿಸಿ ನಾಲ್ಕು ನಿಮಿಷಗಳಿಗೆ ಸೀಮಿತಗೊಳಿಸಿದೆ.

ಮೂರನೇ ಟೆಸ್ಟ್: ಆಸ್ಟ್ರೇಲಿಯಾ ಹೋರಾಟ

ಸಿಡ್ನಿ (ಎಪಿ): ಆಸ್ಟ್ರೇಲಿಯಾದ ಆಕ್ರಮಣಕಾರಿ ಆಟಗಾರ ಡೇವಿಡ್ ವಾರ್ನರ್ ತಮ್ಮ ವಿದಾಯ ಟೆಸ್ಟ್‌ನಲ್ಲಿ 34 ರನ್‌ಗೆ ಔಟ್ ಆದರು. ಮೂರನೇ ಹಾಗೂ ಅಂತಿಮ ಟೆಸ್ಟ್‌ನ ಎರಡನೇ ದಿನವಾದ ಗುರುವಾರ ಮಂದ ಬೆಳಕು ಮತ್ತು ಮಳೆಯಿಂದಾಗಿ 46 ಓವರ್‌ಗಳ ಆಟ ಮಾತ್ರ ಸಾಧ್ಯವಾಯಿತು. ಪಾಕಿಸ್ತಾನದ 313 ರನ್‌ಗಳಿಗೆ ಉತ್ತರವಾಗಿ ಆತಿಥೇಯರು 2 ವಿಕೆಟ್‌ಗೆ 116 ರನ್ ಗಳಿಸಿದ್ದರು.

ಸಿಡ್ನಿ ಕ್ರಿಕೆಟ್ ಮೈದಾನದಲ್ಲಿ, ಭೋಜನ ಮತ್ತು ಟೀ ವಿರಾಮದ ನಡುವೆ ಮಂದಬೆಳಕು ಪಂದ್ಯಕ್ಕೆ ಅಡ್ಡಿ ಮಾಡಿತು. 112ನೇ ಟೆಸ್ಟ್ ಆಡುತ್ತಿರುವ ವಾರ್ನರ್, ಅಘಾ ಸಲ್ಮಾನ್ ಬೌಲಿಂಗ್‌ನಲ್ಲಿ ಮೊದಲ ಸ್ಲಿಪ್‌ನಲ್ಲಿದ್ದ ಬಾಬರ್ ಆಜಂ ಕೈಗೆ ಕ್ಯಾಚಿತ್ತರು. ಅವರು 20 ರನ್ ಗಳಿಸಿದ್ದಾಗ ಸಲೀಮ್ ಅಯೂಬ್ ಸುಲಭ ಕ್ಯಾಚ್ ಕೈಚೆಲ್ಲಿದರು. ಆದರೆ ಇದು ದುಬಾರಿಯಾಗಲಿಲ್ಲ.

ಸ್ಕೋರುಗಳು: ಮೊದಲ ಇನಿಂಗ್ಸ್: ಪಾಕಿಸ್ತಾನ: 313. ಆಸ್ಟ್ರೇಲಿಯಾ: 47 ಓವರುಗಳಲ್ಲಿ 2 ವಿಕೆಟ್‌ಗೆ 116 (ವಾರ್ನರ್ 34, ಉಸ್ಮಾನ್ ಖ್ವಾಜಾ 47, ಲಾಬುಷೇನ್ ಬ್ಯಾಟಿಂಗ್ 23, ಜಮಾಲ್ 26ಕ್ಕೆ1, ಸಲ್ಮಾನ್ 18ಕ್ಕೆ1).

ಬ್ಯಾಸ್ಕೆಟ್‌ಬಾಲ್: ಜೆಎಸ್‌ಸಿ, ಪಿಪಿಸಿ ಫೈನಲ್‌ಗೆ

ಬೆಂಗಳೂರು: ಜೆಎಸ್‌ಸಿ ಮತ್ತು ಪಿಪಿಸಿ ತಂಡಗಳು ರಾಜ್ಯ ಜೂನಿಯರ್ (18 ವರ್ಷದೊಳಗಿನ) ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್‌ನ ಬಾಲಕರ ವಿಭಾಗದಲ್ಲಿ ಫೈನಲ್ ಪ್ರವೇಶಿಸಿದವು. ಮಹಿಳೆಯರ ವಿಭಾಗದಲ್ಲಿ ಬೆಂಗಳೂರು ವ್ಯಾನ್ಗಾರ್ಡ್ಸ್ ಮತ್ತು ಡಿವೈಇಎಸ್ ಮೈಸೂರು ತಂಡಗಳು ಪ್ರಶಸ್ತಿ ಸುತ್ತಿಗೆ ಲಗ್ಗೆ ಹಾಕಿದವು.

ಕಂಠೀರವ ಕ್ರೀಡಾಂಗಣದಲ್ಲಿ ಗುರುವಾರ ನಡೆದ ಬಾಲಕರ ಸೆಮಿಫೈನಲ್ ಲೀಗ್‌ನ ಮೊದಲ ಸುತ್ತಿನ ಪಂದ್ಯದಲ್ಲಿ ಜೆಎಸ್‌ಸಿ 76–53ರಿಂದ ದಾವಣಗೆರೆ ಬಿ.ಸಿ ತಂಡವನ್ನು, ಪಿಪಿಸಿ 73–54ರಿಂದ ಎಚ್‌ಬಿಆರ್ ಬಿ.ಸಿ ತಂಡವನ್ನು ಮಣಿಸಿತು. 2ನೇ ಸುತ್ತಿನಲ್ಲಿ ಪಂದ್ಯಗಳಲ್ಲಿ ಪಿಪಿಸಿ 75–44 ರಿಂದ ದಾವಣಗೆರೆ ತಂಡ, ಜೆಎಸ್‌ಸಿ 79–67ರಿಂದ ಎಚ್‌ಬಿಆರ್ ತಂಡ ಸೋಲಿಸಿತು.

ಬಾಲಕಿಯರ ಸೆಮಿಫೈನಲ್ ಲೀಗ್‌ನ ಮೊದಲ ಸುತ್ತಿನ ಪಂದ್ಯದಲ್ಲಿ ಬೆಂಗಳೂರು ವ್ಯಾನ್ಗಾರ್ಡ್ಸ್ 84–61ರಿಂದ ಮೌಂಟ್ಸ್ ಕ್ಲಬ್ ತಂಡವನ್ನು; ಡಿವೈಇಎಸ್ ಮೈಸೂರು 56–48ರಿಂದ ಜೆಎಸ್‌ಸಿ ತಂಡವನ್ನು ಪರಾಭವಗೊಳಿಸಿತು. 2ನೇ ಸುತ್ತಿನ ಪಂದ್ಯಗಳಲ್ಲಿ ವ್ಯಾನ್ಗಾರ್ಡ್ಸ್ ತಂಡವು 52–51ರಿಂದ ಜೆಎಸ್‌ಸಿ ತಂಡ ಹಾಗೂ ಡಿವೈಇಎಸ್ 70–50 ರಿಂದ ಮೌಂಟ್ಸ್ ಕ್ಲಬ್ ತಂಡವನ್ನು ಮಣಿಸಿತು.

ಇಂದಿನ ಪಂದ್ಯ: ಬಾಲಕರು: ಪಿಪಿಸಿ – ಜೆಎಸ್‌ಸಿ (ಸಂಜೆ 4) ಬಾಲಕಿಯರು: ಬೆಂಗಳೂರು ವ್ಯಾನ್ಗಾರ್ಡ್ಸ್– ಡಿವೈಇಎಸ್ ಮೈಸೂರು (ಮಧ್ಯಾಹ್ನ 2.30)

ಟಿ20: ಹರ್ಮನ್‌ಪ್ರೀತ್ ಬಳಗಕ್ಕೆ ಜಯದ ತವಕ

ನವಿ ಮುಂಬೈ (ಪಿಟಿಐ): ಹರ್ಮನ್‌ಪ್ರೀತ್ ಕೌರ್ ನಾಯಕತ್ವದ ಭಾರತ ಮಹಿಳಾ ಕ್ರಿಕೆಟ್ ತಂಡವು ಶುಕ್ರವಾರ ಆರಂಭವಾಗಲಿರುವ ಆಸ್ಟ್ರೇಲಿಯಾ ಎದುರಿನ ಟಿ20 ಸರಣಿಯ ಮೊದಲ ಪಂದ್ಯದಲ್ಲಿ ಕಣಕ್ಕಿಳಿಯಲಿದೆ.

ನವಿ ಮುಂಬೈನಲ್ಲಿರುವ ಡಿ.ವೈ. ಪಾಟೀಲ ಕ್ರೀಡಾಂಗಣದಲ್ಲಿ ಪಂದ್ಯ ನಡೆಯಲಿದೆ. ಪ್ರವಾಸಿ ಆಸ್ಟ್ರೇಲಿಯಾ ಎದುರಿನ ಏಕೈಕ ಟೆಸ್ಟ್‌ನಲ್ಲಿ ಭಾರತವು ಗೆದ್ದಿತ್ತು. ನಂತರ ನಡೆದಿದ್ದ ಏಕದಿನ ಸರಣಿಯಲ್ಲಿ 0–3ರಿಂದ ಸೋತಿತ್ತು. ಇದೀಗ ಆ ಸೋಲಿನ ಮುಯ್ಯಿ ತೀರಿಸಿಕೊಳ್ಳುವ ಛಲದಲ್ಲಿ ಆತಿಥೇಯ ಬಳಗ ಇದೆ.

ಏಕದಿನ ಸರಣಿಯ ಎರಡನೇ ಪಂದ್ಯದಲ್ಲಿ ಕಳಪೆ ಫೀಲ್ಡಿಂಗ್‌ನಿಂದಾಗಿ ಹರ್ಮನ್ ಬಳಗವು ಸೋತಿತ್ತು. ಮೂರನೇ ಪಂದ್ಯದಲ್ಲಿ ಭಾರತ ತಂಡದ ಬೌಲರ್‌ಗಳನ್ನು ದಂಡಿಸಿದ್ದ ಆಸ್ಟ್ರೇಲಿಯಾ ಬ್ಯಾಟರ್‌ಗಳು 338 ರನ್‌ಗಳ ಬೃಹತ್ ಗುರಿ ಒಡ್ಡಿದ್ದರು. ಆ ಪಂದ್ಯದಲ್ಲಿ ಭಾರತ 190 ರನ್‌ಗಳಿಂದ ಪರಾಭವಗೊಂಡಿತ್ತು.

ಹೀಗಾಗಿ; ತಂಡದ ಎಲ್ಲ ವಿಭಾಗಗಳಲ್ಲಿಯೂ ಲೋಪಗಳು ಕಂಡುಬಂದಿದ್ದವು. ಅವುಗಳೆಲ್ಲವನ್ನೂ ಸರಿಪಡಿಸಿಕೊಂಡು ಕಣಕ್ಕಿಳಿಯುವ ಒತ್ತಡ ಆತಿಥೇಯ ತಂಡದ ಮೇಲೆ ಇದೆ.

ತಂಡದ ಆರಂಭಿಕ ಬ್ಯಾಟರ್ ಶಫಾಲಿ ವರ್ಮಾ ಅವರು ಲಯ ಕಂಡುಕೊಳ್ಳುವಲ್ಲಿ ವಿಫಲರಾಗುತ್ತಿದ್ದಾರೆ. ಅದರಿಂದಾಗಿ ಸ್ಮೃತಿ ಮಂದಾನ ಮತ್ತು ಯಷ್ಟಿಕಾ ಭಾಟಿಯಾ ಅವರು ಇನಿಂಗ್ಸ್ ಆರಂಭಿಸುವ ಸಾಧ್ಯತೆ ಇದೆ. ಹರ್ಮನ್‌ಪ್ರೀತ್, ಆಲ್‌ರೌಂಡರ್‌ಗಳಾದ ದೀಪ್ತಿ ಶರ್ಮಾ, ಪೂಜಾ ವಸ್ತ್ರಾಕರ್ ಹಾಗೂ ಕನ್ನಡದ ಹುಡುಗಿ ಶ್ರೇಯಾಂಕ ಪಾಟೀಲ ಅವರು ಉತ್ತಮ ಲಯದಲ್ಲಿದ್ದಾರೆ.

ಆದರೆ, ಆರು ಬಾರಿಯ ವಿಶ್ವ ಚಾಂಪಿಯನ್ ಆಸ್ಟ್ರೇಲಿಯಾ ತಂಡವು ಎಲ್ಲ ವಿಭಾಗಗಳಲ್ಲಿಯೂ ಬಲಿಷ್ಠವಾಗಿದೆ. ಫೋಯೆಬಿ ಲಿಚ್‌ಫೀಲ್ಡ್ ಮತ್ತು ತಹಲಿಯಾ ಮೆಕ್‌ಗ್ರಾ ಕಳೆದ ಸರಣಿಗಳಲ್ಲಿ ತಲಾ ಮೂರು ಅರ್ಧಶತಕಗಳನ್ನು ಗಳಿಸಿದ್ದಾರೆ. ನಾಯಕಿ ಅಲೀಸಾ ಹೀಲಿ ಅವರು ತಮ್ಮ ಅಬ್ಬರದ ಬ್ಯಾಟಿಂಗ್ ಪ್ರದರ್ಶನಕ್ಕೆ ಸಿದ್ಧರಾಗಿದ್ದಾರೆ.

ಟಿ20 ಸರಣಿಯಲ್ಲಿಯೂ ಕಿರೀಟ ಧರಿಸುವ ಛಲದಲ್ಲಿದ್ದಾರೆ.

ಪಂದ್ಯ ಆರಂಭ: ರಾತ್ರಿ 7.30
ನೇರಪ್ರಸಾರ: ಸ್ಪೋರ್ಟ್ಸ್ 18

ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿ; ಕರ್ನಾಟಕ–ಪಂಜಾಬ್ ಹಣಾಹಣಿ ಇಂದು

ಮಯಂಕ್ ಪಡೆಗೆ ಶುಭಾರಂಭದ ವಿಶ್ವಾಸ

• ಸತೀಶ ಬಿ.

ಹುಬ್ಬಳ್ಳಿ: ಕರ್ನಾಟಕ ತಂಡ, ಶುಕ್ರವಾರ ರಾಜನನಗರದ ಕೆ ಎಸ್‌ಸಿಎ ಕ್ರೀಡಾಂಗಣದಲ್ಲಿ ಆರಂಭವಾಗಲಿರುವ ರಣಜಿ ಟ್ರೋಫಿ ಟೂರ್ನಿ 'ಸಿ' ಗುಂಪಿನ ಮೊದಲ ಪಂದ್ಯದಲ್ಲಿ ಪಂಜಾಬ್ ತಂಡವನ್ನು ಎದುರಿಸಲಿದ್ದು, ಗೆಲುವಿನೊಂದಿಗೆ ಶುಭಾರಂಭ ಮಾಡುವ ವಿಶ್ವಾಸದಲ್ಲಿದೆ.

ಗುಜರಾತ್, ತಮಿಳುನಾಡು, ರೈಲ್ವೇಸ್ ತಂಡಗಳಿರುವ ಗುಂಪಿನಲ್ಲಿ ಕರ್ನಾಟಕ ಆಡಲಿದೆ. 2014–15ರ ನಂತರ ರಾಜ್ಯ ತಂಡ ಈ ಟೂರ್ನಿಯಲ್ಲಿ ಪ್ರಶಸ್ತಿ ಜಯಿಸಿಲ್ಲ. ಹೆಚ್ಚಿನ ಸಲ ನಾಕೌಟ್ ಹಂತಗಳಲ್ಲಿ ಎಡವಿದೆ. ಕಳೆದ ವರ್ಷ ಸೆಮಿಫೈನಲ್ ಪಂದ್ಯದಲ್ಲಿ ಸೌರಾಷ್ಟ್ರ ಎದುರು ಸೋತಿತ್ತು.

ಹೋದ ಋತುವಿನಲ್ಲಿ ಕರ್ನಾಟಕ ತವರಿನಲ್ಲಿ ಆಡಿದ ಎಲ್ಲ ಪಂದ್ಯಗಳು ಬೆಂಗಳೂರಿನಲ್ಲಿ ಆಯೋಜನೆಯಾಗಿದ್ದವು. ಈ ವರ್ಷ ಎರಡು ಪಂದ್ಯಗಳು ಹುಬ್ಬಳ್ಳಿಯಲ್ಲಿ ನಡೆಯುತ್ತಿವೆ. 2013-14ರಲ್ಲಿ ಇಲ್ಲಿಯೇ ಕರ್ನಾಟಕ ಮತ್ತು ಪಂಜಾಬ್ ತಂಡಗಳು ಮುಖಾಮುಖಿಯಾಗಿದ್ದವು.

ರಾಜ್ಯ ತಂಡ ಅನುಭವಿ ಹಾಗೂ ಯುವ ಆಟಗಾರರಿಂದ ಕೂಡಿದೆ.

ಹುಬ್ಬಳ್ಳಿಯ ರಾಜನಗರದ ಕೆಎಸ್‌ಸಿಎ ಕ್ರೀಡಾಂಗಣದಲ್ಲಿ ಕರ್ನಾಟಕ ತಂಡದ ಆಟಗಾರರು ಗುರುವಾರ ಅಭ್ಯಾಸ ನಡೆಸಿದರು.

ಪ್ರಜಾವಾಣಿ ಚಿತ್ರ/ ಗೋವಿಂದರಾಜ ಜವಳಿ

ಅನುಭವಿಗಳಾದ ಮಯಂಕ್ ಅಗರ್‌ವಾಲ್, ಆರ್.ಸಮರ್ಥ್, ಮನಿಷ್ ಪಾಂಡೆ ಅವರು ಕಳೆದ ರಣಜಿ ಋತುವಿನಲ್ಲಿ ಉತ್ತಮ ಪ್ರದರ್ಶನ ನೀಡಿದ್ದರು. ಅದರಲ್ಲೂ ಮಯಂಕ್ 990 ರನ್ ಕಲೆಹಾಕಿದ್ದರು. ನಿಕಿನ್ ಜೋಸ್ ಕೂಡ ಪದಾರ್ಪಣೆ ವರ್ಷ ಯಶಸ್ಸು ಕಂಡಿದ್ದರು. ದೇವದತ್ತ ಪಡಿಕ್ಕಲ್ ಅವರಿಂದಲೂ ಉತ್ತಮ ಪ್ರದರ್ಶನ ನಿರೀಕ್ಷಿಸಲಾಗಿದೆ.

ವಿದ್ವತ್ ಕಾವೇರಪ್ಪ, ವಾಸುಕಿ ಕೌಶಿಕ್ ಮತ್ತು ವೈಶಾಖ ವಿಜಯಕುಮಾರ್ ಅವರನ್ನು ಹೊಂದಿರುವ ವೇಗದ ಬೌಲಿಂಗ್ ವಿಭಾಗ ಪ್ರಬಲವಾಗಿದೆ. ಆದರೆ ಸ್ಪಿನ್ ವಿಭಾಗ ಹೊಸಬರನ್ನು ಅವಲಂಬಿಸಿದೆ. ಲೆಗ್ ಸ್ಪಿನ್ನರ್ ಶ್ರೇಯಸ್ ಗೋಪಾಲ್ ಈ ಸಾಲಿನಲ್ಲಿ ಕೇರಳ ತಂಡಕ್ಕೆ ವಲಸೆಹೋಗಿದ್ದಾರೆ. ಅನುಭವಿ ಕೆ.ಗೌತಮ್ ಆಯ್ಕೆಯಾಗಿಲ್ಲ. ಹೀಗಾಗಿ ಎಡಗೈ ಸ್ಪಿನ್ನರ್ ಶುಭಾಂಗ್ ಹೆಗಡೆ ಜತೆಗೆ ಎಡಗೈ ಸ್ಪಿನ್ನರ್ ಎ.ಸಿ. ರೋಹಿತ್ ಕುಮಾರ್ ಮತ್ತು ಕಲಬುರಗಿಯ ಆಫ್‌ಸ್ಪಿನ್ನರ್ ಕೆ. ಶಶಿಕುಮಾರ್ ಅವರಲ್ಲಿ ಯಾರಿಗೆ ಅವಕಾಶ ಸಿಗಲಿದೆ ಎಂಬ ಕುತೂಹಲ ಇದೆ.

ತಟಸ್ಥ ಕ್ಯುರೇಟರ್ ಇಲ್ಲಿನ ಪಿಚ್ ಸಿದ್ಧಪಡಿಸಿದ್ದು, ಸ್ಪರ್ಧಾತ್ಮಕವಾಗಿರುವುದರಿಂದ ರಾಜ್ಯ ತಂಡ ಮೂವರು ವೇಗಿಗಳು ಮತ್ತು ಇಬ್ಬರು ಸ್ಪಿನ್ನರ್‌ಗಳೊಂದಿಗೆ ಕಣಕ್ಕಿಳಿಯುವ ಸಾಧ್ಯತೆ ಇದೆ.

ಬದಲಾವಣೆ ಸಹಜ: 'ತಂಡದಲ್ಲಿ ಬದಲಾವಣೆ ಸಹಜ. ಅನುಭವಿ ಬ್ಯಾಟರ್, ಬೌಲರ್‌ಗಳು ತಂಡದಲ್ಲಿದ್ದಾರೆ. ಉತ್ತಮ ತಂಡವನ್ನು ಸಜ್ಜುಗೊಳಿಸಲಾಗಿದೆ' ಎಂದು ಕರ್ನಾಟಕ ತಂಡದ ನಾಯಕ ಮಯಂಕ್ ಅಗರವಾಲ್ ಸುದ್ದಿಗಾರರಿಗೆ ತಿಳಿಸಿದರು.

ಇಬ್ಬರು ಯುವ ಸ್ಪಿನ್ನರ್‌ಗಳು ತಂಡದಲ್ಲಿ ಸ್ಥಾನ ಪಡೆದಿರುವುದರ ಬಗ್ಗೆ ಪ್ರತಿಕ್ರಿಯಿಸಿದ ಅವರು, '23 ವರ್ಷದೊಳಗಿನವರ ಟೂರ್ನಿಗಳಲ್ಲಿ ಅವರು ಉತ್ತಮ ಪ್ರದರ್ಶನ ನೀಡಿದ್ದರಿಂದ ತಂಡದಲ್ಲಿ ಸ್ಥಾನ ಪಡೆದಿದ್ದಾರೆ. ಅವರಿಗೆ ಇದು ಉತ್ತಮ ಅವಕಾಶ. ಸದಾ ಸಕಾರಾತ್ಮಕವಾಗಿ ಯೋಚಿಸುತ್ತೇನೆ. ಹೊಸಬರ ಮೇಲೆ ವಿಶ್ವಾಸ ಇದೆ' ಎಂದರು.

ಪಂಜಾಬ್ ತಂಡದಲ್ಲಿ ಮನದೀಪ್ ಸಿಂಗ್, ಮಯಂಕ್ ಮಾರ್ಕಂಡೆ ಅನುಭವಿ ಬ್ಯಾಟರ್. ನೇಹಲ್ ವಧೇರಾ ಅವರಂಥ ಯುವ ಪ್ರತಿಭೆ ಸಹ ತಂಡದಲ್ಲಿದ್ದಾರೆ. ಭಾರತ ತಂಡದಲ್ಲಿ ಆಡಿರುವ ಅರ್ಷದೀಪ್ ಸಿಂಗ್ ಜೊತೆಗೆ ಸಿದ್ಧಾರ್ಥ ಕೌಲ್ ಅವರಿಂದ ವೇಗದ ಬೌಲಿಂಗ್ ವಿಭಾಗ ಬಲಹೊಂದಿದೆ.

ಪಂದ್ಯದ ಆರಂಭ: ಬೆಳಿಗ್ಗೆ 9.30

ದಿವ್ಯಾ ಶತಕ: ಕರ್ನಾಟಕಕ್ಕೆ ಜಯ

ಭುವನೇಶ್ವರ: ದಿವ್ಯಾ ಜ್ಞಾನಾನಂದ ಅವರ ಅಜೇಯ ಶತಕದ ನೆರವಿನಿಂದ ಕರ್ನಾಟಕ ತಂಡವು ಬಿಸಿಸಿಐ ಸೀನಿಯರ್ ಮಹಿಳೆಯರ ಏಕದಿನ ಕ್ರಿಕೆಟ್ ಟ್ರೋಫಿ ಟೂರ್ನಿಯಲ್ಲಿ 89 ರನ್‌ಗಳಿಂದ ವಿದರ್ಭ ತಂಡವನ್ನು ಮಣಿಸಿತು.

ದಿವ್ಯಾ ಜ್ಞಾನಾನಂದ

ಭುವನೇಶ್ವರದ ಕೆಐಐಟಿ ಕ್ರಿಕೆಟ್ ಕ್ರೀಡಾಂಗಣದಲ್ಲಿ ಗುರುವಾರ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಕರ್ನಾಟಕ ತಂಡವು ದಿವ್ಯಾ (ಔಟಾಗದೆ 137; 137ಎ, 4X15, 6X6) ಅವರ ಬ್ಯಾಟಿಂಗ್ ಬಲದಿಂದ 50 ಓವರ್‌ಗಳಲ್ಲಿ 7 ವಿಕೆಟ್‌ಗೆ 250 ರನ್ ಗಳಿಸಿತು. ರೋಷನಿ ಕಿರಣ್ (38), ಪುಷ್ಪಾ ಕಿರೇಸೂರು (35) ಉಪಯುಕ್ತ ಕಾಣಿಕೆ ನೀಡಿದರು.

ಸಂಕ್ಷಿಪ್ತ ಸ್ಕೋರ್: ಕರ್ನಾಟಕ: 50 ಓವರ್‌ಗಳಲ್ಲಿ 7 ವಿಕೆಟ್‌ಗೆ 250 (ರೋಷನಿ ಕಿರಣ್ 38, ವೃಂದಾ ದಿನೇಶ್ 23, ದಿವ್ಯಾ ಜ್ಞಾನಾನಂದ ಔಟಾಗದೆ 137, ಪುಷ್ಪಾ ಕಿರೇಸೂರು 35). ವಿದರ್ಭ: 41.4 ಓವರ್‌ಗಳಲ್ಲಿ 161 (ಡಿ.ಡಿ. ಕಸತ್ 45, ಎಲ್. ಎಂ. ಇನಾಮದಾರ 61; ಪುಷ್ಪಾ ಕಿರೇಸೂರು 25ಕ್ಕೆ 3, ರೋಹಿತಾ ಚೌಧರಿ 28ಕ್ಕೆ 2, ಸಹನಾ ಎಸ್. ಪವಾರ್ 30ಕ್ಕೆ 3)

ಫಲಿತಾಂಶ: ಕರ್ನಾಟಕಕ್ಕೆ 89 ರನ್ ಜಯ

ಕುಸ್ತಿ:16ಕ್ಕೆ ಕಾರ್ಯಕಾರಿ ಸಭೆ

ನವದೆಹಲಿ (ಪಿಟಿಐ): ಭಾರತ ಕುಸ್ತಿ ಫೆಡರೇಷನ್ (ಡಬ್ಲ್ಯುಎಫ್‌ಐ) ಆಡಳಿತ ಮಂಡಳಿಯನ್ನು ಅಮಾನತು ಮಾಡಿರುವ ಕೇಂದ್ರ ಕ್ರೀಡಾ ಸಚಿವಾಲಯದ ಕ್ರಮವನ್ನು ಮುಂದಿನ ವಾರ ನ್ಯಾಯಾಲಯದಲ್ಲಿ ಪ್ರಶ್ನಿಸಲು ಡಬ್ಲ್ಯುಎಫ್‌ಐ ನಿರ್ಧರಿಸಿದೆ.

ಈ ನಡುವೆ ಮುಂದಿನ ನಡೆ ಕುರಿತು ಚರ್ಚಿಸಲು ಇದೇ 16ರಂದು ನವದೆಹಲಿಯಲ್ಲಿ ಕಾರ್ಯಕಾರಿ ಸಮಿತಿ ಸಭೆ ಕರೆಯಲಾಗಿದೆ.

'ಪ್ರಜಾಸತ್ತಾತ್ಮಕವಾಗಿ ಆಯ್ಕೆ ಆಗಿರುವುದರಿಂದ ಈ ಅಮಾನತು ಸ್ವೀಕಾರಾರ್ಹವಲ್ಲ. ಈ ಬಗ್ಗೆ ಚರ್ಚಿಸಲು ಸಭೆ ಕರೆಯಲಾಗಿದೆ' ಎಂದು ಅಮಾನತುಗೊಂಡಿರುವ ಆಡಳಿತ ಮಂಡಳಿ ಅಧ್ಯಕ್ಷ ಸಂಜಯ್ ಸಿಂಗ್ ಹೇಳಿದ್ದಾರೆ.

'ಜಾಗ್ರೆಬ್ ಓಪನ್ ಟೂರ್ನಿಗೆ ಅಡ್‌ಹಾಕ್ ಸಮಿತಿ ಭಾರತ ತಂಡವನ್ನು ಘೋಷಿಸಿದೆ. ಐದು ವಿಭಾಗಗಳ ಸ್ಪರ್ಧೆಗಳಲ್ಲಿ ನಮ್ಮವರು ಪ್ರತಿನಿಧಿಸುತ್ತಿಲ್ಲ. ಏಷ್ಯನ್ ಕ್ರೀಡಾಕೂಟದಲ್ಲಿ ಸ್ಪರ್ಧಿಸಿದ ತಂಡವನ್ನೇ ಅವಲಂಬಿಸಿದ ಹಿಂದಿನ ಉದ್ದೇಶವೇನು? ಇತರರಿಗೆ ಸ್ಪರ್ಧಿಸಲು ಅವಕಾಶ ನೀಡಬಹುದಿತ್ತಲ್ಲವೇ' ಎಂದು ಪ್ರಶ್ನಿಸಿದ್ದಾರೆ.